


GOVERNMENT OF TAMIL NADU

STANDARD SEVEN

ಏಳನೆಯ ತರಗತಿ

# ಕನ್ನಡ ಸಿರಿ

## ಕನ್ನಡ ಪಠ್ಯಪುಸ್ತಕ

## Kannada Reader

Department of School Education

Untouchability is Inhuman and a Crime

7th_Kannada_Reader.indd 1 24-06-2019 19:37:34

**Government of Tamil Nadu**

First Edition - 2019

Reprint - 2020, 2021, 2022, 2023, 2024

(Published under New Syllabus)

**Content Creation**

State Council of Educational Research and Training

© SCERT 2019

**Printing & Publishing**

Tamil Nadu Textbook and Educational Services Corporation

www.textbooksonline.tn.nic.in

# ಮುನ್ನುಡಿ

ಮಕ್ಕಳ ಜಗತ್ತು ವರ್ಣಮಯವಾದುದು. ಮಾಯಾಲೋಕವೆಂದರೂ ತಪ್ಪೆನಿಸದು. ಅವರ ಕಲ್ಪನಾ ಸಾಮರ್ಥ್ಯವೋ ನೋಡುಗರನ್ನು ಬೆರಗುಗೊಳಿಸಿ ಆತ್ಮೀಯತೆಯೊಂದಿಗೆ ಬೆಸೆಯುವಂತದ್ದು. ಹೊಸದನ್ನು ಬಯಸುವ ಅವರ ಉತ್ಸಾಹದ ಒಳಮನಸ್ಸು ನಿರ್ಜೀವ ವಸ್ತುಗಳನ್ನು ಕನ್ನಡ ಕಲಿಯುವಂತೆ ಮಾಡಬಲ್ಲ ಮಾಂತ್ರಿಕ ಶಕ್ತಿಯಾಗಿದೆ.

ಆ ಹೊಸ ಜಗತ್ತಿನಲ್ಲಿ ಮಕ್ಕಳೊಂದಿಗೆ ಪಯಣಿಸುವುದು ಒಂದು ರೋಮಾಂಚನ ಅನುಭವವೇ ಸರಿ.

ಕನ್ನಡ ಪುಟಾಣಿಗಳ ಕೈಗಳಲ್ಲಿ ಈ ಹೊಸ ಪಠ್ಯ ಪುಸ್ತಕದೊಂದಿಗೆ ಕೆಳಕಂಡ ಉದ್ದೇಶ ಈಡೇರಿಕೆಗೆ ನಾವು ಕೈಗೊಂಡಿರುವ ಪ್ರಯತ್ನವು ಮಹತ್ವವಾದದ್ದು.

- ಕಲಿಕೆಯನ್ನು ಕಂಠಪಾಠ ವಿಧಾನದಿಂದ ಮುಕ್ತಗೊಳಿಸಿ ಚಟುವಟಿಕೆಯ ಹಾದಿಯಲ್ಲಿ ನಡೆಸುವುದು.
- ಕನ್ನಡಿಗರು ತಮ್ಮ ಸಾಂಸ್ಕೃತಿಕ, ಸಾಹಿತ್ಯ ಹಿರಿಮೆ ಗರಿಮೆಯೊಂದಿಗೆ ಇತಿಹಾಸ, ಕಲೆ ಹಾಗೂ ಸಂಪ್ರದಾಯ, ಆಚಾರ ವಿಚಾರಗಳ ಮಹತ್ವವನ್ನು ಅರಿಯುವಂತೆ ಮಾಡುವುದು.
- ಆತ್ಮವಿಶ್ವಾಸದೊಂದಿಗೆ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹೊಸ ಜಗತ್ತಿನಲ್ಲಿ ಧೈರ್ಯದಿಂದ ಮುನ್ನಡೆಯುವುದನ್ನು ದೃಢಪಡಿಸುವುದು.
- ಜ್ಞಾನಾರ್ಜನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರದೆ ವಿಸ್ತಾರ ಮತ್ತು ಆಳವಾದ ಕಲಿಕೆಗೆ ಪುಸ್ತಕಗಳು ನೆರವಾಗುವಂತೆ ಮಾರ್ಗದರ್ಶನ ನೀಡುವುದು.
- ಪಠ್ಯಪುಸ್ತಕದ ಹೊಸ ವಿನ್ಯಾಸವು ಆಳವಾದ ವಿಷಯ ಹಾಗೂ ಮಕ್ಕಳ ಮನಶಾಸ್ತ್ರೀಯ ರೀತಿಯ ಹಲವು ಹೊಸ ಅಂಶಗಳನ್ನು ಒಳಗೊಂಡಿದ್ದು ನಿಮ್ಮ ಕೈಗಳಲ್ಲಿ ಈ ಪಠ್ಯ ಪುಸ್ತಕ ಸೇರಿದಾಗ ನೀವೊಂದು ಹೊಸ ಜಗತ್ತಿಗೆ ಪಯಣಿಸುತ್ತೀರಿ ಎಂಬ ಮಹತ್ವಾಕಾಂಕ್ಷೆ ನಮಗಿದೆ.



7th_Kannada_Reader.indd 3 24-06-2019 19:37:35

# ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಚಲ ಜಲಧಿ ತರಂಗಾ.
ತವಶುಭ ನಾಮೆ ಜಾಗೇ
ತವಶುಭ ಆಶಿಷ ಮಾಗೆ
ಗಾಹೇ ತವ ಜಯ ಗಾಥಾ
ಜನ ಗಣ ಮಂಗಲ ದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ
ಜಯ ಹೇ ಜಯ ಹೇ ಜಯ ಹೇ
ಜಯ ಜಯ ಜಯ ಜಯ ಹೇ!


–ಮಹಾಕವಿ ರವೀಂದ್ರನಾಥ್ ಠಾಗೂರ್.

## ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮವು ಪಂಜಾಬ್ , ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ (ಒರಿಸ್ಸಾ) ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.

ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರದ ಅಲೆಗಳಲ್ಲಿ ನಮನಗೊಳ್ಳುತ್ತದೆ.

ಅವು ನಿನ್ನ ಕೃಪೆಯನ್ನು ಬೇಡುತ್ತದೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ! ನಿನಗೆ ಜಯವಾಗಲಿ! ಜಯವಾಗಲಿ! ಜಯವಾಗಲಿ!






7th_Kannada_Reader.indd 4 24-06-2019 19:37:35

# ತಮಿಳ್ ತಾಯ್ ವಾಳ್ತು

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕೆಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಕಮುಮೇ
ಅತ್ತಿಲಕ ವಾಸನೈಪೋಲ್ ಅನೈತ್ತುಲಗುಂ ಇನ್ಪಮುರ
ಎತ್ತಿಸೈಯುಂ ಮಗಳ್ ಮಣಕ್ಕ ಇರುಂದು ಪೆರುಂ ತಮಿಳಣಂಗೇ
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

– ಮನೋನ್ಮಣೀಯಂ ಪಿ. ಸುಂದರಂ ಪಿಳ್ಳೈ



# ತಮಿಳು ತಾಯಿಯ ಪ್ರಾರ್ಥನೆ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿರುವ ದಕ್ಷಿಣದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮ ಘಮಿಸುತ್ತಿರುವ ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ ಮೈಮರೆತು ಹಾಡಿ ಹೊಗಳುತ್ತೇನೆ.



7th_Kannada_Reader.indd 5 24-06-2019 19:37:36



## ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಹಾಗೂ ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯ, ಭಾಷಿಕ, ಪ್ರಾದೇಶಿಕ ಮತ್ತು ರಾಜಕೀಯ ಹಾಗೂ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಬರುವ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳು, ವಿವಾದಗಳನ್ನು ಶಾಂತಿಯುತವಾಗಿಯೂ ಸಂವಿಧಾನಕ್ಕೆ ಅನುಸಾರವಾಗಿಯೂ ಪರಿಹರಿಸಲ್ಪಡಬೇಕೆಂದೂ ದೃಢಪಡಿಸುತ್ತೇನೆ.

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟ್ಯವನ್ನೂ ಕಂಡು ಹೆಮ್ಮೆ ಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ.

ನನ್ನ ತಂದೆ ತಾಯಿಯರು, ಶಿಕ್ಷಕರು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ, ಸಮೃದ್ಧಿಯನ್ನೂ ಕಂಡು ನಾನು ಅತ್ಯಾನಂದ ಪಡುತ್ತೇನೆ.





7th_Kannada_Reader.indd 6 24-06-2019 19:37:36

# ನಾಡ ಗೀತೆ

## ಜಯ ಹೇ ಕರ್ನಾಟಕ ಮಾತೆ

ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮುಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೆ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳ ಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು



7th_Kannada_Reader.indd 7 24-06-2019 19:37:36

ಅಭಿಜಾತ ಭಾಷೆಯಾದ ಕನ್ನಡ ಭಾಷೆಯ ಹಿರಿಮೆ ಗರಿಮೆಗಳನ್ನು ಇಂದಿನ ವಿದ್ಯಾರ್ಥಿಗಳು ಗ್ರಹಿಸುವಂತೆ ಮಾಡುವ ಉದ್ದೇಶದಿಂದ ಈ ಪಠ್ಯ ಪುಸ್ತಕ ವಿನ್ಯಾಸಗೊಳಿಸಲಾಗಿದೆ.



ಪ್ರತಿಯೊಂದು ಘಟಕವನ್ನು ಆಸಕ್ತಿಯಿಂದ ಆಲಿಸಲು ಗದ್ಯಲೋಕ, ಕಾವ್ಯ ಕಣಜ ಮುಂತಾದ ಉಪ ಪಠ್ಯ ಶೀರ್ಷಿಕೆ.



ಕಾಲದ ವೇಗಕ್ಕೆ ಹೊಂದಾಣಿಕೆಯಾಗುವಂತೆ ಅಂತರ್ಜಾಲದ ಮೂಲಕ



ಪಠ್ಯ ವಿಷಯದ ಅರ್ಥವನ್ನು ವಿವರಿಸುವ ಅಮೂಲ್ಯವಾದ ಹೊಸ ಸಂಗತಿಗಳನ್ನು ತಿಳಿದುಕೊಳ್ಳಲು ಜ್ಞಾನ ಸಂಪಾದನೆ




ವಿಷಯಕ್ಕೆ ಪೂರಕವಾದ ಘಟಕದ ಪ್ರಾರಂಭದಲ್ಲಿ ಕಲಿಕಾ ಉದ್ದೇಶಗಳು

**ಸೃಜನಶೀಲ ಅಧ್ಯಾಪಕರಿಗೂ, ಕ್ರಿಯಾ ಶೀಲ ಮನಸ್ಸಿನ ವಿದ್ಯಾರ್ಥಿಗಳಿಗೂ...**



ಕಲಿತ ವಿಷಯಗಳ ಕುರಿತಾದ ಚಿಂತನೆಗಳನ್ನು ಕಲಿಕಾ ಚಟುವಟಿಕೆಗಳ ಮೂಲಕ



ಘಟಕದ ಕೊನೆಯಲ್ಲಿ ಇನ್ನೂ ಹೆಚ್ಚು ಕಲಿಯಬೇಕೆಂಬ ಉತ್ಸಾಹದೊಂದಿಗೆ

ವಿದ್ಯಾರ್ಥಿಗಳು ಸ್ವಯಂ ಮೌಲ್ಯಮಾಪನಕ್ಕೆ ಪೂರಕವಾಗುವಂತೆ ಮೌಲ್ಯೀಕರಿಸುವುದು.



ಚಿಂತನಾ ಸಾಮರ್ಥ್ಯಗಳಿಸಲು, ಚಟುವಟಿಕೆಯ ಮಾರ್ಗದಲ್ಲಿ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿಭಾಯಿಸಲು, ಓದಿ ಆನಂದಿಸಲು, ಭಾಷಾ ಕ್ರೀಡೆಯಲ್ಲಿ ತೊಡಗಲು



ಸಾಹಿತ್ಯದ ಮೂಲಕ ಭಾಷಾ ಕಲಿಕೆ, ತಾಂತ್ರಿಕವಾಗಿ ಮನನ ಮಾಡಲು ಭಾಷಾ ಪ್ರೌಢಿಮೆಯನ್ನು ಗಳಿಸುವುದು



ಮಾತೃ ಭಾಷೆಯೊಂದಿಗೆ ಇತರ ವಿಷಯಗಳನ್ನು, ಹೊಸ ಅರ್ಥಗಳನ್ನು ಗ್ರಹಿಸಲು, ತರ್ಕದಲ್ಲಿ ತೊಡಗಲು... ಈ ಪಠ್ಯ ಪುಸ್ತಕವು ಹೊಸ ವಿನ್ಯಾಸ ಹಾಗೂ ವರ್ಣರಂಜಿತವಾಗಿದ್ದು ಪರಿವಿಡಿಯೊಂದಿಗೆ ಈ ಪಠ್ಯ ಪುಸ್ತಕವು ನಿಮ್ಮ ಕೈಗಳಲ್ಲಿ....



7th_Kannada_Reader.indd 8 24-06-2019 19:37:36

# ಪರಿವಿಡಿ


| ಘಟಕ | ಶೀರ್ಷಿಕೆ | | | ಪುಟ ಸಂಖ್ಯೆ |
|---|---|---|---|---|
| **1 ಭಾಷೆ** | | | | |
| ಕಾವ್ಯ ಕಣಜ | ಕನ್ನಡಮ್ಮನ ದೇವಾಲಯ * | – | ಆರ್.ಎನ್.ಜಯಗೋಪಾಲ್ | 03 |
| ಪೂರಕ ಪದ್ಯ | ಮೆಟ್ಟುವ ನೆಲ ಕರ್ನಾಟಕ | – | ಕುವೆಂಪು | 05 |
| ಗದ್ಯ ವಿಹಾರ | ಕರ್ನಾಟಕದ ಮ್ಯಾಕ್ಸ್‌ಮುಲ್ಲರ್ | – | ಸಿಂಪಿ ಲಿಂಗಣ್ಣ | 08 |
| ಉಪಪಠ್ಯ | ರಾಷ್ಟ್ರಕವಿ ಎಂ.ಗೋವಿಂದ ಪೈ | – | ಕೆ.ಕುಮಾರ್ ಆಚಾರ್ | 14 |
| ವ್ಯಾಕರಣ | ಕನ್ನಡ ವರ್ಣಮಾಲೆ | | | 17 |
| **2 ಪ್ರಕೃತಿ** | | | | |
| ಕಾವ್ಯ ಕಣಜ | ಹೊಸ ಹಾಡು | – | ಕಯ್ಯಾರ ಕಿಞ್ಞಣ್ಣ ರೈ | 21 |
| ಪೂರಕ ಪದ್ಯ | ಪ್ರಕೃತಿ ಗೀತೆ | – | ಸದಾಶಿವಮೂರ್ತಿ ಗುಮಟಾಪುರ | 25 |
| ಗದ್ಯ ವಿಹಾರ | ನೀರು ಕೊಡದ ನಾಡಿನಲ್ಲಿ | – | ಶ್ರೀಮತಿ ನೇಮಿಚಂದ್ರ | 27 |
| ಉಪಪಠ್ಯ | ಮೊಲದ ತ್ಯಾಗ | – | ಜನಪದ ಕಥೆ | 32 |
| ವ್ಯಾಕರಣ | ವರ್ಗೀಯ ವ್ಯಂಜನಗಳು | | | 35 |
| **3 ದೇಶಪ್ರೇಮ** | | | | |
| ಕಾವ್ಯ ಕಣಜ | ಮಾತೃಭೂಮಿ | – | ಅರವಿಂದ ಮಾಲಗತ್ತಿ | 40 |
| ಪೂರಕ ಪದ್ಯ | ಒಂದಾಗಿರಿ... ಮುಂದಾಗಿರಿ... | – | ಟಿ.ಸಿ.ಪೂರ್ಣಿಮಾ | 44 |
| ಗದ್ಯ ವಿಹಾರ | ಸುಭಾಷ್ ಚಂದ್ರ ಬೋಸ್ | – | ಪ್ರೊ.ಕೆ.ಭೈರಪ್ಪ | 45 |
| ಉಪಪಠ್ಯ | ಹಡಗು ನಡೆಸಿದ ದೇಶಪ್ರೇಮಿ | – | ರಾ.ವಿ.ಸೇತು (ಅನು: ಕೆ.ಅಂತೋನಿಮುತ್ತು) | 49 |
| ವ್ಯಾಕರಣ | ಅಕ್ಷರಗಳ ಉತ್ಪತ್ತಿ ಸ್ಥಾನಗಳು | | | 53 |
| **4 ವಿಜ್ಞಾನ ತಂತ್ರಜ್ಞಾನ** | | | | |
| ಕಾವ್ಯ ಕಣಜ | ಮಂಗಳ ಗ್ರಹದಲ್ಲಿ ಪುಟ್ಟಿ | – | ಸಿ.ಎಂ.ಗೋವಿಂದರೆಡ್ಡಿ | 56 |
| ಪೂರಕ ಪದ್ಯ | ಕಾಡಿದ್ದರೆ ನಾಡು | | | 60 |
| ಗದ್ಯ ವಿಹಾರ | ಅರಳಿ ಕಟ್ಟೆ | – | ಪ್ರೊ.ಬಿ.ಜಿ.ಎಲ್.ಸ್ವಾಮಿ | 62 |
| ಉಪಪಠ್ಯ | ತರಕಾರಿಗಳ ಮೇಳ | | | 66 |
| ವ್ಯಾಕರಣ | ದ್ವಿರುಕ್ತಿ, ಜೋಡುನುಡಿ, ದೇಶೀಯ, ಅನ್ಯದೇಶೀಯ ಪದಗಳು | | | 70 |




7th_Kannada_Reader.indd 9 24-06-2019 19:37:36

| ಘಟಕ | ಶೀರ್ಷಿಕೆ | | | ಪುಟ ಸಂಖ್ಯೆ |
|---|---|---|---|---|
| **5 ಶಿಕ್ಷಣ** | | | | |
| ಕಾವ್ಯ ಕಣಜ | ಬನ್ನಿ ಶಾಲೆಗೆ ಹೋಗುವ | – | ಟಿ.ಆರ್. ಕಣ್ಣನ್ | 74 |
| ಪೂರಕ ಪದ್ಯ | ಕಲಿಯಿರೊಂದು ಪಾಠವನ್ನು ಕನ್ನಡ ತಾಯ್ಮಕ್ಕಳೇ | – | ಜಿ.ವಿ.ಅಯ್ಯರ್ | 78 |
| ಗದ್ಯ ವಿಹಾರ | ವಿದ್ಯಾರ್ಥಿಗಳ ಆದರ್ಶ | – | ಶ್ರೀಕೃಷ್ಣಭಟ್ ಅರ್ತಿಕಜೆ | 80 |
| ಉಪಪಠ್ಯ | ಬಾಲಕ ತಿಮ್ಮರಸ | – | (ಸಂಗ್ರಹ) | 85 |
| ವ್ಯಾಕರಣ | ನಾಮಪದ | | | 89 |
| **6 ಕಲೆ ಮತ್ತು ಸೌಂದರ್ಯ** | | | | |
| ಕಾವ್ಯ ಕಣಜ | ಜಾನಪದ ಗೀತೆಗಳು * | | | 92 |
| ಪೂರಕ ಪದ್ಯ | ನಾನು ಮತ್ತು ಮೋಡ! | – | ಪ್ರೊ. ತಮಿಳ್ ಸೆಲ್ವಿ. | 95 |
| ಗದ್ಯ ವಿಹಾರ | ಪ್ರಾಚೀನ ವೈಭವ ನಗರ ಕಲಬುರ್ಗಿ | – | ರೇವಣಸಿದ್ಧಯ್ಯ ರುದ್ರಸ್ವಾಮಿಮಠ | 99 |
| ಉಪಪಠ್ಯ | ಚೆನ್ನೈ ಪ್ರವಾಸ | | | 103 |
| ವ್ಯಾಕರಣ | ನಾಮಪದ | | | 107 |
| **7 ನಾಗರಿಕತೆ, ವೃತ್ತಿ, ವಾಣಿಜ್ಯ** | | | | |
| ಕಾವ್ಯ ಕಣಜ | ಕುರುಡು ಕಾಂಚಾಣ | – | ದ.ರಾ.ಬೇಂದ್ರೆ | 111 |
| ಪೂರಕ ಪದ್ಯ | ಮಂಕುತಿಮ್ಮನ ಕಗ್ಗ | – | ಡಿ.ವಿ.ಜಿ. | 115 |
| ಗದ್ಯ ವಿಹಾರ | ಬದುಕಿಗೊಂದು ದಾರಿ | – | ಎಚ್.ಎಂ.ಪರಮೇಶ್ವರಯ್ಯ | 118 |
| ಉಪಪಠ್ಯ | ಆದರ್ಶ ಆಡಳಿತಗಾರ ಕೆಂಪೇಗೌಡ | – | ದೇ.ಜ.ಗೌ. | 123 |
| ವ್ಯಾಕರಣ | ಕ್ರಿಯಾಪದ | | | 128 |
| **8 ಧರ್ಮ–ತತ್ವ–ಚಿಂತನೆ** | | | | |
| ಕಾವ್ಯ ಕಣಜ | ಗುಡಿಯ ನೋಡಿರಣ್ಣ * | – | ಸಂತ ಶಿಶುನಾಳ ಶರೀಫ | 131 |
| ಪೂರಕ ಪದ್ಯ | ಪೂಜೆ | – | ಮಾಸ್ತಿ ವೆಂಕಟೇಶ ಅಯ್ಯಂಗಾರ್ | 134 |
| ಗದ್ಯ ವಿಹಾರ | ಯೇಸುವಿನ ಕೊನೆಯ ದಿನ | – | ಟಿ.ವಿ.ವೆಂಕಟಾಚಲಶಾಸ್ತ್ರಿ | 137 |
| ಉಪಪಠ್ಯ | ದೇವಶರ್ಮನ ಕಥೆ | – | ಎ.ಆರ್.ಕೃಷ್ಣಶಾಸ್ತ್ರಿ | 142 |
| ವ್ಯಾಕರಣ | ವಿಭಕ್ತಿ ಪ್ರತ್ಯಯಗಳು, ತತ್ಸಮ–ತದ್ಭವಗಳು | | | 146 |
| **9 ಮಾನವೀಯತೆ** | | | | |
| ಕಾವ್ಯ ಕಣಜ | ಭರವಸೆ | – | ಡಾ.ಎಚ್.ಎಸ್.ಸುಜಾತ | 149 |
| ಪೂರಕ ಪದ್ಯ | ಯೋಧ ಮತ್ತು ಹೆಂಗಸು | – | ಸು.ರಂ.ಎಕ್ಕುಂಡಿ | 152 |
| ಗದ್ಯ ವಿಹಾರ | ಆದರ್ಶ ಸ್ನೇಹಿತರು | – | ಸಂಪಾದಿತ | 155 |
| ಉಪಪಠ್ಯ | ಮನಃಪರಿವರ್ತನೆ | – | ಡಾ.ಪ್ರಭುಶಂಕರ | 158 |
| ವ್ಯಾಕರಣ | ಕಾಲ ಸೂಚಕ ಪ್ರತ್ಯಯಗಳು ಮತ್ತು ಲೇಖನ ಚಿಹ್ನೆಗಳು | | | 163 |


*** ಈ ಚಿಹ್ನೆಯು ಕಂಠಪಾಠ ಮಾಡಬೇಕಾದ ಪದ್ಯಗಳನ್ನು ಸೂಚಿಸುತ್ತದೆ.**



7th_Kannada_Reader.indd 10 24-06-2019 19:37:36

ಘಟಕ
ಒಂದು

# 1. ಭಾಷೆ



## ಕಲಿಕಾ ಉದ್ದೇಶಗಳು


- ಪದ್ಯದ ಮುಖ್ಯಾಂಶವನ್ನು ಗ್ರಹಿಸಿ ಸ್ವತಂತ್ರವಾಗಿ ಹೇಳುವುದು/ ಬರೆಯುವುದು.
- ಕನ್ನಡ ಭಾಷೆಯ ಮಾಧುರ್ಯವನ್ನು ಆಸ್ವಾದಿಸಿ ಪ್ರಶಂಸಿಸುವುದು.
- ಕನ್ನಡ ಭಾಷೆಯ ಮಹತ್ವವನ್ನು ಪಟ್ಟಿ ಮಾಡುವುದು.
- ಆತ್ಮ ವಿಶ್ವಾಸದಿಂದ ತಮ್ಮ ಗುರಿಗಳನ್ನು ಸೃಷ್ಟಿಸುವುದು.
- ಅಕ್ಷರಗಳ ಉಗಮ, ವಿಧಾನಗಳನ್ನು ತಿಳಿದುಕೊಳ್ಳುವುದು.



7th_Kannada_Reader.indd 1 24-06-2019 19:37:36

ಘಟಕ
ಒಂದು

# 1. ಭಾಷೆ



| | | | |
|---|---|---|---|
| ಕಾವ್ಯ ಕಣಜ | : | ಕನ್ನಡಮ್ಮನ ದೇವಾಲಯ | – ಆರ್.ಎನ್.ಜಯಗೋಪಾಲ್ |
| ಪೂರಕ ಪದ್ಯ | : | ಮೆಟ್ಟುವ ನೆಲ ಕರ್ನಾಟಕ | – ಕುವೆಂಪು |
| ಗದ್ಯ ವಿಹಾರ | : | ಕರ್ನಾಟಕದ ಮ್ಯಾಕ್ಸ್‌ಮುಲ್ಲರ್ | – ಸಿಂಪಿ ಲಿಂಗಣ್ಣ |
| ಉಪಪಠ್ಯ | : | ರಾಷ್ಟ್ರಕವಿ ಎಂ.ಗೋವಿಂದ ಪೈ | – ಕೆ. ಕುಮಾರ್ ಆಚಾರ್ |
| ವ್ಯಾಕರಣ | : | ಕನ್ನಡ ವರ್ಣಮಾಲೆ | |



7th_Kannada_Reader.indd 2 24-06-2019 19:37:36

ಕಾವ್ಯ ಕಣಜ



ಘಟಕ ಒಂದು

# ಕನ್ನಡಮ್ಮನ ದೇವಾಲಯ

– ಆರ್.ಎನ್.ಜಯಗೋಪಾಲ್

**ಪ್ರವೇಶ**

ತಾಯ್ನಾಡು ಹಾಗೂ ತಾಯ್ನುಡಿಯ ಬಗೆಗಿನ ಅಭಿಮಾನ ಪ್ರತಿಯೊಬ್ಬರಲ್ಲೂ ಸಹಜವಾಗಿ ಬೆಳೆದು ಬಂದ ಗುಣವಾಗಿದೆ. ನಮ್ಮೆಲ್ಲಾ ಆಸೆ–ಆಕಾಂಕ್ಷೆ, ಆಲೋಚನೆ ಮುಂತಾದ ಭಾವನೆಗಳನ್ನು ಸಹಜವಾಗಿಯೂ, ಸುಲಲಿತವಾಗಿಯೂ ನಾವು ನಮ್ಮ ತಾಯ್ನುಡಿಯ ಮೂಲಕ ಇತರರೊಂದಿಗೆ ಹಂಚಿಕೊಳ್ಳುತ್ತೇವೆ. ಈ ಕವನದಲ್ಲಿ ಕವಿಯು ತಮ್ಮ ತಾಯ್ನಾಡಿನ ಬಗೆಗಿನ ಪ್ರೇಮವನ್ನು ಹೃದಯಂಗಮವಾಗಿ ಬಣ್ಣಿಸಿದ್ದಾರೆ.

ಕನ್ನಡಮ್ಮನ ದೇವಾಲಯ
ಕಂಡೇ ಹೆಣ್ಣಿನ ಕಂಗಳಲಿ
ಕನ್ನಡ ನಾಡಿನ ಚರಿತೆಯನೇ...
ಕಂಡೇ ಅವಳ ಹೃದಯದಲಿ
ವಂದನೆ ಆ ಹೆಣ್ಣಿಗೆ...
ಅಭಿನಂದನೆ ಆ ಕಣ್ಣಿಗೆ...

ಕಂಡೇ ಅವಳ ಮಾತಿನಲಿ... ಶಾರದಾಂಬೆ ವೀಣೆಯ
ಅವಳ ನಡೆಯ ಲಾಸ್ಯದಲಿ... ತುಂಗೆ ಅಲೆಯ ನಾಟ್ಯವ
ಅವಳ ಛಲವೇ... ಕಿತ್ತೂರಿನ ಮಹಿಮೆ
ಅವಳ ಸೊಬಗೇ... ಬೇಲೂರಿನ ಪ್ರತಿಮೆ
ಎಲ್ಲೆಡೆ ಆ ರೂಪವೇ...
ಮನೆ ಬೆಳಗುವ ಆ ದೀಪವೇ...

ಶೀಲ ಅವಳ ಆಭರಣ... ಪ್ರೀತಿ ಅವಳ ಸಿಂಧೂರ
ತ್ಯಾಗ ಅವಳ ಉಸಿರಂತೆ... ಅವಳೇ ಬಾಳ ಆಧಾರ.
ತಾಯಿ, ತಂಗಿ, ಮನದನ್ನೆಯು ಅವಳೇ...
ಮಮತೆ ಕರುಣೆ ಪ್ರತಿಬಿಂಬವು ಅವಳೇ...
ಅವಳಿಗೆ ಆರಾಧನೆ...
ಈ ಹೃದಯದ ಔಪಾಸನೆ



7th_Kannada_Reader.indd 3 24-06-2019 19:37:37

## ಕವಿ ಕಾವ್ಯ ಪರಿಚಯ



ಶ್ರೀಮಾನ್ ಆರ್.ಎನ್ ಜಯಗೋಪಾಲ್ ರವರು ಆಗಸ್ಟ್ 17, 1938ರಂದು ಮೈಸೂರಿನಲ್ಲಿ ಜನಿಸಿದರು. ಇವರ ತಂದೆ ನಾಗೇಂದ್ರ ರಾಯರು. ಇವರು ಶಿಕ್ಷಣವನ್ನು ಬೆಂಗಳೂರಿನಲ್ಲಿ ಪಡೆದರು, ಬಿ.ಎಸ್ ರಾಜ ಅಯ್ಯಂಗಾರ್‌ರವರ ಬಳಿ ಕರ್ನಾಟಕ ಸಂಗೀತವನ್ನು ಕಲಿತರು. ಶ್ರೀಯುತರು ಚಲನಚಿತ್ರ ಗೀತೆಗಳ ರಚನಕಾರರು, ಸಂಭಾಷಣಾಕಾರಾಗಿದ್ದರು. ಇವರು ಮೇ 19, 2008ರಂದು ದಿವಂಗತರಾದರು

## ಪದಗಳ ಅರ್ಥ

ಕಂಗಳು–ಕಣ್ಣುಗಳು; ಚರಿತೆ–ಚರಿತ್ರೆ, ಇತಿಹಾಸ; ವಂದನೆ–ನಮಸ್ಕಾರ; ಶಾರದಾಂಬೆ–ವಿದ್ಯಾಧಿದೇವತೆಯಾದ ಸರಸ್ವತಿ; ನಾಟ್ಯ–ನೃತ್ಯ; ಪ್ರತಿಮೆ–ಶಿಲ್ಪಗಳಿಂದ ಕೂಡಿದ ದೇವತೆಗಳ ವಿಗ್ರಹಗಳು; ದೀಪ–ಬೆಳಕು, ಜ್ಯೋತಿ, ಹಣತೆ, ಸೊಡರು; ಆರಾಧನೆ–ಪೂಜೆ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕವಿ ಕನ್ನಡ ತಾಯಿಯ ದೇವಾಲಯವನ್ನು ಎಲ್ಲಿ ನೋಡಿದರು ?
2. ಕನ್ನಡ ನಾಡಿನ ಇತಿಹಾಸವನ್ನು ಕವಿ ಯಾರ ಹೃದಯದಲ್ಲಿ ಕಂಡರು ?
3. ಕವಿ ಯಾರಿಗೆ ಅಭಿನಂದನೆಯನ್ನು ಸಲ್ಲಿಸಲು ಬಯಸುತ್ತಾರೆ ?
4. ಶಾರದಾಂಬೆಯ ವೀಣೆಯ ಧ್ವನಿಯನ್ನು ಯಾರ ಮಾತಿನಲ್ಲಿ ಕವಿ ಕಂಡರು?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕಿತ್ತೂರಿನ ಮಹಿಮೆ ಹಾಗೂ ಬೇಲೂರಿನ ಪ್ರತಿಮೆಯು ಯಾವುದೆಂದು ತಿಳಿಸುತ್ತಾರೆ ?
2. ಕವಿಯು ಎಲ್ಲಾ ಕಡೆಯಲ್ಲಿಯೂ ಯಾರ ರೂಪ ಹರಡಿದೆ ಎಂದು ಹೇಳುತ್ತಾರೆ ?
3. ಕವಿಯು ತಮ್ಮ ಬಾಳಿಗೆ ಆಧಾರ ಯಾರೆಂದು ಭಾವಿಸಿದ್ದಾರೆ?
4. ಕವಿಯು ಯಾರಿಗೆ ಹೃದಯ ತುಂಬಿ ಔಪಾಸನೆಯನ್ನು ನೀಡುತ್ತಾರೆ ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. 'ಕನ್ನಡಮ್ಮನ ದೇವಾಲಯ' ಕವನದ ಸಾರಾಂಶವನ್ನು ಬರೆಯಿರಿ.

## ಭಾಷಾಭ್ಯಾಸ

**1. ಈ ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**

ಶೀಲ, ರೂಪ, ಕರುಣೆ, ಪ್ರೀತಿ, ಆಧಾರ.

**2. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ಆಭರಣ, ಅಭಿನಂದನೆ, ಮನದನ್ನೆ, ಆರಾಧನೆ, ಸೊಬಗು.

**3. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ದೇವಾಲಯ, ಮಾತಿನಲ್ಲಿ, ಉಸಿರಂತೆ, ತಾಯ್ನುಡಿ, ಕನ್ನಡಮ್ಮ.

## ಚಟುವಟಿಕೆ

1. ಕನ್ನಡ ನಾಡಿನ ಸುಪ್ರಸಿದ್ಧ ಯಾತ್ರಾ ಸ್ಥಳಗಳನ್ನು ಪಟ್ಟಿ ಮಾಡಿರಿ.
2. ಕನ್ನಡ ನಾಡನ್ನು ಪಾವನಗೊಳಿಸುತ್ತಿರುವ ಪ್ರಮುಖ ನದಿಗಳನ್ನು ಕುರಿತು ತಿಳಿಯಿರಿ.
3. ಬೇಲೂರು ಹಳೇಬೀಡಿನ ಶಿಲ್ಪಕಲೆಗೆ ಸಂಬಂಧಿಸಿದ ಚಿತ್ರಪಟಗಳನ್ನು ಸಂಗ್ರಹಿಸಿರಿ.



7th_Kannada_Reader.indd 4 24-06-2019 19:37:37

ಪೂರಕ ಪದ್ಯ

ಘಟಕ ಒಂದು

# ಮೆಟ್ಟುವ ನೆಲ ಕರ್ನಾಟಕ

– ಕುವೆಂಪು

ಎಲ್ಲಾದರು ಇರು, ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು!
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು! ‖1‖

ನೀ ಮೆಟ್ಟುವ ನೆಲ – ಅದೆ ಕರ್ನಾಟಕ
ನೀನೇರುವ ಮಲೆ – ಸಹ್ಯಾದ್ರಿ
ನೀ ಮುಟ್ಟುವ ಮರ – ಶ್ರೀಗಂಧದ ಮರ
ನೀ ಕುಡಿಯುವ ನೀರ್ – ಕಾವೇರಿ! ‖2‖

ಪಂಪನನೋದುವ ನಿನ್ನಾ ನಾಲಿಗೆ
ಕನ್ನಡವೇ ಸತ್ಯ.
ಕುಮಾರವ್ಯಾಸನನಾಲಿಪ ಕಿವಿಯದು
ಕನ್ನಡವೇ ನಿತ್ಯ! ‖3‖

ಹರಿಹರ ರಾಘವರಿಗೆ ಎರಗುವ ಮನ
ಹಾಳಾಗಿಹ ಹಂಪೆಗೆ ಕೊರಗುವ ಮನ
ಪೆಂಪಿನ ಬನವಾಸಿಗೆ ಕರಗುವ ಮನ; ‖4‖



7th_Kannada_Reader.indd 5 24-06-2019 19:37:37

ಬೆಳ್ಳೊಳ ಬೇಲೂರ್ಗಳ ನೆನೆಯುವ ಮನ
ಜೋಗದ ಜಲಪಾತದಿ ಧುಮುಕುವ ಮನ
ಮಲೆನಾಡಿಗೆ ಹೊಂಪುಳಿವೋಗುವ ಮನ ‖5‖

ಕಾಜಾಣಕೆ ಗಿಳಿ ಕೋಗಿಲೆಯಿಂಪಿಗೆ
ಮಲ್ಲಿಗೆ ಸಂಪಿಗೆ ಕೇದಗೆ ಸೊಂಪಿಗೆ
ಮಾವಿನ ಹೊಂಗೆಯ ತಳಿರಿನ ತಂಪಿಗೆ
ರಸ ರೋಮಾಂಚನಗೊಳುವಾತನ ಮನ ‖6‖

ಎಲ್ಲಿದ್ದರೆ ಏನ್? ಎಂತಿದ್ದರೆ ಏನ್?
ಎಂದೆಂದಿಗು ತಾನ್
ಕನ್ನಡವೇ ಸತ್ಯ!
ಕನ್ನಡವೇ ನಿತ್ಯ !
ಅನ್ಯವೆನಲದೆ ಮಿಥ್ಯ! ‖7‖

## ಕವಿ ಕಾವ್ಯ ಪರಿಚಯ



ಕನ್ನಡ ಸಾಹಿತ್ಯ ನವೋದಯದ ಶಿಖರ ಸಾಹಿತಿ ಹಾಗೂ ಕವಿಗಳಲ್ಲಿ ಕುವೆಂಪುರವರೂ ಒಬ್ಬರು. 'ಕುವೆಂಪು' ಎಂಬುದು ಡಾಕ್ಟರ್. ಕುಪ್ಪಳಿ ವೆಂಕಟಪ್ಪಗೌಡ ಪುಟ್ಟಪ್ಪನವರ ಕಾವ್ಯನಾಮವಾಗಿದೆ. ಇವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿಯಲ್ಲಿ ಡಿಸೆಂಬರ್ 29, 1904ರಲ್ಲಿ ಜನಿಸಿದರು. ತಂದೆ ವೆಂಕಟಪ್ಪ, ತಾಯಿ ಸೀತಮ್ಮ. ಇವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮ ಸ್ವಂತ ಊರಿನಲ್ಲಿ ಕೂಲಿ ಮಠದಲ್ಲಿಯೂ, ಮಾಧ್ಯಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲೂ ಮುಗಿಸಿ ಉನ್ನತ ವ್ಯಾಸಂಗವನ್ನು ಮೈಸೂರಿನಲ್ಲಿ ಮುಂದುರೆಸಿದರು. ಮೈಸೂರಿನ ವಿವಿಧ ವಿದ್ಯಾಲಯಗಳಲ್ಲಿ ವೃತ್ತಿ ಜೀವನ ಆರಂಭಿಸಿ ಕೊನೆಗೆ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಕೊಳಲು, ನವಿಲು, ಪಾಂಚಜನ್ಯ, ಶೋಡಷಿ ಮುಂತಾದ ಹಲವು ಕವನ ಸಂಕಲನಗಳನ್ನೂ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಎಂಬ ಕಾದಂಬರಿಗಳನ್ನೂ, ಸ್ಮಶಾನ ಕುರುಕ್ಷೇತ್ರ, ಬೆರಳ್ಗೆ ಕೊರಳ್ ಮಹಾರಾತ್ರಿ ಮುಂತಾದ ನಾಟಕಗಳನ್ನೂ ಹಲವಾರು ವಿಮರ್ಶಾ ಗ್ರಂಥಗಳನ್ನೂ ಇವರು ರಚಿಸಿದ್ದಾರೆ. 'ಶ್ರೀ ರಾಮಾಯಣ ದರ್ಶನಂ' ಎಂಬುದು ಇವರ ಮಹಾಛಂದಸ್ಸಿನ ಮೇರುಕಾವ್ಯವಾಗಿದೆ. ಈ ಕೃತಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಹಲವಾರು ಗೌರವ ಪ್ರಶಸ್ತಿಗಳೂ ಸಂದಿವೆ. ಕನ್ನಡದ ರಸಋಷಿ ಎಂದು ಪ್ರಸಿದ್ಧರಾದ ಕುವೆಂಪು ಅವರು 1994ರಲ್ಲಿ ನಿಧನರಾದರು.



7th_Kannada_Reader.indd 6 24-06-2019 19:37:37

## ಪದಗಳ ಅರ್ಥ

ಅನ್ಯ–ಬೇರೆ, ಇತರ; ಗೋವು–ಆಕಳು, ಹಸು; ಕಲ್ಪತರು–ಕಲ್ಪವೃಕ್ಷ; ಮೆಟ್ಟು–ತುಳಿ, ಅಡಿ–ಹೆಜ್ಜೆಯೂರು; ಮಲೆ–ಪರ್ವತ; ಎರಗು–ವಂದಿಸು; ಕೊರಗು–ದುಃಖಿಸು; ಮನ–ಮನಸ್ಸು; ತಳಿರು–ಚಿಗುರು; ಮಿಥ್ಯ–ಸುಳ್ಳು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕವಿ, ಕನ್ನಡವಾಗಿರು ಎಂದು ಯಾರನ್ನು ಕೋರಿದ್ದಾರೆ ?
2. ಯಾವುದರಿಂದ ನಮ್ಮ ಜೀವನ ಕಲ್ಪತರುವಾಗುತ್ತದೆ ?
3. ನಾವು ಮೆಟ್ಟುವ ನೆಲ ಯಾವುದು? ನಾವು ಕುಡಿಯುವ ಜಲ ಯಾವುದು?
4. ಯಾವುದನ್ನು ಓದುವ ನಾಲಗೆಯು ಸತ್ಯವೆಂದು ಕವಿ ಹೇಳಿದ್ದಾರೆ ?
5. ಯಾರ ಕಾವ್ಯವನ್ನು ಆಲಿಸುವ ಕವಿಯು ನಿತ್ಯವಾದುದೆಂದು ಕವಿ ಹೇಳುತ್ತಾರೆ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ನಮ್ಮ ಮನವು ಯಾರಿಗೆ ಎರಗಬೇಕೆಂದೂ, ಯಾವುದಕ್ಕೆ ಕೊರಗಬೇಕೆಂದೂ ಕವಿ ಹೇಳುತ್ತಾರೆ. ?
2. ನಮ್ಮ ಮನಸ್ಸು ಯಾವ ಜಲಪಾತದ ವೈಭವವನ್ನು ಕಂಡು ಧುಮುಕಬೇಕೆಂದು ಕವಿ ಹೇಳುತ್ತಾರೆ?
3. ಕವಿಯು ಯಾವುದು ನಿತ್ಯ, ಯಾವುದು ಮಿಥ್ಯ ಎಂದು ಹೇಳುತ್ತಾರೆ.

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. 'ಮೆಟ್ಟುವ ನೆಲ ಕರ್ನಾಟಕ' ಕವನದ ಸಾರಾಂಶವನ್ನು ಬರೆಯಿರಿ.

## ಚಟುವಟಿಕೆ

1. ರಾಷ್ಟ್ರಕವಿ ಕುವೆಂಪು ಅವರು ರಚಿಸಿರುವ ರಾಷ್ಟ್ರಭಕ್ತಿ ಗೀತೆಗಳನ್ನು ಸಂಗ್ರಹಿಸಿ ಓದಿರಿ.



ಕವಿಶೈಲ, ಕುಪ್ಪಳಿ



7th_Kannada_Reader.indd 7 24-06-2019 19:37:37

ಘಟಕ ಒಂದು

# ಕರ್ನಾಟಕದ ಮ್ಯಾಕ್ಸ್‌ಮುಲ್ಲರ್

– ಸಿಂಪಿ ಲಿಂಗಣ್ಣ

## ಪ್ರವೇಶ

ಮನುಷ್ಯನಾದವನಿಗೆ ಜೀವನದಲ್ಲಿ ಹಲವು ರೀತಿಯ ಕಷ್ಟ–ನಷ್ಟಗಳೂ, ದುಃಖ–ದುಮ್ಮಾನಗಳೂ ಎದುರಾಗುವುದು ಸಹಜ. ಆದರೆ ಆಂತಹ ತೊಂದರೆಗಳನ್ನು ಮೆಟ್ಟಿ ನಿಂತು, ತನ್ನ ಬಾಳುವೆಯನ್ನು ಯಾವುದಾದರೊಂದು ಮಹತ್ತರವಾದ ಕಾರ್ಯ ಸಾಧನೆಯಲ್ಲಿ ತೊಡಗಿಸಿಕೊಂಡು ಸತತ ಪ್ರಯತ್ನದಿಂದಲೂ, ಆಳವಾದ ಅಧ್ಯಯನದಿಂದಲೂ ತಾಳ್ಮೆಯಿಂದಲೂ ಬಾಳಿ ಗುರಿ ಸಾಧಿಸುವಂತಹ ವ್ಯಕ್ತಿತ್ವವುಳ್ಳವರು ಅತಿ ವಿರಳವೆಂದೇ ಹೇಳಬಹುದು. ಪಾಶ್ಚಾತ್ಯ ವಿದ್ವಾಂಸರು ಭಾರತೀಯ ಸಂಸ್ಕೃತಿಗೆ ಆಗರವಾಗಿರುವ ವೇದ ಉಪನಿಷತ್ತುಗಳನ್ನು ಕಲಿತು, ಅದನ್ನು ಜರ್ಮನ್ ಭಾಷೆಗೆ ಭಾಷಾಂತರಿಸುವುದು ಸಾಮಾನ್ಯವಾದ ಕಾರ್ಯವೇನು? ಅದೇ ರೀತಿಯಾಗಿ, ವಚನ ವಾಙ್ಮಯವನ್ನು ಶ್ರೀ ಸಾಮಾನ್ಯನೂ ಓದಿ ತಿಳಿಯಲು ಅನುವು ಮಾಡಿಕೊಟ್ಟ ಮಹಾಪುರುಷರ ವ್ಯಾಸಂಗದ ಅಚಲವಾದ ನಿಷ್ಠೆಯ ಕಡೆ ಈ ಲೇಖನವು ಬೆಳಕು ಚೆಲ್ಲುತ್ತದೆ.

'ಈಶಾವಾಸ್ಯಮಿದಂ ಶರೀರಂ' ಎಂಬ ಉಪನಿಷತ್ತಿನ ಶ್ಲೋಕವುಳ್ಳ ಹಾಳೆಯ ತುಣುಕು ದೇವೇಂದ್ರನಾಥ ಠಾಕೂರರ ಕೈಗೆ ಬಿದ್ದ ದಿನವು ಅದೆಂತಹ ಸುದಿನವೋ! ಶುಭ ನಿಮಿಷವೋ! ಅದರ ಪರಿಣಾಮದಿಂದ ಅವರು ಮಹರ್ಷಿ ದೇವೇಂದ್ರನಾಥರಾದರು! ಅದೇ ರೀತಿ, ಸುಮಾರು ಅರವತ್ತು ವರ್ಷಗಳ ಹಿಂದೆ ಗುಬ್ಬಿ ಮಲುಹಣನ ಒಂದು ಕೃತಿಯು, ಧಾರವಾಡದಿಂದ ಬೆಳಗಾವಿಗೆ ಬಂದು ನೆಲೆಸಿದ್ದ ತರುಣ ವಕೀಲರಾದ ಹಳಕಟ್ಟಿ ಫಕೀರಪ್ಪನವರ ಕೈಗೆ ಬಿದ್ದ ಕ್ಷಣವೂ ಅದೆಂತಹ ದೇವ ಮುಹೂರ್ತವೋ! ಅಮೃತ ಘಳಿಗೆಯೋ! ಅದರ ಪರಿಣಾಮದಿಂದ ಅವರು '64ನೆಯ ಪುರಾತನ'ರೆನಿಸಿದರು; 'ವಚನ ಶಾಸ್ತ್ರ ಪಿತಾಮಹ'ರೆನಿಸಿದರು. ಉತ್ತರ ಜೀವನದಲ್ಲಿ ಡಾಕ್ಟರೇಟ್ ಪದವಿಯೂ ಅವರನ್ನು ಅರಸುತ್ತ ಬಂದಿತು. 'ನಿಮ್ಮ ನಿಮ್ಮ ಪದವಿಯ ನೀವು ನಿಮ್ಮ ಕೊರಳಿಗೇ ಸುತ್ತಿಕೊಳ್ಳಿ. ಎನಗೆ ನಿಮ್ಮ ತೊತ್ತು ಸೇವೆಯೇ ಸಾಕು' ಎಂದುಕೊಂಡಿದ್ದರೂ, ಲೌಕಿಕವಾಗಿ ಅದನ್ನು ಸ್ವೀಕರಿಸಬೇಕಾಗಿ ಬಂತು, ಆ ಮಾತು ಬೇರೆ.





7th_Kannada_Reader.indd 8 24-06-2019 19:37:37

ಬಿ.ಎ.,ಎಲ್.ಎಲ್.ಬಿ., ಪದವೀಧರರಾಗಿ ವಕೀಲಿ ಕೆಲಸ ನಿರ್ವಹಿಸಲು ಧಾರವಾಡದಿಂದ ಬೆಳಗಾವಿಗೆ ಹೊರಟ ಶ್ರೀಹಳಕಟ್ಟಿಯವರು ಅಲ್ಲಿಂದ, ವಚನ ವಾಙ್ಮಯದ ಅಪಾರ ನಿಧಿಗೆ ಸೈವೆರಗಾಗಿ ಅದರ ನೆಲೆಯಾದ ವಿಜಾಪುರದತ್ತ ಧಾವಿಸಿದರು. ಅಷ್ಟರಲ್ಲಿ ಅವರಿಗೆ ವಕೀಲಿಗಿಂತ ವಚನ ವಾಙ್ಮಯ ಸಂಶೋಧನಾ ಕಾರ್ಯವು ಆಕರ್ಷಕವಾಗಿತ್ತು. ಅವರ 'ವಚನ ಶಾಸ್ತ್ರ ಸಾರ'ದ ಮೊದಲ ಭಾಗವು ಪ್ರಕಟವಾಗಿ ಕನ್ನಡಿಗರ ಕಣ್ಮನಗಳನ್ನು ಸಾಕಷ್ಟು ತಣಿಸಿತ್ತು. ಯಾವ ಉದ್ದೇಶವನ್ನು ಇರಿಸಿಕೊಂಡು ವಿಜಾಪುರಕ್ಕೆ ಬಂದಿದ್ದರೋ ಆ ಉದ್ದೇಶವು ಫಲಿಸಿ ಬರುವಂತೆ ಅವರು ತಮ್ಮ ಕಾಯಕದಲ್ಲಿ ನಿರತರಾದರು, ತಲ್ಲೀನರಾದರು; ಅದರಲ್ಲಿಯೇ ಬೆರೆತು ಹೋದರು. ಅಂದು ಕಣ್ಣಿಗಿಟ್ಟ ಕನ್ನಡಕವಾಗಲೀ, ತಲೆಗಿಟ್ಟ ರುಮಾಲಾಗಲೀ ಅಲ್ಲಿಂದ ಕದಲಲಿಲ್ಲ. ಮಾತು ಮೆಲ್ಲಮೆಲ್ಲನೆ ಮೌನದತ್ತ ಸಾಗಿದವು. ಏಕೆಂದರೆ ಮಾತು ಕಾರ್ಯಕ್ಕೆ ಪ್ರೇರಣೆಯಾದರೆ; ಮೌನವು ಪ್ರತ್ಯಕ್ಷ ಕಾರ್ಯವಲ್ಲವೇ!

ಜರ್ಮನಿ ದೇಶ ಹಾಗೂ ಸಂಸ್ಕೃತ ಭಾಷೆಗಳ ಸಂಬಂಧವೆಂದರೆ ಬೆಟ್ಟದ ನೆಲ್ಲಿ, ಸಮುದ್ರದ ಉಪ್ಪುಗಳ ಸಂಬಂಧದಂತೆ ಅದಾವುದೋ ಕರುಳುಬಳ್ಳಿಯ ಸೇರುವೆಯಿರಬಹುದು. ಜರ್ಮನಿಯ ಮ್ಯಾಕ್ಸ್‌ಮುಲ್ಲರ್ ಎಂಬ ವಿದ್ವಾಂಸ ಸಂಸ್ಕೃತವನ್ನು ಕಲಿತು ವೇದಾಭ್ಯಾಸ ಮಾಡಿ, ಅವುಗಳನ್ನು ಜರ್ಮನ್ ಭಾಷೆಗೆ ಪರಿವರ್ತಿಸಿ ಮುದ್ರಿಸಿ ಗ್ರಂಥವನ್ನು ಅಣಿಗೊಳಿಸುವ ಹೊತ್ತಿಗೆ ಅರವತ್ತು ವರುಷ ಗತಿಸಿದ್ದವು. ಅಖಂಡ ಅರವತ್ತು ವರುಷ ವೇದ, ವೇದಾರ್ಥಗಳ ಮನನ, ಧ್ಯಾನ! ಏನವರ ತಾಳ್ಮೆ! ಅದೆಂತಹ ಏಕಾಗ್ರತೆ ಅವರದು! ಅದಾವ ಲೋಕದ ದೃಢತೆಯೋ! ಅಂತಹ ತಾಳ್ಮೆಯಾಗಲೀ, ಏಕಾಗ್ರತೆಯಾಗಲೀ, ದೃಢತೆಯಾಗಲೀ ಪಾಶ್ಚಾತ್ಯರಿಗೆ ಮಾತ್ರ ಸಾಧ್ಯವೆಂದು ನಮ್ಮೆಣಿಕೆ. ನಮ್ಮವರಿಗೆಲ್ಲಿಂದ ಬಂದೀತು, ಆ ಅಚಲ ನಿಷ್ಠೆ?

ಆದರೆ ಇಲ್ಲಿ ಬನ್ನಿ, ಶ್ರೀ ಹಳಕಟ್ಟಿಯವರು ತಮ್ಮ ಆಯುಷ್ಯದ ಅರವತ್ತು ವರುಷಗಳನ್ನು ವಚನ ವಾಙ್ಮಯ ಸಂಶೋಧನವೊಂದರಲ್ಲಿಯೇ ಕಳೆದಿಲ್ಲವೇ? ಅರವತ್ತು ವರುಷ ಅದೇ ಮನನ, ಅದೇ ಧ್ಯಾನದಲ್ಲಿ ಮುಳುಗಿರಲಿಲ್ಲವೇ? ಜರ್ಮನಿಯವರಿಗೆ ಸಂಸ್ಕೃತ ಭಾಷೆಯು ಉಕ್ಕಿನ ಕಡಲೆಯಾಗಿ ಪರಿಣಮಿಸಿದ ಹಾಗೆ, ಕನ್ನಡಿಗರಿಗೂ ವಾಚನ ವಾಙ್ಮಯವು ಉಕ್ಕಿನ ಕಡಲೆಯಾಗಿಯೇ ಪರಿಣಮಿಸಿ ಬಿಟ್ಟಿರಲಿಲ್ಲವೇ? ಹುಳು ತಿಂದ ಹಾಳೆಗಳನ್ನೋ, ಗೆದ್ದಲು ಹಿಡಿದ ಓಲೆಗಳನ್ನೋ ಓದುವುದಕ್ಕೆ ಬರಿಗಣ್ಣಿಗೆ ಸಾಧ್ಯವಿಲ್ಲ; ಕನ್ನಡಕ ಹಾಕಿದ ಕಣ್ಣಿಗೂ ಸಾಧ್ಯವಿಲ್ಲ. 'ಕರೆದರೆ ಬರುವುದಿಲ್ಲ. ಕೈಹಿಡಿದರೆ ಬರುತ್ತಾಳೆ – ತಂಬಿಗೆ' ಎಂಬ ಒಡಪಿನ ರೀತಿಯಂತೆ ವಚನ ವಾಙ್ಮಯವನ್ನು ಒಲಿಸಿಕೊಳ್ಳುವ ಒಲುಮೆಗಣ್ಣು ಮೊದಲು ಬೇಕು. ದರ್ಶನದಿಂದ ಬಹಳವಾದರೆ ಪರಿಚಯವಾಗಬಲ್ಲದು. ಆದರೆ ಪರಿಚಯದಿಂದ ಸಂಭಾಷಣೆಯೂ, ಭಾಷಣದಿಂದ ಸಹವಾಸ, ಸಖ್ಯ ಉಂಟಾದ ಮೇಲಲ್ಲವೇ ಒಕ್ಕಟ್ಟು? ಅಕ್ಷರ ತಿಳಿದು, ಅರ್ಥ ಹೊಳೆದು, ತಪ್ಪುಒಪ್ಪು ತೂಗಿ ನಿರ್ಣಯಕ್ಕೆ ಬಂದಾಗ ಹಾಳೆಗಿಳಿಯಬೇಕು. ಆಮೇಲೆ ಅಚ್ಚಿನ ಚಿಂತೆ! ಅಚ್ಚಾದ ಬಳಿಕ ಪುಸ್ತಕಗಳ ಒಟ್ಟಿಲು ನೋಡಿ ಎದೆಯೊಡೆದುಕೊಳ್ಳಬೇಕು, ಇಲ್ಲವೇ ತಾನು ಮಾಡಿದ ಕರ್ಮದ ಮೊತ್ತ ಅದು ಎಂದು ಕಣ್ಣಿಂದ ಜೀವ ಬಿಡಬೇಕು. ಕೊಟ್ಟು ಕೊರಗುವ, ಇಟ್ಟು ಮರುಗುವ, ಇತಿಮಿತಿ ಇಲ್ಲದೆ ತಿರುಗುವ ಜಾಯಮಾನವಲ್ಲ ಹಳಕಟ್ಟಿಯವರದು. ಆ ಒಟ್ಟಿಲನ್ನು ಕರಗಿಸುವ ಉಪಾಯ, ಯೋಜನೆಯಲ್ಲಿ ಕೊರಗಿ ಕೈಕಾಲು ಕಳಕೊಳ್ಳುವ ಹೊತ್ತಿಗೆ ಅದಾವುದೋ ಒಂದು ಆಶಾಕಿರಣವು ಅದೆಲ್ಲಿಂದಲೋ ನುಸುಳಿ ಬಂದು ಬೆಂಬಲಕ್ಕೆ ಬಂದು ನಿಂತಿತು. ಈಸಲಾದರೆ ಸೋತವನು ಮುಳುಗಿ ಹೋಗುವಂತಾಗಬಾರದೆಂದು ಬೆಂಡು ತೇಲುತ್ತಾ ಬಂದಂತೆ ವಚನ ವಾಙ್ಮಯ ಸಂಶೋಧನೆಗಾಗಿ 'ಶಿವಾನುಭವ' ಪತ್ರಿಕೆಯನ್ನು ರಂಗಸ್ಥಲ ಮಾಡಿಕೊಂಡಂತೆ, ಅಖಿಲ ಕರ್ನಾಟಕವನ್ನು ಕಟ್ಟುವ ಕಟ್ಟಾಳುಗಳಿಗಾಗಿ 'ನವ ಕರ್ನಾಟಕ' ಸಾಪ್ತಾಹಿಕವನ್ನು ಕಣವನ್ನಾಗಿ ನಿರ್ಮಿಸಿಕೊಂಡರು. ಶಿಕ್ಷಣ ಸಂಸ್ಥೆ, ಸಹಕಾರಿ ಸಂಘಗಳಿಗೂ ಸಾಕಷ್ಟು ಸೇವೆ ಸಲ್ಲಿಸುವ ಅವಕಾಶ ಕಲ್ಪಿಸಿಕೊಂಡರು. ಇಂದು ಬಿಜಾಪುರದ ಸಾರ್ವಜನಿಕ ಜೀವನದಲ್ಲಿ ಫಸಲು ಕಂಡು ಬರುತ್ತಿದ್ದರೆ ಅದರ ಕೃಷಿಗೆ ಹಳಕಟ್ಟಿಯವರ ಕೈ ಹತ್ತದೆ ಹೋಗಿಲ್ಲವೆಂದೇ ಹೇಳಬಹುದಾಗಿದೆ.

ಈ ವಿಧದಲ್ಲಿ ಒಂದಲ್ಲ, ಎರಡಲ್ಲ ಅರವತ್ತು ವರ್ಷ ಕಳೆಯುವುದಾಗಲೀ, ತೊಂಬತ್ತು ವರ್ಷದ ಇಳಿವಯಸ್ಸಿನವರೆಗೆ ಆಸ್ಥೆ ವಹಿಸುವುದಾಗಲೀ ಸಣ್ಣ ಮಾತಲ್ಲ. ಅವರಿಗೆ ದೊರೆತ ಸಹಾಯ, ಸಹಾನುಭೂತಿಗಳು ಅಷ್ಟಕ್ಕಷ್ಟೆ. ಸಮಾಜದ ಬೃಹದುಪಕಾರವನ್ನು ಲೆಕ್ಕಿಸಿದರೆ ಅದು ಹಳಕಟ್ಟಿಯವರಿಗೆ ನೀಡಿದ ಸಹಾಯವು ಉಗುರೊಳಗಿನ ಮಣ್ಣು ಎನ್ನುವಂತಿದೆ. ಬುದ್ಧಿ



7th_Kannada_Reader.indd 9 24-06-2019 19:37:37

ದುಡಿಯಿತು, ಹೊಟ್ಟೆ ಹಸಿಯಿತು, ಮೈ ಸೋತು ಜಡವೆನಿಸಿತು; ಜಡ್ಡಿಗೀಡಾಯಿತು... ಮೊದಮೊದಲು ಹೊಸ ರೋಗಿ, ಮುಂದಿನ ಹೆಜ್ಜೆಯಲ್ಲಿಯೇ 'ಡಾಕ್ಟರ್' ಎಂಬ ಬಿರುದು ಹಳಕಟ್ಟಿಯವರನ್ನು ಅರಸಿ ಬಂದಿತು. ಆ ಬಿರುದಿಗಂಜಿ ರೋಗರುಜಿನಗಳು ಕಣ್ಮರೆಯಾದವೆಂದು ನಿಶ್ಚಿಂತವಾಗಿರಬೇಕೆಂದರೆ ಮರಣವೇ ತುಡುಕಿ ಬಂದು ಅವರನ್ನು ಅಡಸಿತು. ಅವರು ರೋಗಾರಿ ಡಾಕ್ಟರರಾಗಿರದೆ, ಸಾಹಿತ್ಯ ವಿಭಾಗದ ಡಾಕ್ಟರರೆನ್ನುವುದನ್ನು ಗುರುತಿಸಿತೇನೋ!

ಗಳಿಸುವ ವೃತ್ತಿಯಾದ ವಕೀಲಿಯನ್ನು ಬಿಟ್ಟುಕೊಟ್ಟು ವಚನ ಸಾಹಿತ್ಯ ಸಂಶೋಧನಾ ಪ್ರಕಾಶನಗಳಿಗೆ ನಡುಗಟ್ಟಿದಾಗಲೇ ಅವರು ಬಡತನದ ಕಡುಸ್ನೇಹಿತರಾದರು; ಅನಾರೋಗ್ಯದ ಆಪ್ತರಾದರು. ಅವರ ಕಾರ್ಯ ಮಹತ್ವಕ್ಕನುಗುಣವಾಗಿ ಸಮಾಜವು ಲೆಕ್ಕಿಸದೇ ಹೋದುದರಿಂದ ಅವರು ಸ್ವಾವಲಂಬನದ ದತ್ತುಪುತ್ರರಾದರು. ದೊಡ್ಡ ಸಂಬಳವುಳ್ಳ ಮಗನನ್ನು ದೇವನು ತನ್ನ ಮಗನನ್ನಾಗಿ ಮಾಡಿಕೊಂಡದ್ದರಿಂದ ಸಹಜವಾಗಿಯೇ ಅವರು ದೇವನಿಗೆ ಸಹೋದರರಾದರು. ಸಹೋದರನು ಅವರನ್ನು ಕೊನೆಗೆ ತನ್ನಂತೆ ಮಾಡಿಕೊಂಡನು.

ಒಳ್ಳೆಯವರೂ ಇಷ್ಟೊಂದು ತಲ್ಲಣಕ್ಕೀಡಾಗಬೇಕೇ? ಒಳ್ಳೆಯ ಕಾರ್ಯಗಳಿಗೂ ಇಷ್ಟೊಂದು ವಿಘ್ನಗಳು ದೌಡಿಟ್ಟು ಈ ವಿಧದ ಹಾಕೊಂದೆಸೆ ಹನ್ನೊಂದೆಸೆಯುಂಟು ಮಾಡಬೇಕೇ? 'ಪರಮಾತ್ಮನೆಡೆಗೆ ಹೊರಳಿದವರಲ್ಲಿ ಕೆಲವರಿಗೆ ಹೀಗೆ ಘಟಿಸುವುದು; ಏನೆಂದರೆ ಅವರ ಪ್ರತಿಯೊಂದು ಭೌತಿಕ ಸಂಪತ್ತೂ, ಅವರು ಪ್ರೀತಿಸುವ ಪ್ರತಿಯೊಂದು ವಿಷಯವೂ ಅವರ ಜೀವನದಿಂದ ತೆಗೆದು ಹಾಕಲ್ಪಡುವುವು ಮತ್ತು ಅವರು ಯಾರನ್ನಾದರೂ ಪ್ರೀತಿಸುತ್ತಿದ್ದರೆ ಅವರನ್ನು ಸಹ ತೆಗೆದು ಬಿಡಲಾಗುವುದು. ಇದು ನಿಜವೇ?' ಎಂದು ಪಾಂಡಿಚೇರಿಯ ಶ್ರೀ ಅರವಿಂದ ಆಶ್ರಮದಲ್ಲಿರುವ ಶ್ರೀ ತಾಯಿಯವರಿಗೆ ಪ್ರಶ್ನಿಸಲು ಅವರು ಏನೆಂದು ಮರುನುಡಿದರು ಗೊತ್ತೇ? 'ಇದು ಎಲ್ಲರಿಗೂ ಘಟಿಸುವ ಸಂಗತಿಯೇನೂ ಅಲ್ಲ. ಯಾರು ದೇವನಿಂದ ಆಹ್ವಾನಿತರಾಗುವರೋ ಅವರಿಗಷ್ಟೇ ಹೀಗಾಗುವುದು.'

ಡಾಕ್ಟರ್ ಹಳಕಟ್ಟಿಯವರು ದೇವನಿಂದ ಆಹ್ವಾನಿತರಾದವರೆಂದು ನಿರ್ವಿವಾದವಾಯಿತು. 'ನುಗ್ಗು ಮಾಡುವ, ನುಸಿ ಮಾಡುವ, ಕಡೆಗೆ ತನ್ನಂತೆ ಮಾಡುವ' ಎನ್ನುವುದಕ್ಕೆ ಅವರೊಂದು ಸ್ಪಷ್ಟ ಉದಾಹರಣೆಯಾಗಿ ಹೋದರು ಅಥವಾ ನಿಂತರು. ಹಾಗೆ ಹೋದವರೇ ನಿಂತು ಬಿಡುವುದು ಖಂಡಿತ, ಕೀರ್ತಿ ಶರೀರದಲ್ಲಿ.

ಬಸವಣ್ಣನವರು ಹೇಳಿದ ಕರ್ತಾರನ ಕಮ್ಮಟದಲ್ಲಿ ಹಳಕಟ್ಟಿಯವರು ಕಾಯಿಸಿಕೊಂಡರು, ಬಡಿಯಿಸಿಕೊಂಡರು, ಕತ್ತರಿಸಿಕೊಂಡರು, ಕಂಬಚ್ಚಿನ ಇಕ್ಕಟ್ಟಿನಲ್ಲಿ ಹಾಯ್ದು ಹೋದರು. ಇಕ್ಕಳದಲ್ಲಿ ಸಿಲುಕಿಕೊಂಡರು. ಕಡೆಗೊಮ್ಮೆ, ದೇವರಾಯನ ಮಡದಿಗೊಪ್ಪುವ ಒಂದು ಆಭರಣವಾಗಿ ನಡೆ ಮಾಡು ಏರಿ ತೆರಳಿದರು.

ತಾನು ಮಾಡುವ ಕೆಲಸದ ಮಹತ್ತು, ಸಾಮಾಜಿಕರ ಗಮನಕ್ಕೆ ಬರಬೇಕೆಂದು ಆಶಿಸುವವನು ಏನು ಮಾಡಬೇಕು ಗೊತ್ತೇ? ಕೆಲಸ ಬಿಟ್ಟು ಮೊದಲು ಸತ್ತು ಹೋಗಬೇಕು. ಆಗ ಸಾಮಾಜಿಕರಲ್ಲಿ ಸ್ಮಾರಕದ ವಿಚಾರವಾದರೂ ತಾತ್ಕಾಲಿಕವಾಗಿ ಸುಳಿಯಬಲ್ಲದು, ಉಪಕಾರ ಅರಿಯದ ಊರು ಸತ್ತ ಮೇಲಿನ ಸ್ಮಾರಕವನ್ನೇ ನೆನಪಿಟ್ಟಿದೆಯಲ್ಲದೆ, ಜೀವ ಜಡ ಭಾವವಿದ್ದಾಗ ಪ್ರೇಮಿಸುವುದನ್ನು ಕಲಿಯಲಿಲ್ಲ. 'ಊರು ಉಪಕಾರ ಅರಿಯದು, ಹೆಣ ಸಿಂಗಾರವರಿಯದು' ಎಂಬ ಮಾತು ಹಳಕಟ್ಟಿಯವರಿಗೆ ತಿಳಿಯಬೇಕಿತ್ತೋ, ಸಾಮಾಜಿಕರಿಗೆ ತಿಳಿಯಬೇಕಿತ್ತೋ! ಒಟ್ಟಿನಲ್ಲಿ ಆ ಮಾತು ಉಭಯತರಿಗೂ ತಿಳಿದಿತ್ತೆಂದು ತೋರುತ್ತದೆ. ಅಂತೆಯೇ ಅಲ್ಲಿ ಅನಾಸಕ್ತಿ, ಇಲ್ಲಿ ಅಲಕ್ಷ್ಯ ಕಂಡು ಬರುತ್ತಿತ್ತು.

'ದೇವರೇನಾದರೂ ಕೊಡಲಣ್ಣ, ಕೊಡದಿದ್ದರೆ ಬಿಡಲಣ್ಣ, ಅವನು ಹಾಕಿದ ತಾಳದಂತೆ ಕುಣಿ'ಯುವುದೇ ಹಳಕಟ್ಟಿಯವರ ಪ್ರಪಂಚ ರಹಸ್ಯವಾಗಿತ್ತು. ಅದನ್ನವರು ಸಾಧಿಸಿದರು. ಜರ್ಮನಿಯ ಮ್ಯಾಕ್ಸ್‌ಮುಲ್ಲರ್ ದಂಪತಿಗಳನ್ನು ವಿವೇಕಾನಂದರು ಪಡುವಣ ನಾಡಿನಲ್ಲಿ ಸಂಚರಿಸುವಾಗ ಕಂಡು, ತಮ್ಮ ಭಕ್ತಿಯನ್ನೂ, ಆನಂದವನ್ನೂ ವಸಿಷ್ಠ–ಅರುಂಧತಿ ಸದೃಶರಾದ ಅವರಿಗೆ ಸಲ್ಲಿಸಿ ಬಂದ ಸಂಗತಿಯು ನಮಗೆ ಇಂದಿಗೂ ರೋಮಾಂಚನಕಾರಿಯಾಗಿದೆ. ಮ್ಯಾಕ್ಸ್‌ಮುಲ್ಲರರನ್ನು ಕಂಡಂತಹ ವಿವೇಕಾನಂದ ಉಳ್ಳವರು ಯಾರಾದರೂ ಡಾಕ್ಟರ್ ಹಳಕಟ್ಟಿಯವರನ್ನು ಕಂಡಿದ್ದರೆ, ಅವರ ಕಾರ್ಯ ಮಹತ್ತನ್ನೂ, ಆತ್ಮ ವಿಶಾಲತೆಯನ್ನೂ ಗುರುತಿಸಿ ಅವರಡಿಗಳಿಗೆ ಎರಗುತ್ತಿದ್ದರು.

ಅಷ್ಟೊಂದು ದೀರ್ಘಾವಧಿ ಶ್ರಮಿಸಿದ ಡಾಕ್ಟರ್ ಹಳಕಟ್ಟಿಯವರು ಕೊನೆಯವರೆಗೂ ಬಾಡಿಗೆ



7th_Kannada_Reader.indd 10 24-06-2019 19:37:37

ಮನೆಯಲ್ಲಿಯೇ ಇರಬೇಕಾಯಿತು. ಕೊನೆಯಲ್ಲಿ ಮಾತ್ರ ಬಾಡಿಗೆಯಿಲ್ಲದ ಮನೆ ಸಿಕ್ಕಿತು! ಕಲಿತದ್ದು ವಕಾಲತ್ತು ವೃತ್ತಿ, ವಹಿಸಿದ್ದು ಪ್ರಾಚ್ಯ ಸಾಹಿತ್ಯ ಸಂಶೋಧನೆ, ಪತ್ರಿಕಾ ಸಂಪಾದನೆ, ಸಂಸ್ಥಾ ಸಂಸ್ಥಾಪನೆ, ಶಿಕ್ಷಣ ಪ್ರಸರಣ... ಇವುಗಳನ್ನೆಲ್ಲ ಕಂಡು ಅಂದಿನ ಸರ್ಕಾರವು ಹಳಕಟ್ಟಿಯವರಿಗೆ ಒಮ್ಮೆ, 'ರಾವ್ ಸಾಹೇಬ' ಅಂದಿತು; ಇನ್ನೊಮ್ಮೆ, 'ರಾವ್ ಬಹದ್ದೂರ' ಎಂದಿತು. ಸಾಮಾಜಿಕರು ಅವರ ಅರವತ್ತನಾಲ್ಕರ ಜಯಂತಿಯ ಕಾಲಕ್ಕೆ ಅರವತ್ತನಾಲ್ಕನೇ ಪುರಾತನರೆನಿಸುವವರಿಗೆ, ಏನಿಲ್ಲೆಂದರೂ ಅರವತ್ತನಾಲ್ಕು ಸಾವಿರ ಹಣ ಕೂಡಿಸಿ ಕೊಡಲು ಒಳ್ಳೆಯ ಉತ್ಸಾಹದಿಂದ ಹೂಣಿಕೆ ತೊಟ್ಟಿತಾದರೂ ಕೃತಿಯಲ್ಲಿ ಮೇಲಿನ ಚುಂಗು ಸಹ ಅಳವಟ್ಟಿತೋ ಇಲ್ಲವೋ ತಿಳಿಯದು.

ಕೈಕೊಂಡ ಕಾರ್ಯವನ್ನು ಅವರು ಕೈ ಬಿಡದೆ ಕೊನೆಯುಸಿರಿನವರೆಗೂ ನಡೆಸಿಕೊಂಡು ಬಂದರೆಂದರೆ ಅದರಿಂದ ಅವರಿಗೆ ಆತ್ಮ ತೃಪ್ತಿಯಾಗಿರಲಿಕ್ಕೇ ಬೇಕು. ಅವರ ಆತ್ಮತೃಪ್ತಿಯ ಚಿಂತೆ ನಮಗೀಗ ಬೇಕಿಲ್ಲ. 'ಆದಾವ ನಮ್ಮ ಜೋಳ, ಉಳಿದಾವ ನಮ್ಮ ಹಾಡ' ಎಂದು ಅವರು ತಾವು ತಂದ ಧಾನ್ಯ ಬೀಸಿ ಹಿಟ್ಟು ಮಾಡಿಕೊಂಡು ಹೋದರು. ಈಗ ನಾವು ಯಾವ ಸ್ಮಾರಕ ಮಾಡಿದರೂ ನಮ್ಮ ಆತ್ಮಸಂತುಷ್ಟಿಗಾಗಿಯೇ ಅಲ್ಲದೆ ಡಾಕ್ಟರ್ ಹಳಕಟ್ಟಿಯವರ ಆತ್ಮತುಷ್ಟಿಗಾಗಿಯಂತೂ ಅಲ್ಲ.

## ಕೃತಿ ಕರ್ತೃ ಪರಿಚಯ



ಸಿಂಪಿ ಲಿಂಗಣ್ಣ (1905–1993). ಆಧುನಿಕ ಕನ್ನಡ ಗದ್ಯ ಸಾಹಿತ್ಯ ಶಿಲ್ಪಿಗಳಲ್ಲಿ ಒಬ್ಬರು. ಜನಜೀವನದಲ್ಲಿ, ಶಿಕ್ಷಣ ಕ್ರಮದಲ್ಲಿ, ಕನ್ನಡದ ಕಂಪನ್ನು ಪಸರಿಸಲು ಇವರು ಶಿಷ್ಟ ಸಾಹಿತ್ಯ, ಜಾನಪದ ಸಾಹಿತ್ಯ, ಪ್ರಕಾಶೋದ್ಯಮ ಹಾಗೂ ಶ್ರೀ ಅರವಿಂದರ ತತ್ವಜ್ಞಾನ–ಹೀಗೆ ನಾಲ್ಮೊಗದ ಪ್ರಯತ್ನಗಳನ್ನು ಮಾಡಿದರು. ಹಲಸಂಗಿ ಗೆಳೆಯರ ಗುಂಪಿನ ಸಕ್ರಿಯ ಸದಸ್ಯರಾಗಿದ್ದರು.

ಶ್ರೀಯುತರು ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಚಡಚಣದವರು. ವೃತ್ತಿಯಿಂದ ಪ್ರಾಥಮಿಕ ಶಾಲಾ ಶಿಕ್ಷಕರು, ಪ್ರವೃತ್ತಿಯಿಂದ ಲೇಖಕರು. ಸ್ವರ್ಗದೋಲೆಗಳು, ಗರತಿಯ ಬಾಳು, ಜನಾಂಗದ ಜೀವಾಳ, ನಾಟ್ಯ ಸಾಧನೆ, ಮುಗಿಲು ಜೇನು– ಮುಂತಾದವುಗಳು ಇವರ ಪ್ರಮುಖ ಕೃತಿಗಳು. ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು. 1992ರಲ್ಲಿ ಕೊಪ್ಪಳದಲ್ಲಿ ಜರುಗಿದ 62ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

'ವಚನ ಗುಮ್ಮಟ' ಎಂದು ಪ್ರಸಿದ್ಧರಾದ ಡಾಕ್ಟರ್ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರು ವಿಜಾಪುರವನ್ನು ತಮ್ಮ ಕರ್ಮಭೂಮಿಯನ್ನಾಗಿ ಮಾಡಿಕೊಂಡು, ವಚನ ಸಾಹಿತ್ಯ ಸಂಗ್ರಹ, ಸಂಸ್ಕರಣಾ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜನಹಿತದ ಕಾರ್ಯಕ್ಕೆ ತಮ್ಮ ಸರ್ವಸ್ವವನ್ನೂ ಧಾರೆಯೆರೆದ ಇವರು ವಕೀಲಿ ವೃತ್ತಿಯ ಹಣ ಗಳಿಸುವ ದಾರಿಯನ್ನು ಬಿಟ್ಟು, 'ಶಿವಾನುಭವ' ಹಾಗೂ 'ನವಕರ್ನಾಟಕ' ಪತ್ರಿಕೆಗಳ ಮೂಲಕ ಸಮಾಜ ಜಾಗೃತಿಯ ಕಾರ್ಯಕ್ಕೆ ಕೈ ಹಾಕಿದರು. ಬಿಎಲ್.ಡಿ.ಇ., ಸಂಸ್ಥೆಯನ್ನು ಹುಟ್ಟು ಹಾಕಿ ಶೈಕ್ಷಣಿಕ ಗಂಗೆಯನ್ನು ಈ ಪ್ರದೇಶದ ನೆಲದಲ್ಲಿ ಹರಿಸಿದರು. ಶ್ರೀ ಸಿದ್ಧೇಶ್ವರ ಹರ್ಬನ್ ಸಹಕಾರಿ ಬ್ಯಾಂಕನ್ನು ಸ್ಥಾಪಿಸಿ ಶ್ರೀಸಾಮಾನ್ಯರ ಆರ್ಥಿಕ ಬದುಕಿಗೆ ಚೈತನ್ಯವನ್ನೊದಗಿಸಿದರು. ಶರಣರ ತತ್ವ, ಸಿದ್ಧಾಂತ, ಧೋರಣೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬಾಳಿ ಬದುಕಿದ ಇವರು ಶರಣರ ಆದರ್ಶಗಳಿಗೆ ಪ್ರತ್ಯಕ್ಷ ನಿದರ್ಶನವಾದರು.

ಜೀವನದಲ್ಲಿ ಹಲವಾರು ಕಷ್ಟ ನಷ್ಟಗಳನ್ನು ಅನುಭವಿಸಿ, ಅವುಗಳನ್ನೆಲ್ಲ ಮೆಟ್ಟಿ ನಿಂತು ಸಮಷ್ಟಿ ಕಲ್ಯಾಣಕ್ಕೆ ಹಳಕಟ್ಟಿಯವರು ತಮ್ಮ ಬದುಕನ್ನು ಸಮರ್ಪಿಸಿಕೊಂಡರು. ಲೇಖಕ ಸಿಂಪಿ ಲಿಂಗಣ್ಣನವರು ಇವರನ್ನು ಜರ್ಮನಿಯ ಸುಪ್ರಸಿದ್ಧ ವಿದ್ವಾಂಸ ಮ್ಯಾಕ್ಸ್‌ಮುಲ್ಲರನಿಗೆ ಹೋಲಿಸಿ ಇಲ್ಲಿ ಗೌರವಿಸಿದ್ದಾರೆ. ಅವರ ಸಾಧನೆ ಸಿದ್ಧಿಗಳನ್ನು ಮನದುಂಬಿ ಸ್ಮರಿಸಿದ್ದಾರೆ.



7th_Kannada_Reader.indd 11 24-06-2019 19:37:37

## ಪದಗಳ ಅರ್ಥ

ಸೈವೆರಗು–ಅತಿಯಾದ ಆಶ್ಚರ್ಯ; ಕರುಳ ಬಳ್ಳಿ ಸೇರುವೆ–ಸಂಬಂಧಗಳು ಕೂಡಿ ಕೊಳ್ಳುವುದು; ಸಖ್ಯ–ಸ್ನೇಹ; ಒಟ್ಟಿಲು–ರಾಶಿ, ಗುಂಪು; ರಂಗಸ್ಥಲ–ರಂಗ ಮಂಟಪ, ನಾಟ್ಯ ವೇದಿಕೆ; ಕಟ್ಟಾಳು–ಶೂರ, ಸಮರ್ಥ; ಫಸಲು–ಬೆಳೆ; ಆಸ್ಥೆ–ಆಸಕ್ತಿ; ಜಡ್ಡು–ಕಾಯಿಲೆ; ತುಡುಕು–ಬೇಗನೆ ಹಿಡಿ; ಅಡಸು–ಒತ್ತಿ ಹಿಡಿ; ತಲ್ಲಣ–ತಳಮಳ; ದೌಡು–ಓಡು; ಹಾಕೊಂದೆಸೆ ಹನ್ನೊಂದೆಸೆ–ಒಂದೆಡೆ ಹಾಕಿದರೆ ಹನ್ನೊಂದೆಡೆ ಹರಿಯುವುದು, ಗೊಂದಲ ಉಂಟು ಮಾಡುವುದು; ಏನೂ ತಿಳಿಯದ ಸ್ಥಿತಿ ಉಂಟಾಗುವುದು; ನುಗ್ಗು ನುಸಿ–ಜರ್ಝರಿತವಾದ; ಕೀರ್ತಿ ಶರೀರ–ದೈಹಿಕವಾಗಿ ಇಲ್ಲದಿದ್ದರೂ ಕೀರ್ತಿಯನ್ನು ಉಳಿಸಿ ಹೋದವರು; ಕಮ್ಮಟ–ನಾಣ್ಯಗಳನ್ನು ಮುದ್ರಿಸುವ ಸ್ಥಳ, ಠಂಕಸಾಲೆ; ಕಂಬಚ್ಚು–ತಂತಿಗಳನ್ನು ಎಳೆದು ಉದ್ದ ಮಾಡಲು ಬಳಸುವ ರಂಧ್ರಗಳುಳ್ಳ ಲೋಹದ ಫಲಕ; ನಡೆಮಾಡು–ಚಲಿಸುವಂತೆ ರಚಿಸಿರುವ ಒಂದು ಬಗೆಯ ಮನೆ, ವಿಮಾನ; ಸದೃಶ–ಸಮಾನವಾದುದು; ಹೂಣಿಕೆ–ಪ್ರತಿಜ್ಞೆ; ಚುಂಗು–ತುದಿ.

## ಟಿಪ್ಪಣಿಗಳು

**1. ದೇವೇಂದ್ರನಾಥ :** ರವೀಂದ್ರನಾಥ ಠಾಕೂರರ ತಂದೆ. ಭಾರತದ ಪುನರುಜ್ಜೀವನ ಅವಧಿಯ ಸಮಾಜ ಸುಧಾರಕರಲ್ಲಿ ಇವರೂ ಒಬ್ಬರು.

**2. ಮಲ್ಲಣಾರ್ಯ :** ಹದಿನಾರನೇ ಶತಮಾನದಲ್ಲಿದ್ದ ಒಬ್ಬ ವೀರಶೈವ ಕವಿ. ಗುಬ್ಬಿಯ ಮಲ್ಲಣಾರ್ಯ ಎಂದೇ ಇವನು ಪ್ರಸಿದ್ಧನು. 'ಭಾವಚಿಂತಾರತ್ನ' ಹಾಗೂ 'ವೀರಶೈವಾಮೃತ ಪುರಾಣ' ಎಂಬ ಕಾವ್ಯಗಳನ್ನು ಇವನು ರಚಿಸಿದ್ದಾನೆ.

**3. ಅರವತ್ನಾಲ್ಕನೇ ಪುರಾತನರು :** ಇಳೆಯಾಂಡ ಗುಡಿಮಾರ, ನಂಬಿಯಣ್ಣ, ಕಾರಿಕಾಲಮ್ಮೆ, ಬೇಡರ ಕಣ್ಣಪ್ಪ, ಭಕ್ತ ಸಿರಿಯಾಳ, ಅತಿಭಕ್ತ, ಕುಂಬಾರ ಗುಂಡಯ್ಯ ಮೊದಲಾದ ತಮಿಳುನಾಡಿನ ಪ್ರಾಚೀನ ಶಿವಭಕ್ತರು ಅರವತ್ತ ಮೂರು ಜನ ಇದ್ದಾರೆ. ಇವರೇ ಪುರಾತನರು ಎಂದು ಹೆಸರಾದವರು. ಫ.ಗು. ಹಳಕಟ್ಟಿಯವರನ್ನು ಅರವತ್ನಾಲ್ಕನೇ ಪುರಾತನರು ಎಂಬುದಾಗಿ ಸಿಂಪಿ ಲಿಂಗಣ್ಣನವರು ಹಾಡಿ ಹೊಗಳಿದ್ದಾರೆ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಅರವತ್ತ ನಾಲ್ಕನೇ ಪುರಾತನರೆನಿಸಿದವರು ಯಾರು ?
2. ಹಳಕಟ್ಟಿಯವರನ್ನು ಆಕರ್ಷಿಸಿದ್ದು ಯಾವುದು?
3. ಮ್ಯಾಕ್ಸ್‌ಮುಲ್ಲರ್ ಯಾವ ದೇಶದವರು ?
4. ಕನ್ನಡಿಗರಿಗೆ ಉಕ್ಕಿನ ಕಡಲೆಯಾಗಿ ಪರಿಣಮಿಸಿದ್ದುದು ಯಾವುದು ?
5. ಹಳಕಟ್ಟಿಯವರು ಪ್ರಾರಂಭಿಸಿದ ಪತ್ರಿಕೆಗಳು ಯಾವುವು ?
6. ಹಳಕಟ್ಟಿಯವರು ಯಾವುದರ ಜೊತೆಗೆ ಕಡುಸ್ನೇಹಿತರಾದರು ?
7. ವಿವೇಕಾನಂದರು ಪಡುವಣ ನಾಡಿನಲ್ಲಿ ಕಂಡ ದಂಪತಿಗಳಾರು ?
8. ಸರ್ಕಾರವು ಹಳಕಟ್ಟಿಯವರಿಗೆ ನೀಡಿದ ಪ್ರಶಸ್ತಿಗಳು ಯಾವುವು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಹಳಕಟ್ಟಿಯವರು ವಚನ ಶೋಧನೆಗೆ ತಮ್ಮನ್ನು ತೊಡಗಿಸಿಕೊಂಡದ್ದು ಹೇಗೆ?
2. ಮ್ಯಾಕ್ಸ್‌ಮುಲ್ಲರರ ಸಂಸ್ಕೃತ ಸಾಹಿತ್ಯ ಸೇವೆ ಯಾವ ರೀತಿಯದು ?
3. ಹಳಕಟ್ಟಿಯವರು ದೇವನಿಗೆ ಸಹೋದರರರಾದುದು ಹೇಗೆ ?
4. ಪಾಂಡಿಚೆರಿಯ ಶ್ರೀಮಾತೆಯವರನ್ನು ಹಳಕಟ್ಟಿಯವರು ಏನೆಂದು ಪ್ರಶ್ನಿಸಿದರು ?
5. ಹಳಕಟ್ಟಿಯವರ ಪ್ರಪಂಚ ರಹಸ್ಯ ಯಾವುದು?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಹಳಕಟ್ಟಿಯವರನ್ನು ಕರ್ನಾಟಕದ ಮ್ಯಾಕ್ಸ್‌ಮುಲ್ಲರ್ ಎಂದು ಕರೆದುದರ ಔಚಿತ್ಯವೇನು ? ವಿವರಿಸಿ
2. ಹಳಕಟ್ಟಿಯವರ ಸಾಮಾಜಿಕ ಸೇವೆಯ ವಿವಿಧ ಮುಖಗಳನ್ನು ಬರೆಯಿರಿ.
3. ಹಳಕಟ್ಟಿಯವರು ಜೀವನದಲ್ಲಿ ಅನುಭವಿಸಿದ ನೋವುಗಳನ್ನು ಸಂಗ್ರಹಿಸಿ ಬರೆಯಿರಿ.
4. ವಚನ ವಾಙ್ಮಯಕ್ಕೆ ಹಳಕಟ್ಟಿಯವರ ಕೊಡುಗೆ ಏನು? ವಿವರಿಸಿ.
5. ಹಳಕಟ್ಟಿಯವರ ವ್ಯಕ್ತಿತ್ವವನ್ನು ಚಿತ್ರಿಸಿ.



7th_Kannada_Reader.indd 12 24-06-2019 19:37:37

## ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ಬೆರಗು, ಶರೀರ, ಓಲೆ, ಗ್ರಂಥ, ಸಹಾಯ, ಜಡ್ಡು.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

   ವೇದಾರ್ಥ, ಬೃಹದಾಕಾರ, ದೇವನಿಂದ, ಉಗುರೊಳಗಿನ, ಜೀವನದಿಂದ.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ಲೌಕಿಕ, ತಾಳ್ಮೆ, ಒಳ್ಳೆಯ, ಪ್ರೀತಿಸು, ಆಸಕ್ತಿ.

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

   ಆಶಾಕಿರಣ, ಕಟ್ಟಾಳು, ಸಾಪ್ತಾಹಿಕ, ಇಳಿವಯಸ್ಸು, ಸಾರ್ವಜನಿಕ.

5. **ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

   ಸ್ನೇಹ, ಹೊತ್ತಿಗೆ, ಸಿಂಗಾರ, ಒಡಪು, ದಿಟ್ಟಿ.

## ಚಟುವಟಿಕೆ

1. ನಾಡು ನುಡಿಗಾಗಿ ದುಡಿದ ಚೇತನಗಳ ಬಗೆಗೆ ತಿಳಿದುಕೊಳ್ಳಿರಿ.
2. ವಚನಗಳನ್ನು ಸಂಗ್ರಹಿಸಿ ಓದಿರಿ.



ಮ್ಯಾಕ್ಸ್‌ಮುಲ್ಲರ್



ಅರವತ್ತ ಮೂರು ಪುರಾತನರು



7th_Kannada_Reader.indd 13 24-06-2019 19:37:38

ಉಪಪಠ್ಯ

ಘಟಕ ಒಂದು

# ರಾಷ್ಟ್ರಕವಿ ಎಂ.ಗೋವಿಂದ ಪೈ

– ಕೆ.ಕುಮಾರ್ ಆಚಾರ್

## ಪ್ರವೇಶ

ಭಾರತೀಯ ಸಾಹಿತ್ಯಕ್ಕೆ ಕನ್ನಡ ಸಾಹಿತಿಗಳ ಸೇವೆ ಅಪಾರ. ಅದರಲ್ಲೂ ಕನ್ನಡ ಸಾಹಿತ್ಯ ನವೋದಯ ಕಾಲದ ಕವಿಗಳ ಕೊಡುಗೆ ಅನುಪಮವಾದುದು. ಈ ಕಾಲದ ಸಾಹಿತಿಗಳು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವೈವಿಧ್ಯಮಯ ಸಾಹಿತ್ಯ ಕೃಷಿಯನ್ನು ರಚಿಸಿ, ಭಾರತೀಯ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಇಂತಹವರಲ್ಲಿ ಕನ್ನಡದ ಮೊದಲ ರಾಷ್ಟ್ರಕವಿಯೆಂಬ ಹಿರಿಮೆಗೆ ಪಾತ್ರರಾದ ಗೋವಿಂದ ಪೈ ಅವರ ಬದುಕು–ಬರಹದತ್ತ ಈ ಲೇಖನ ಬೆಳಕು ಚೆಲ್ಲುತ್ತದೆ.



ನವೋದಯ ಕನ್ನಡ ಸಾಹಿತ್ಯ ಲೋಕದ ಹಿರಿಯ ಕವಿಗಳಲ್ಲಿ ಎಂ. ಗೋವಿಂದ ಪೈ ಅವರೂ ಒಬ್ಬರು. 'ಬೆಳ್ಳಿ ಮೀಸೆಯ ಮಗು' ಎಂದು ಕನ್ನಡಿಗರಿಂದ ಮುದ್ದಾಗಿ ಕರೆಸಿಕೊಳ್ಳುತ್ತಿದ್ದ ಸ್ನೇಹಶೀಲ ಸದ್ಗುಣಗಳ ಗಣಿಯಾಗಿದ್ದ ಮಂಜೇಶ್ವರ ಗೋವಿಂದ ಪೈಗಳು ಮಾರ್ಚ್ 23, 1884ರಂದು ತಮ್ಮ ತಾಯಿಯ ತವರೂರಾದ ಮಂಜೇಶ್ವರ ಎಂಬಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಪ್ರಕೃತಿಯ ವೈಭವಕ್ಕೆ ಮಾರುಹೋಗಿದ್ದ ಪೈ ಅವರು ಸಮುದ್ರ ತೀರದಲ್ಲಿನ ಅಲೆಗಳ ನೃತ್ಯ, ಹಕ್ಕಿಗಳ ಚಿಲಿಪಿಲಿಗಾನ ಇತ್ಯಾದಿಗಳನ್ನು ವೀಕ್ಷಿಸುತ್ತಿದ್ದ ಬಾಲಕನಿಗೆ ಮನೆಮಂದಿ ಊಟತಿಂಡಿ ಯಾವುದರ ಪರಿವೆಯೂ ಇರುತ್ತಿರಲಿಲ್ಲ. ಪಂಜೆ ಮಂಗೇಶರಾಯರು ಪೈಯವರ ಬಾಲ್ಯದ ಗುರುಗಳಾಗಿದ್ದರು. ಕನ್ನಡ ನಾಡಿನಲ್ಲಿ ಶಿಶುಸಾಹಿತ್ಯವನ್ನು ರಚಿಸುವುದರಲ್ಲಿ ಅಸಾಧಾರಣ ಪಾಂಡಿತ್ಯ ಹೊಂದಿದ್ದ ಪಂಜೆಯವರ ಕವನಗಳೆಂದರೆ ಪೈಗಳಿಗೆ ಅಮಿತಾನಂದ.

ಗೋವಿಂದ ಪೈಯವರ ಬಾಲ್ಯ ಜೀವನದ ಕಾಲಾವಧಿಯಲ್ಲಿಯೇ ಪಾಶ್ಚಾತ್ಯ ನಾಗರಿಕತೆ ಹಾಗೂ ಕ್ರೈಸ್ತ ಧರ್ಮದ ಪ್ರಭಾವ ಪ್ರಬಲವಾಗಿದ್ದರೂ ಭಾರತೀಯ ಸಂಸ್ಕೃತಿಯು ಅವರ ಮೇಲೆ ಹೆಚ್ಚು



7th_Kannada_Reader.indd 14 24-06-2019 19:37:38

ಪ್ರಭಾವ ಬೀರಿತ್ತು. ಆದರೂ ಪಾಶ್ಚಾತ್ಯ ಶಿಕ್ಷಣ, ಸಾಹಿತ್ಯ, ಬಾಲಕರಾಗಿದ್ದ ಪೈಯವರ ಮೇಲೆ ಪ್ರಭಾವ ಬೀರಿತ್ತು. ಬಾಲ್ಯದಿಂದಲೂ ವ್ಯಾಸಂಗದಲ್ಲಿ ಹೆಚ್ಚಿನ ಆಸಕ್ತಿ ಹಾಗೂ ಅಭಿರುಚಿ ಇದ್ದ ಕಾರಣ, ಮುಂದೆ ಕನ್ನಡ ಸಾಹಿತ್ಯ ಕೃಷಿಯಲ್ಲಿ ಕೈಯಾಡಿಸಲು ಇದು ಅವರಿಗೆ ಪ್ರೇರಕ ಶಕ್ತಿಯಾಯಿತು. ಇವರ ಪ್ರಾಥಮಿಕ ವಿದ್ಯಾಭ್ಯಾಸ ಮಂಗಳೂರಿನಲ್ಲಿಯೇ ಯಶಸ್ವಿಯಾಗಿ ಸಾಗಿತ್ತು. ಈ ವೇಳೆಗಾಗಲೇ ಹಲವು ಸಣ್ಣಪುಟ್ಟ ಕವಿತೆಗಳನ್ನು ಬರೆಯುವ ಕಲೆಯನ್ನು ಇವರು ರೂಢಿಸಿಕೊಂಡಿದ್ದರು. ಶಿಸ್ತು, ಸಂಯಮದೊಂದಿಗೆ ಪಾಠ ಪ್ರವಚನಗಳಲ್ಲಿ ಚುರುಕಿನಿಂದ ವರ್ತಿಸುತ್ತಿದ್ದ ಪೈಯವರ ಗುಣ ಅಧ್ಯಾಪಕರಿಗೆ ತೃಪ್ತಿ ತಂದು ಕೊಡುತ್ತಿತ್ತು. ಆಗಿನ ಕಾಲಕ್ಕೆ ಮದ್ರಾಸ್ ನಗರವು ಶಿಕ್ಷಣ ಕ್ಷೇತ್ರದಲ್ಲಿ ಹೆಸರುವಾಸಿಯಾಗಿತ್ತು. ಅಲ್ಲಿನ ಕಾಲೇಜು ಶಿಕ್ಷಣವನ್ನು ದಕ್ಷಿಣ ಭಾರತದಲ್ಲಿಯೇ ಉನ್ನತ ಮಟ್ಟದ್ದೆಂದು ಪ್ರಶಂಸಿಸುತ್ತಿದ್ದ ಕಾಲ ಅದು. ಪೈಯವರು ಮದರಾಸಿನ ಪ್ರತಿಷ್ಠಿತ ಕ್ರಿಶ್ಚಿಯನ್ ಕಾಲೇಜಿನಲ್ಲಿ ಉನ್ನತ ವ್ಯಾಸಂಗ ಪಡೆಯಲು ಸೇರಿದರು. ಬಿ.ಎ., ವ್ಯಾಸಂಗದ ವೇಳೆಗೆ ವ್ಯಾಸಂಗದಲ್ಲಿ ಶ್ರದ್ಧೆಯಿಂದ ತೊಡಗಿ, ಅಪಾರ ಪಾಂಡಿತ್ಯ ಗಳಿಸಿ ಅವರ ಪ್ರಾಧ್ಯಾಪಕರುಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಅಂತಿಮ ವರ್ಷದ ಬಿ.ಎ., ಇಂಗ್ಲಿಷ್ ಪರೀಕ್ಷೆ ಮುಗಿಯುತ್ತಿದ್ದಂತೆ ಅನಿರೀಕ್ಷಿತವಾಗಿ, ಅವರ ತಂದೆ ತೀವ್ರ ಕಾಯಿಲೆಗೆ ಗುರಿಯಾದರೆಂಬ ಸುದ್ದಿ ತಿಳಿದು ವ್ಯಾಸಂಗವನ್ನು ಮೊಟಕುಗೊಳಿಸಿ ಮಂಗಳೂರಿಗೆ ತೆರಳಿದರು. ದುರದೃಷ್ಟವಶಾತ್ ಕೆಲವೇ ದಿನಗಳಲ್ಲಿ ಅವರ ತಂದೆಯವರು ತೀರಿಕೊಂಡರು. ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಕುಟುಂಬದ ಹಿರಿಯ ಮಗನಾದ ಪೈಯವರೇ ಹೊರಬೇಕಾಗಿ ಬಂದ ಕಾರಣ, ಪದವಿ ವ್ಯಾಸಂಗವನ್ನು ಮೊಟಕುಗೊಳಿಸಬೇಕಾಯಿತು. ಆದರೂ ಇಂಗ್ಲಿಷ್ ವಿಷಯದಲ್ಲಿ ಅನಾಯಾಸವಾಗಿ ಅವರಿಗೆ ಸುವರ್ಣ ಪದಕ ಪ್ರಾಪ್ತಿಯಾಗಿತ್ತು.

ಗೋವಿಂದ ಪೈಯವರ ಕೌಟುಂಬಿಕ ಪರಿವಾರವು ಸಾಕಷ್ಟು ಸಿರಿತನದಿಂದ ಕೂಡಿತ್ತು. ಕುಟುಂಬದ ನಿರ್ವಹಣೆಯನ್ನು ಜವಾಬ್ದಾರಿಯುತವಾಗಿ ಜಾಣ್ಮೆಯಿಂದ ನಿರ್ವಹಿಸುತ್ತಿದ್ದ ಪೈಯವರಿಗೆ ಕೃಷ್ಣಾಬಾಯಿ ಎಂಬ ಸುಸಂಸ್ಕೃತ ಹೆಣ್ಣನ್ನು ತಂದು ಮದುವೆ ಮಾಡಿದರು. ಆದರೆ ಅವರ ದಾಂಪತ್ಯ ಜೀವನ ಚಿರಕಾಲ ಉಳಿಯದೆ ತಮ್ಮ ನಲವತ್ತೈದನೇ ವಯಸ್ಸಿನಲ್ಲಿ ದೀರ್ಘ ಕಾಲದ ಕಾಯಿಲೆಯಿಂದ ನರಳಿ ಅವರ ಮಡದಿ ಪೈಯವರನ್ನು ಅಗಲಿದರು. ಮಡದಿಯ ಅಗಲಿಕೆಯಿಂದ ಮಾನಸಿಕವಾಗಿ ನೊಂದ ಪೈಯವರಿಗೆ ಕನ್ನಡ ಮಾತೆಯು ಮಹಾಮಾತೆಯಾಗಿ ಸಾಹಿತ್ಯ ಸೇವೆಗೆ ಅಣಿಯಾಗುವಂತೆ ಆಶೀರ್ವದಿಸಿದಳೆಂದು ತೋರುತ್ತದೆ. ಅಂದಿನಿಂದ ಪೈಯವರು ತಮ್ಮ ಮನೆಯಲ್ಲಿದ್ದ ಗ್ರಂಥ ಭಂಡಾರದಲ್ಲಿ ಅಮೂಲ್ಯ ಗ್ರಂಥಗಳ ಅಧ್ಯಯನದಲ್ಲಿ ತೊಡಗಿದರು.

ಗೋವಿಂದ ಪೈಯವರು ಸಾಹಿತ್ಯದೊಂದಿಗೆ ಸಂಶೋಧನಾ ಕಾರ್ಯದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಬಹುಭಾಷಾ ವಿಶಾರದರಾದ ಪೈಯವರಿಗೆ 22ಕ್ಕೂ ಹೆಚ್ಚು ಭಾಷೆಗಳು ಗೊತ್ತಿದ್ದವು. ಭಾರತೀಯ ಭಾಷೆಗಳಾದ ಕನ್ನಡ, ತಮಿಳು, ತುಳು, ಕೊಂಕಣಿ, ಹಿಂದಿ, ಉರ್ದು, ತೆಲುಗು, ಮಲಯಾಳಂ, ಒರಿಯಾ, ಗುಜರಾತಿ, ಮರಾಠಿ ಭಾಷೆಗಳೊಂದಿಗೆ ಇಂಗ್ಲಿಷ್, ಲ್ಯಾಟಿನ್, ಜಪಾನಿ, ಗ್ರೀಕ್, ಪರ್ಷಿಯನ್, ಇಟಾಲಿಯನ್ ಮೊದಲಾದ ಐರೋಪ್ಯ ಭಾಷೆಗಳಲ್ಲೂ ಪರಿಚಯವಿತ್ತು. ಇಷ್ಟೆಲ್ಲಾ ಭಾಷೆಗಳನ್ನು ಬಲ್ಲ ಕವಿ ಹಾಗೂ ಸಾಹಿತಿ ಕನ್ನಡ ಸಾಹಿತ್ಯ ವಲಯದಲ್ಲಿ ಮತ್ತೊಬ್ಬರಿಲ್ಲ ಎಂಬುದು ನಿರ್ವಿವಾದ. ಗಿಳಿವಿಂಡು, ನಂದಾದೀಪ, ಹೃದಯರಂಗ, ಇಂಗಡಲು – ಇವು ಇವರ ಕವನ ಸಂಕಲನಗಳು; ಗೊಲ್ಗೊಥಾ, ವೈಶಾಖ ಇವು ಇವರ ಖಂಡ ಕಾವ್ಯಗಳು. ಹೆಬ್ಬೆರಳು, ಚಿತ್ರಭಾನು, ಶ್ರೀಕೃಷ್ಣ ಚರಿತೆ ಮುಂತಾದ ನಾಟಕಗಳೊಂದಿಗೆ ಹಲವಾರು ಸಂಶೋಧನಾ ಲೇಖನಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಸಲ್ಲಿಸಿ, ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಗೋವಿಂದ ಪೈಯವರ ಬಹುಮುಖ ವ್ಯಕ್ತಿತ್ವವನ್ನೂ, ಪಾಂಡಿತ್ಯವನ್ನೂ ಮನಗಂಡು 1949ರಲ್ಲಿ ಮದ್ರಾಸ್ ಸರ್ಕಾರವು ಅವರನ್ನು 'ರಾಷ್ಟ್ರಕವಿ'ಯೆಂದು ಘೋಷಿಸಿ ಗೌರವಿಸಿದೆ. 1950ರಲ್ಲಿ ಇವರು ಮುಂಬೈಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಎಂಟು ದಶಕಗಳಿಗೂ ಹೆಚ್ಚು ಕಾಲ ಕನ್ನಡ ನಾಡು ನುಡಿಯ ಏಳಿಗೆಗಾಗಿ ಅವಿರತವಾಗಿ ದುಡಿದ ಈ ಮಹಾಚೇತನ ಸೆಪ್ಟೆಂಬರ್ 06, 1963ರಲ್ಲಿ ವಿಧಿವಶವಾಯಿತು. ಆದರೆ ಪೈಯವರ ಸಾಹಿತ್ಯ ಕೃಷಿ ಹಾಗೂ ಅವರ ಸಾಹಿತ್ಯ ಸೇವೆ ಚಿರಸ್ಮರಣೀಯವಾಗಿದೆ.



7th_Kannada_Reader.indd 15 24-06-2019 19:37:38

## ಕೃತಿ ಕರ್ತೃ ಪರಿಚಯ

ಈ ಲೇಖನವನ್ನು ಬರೆದಿರುವವರು ಕೆ. ಕುಮಾರ್ ಆಚಾರ್ ಅವರು. ಕನ್ನಡ ಸ್ನಾತಕೋತ್ತರ ಪದವೀಧರರಾದ ಇವರು ಪ್ರಸ್ತುತ ಚೆನ್ನೈ ಮಹಾನಗರದ ತ್ಯಾಗರಾಯನಗರದಲ್ಲಿರುವ ಕರ್ನಾಟಕ ಸಂಘ ಉನ್ನತ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸುಮಾರು ಮುವ್ವತ್ತು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ಇವರ ಹುಟ್ಟೂರು. ಶೈಕ್ಷಣಿಕ ದೃಷ್ಟಿಯಿಂದ ಹುಟ್ಟೂರಿನಿಂದ ಚೆನ್ನೈಗೆ ಆಗಮಿಸಿ, ಮುಂದೆ ಚೆನ್ನೈ ನಗರವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು. ಚೆನ್ನೈನ ಕನ್ನಡ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯ ಲೋಕಕ್ಕೂ ತಮ್ಮಿಂದಾದ ಕಿರು ಕೈಂಕರ್ಯವನ್ನು ಸಲ್ಲಿಸಿದ್ದಾರೆ. ಪ್ರಸ್ತುತ ಪಠ್ಯ ಪುಸ್ತಕಕ್ಕಾಗಿ ರಾಷ್ಟ್ರಕವಿ ಎಂ.ಗೋವಿಂದ ಪೈ ಎಂಬ ಈ ಕಿರುಲೇಖನವನ್ನು ಬರೆದಿದ್ದಾರೆ. ಕನ್ನಡ ವಿದ್ಯಾರ್ಥಿಗಳು ಪೈಯವರ ಸಾಹಿತ್ಯ ಸೇವೆಯನ್ನು ತಿಳಿದುಕೊಳ್ಳಬೇಕು ಎಂಬ ಉದ್ದೇಶದಿಂದ ಈ ಲೇಖನವನ್ನು ರಚಿಸಿದ್ದಾರೆ.

## ಪದಗಳ ಅರ್ಥ

ಸಮುದ್ರ–ಕಡಲು, ಸಾಗರ; ಸದ್ಗುಣ–ಒಳ್ಳೆಯ ಗುಣ, ಶಿಶು–ಮಗು, ಕೂಸು, ಕಂದ; ಜೀವನ–ಬದುಕು, ಬಾಳು; ಪ್ರಾಥಮಿಕ–ಆರಂಭದ; ದುರದೃಷ್ಟ–ಅದೃಷ್ಟವಿಲ್ಲದ; ಪ್ರಶಂಸೆ–ಹೊಗಳು, ಸ್ತುತಿಸು; ಕಾಯಿಲೆ–ರೋಗ; ಸುವರ್ಣ–ಬಂಗಾರ, ಚೆನ್ನ; ಮಡದಿ–ಹೆಂಡತಿ; ತೀರಿಕೊಂಡರು–ಮರಣಹೊಂದಿದರು; ಮಾತೆ–ತಾಯಿ, ಅಮ್ಮ; ಅನಾಯಾಸ–ಆಯಾಸವಿಲ್ಲದೆ, ಕಷ್ಟಪಡದೆ; ಸಾಹಿತಿ–ಸಾಹಿತ್ಯ ರಚಿಸುವವರು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಗೋವಿಂದ ಪೈಯವರು ಎಲ್ಲಿ, ಯಾವಾಗ ಜನಿಸಿದರು ?
2. ಗೋವಿಂದ ಪೈಯವರ ಬಾಲ್ಯದ ಗುರುಗಳಾಗಿದ್ದವರು ಯಾರು ?
3. ಗೋವಿಂದ ಪೈಯವರ ಕಾಲದಲ್ಲಿ ಯಾವ ಧರ್ಮದ ಪ್ರಭಾವ ಹೆಚ್ಚಾಗಿತ್ತು?
4. ಗೋವಿಂದ ಪೈಯವರು ಪದವಿ ಶಿಕ್ಷಣವನ್ನು ಎಲ್ಲಿ ಅಭ್ಯಸಿಸಿದರು ?
5. ಗೋವಿಂದ ಪೈಯವರಿಗೆ ಎಷ್ಟು ಭಾಷೆಗಳ ಪರಿಚಯವಿತ್ತು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಗೋವಿಂದ ಪೈಯವರಿಗೆ ಬಾಲ್ಯದಲ್ಲಿ ಸಾಹಿತ್ಯ ರಚಿಸಲು ಯಾವುದು ಪ್ರೇರಕ ಶಕ್ತಿಯಾಯಿತು ?
2. ಗೋವಿಂದ ಪೈಯವರ ಸಾಹಿತ್ಯ ಕೃತಿಗಳನ್ನು ಹೆಸರಿಸಿ.
3. ಗೋವಿಂದ ಪೈಯವರು ತಮ್ಮ ಪದವಿ ಶಿಕ್ಷಣವನ್ನು ಮೊಟಕುಗೊಳಿಸಲು ಕಾರಣವೇನು ?
4. ಗೋವಿಂದ ಪೈಯವರಿಗೆ ಯಾವ ಯಾವ ಭಾಷೆಗಳು ಗೊತ್ತಿದ್ದವು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಗೋವಿಂದ ಪೈಯವರ ಬಾಲ್ಯ ಜೀವನವನ್ನು ಕುರಿತು ಬರೆಯಿರಿ.
2. ಗೋವಿಂದ ಪೈಯವರಿಗೆ ದೊರೆತ ಗೌರವ ಪುರಸ್ಕಾರಗಳು ಯಾವುವು ?



7th_Kannada_Reader.indd 16 24-06-2019 19:37:38

ವ್ಯಾಕರಣ

ಘಟಕ ಒಂದು

# ಕನ್ನಡ ವರ್ಣಮಾಲೆ

## ವರ್ಣ ವಿಂಗಡಣೆ

| | |
|---|---|
| ಸ್ವರಗಳು | 13 |
| ಹ್ರಸ್ವಸ್ವರಗಳು | 6 (ಅ ಇ ಉ ಋ ಎ ಒ) |
| ದೀರ್ಘಸ್ವರಗಳು | 7 (ಆ ಈ ಊ ಏ ಐ ಓ ಔ) |
| ಯೋಗವಾಹಗಳು | 2 (ಅನುಸ್ವಾರ – 1 ; ವಿಸರ್ಗ – 1) |

ವ್ಯಂಜನಗಳು – 34

| | |
|---|---|
| ವರ್ಗೀಯ ವ್ಯಂಜನಗಳು | 25 (ಕವರ್ಗ, ಚವರ್ಗ, ಟವರ್ಗ, ತವರ್ಗ, ಪವರ್ಗ) |
| ಅವರ್ಗೀಯ ವ್ಯಂಜನಗಳು | 9 (ಯ್ ರ್ ಲ್ ವ್ ಶ್ ಷ್ ಸ್ ಹ್ ಳ್) |

## ಸ್ವರಗಳು

ಸ್ವತಂತ್ರವಾಗಿ ಉಚ್ಚರಿಸಲು ಸಾಧ್ಯವಿರುವ ಅಕ್ಷರಗಳಿಗೆ ಸ್ವರ ಎನ್ನುವರು. ಸ್ವರಗಳು 13.



ಸ್ವರಗಳ ವಿಧಗಳು



(ಇವು ಹ್ರಸ್ವ ಸ್ವರಗಳು – 6)



(ಇವು ಧೀರ್ಘ ಸ್ವರಗಳು 7)

ಐ ಮತ್ತು ಔ ಗಳು ದೀರ್ಘ ಸ್ವರಗಳಾದರೂ ಅವುಗಳನ್ನು ಸಂಧ್ಯಾಕ್ಷರಗಳೆಂದು ಕರೆಯಲಾಗುವುದು.





7th_Kannada_Reader.indd 17 24-06-2019 19:37:39

**ಮಾತ್ರೆ :** ಒಂದೊಂದು ಅಕ್ಷರಗಳನ್ನು ಉಚ್ಚರಿಸಲೂ ಒಂದೊಂದು ಕಾಲ ಮಿತಿ ಇದೆ. ಈ ಕಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಹ್ರಸ್ವ, ದೀರ್ಘ ಹಾಗೂ ಪ್ಲುತ ಸ್ವರಗಳೆಂದು ಅವುಗಳನ್ನು ವರ್ಗೀಕರಿಸಲಾಗಿದೆ.

ಅಕ್ಷರಗಳನ್ನು ಉಚ್ಚರಿಸಲು ತೆಗೆದುಕೊಳ್ಳುವ ಕಾಲವನ್ನು ಮಾತ್ರೆ ಎನ್ನುವರು ವರ್ಣೋಚ್ಚಾರಣೆಯಲ್ಲಿ ಬೇಕಾಗುವ ನಿಗದಿತ ಕಾಲಕ್ಕೆ ಮಾತ್ರೆ ಎನ್ನಬಹುದು.

ಹ್ರಸ್ವ ಸ್ವರಗಳನ್ನು ಉಚ್ಚರಿಸುವ ಕಾಲ : ಒಂದು ಮಾತ್ರೆ

ದೀರ್ಘ ಸ್ವರಗಳನ್ನು ಉಚ್ಚರಿಸುವ ಕಾಲ : ಎರಡು ಮಾತ್ರೆ

ಯೋಗವಾಹಗಳು: 'ಯೋಗ' ಎಂದರೆ ಜೊತೆ, ಸಂಬಂಧ ಎಂದರ್ಥ. 'ವಾಹ' ಎಂದರೆ ಬರುವುದು, ಎಂದರ್ಥ. ಎಂದರೆ ಇವು ಸ್ವರ ಅಥವಾ ವ್ಯಂಜನದ ಸಂಬಂಧವನ್ನು ಜೊತೆಯಲ್ಲಿ ಹೊಂದಿದರೆ ಮಾತ್ರ ಇವುಗಳನ್ನು ಉಚ್ಚರಿಸಲು ಸಾಧ್ಯ.

ಯೋಗವಾಹಗಳಲ್ಲಿ ಎರಡು ವಿಧಗಳಿವೆ. ಅವು,

**1. ಅನುಸ್ವಾರ – ಂ** 

**2. ವಿಸರ್ಗ – ಃ** 

ಅನುಸ್ವಾರವನ್ನು 'ಂ' ಎಂಬ ಚಿಹ್ನೆಯಿಂದಲೂ, ವಿಸರ್ಗವನ್ನು 'ಃ' ಎನ್ನುವ ಚಿಹ್ನೆಯಿಂದಲೂ ಸೂಚಿಸಲಾಗುವುದು. ಇವುಗಳು ಚಿಹ್ನೆಗಳಾದುದರಿಂದ ಇವುಗಳಿಗೆ ಸ್ವತಂತ್ರವಾದ ಉಚ್ಚಾರವಿಲ್ಲ. ಇವು ಸ್ವರಗಳೂ ಅಲ್ಲ, ವ್ಯಂಜನಗಳೂ ಅಲ್ಲ. ಸ್ವರಗಳೊಂದಿಗಾಗಲೀ, ವ್ಯಂಜನಗಳೊಂದಿಗಾಗಲೀ ಸೇರಿಸಿದಾಗ ಮಾತ್ರ ಸಂಬಂಧವನ್ನು ಹೊಂದಿ ಉಚ್ಚಾರ ಮಾಡಲು ಸಾಧ್ಯವಾಗುತ್ತದೆ. ಉದಾಹರಣೆಗೆ,

ಅನುಸ್ವಾರ: ಕಂ, ಪಂ, ಮಂ; ಕಂದ (ಮಗು). ವಿಸರ್ಗ: ಸ್ವತಃ, ದುಃಖ

## ವ್ಯಂಜನಗಳು 34

| | |
|---|---|
| ವ್ಯಂಜನಗಳಲ್ಲಿ ಎರಡು ವಿಧ. | 1. ವರ್ಗೀಯ ವ್ಯಂಜನ<br>2. ಅವರ್ಗೀಯ ವ್ಯಂಜನ |

ಸ್ವರದ ಸಹಾಯದಿಂದ ಮಾತ್ರ ಉಚ್ಚರಿಸಲಾಗುವ ಅಕ್ಷರಗಳಿಗೆ ವ್ಯಂಜನಗಳು ಎನ್ನಲಾಗುವುದು

**ವ್ಯಂಜನಗಳಲ್ಲಿ ವರ್ಗಗಳಾಗಿ ಅಥವಾ ಗುಂಪುಗಳಾಗಿ ವಿಂಗಡಿಸಲು ಸಾಧ್ಯವಿರುವ ವ್ಯಂಜನಗಳಿಗೆ ವರ್ಗೀಯ ವ್ಯಂಜನ ಎನ್ನಲಾಗುವುದು.**

## ವರ್ಗೀಯ ವ್ಯಂಜನಗಳು 25

| | | | | | |
|---|---|---|---|---|---|
| ಕ್ | ಖ್ | ಗ್ | ಘ್ | ಙ್ | (ಕ ವರ್ಗ) |
| ಚ್ | ಛ್ | ಜ್ | ಝ್ | ಞ್ | (ಚ ವರ್ಗ) |
| ಟ್ | ಠ್ | ಡ್ | ಢ್ | ಣ್ | (ಟ ವರ್ಗ) |
| ತ್ | ಥ್ | ದ್ | ಧ್ | ನ್ | (ತ ವರ್ಗ) |
| ಪ್ | ಫ್ | ಬ್ | ಭ್ | ಮ್ | (ಪ ವರ್ಗ) |

## ಅವರ್ಗೀಯ ವ್ಯಂಜನಗಳು 9

**ವರ್ಗದ ವ್ಯವಸ್ಥೆ ಇಲ್ಲದ ವ್ಯಂಜನಗಳಿಗೆ ಅವರ್ಗೀಯ ವ್ಯಂಜನಗಳು ಎನ್ನುವರು.**

**ಯ್ ಕಾರದಿಂದ ಳ್ ಕಾರದವರೆಗಿರುವ ವ್ಯಂಜನಗಳನ್ನು ಅವರ್ಗೀಯ ವ್ಯಂಜನಗಳು ಎನ್ನಲಾಗುವುದು. ಅವು,**

| | | | | | | | | | |
|---|---|---|---|---|---|---|---|---|---|
| ಯ್ | ರ್ | ಲ್ | ವ್ | ಶ್ | ಷ್ | ಸ್ | ಹ್ | ಳ್ | |



7th_Kannada_Reader.indd 18 24-06-2019 19:37:39

ಘಟಕ
ಎರಡು

# 2. ಪ್ರಕೃತಿ



## ಕಲಿಕಾ ಉದ್ದೇಶಗಳು

- ಪ್ರಕೃತಿಯ ಮಹತ್ವವನ್ನು ತಿಳಿಯುವುದು.
- ಪ್ರಕೃತಿಯನ್ನು ಸಂರಕ್ಷಿಸುವ ವಿಧಾನಗಳನ್ನು ಕುರಿತು ಚರ್ಚಿಸುವುದು.
- ಕೃಷಿ ಆಧಾರಿತ ಕಸುಬಿಗೆ ಮಳೆ ಬಹಳ ಅವಶ್ಯಕ ಎನ್ನುವುದನ್ನು ಅರ್ಥೈಸುವುದು.
- ಮಳೆ ಸುರಿಯದಿದ್ದರೆ ಉಂಟಾಗುವ ಭೀಕರ ಪರಿಣಾಮಗಳನ್ನು ತರಗತಿಯ ಕೊಠಡಿಯಲ್ಲಿ ಚರ್ಚಿಸುವುದು.
- ಪಕ್ಷಿ ಸಂಕುಲ ಹಾಗೂ ಪರಿಸರದ ನಡುವಿನ ಸಂಬಂಧವನ್ನು ತಿಳಿಯುವುದು.



7th_Kannada_Reader.indd 19 24-06-2019 19:37:40

ಘಟಕ
ಎರಡು

# 2. ಪ್ರಕೃತಿ



| | | | |
|---|---|---|---|
| ಕಾವ್ಯ ಕಣಜ | : | ಹೊಸ ಹಾಡು | – ಕಯ್ಯಾರ ಕಿಞ್ಞಣ್ಣ ರೈ |
| ಪೂರಕ ಪದ್ಯ | : | ಪ್ರಕೃತಿ ಗೀತೆ | – ಸದಾಶಿವಮೂರ್ತಿ ಗುಮಟಾಪುರ |
| ಗದ್ಯ ವಿಹಾರ | : | ನೀರು ಕೊಡದ ನಾಡಿನಲ್ಲಿ | – ನೇಮಿಚಂದ್ರ |
| ಉಪಪಠ್ಯ | : | ಮೊಲದ ತ್ಯಾಗ | – ಜನಪದ ಕಥೆ |
| ವ್ಯಾಕರಣ | : | ವರ್ಗೀಯ ವ್ಯಂಜನಗಳು | |



7th_Kannada_Reader.indd 20 24-06-2019 19:37:40

ಘಟಕ ಎರಡು

# ಹೊಸ ಹಾಡು

– ಕಯ್ಯಾರ್ ಕಿಞ್ಞಣ್ಣ ರೈ

## ಪ್ರವೇಶ

ಹಾಡು ಪ್ರಕೃತಿಯ ಅವಿಭಾಜ್ಯ ಅಂಗ. ಪ್ರಕೃತಿಯ ಕಣಕಣದಲ್ಲೂ ಹಾಡು ತುಂಬಿದೆ. ಇದು ಭಾವನೆಗಳ ಅಭಿವ್ಯಕ್ತಿಗೆ ಸುಂದರ ಮಾಧ್ಯಮ. ಅಲ್ಲದೆ ಜೀವನಕ್ಕೆ ಸ್ಫೂರ್ತಿ. ಇದಕ್ಕೆ ಯಾವುದೇ ಸೀಮಿತತೆ ಇಲ್ಲ. ಅಲ್ಲದೆ ಇದು, ಜಾತಿ ಕುಲ ಧರ್ಮ ಲೋಕ ಯುಗ ಇವನ್ನೆಲ್ಲ ಮೀರಿ ನಿಲ್ಲುವಂತಹದ್ದು. ಯುದ್ಧ, ಕ್ರಾಂತಿಯ ಸಂದರ್ಭದಲ್ಲಿ ಹೋರಾಟಕ್ಕೆ ಹಾಡು ಸ್ಫೂರ್ತಿಯಾಗಿ ನಿಂತ ಎಷ್ಟೋ ಉದಾಹರಣೆಗಳನ್ನು ಇತಿಹಾಸದಲ್ಲಿ ಕಾಣುತ್ತೇವೆ. ಬದುಕನ್ನು ನಿತ್ಯ ನೂತನವಾಗಿಸುವ, ಹೊಸ ಚೈತನ್ಯ ಮೂಡಿಸುವ, ಶಕ್ತಿ ತುಂಬುವ, ಜಗತ್ತನ್ನೇ ಬೆಳಗಿಸುವ, ಬದುಕಿನ ಗತಿಯನ್ನೆ ಬದಲಿಸುವ ಶಕ್ತಿ ಹಾಡಿಗಿದೆ.





7th_Kannada_Reader.indd 21 24-06-2019 19:37:40

ನವಭಾವ–ನವಜೀವ–ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು ‖1‖

ಜಾತಿ–ಕುಲ–ಮತ–ಧರ್ಮ ಪಾಶಗಳ ಕಡಿದೊಗೆದು
ಎದೆ ಹಿಗ್ಗಿ ಹಾಡಬೇಕು
ಯುಗಯುಗಗಳಾಚೆಯಲಿ ಲೋಕ ಲೋಕಾಂತದಲಿ
ಆ ಹಾಡು ಗುಡುಗಬೇಕು ‖2‖

ಉನ್ನತೋನ್ನತ ಘನ ಹಿಮಾದ್ರಿ ಶಿಖರವನೇರಿ
ಹಾಡಲ್ಲಿ ಹಾಡಬೇಕು
ಹಾಡು ನುಡಿಗುಂಡುಗಳು ಹಾರಿ ದಶದಿಕ್ಕಿನಲಿ
ಭಯದ ಬೆನ್ನಟ್ಟಬೇಕು ‖3‖

ಗಂಡೆದೆಯ ಘರ್ಜನೆಗೆ ಮುವ್ವತ್ತು ಮೂಕೋಟಿ
ಕಲಕಂಠ ಬೆರೆಸಬೇಕು
ಭೂಮ್ಯಂತರಾಳದಲಿ ನಭಚಕ್ರಗೋಳದಲಿ
ಮಾರ್ದನಿಗಳೇಳಬೇಕು ‖4‖

ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ
ಭಾನುಬುವಿ ಬೆಳಗಬೇಕು
ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ
ಕ್ರಾಂತಿ ಕಿಡಿ ಕೆರಳಬೇಕು ‖5‖

ಜಯಜನನಿ ಶಿರವೆತ್ತಿ ವೀರಭರವಸೆಯಿಂದ
ಹೊಸ ಹಾಡ ಕೇಳಿ ನೋಡು
ಇದೋ ಮೊದಲು ಮುನ್ನಿಲ್ಲ; ಮುಗಿದುದಂದಿನ ಪಾಡು
ಹೊಸತಿಂದು ಹೊಸತು ಹಾಡು ‖6‖



7th_Kannada_Reader.indd 22 24-06-2019 19:37:40

## ಕವಿ ಕಾವ್ಯ ಪರಿಚಯ



**ಕಯ್ಯಾರ ಕಿಞ್ಞಣ್ಣ ರೈ**

ಕಯ್ಯಾರ ಕಿಞ್ಞಣ್ಣ ರೈಯವರು (1915) ಕಾಸರಗೋಡು ಜಿಲ್ಲೆಯ ಕಯ್ಯಾರ ಗ್ರಾಮದವರು. ಶಿಕ್ಷಕ, ಸಾಹಿತಿ, ಪತ್ರಿಕೋದ್ಯಮಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿ ಹಲವಾರು ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ. ಶ್ರೀಮುಖ, ಐಕ್ಯಗಾನ, ಪುನರ್ನವ ಚೇತನ ಮತ್ತು ಕೊರಗ, ಗಂಧವತಿ ಎಂಬ ಕವನ ಸಂಕಲನಗಳನ್ನೂ; ವಿರಾಗಿಣಿ ಎನ್ನುವ ನಾಟಕವನ್ನೂ; ಅನ್ನದೇವರು ಮತ್ತು ಇತರ ಕಥೆಗಳು ಎಂಬ ಸಣ್ಣ ಕಥಾ ಸಂಕಲನವನ್ನೂ; ರತ್ನಾಕರ, ಪರಶುರಾಮ, ಎ.ಬಿ.ಶೆಟ್ಟಿ ಎಂಬ ಜೀವನ ಚರಿತ್ರೆಗಳನ್ನೂ; ದುಡಿತವೇ ನನ್ನ ದೇವರು ಎಂಬ ಆತ್ಮಕಥೆಯನ್ನೂ; ಗೋವಿಂದ ಪೈ–ಎಂಬ ಸೃತಿಕೃತಿಯನ್ನೂ; ಸಾಹಿತ್ಯ ದೃಷ್ಟಿ ಎಂಬ ವಿಮರ್ಶಾ ಕೃತಿಯನ್ನೂ; ಪಂಚಮಿ ಎನ್ನುವ ಅನುವಾದ ಕೃತಿಯನ್ನೂ ಇವರು ರಚಿಸಿದ್ದಾರೆ. ಇವರಿಗೆ 1969ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 2005ರಲ್ಲಿ ಆಳ್ವಾಸ್ ನುಡಿಸಿರಿ ಪ್ರಶಸ್ತಿ, 2006ರಲ್ಲಿ ನಾಡೋಜ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ, ಗೌರವಗಳು ಲಭಿಸಿವೆ. ಇವರು ಮಂಗಳೂರಿನಲ್ಲಿ ನಡೆದ 66ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪ್ರಸ್ತುತ ಪದ್ಯವನ್ನು ಕಯ್ಯಾರ ಕಿಞ್ಞಣ್ಣರೈಯವರು ರಚಿಸಿರುವ ಶತಮಾನದ ಗಾನ' ಎನ್ನುವ ಕವನ ಸಂಕಲನದಿಂದ ಆಯ್ದು ಕೊಡಲಾಗಿದೆ.

## ಆಶಯ ಭಾವ

ಬದುಕಿಗೆ ಹೊಸ ತಿರುವನ್ನು ನೀಡಬಲ್ಲ ಹೊಸ ಆಶಯವನ್ನು, ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ, ಹಳೆಯ ಮೌಢ್ಯವನ್ನು ಕಡಿದೊಗೆದು ಹೊಸ ಭಾವನೆಗಳನ್ನು ಸೃಜಿಸಬಲ್ಲ, ಹೊಸ ಹಾಡನ್ನು ಹಾಡಬೇಕು. ಆ ಹಾಡು ಎಲ್ಲರಲ್ಲೂ ಕ್ರಾಂತಿಯನ್ನುಂಟು ಮಾಡಬೇಕು. ಅದರ ಮಾರ್ದನಿಗಳು ಭೂಮಿ ಆಕಾಶದಲ್ಲಿ ತುಂಬಬೇಕು. ಎಲ್ಲ ಕೀಳರಿಮೆಗಳನ್ನು ಕಡಿದೊಗೆದು ಹೊಸ ಹುರುಪನ್ನು ತುಂಬುವ ಹಾಡು ಇದಾಗಿದೆ. ಇಂತಹ ಸ್ಫೂರ್ತಿಯ ಚಿಲುಮೆಯಾಗುವ ಹಾಡನ್ನು ಹಾಡಬೇಕು. ಅದು ನಿತ್ಯ ನೂತನವಾಗಿರಬೇಕೆಂಬುದು ಈ ಪದ್ಯದ ಆಶಯವಾಗಿದೆ.

## ಪದಗಳ ಅರ್ಥ

ಕಲಕಂಠ–ಇಂಪಾದ ಧ್ವನಿ; ತೀವ್ರ–ಹರಿತ, ರಭಸ; ಪದತಲ–ಕಾಲಿನ ಕೆಳಗೆ; ಮಸಗು–ಹರಡು; ಲೋಕಾಂತ–ಲೋಕಗಳನ್ನು ಮೀರಿದ; ತೆರೆ–ತರಂಗ, ಅಲೆ; ನಭ–ಆಕಾಶ, ಆಗಸ, ಗಗನ; ಬೆನ್ನಟ್ಟು–ಓಡಿಸಿಕೊಂಡು ಹೋಗು, ಹಿಂಬಾಲಿಸು; ಮಾರ್ದನಿ–ಪ್ರತಿಧ್ವನಿ; ಹಿಮಾದ್ರಿ–ಹಿಮಪರ್ವತ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕವಿ ಎಂತಹ ಹಾಡನ್ನು ಹಾಡಬೇಕೆಂದು ಬಯಸಿರುವರು ?
2. ವೀರಧ್ವನಿ ಹೇಗೆ ಏರಬೇಕು ?
3. ಕಡಿದೊಗೆಯಬೇಕಾದ ಪಾಶಗಳು ಯಾವುವು ?
4. ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು ?
5. ಭಾನು ಬುವಿ ಯಾವುದರಿಂದ ಬೆಳಗಬೇಕು ?



7th_Kannada_Reader.indd 23 24-06-2019 19:37:40

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕವಿ ಎಂತಹ ಹಾಡನ್ನು ಹಾಡಿದಾಗ ವೀರಧ್ವನಿ ಏರಬೇಕು ಎಂದು ಬಯಸುತ್ತಾರೆ ?
2. ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾರೆ ?
3. ಈ ಹಾಡು ಹೊಸತು ಎಂದು ಕವಿ ಹೇಳಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಹೊಸ ಹಾಡು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಭಾಷಾಭ್ಯಾಸ

**1. ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.**

ಧ್ವನಿ, ಭೂಮಿ, ಭಾನು, ಶಿರ, ಯುಗ, ಚರಿತೆ.

**2. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಹಿಗ್ಗಿ, ಭಯ, ಜಯ, ಹೊಸತು, ಮೊದಲು.

**3. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಹಾಡೊಮ್ಮೆ, ಉನ್ನತೋನ್ನತ, ಗಂಡೆದೆ, ಗತಿಯಲ್ಲಿ, ಕಡಿದೊಗೆದು.

### ಚಟುವಟಿಕೆ

1. ಪ್ರಕೃತಿಯ ಬಗ್ಗೆ ಇನ್ನಿತರ ಕವನಗಳನ್ನು ಓದಿ ತಿಳಿದುಕೊಳ್ಳಿರಿ.
2. ಭೂಮಿ, ಕಾಡು, ಮಳೆ ಇವುಗಳನ್ನು ಕುರಿತಂತೆ ಪುಟ್ಟ ಪುಟ್ಟ ಕವನಗಳನ್ನು ರಚಿಸಿರಿ.





7th_Kannada_Reader.indd 24 24-06-2019 19:37:41

ಘಟಕ ಎರಡು

ಪೂರಕ ಪದ್ಯ

# ಪ್ರಕೃತಿ ಗೀತೆ

– ಸದಾಶಿವಮೂರ್ತಿ ಗುಮಟಾಪುರ

ಬನ್ನಿರೈ ಸೋದರರೇ
ಗಿಡ ನೆಡುವ ಬನ್ನಿ
ಬನ್ನಿರೈ ಬಾಲೆಯರೆ
ಮರ ಬೆಳೆಸುವ ಬನ್ನಿ ‖1‖

ಗಿಡ ಮರಗಳ ಬೆಳೆಸೋಣ
ಪ್ರಕೃತಿಯ ಉಳಿಸೋಣ
ಪರಿಶುದ್ಧ ಗಾಳಿಯ ಸೇವಿಸೋಣ
ಸ್ವಾಸ್ಥ್ಯಯುತ ಬದುಕನು ನಡೆಸೋಣ ‖2‖

ಮನೆಗೊಂದು ಗಿಡ ಬೆಳೆಸಿ
ಊರಿಗೊಂದು ವನ ಮಾಡಿ
ಹಕ್ಕಿಯಂತೆ ಹಾಡಿ ನಲಿಯೋಣ
ನೆಮ್ಮದಿಯ ಲೋಕ ಸೃಜಿಸೋಣ ‖3‖

ಕಾಡನ್ನು ಬೆಳೆಸೋಣ
ಇಳೆಗೆ ಮಳೆಯ ಸುರಿಸೋಣ
ನಾಡನ್ನು ಉಳಿಸಿ ಮುನ್ನಡೆಸೋಣ
ಭೂಮಿಯನೆ ಸ್ವರ್ಗ ಮಾಡೋಣ ‖4‖



7th_Kannada_Reader.indd 25 24-06-2019 19:37:41

## ಕವಿ ಕಾವ್ಯ ಪರಿಚಯ



ಸದಾಶಿವಮೂರ್ತಿ ಗುಮಟಾಪುರ ಅವರು ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ ಪದವೀಧರರಾಗಿದ್ದಾರೆ. ಶ್ರೀಯುತರು ಬೆಂಗಳೂರಿನ ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕನ್ನಡ ವಿಭಾಗದ ಮುಖ್ಯಸ್ಥರಾಗಿ ಹಾಗೂ ಜೈನ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರು ಪ್ರಸ್ತುತ ತಾಳವಾಡಿಯ ಸರ್ಕಾರಿ ಉನ್ನತ ಪ್ರೌಢಶಾಲೆಯಲ್ಲಿ ಸ್ನಾತಕೋತ್ತರ ಪದವೀಧರ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ವಿದ್ಯಾರ್ಥಿದೆಸೆಯಿಂದಲೇ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡಿರುವ ಇವರು ಎರಡೂವರೆ ದಶಕಗಳಿಂದಲೂ ಕನ್ನಡ ಸಾಹಿತ್ಯಕೃಷಿಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕನ್ನಡ ನಾಡು–ನುಡಿ, ಸಾಹಿತ್ಯ–ಸಂಸ್ಕೃತಿ ಕುರಿತಾದ ಇವರ ಲೇಖನಗಳು ಪ್ರಜಾವಾಣಿ, ವಿಜಯ ಕರ್ನಾಟಕ, ಉದಯವಾಣಿ ಮೊದಲಾದ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಪ್ರಾಥಮಿಕ ಶಾಲಾ ಶಿಕ್ಷಕರ ಕೈಪಿಡಿ, ಪ್ರೌಢಶಾಲಾ ಶಿಕ್ಷಕರ ಕೈಪಿಡಿ, ಕನ್ನಡ ವ್ಯಾಕರಣ, ಕನ್ನಡ ಗಾದೆಗಳು ಮತ್ತು ಪ್ರಬಂಧಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಹಲವು ಬಣ್ಣದ ಹಕ್ಕಿ, ಗರಿಗಳು, ದಾರಿಬಿಡಿ, ಕೊಟ್ಟಕಥೆ–ಕಟ್ಟಿದಕಥೆ, ಸಂಗಡ ಇವು ಇವರ ಸಂಪಾದಿತ ಕೃತಿಗಳು. ಕನ್ನಡ ರತ್ನ ಶಿಕ್ಷಕ ಪ್ರಶಸ್ತಿ, ಉತ್ತಮ ಸಂಘಟಕ ಪ್ರಶಸ್ತಿ ಮೊದಲಾದ ಗೌರವಗಳಿಗೆ ಭಾಜನರಾಗಿದ್ದಾರೆ.

## ಆಶಯ ಭಾವ

ಕಾಡಿದ್ದರೆ ನಾಡು, ಇಲ್ಲದಿದ್ದರೆ ನಾಡೇ ಸುಡುಗಾಡು ಎಂಬ ಗಾದೆಯು ಹೇಳುವುದು ಪ್ರಕೃತಿಯನ್ನು ಹಸಿರಾಗಿಯೇ ನೋಡಬೇಕೆಂಬುದನ್ನು. ಆದರೆ ಅದಕ್ಕೆ ಬೇಕಾದ ಗಿಡ–ಮರಗಳನ್ನು ಬೆಳೆಸುವ ಜವಾಬ್ದಾರಿಯನ್ನು ಮಕ್ಕಳಿಂದಲೇ ಪ್ರಾರಂಭಿಸಿದರೆ ಅದಕ್ಕೆ ಹೆಚ್ಚು ಮಹತ್ವವಿರುತ್ತದೆ ಎಂಬ ಸದುದ್ದೇಶವನ್ನು ಈ ಕವನವು ಸಾರುತ್ತದೆ.

## ಪದಗಳ ಅರ್ಥ

ಪ್ರಕೃತಿ–ನಿಸರ್ಗ; ಗೀತೆ–ಹಾಡು; ಬಾಲೆಯರು–ಬಾಲಕಿಯರು, ಯುವತಿಯರು; ಪರಿಶುದ್ಧ–ಅತ್ಯಂತ ಶುದ್ಧವಾದ; ಸೇವಿಸು–ಕುಡಿ; ಸ್ವಾಸ್ಥ್ಯ–ಆರೋಗ್ಯ, ಕ್ಷೇಮ; ವನ–ಕಾಡು, ಅರಣ್ಯ; ನಲಿ–ಆನಂದಿಸು; ನೆಮ್ಮದಿ–ಸಮಾಧಾನ, ಶಾಂತಿ; ಲೋಕ–ಜಗತ್ತು, ವಿಶ್ವ; ಸೃಜಿಸು–ಸೃಷ್ಟಿಮಾಡು; ಇಳೆ–ಭೂಮಿ; ಸುರಿ–ಮಳೆ ನೀರು ಕೆಳಕ್ಕೆ ಬೀಳು, ಧಾರೆಯಾಗಿ ಬೀಳಿಸು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕವಿ ಗಿಡ–ಮರಗಳನ್ನು ಬೆಳೆಸಲು ಯಾರನ್ನು ಆಹ್ವಾನಿಸುತ್ತಾರೆ?
2. ಪ್ರಕೃತಿಯನ್ನು ಉಳಿಸಲು ನಾವು ಏನು ಮಾಡಬೇಕು?
3. ಸ್ವಾಸ್ಥ್ಯಯುತ ಬದುಕನ್ನು ಸವೆಸುವುದು ಹೇಗೆ?
4. ಊರಿಗೊಂದು ವನವಾಗುವುದು ಯಾವಾಗ?
5. ಇಳೆಗೆ ಮಳೆ ಸುರಿಯಬೇಕಾದರೆ ಏನು ಮಾಡಬೇಕು?
6. ಯಾವುದನ್ನು ಸ್ವರ್ಗ ಮಾಡಲು ಕವಿ ಬಯಸುತ್ತಾರೆ?

## ಚಟುವಟಿಕೆ

1. 'ಕಾಡಿದ್ದರೆ ನಾಡು' ಎಂಬ ವಿಷಯವನ್ನು ಕುರಿತು ಒಂದು ಪ್ರಬಂಧ ಬರೆಯಿರಿ.
2. 'ಪ್ರಕೃತಿ' ಕುರಿತು ಒಂದು ಕವನ ರಚಿಸಿರಿ.



7th_Kannada_Reader.indd 26 24-06-2019 19:37:41

ಘಟಕ ಎರಡು

# ನೀರು ಕೊಡದ ನಾಡಿನಲ್ಲಿ

– ಶ್ರೀಮತಿ ನೇಮಿಚಂದ್ರ

## ಪ್ರವೇಶ

ವಿಶ್ವವು ಜಾಗತೀಕರಣದ ಹೆಸರಿನಲ್ಲಿ ಪ್ರಕೃತಿಯಿಂದ ಮಾನವನಿಗೆ ಉಚಿತವಾಗಿ ಲಭ್ಯವಾಗಬಹುದಾದ ಗಾಳಿ, ಬೆಳಕು, ನೀರು ಮತ್ತು ಆಹಾರಗಳಂತಹ ಅತ್ಯವಶ್ಯಕವಾದ ವಸ್ತುಗಳನ್ನು ಹಣ ಗಳಿಸುವ ಮಾರ್ಗವನ್ನಾಗಿ ಪರಿವರ್ತಿಸ ಹೊರಟಿರುವುದು ಆತಂಕಕಾರಿ ವಿಷಯವಾಗಿದೆ. ಭಾರತೀಯರಾದ ನಾವು ಮಾನವೀಯತೆಗೆ ಬೆಲೆ ಕೊಟ್ಟು, 'ಬಳಲಿ ಬಂದವರಿಗೆ ನೀರು, ಹಸಿದು ಬಂದವರಿಗೆ ಅನ್ನ'ವನ್ನಿಕ್ಕಿ ಮೌಲ್ಯಯುತ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿರುವುದು ವಿಶ್ವವೇ ಹೆಮ್ಮೆ ಪಡುವ ಸಂಗತಿಯಾಗಿದೆ..



ಭಾರತದಿಂದ ಹೊರಗೆ ಕಾಲಿಟ್ಟರೆ, ಉಳಿದೆಲ್ಲವೂ, 'ನೀರು ಕೊಡದ ನಾಡುಗಳು' ಎಂಬುದು ನನ್ನ ಇಲ್ಲಿಯವರೆಗಿನ ಅನುಭವ. ಎರಡು ವಾರ ಕಳೆದಿದೆ. ಊರೂರು ಅಲೆದಿದ್ದಾಯಿತು. ದಿನವೂ ಅಸಾಧ್ಯ ಬಾಯಾರಿಕೆ. ಕೋಲಾಗಳು, ಫ್ರೆಂಚ್ ವೈನ್, ಬಿಯರ್, ಬಾಟಲಿಯಲ್ಲಿ ಹಣ್ಣಿನ ರಸ ಇವೆಲ್ಲ ಇಲ್ಲಿ ಧಾರಾಳವಾಗಿ ದೊರೆಯುತ್ತವೆ. ಕುಡಿಯಲು ನೀರು ಸಿಗದು!

ಇಲ್ಲಿ ಯೂರೋಪಿನಲ್ಲಾಗಲೀ, ಅಲ್ಲಿ ಅಮೇರಿಕದಲ್ಲಾಗಲೀ ನೀರು ಕೊಡುವ ಸಂಪ್ರದಾಯವಿಲ್ಲ. ಹಿಂದೆ ಇತ್ತೇನೋ, ಈಗಂತೂ ಇಲ್ಲ. ನೀರು ಸಲೀಸಾಗಿ ಎಲ್ಲೆಂದರಲ್ಲಿ ಪುಕ್ಕಟೆಯಾಗಿ ನಿಮಗೆ ಖಂಡಿತ ಸಿಗದು. ನಮ್ಮಲ್ಲಿಯಂತೆ ರೈಲು ನಿಲ್ದಾಣಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲೂ ದುಡ್ಡಿಲ್ಲದೆ ಕುಡಿಯಬಲ್ಲ ನೀರನ್ನು ಇರಿಸುವುದಿಲ್ಲ. ಬಾಯಾರಿದಾಗ ಈಗಲೂ ಹೋಟೆಲ್ ಒಂದಕ್ಕೆ ಹೊಕ್ಕು ನೀರು ಮಾತ್ರ ಕುಡಿದು ಹೊರ ಬರಬಹುದಾದ ಸವಲತ್ತು ಇಲ್ಲಿಲ್ಲ. ಮನೆಯ ಹೊರಗೆ ಕಾಂಪೌಂಡ್ ಗೋಡೆಗೆ ಸಣ್ಣ ತೊಟ್ಟಿ ಕಟ್ಟಿ, 'ದನಕರುಗಳು ಕುಡಿದು ಹೋಗಲಿ' ಎಂದು ನೀರು ತುಂಬಿಡುತ್ತಿದ್ದ ಬಾಲ್ಯದ ದಿನಗಳು ನನಗಿನ್ನೂ ನೆನಪಿವೆ. ನಾನು ದಿಲ್ಲಿಗೆ ಬಂದು, ವಿದೇಶಕ್ಕೆ ಹಾರಿದ್ದೆ. ದಿಲ್ಲಿಯಲ್ಲೋ, ಧಗೆಧಗೆ ಬಿಸಿಲು. ಆದರೆ ಯಾರೋ



7th_Kannada_Reader.indd 27 24-06-2019 19:37:41

ಪುಣ್ಯಾತ್ಮರು ಅಲ್ಲಿ ದೊಡ್ಡ ಮಣ್ಣಿನ ಮಡಕೆಗಳಲ್ಲಿ ನೀರು ತುಂಬಿಟ್ಟಿರುತ್ತಿದ್ದರು. ಅನೇಕ ಗುರುದ್ವಾರಗಳ ಬಳಿ, ಸ್ವಯಂಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು ನಿಲ್ಲಿಸಿದ ಆಟೋ, ಬಸ್ಸು, ಹಾಗೂ ದಾರಿ ಹೋಕರಿಗೆಲ್ಲ ನೀರು ತುಂಬಿ ತುಂಬಿ ಕುಡಿಸುವುದನ್ನು ನೋಡಿದ್ದೇನೆ. ರೋಥಕ್ ರಸ್ತೆಯ ಅತ್ತೆಯ ಮನೆಯೊಳಗೆ ಕಾಲಿಡುತ್ತಿದ್ದಂತೆ 'ಬೇಟಾ, ತಾಯಾಜಿ ಆಯೇ ಹೈ. ಥಂಡಾ ಪಾನಿ ಪಿಲಾವೊ' ನನ್ನ ಮೈದುನನ ಮಗನಿಗೆ ಅತ್ತೆ ಕೂಗಿ ಹೇಳಿದರು. ಪುಟ್ಟ ಹುಡುಗ ತಕ್ಷಣ 'ತಣ್ಣನೆಯ ನೀರು' ತಂದು ಕೈಗಿತ್ತ. ದಿಲ್ಲಿಯ ಧೂಳು ಹಾದಿಗಳೆಲ್ಲಾ ಮರೆತವು. ಮನೆಗೆ ಬಂದವರಿಗಂತೂ 'ಮೊದಲು ನೀರು ಕೊಡುವ' ಸಂಪ್ರದಾಯ. ಢಾಬಾ ಆಗಲಿ, ದರ್ಶಿನಿ ಆಗಲಿ, ಪಂಚತಾರಾ ಹೋಟೆಲ್ಲೇ ಆಗಲಿ, ಮೊದಲು ನೀರು ಮೇಜಿನ ಮೇಲೆ ಕುಳಿತುಕೊಳ್ಳುತ್ತದೆ, ಪುಕ್ಕಟೆಯಾಗಿ ಕೊಡುವ ನೀರು. ಆದರೆ ನಾನೀಗ, 'ನೀರು ಕೊಡದ ನಾಡು'ಗಳಲ್ಲಿ ಅಲೆಯುತ್ತಿದ್ದೇನೆ.

'ಮ್ಯಾಗ್‌ಡೊನಾಲ್ಡ್'ನಂತಹ ಅಗ್ಗದ ಫಾಸ್ಟ್‌ಫುಡ್ ಜಾಯಿಂಟ್ಸ್‌ಗೇ ಹೋಗಿ, ವೈಭವದ ಪಂಚತಾರ ಹೋಟೆಲುಗಳಿಗೇ ಹೋಗಿ ನೀರು ಇಡುವ ಅಥವಾ ಕೊಡುವ ಸಂಪ್ರದಾಯವೇ ಇಲ್ಲಿಲ್ಲ. ಹೋಟೆಲುಗಳಲ್ಲಿ ವೈನ್, ಬಿಯರ್, ಇಲ್ಲವೇ ಕೋಲಾಗಳಿಂದಲೇ ಊಟ ಆರಂಭ. ಮ್ಯಾಗ್‌ಡೊನಾಲ್ಡ್‌ಗಳಲ್ಲಿ ಫ್ರೆಂಚ್ ಫ್ರೈಸ್ ಇರಲಿ, ಸ್ಯಾಂಡ್‌ವಿಚ್ ಆಗಲಿ, ಬರ್ಗರ್ ಆಗಲಿ ಜೊತೆಗೆ ದೊಡ್ಡ ಗಾತ್ರದ ಕೋಲಾದೊಡನೆಯೇ ನೀಡುತ್ತಾರೆ.

ಮಧ್ಯಾಹ್ನದ ಊಟದ ಸಮಯ. ನಾನು, 'ನೀರು, ನೀರು' ಎಂದು ಬಡಬಡಿಸುವಾಗ ಸಣ್ಣ ಬಾಟಲಿಯಲ್ಲಿ ನೀರು ಬರುತ್ತಿತ್ತು. ಕುಡಿದು ನೋಡಿದರೆ ಅದು ಬರೀ ಸೋಡ. 'ಸೋಡಾ ಅಲ್ಲ, ವಾಟರ್' ಎನ್ನುತ್ತಿದ್ದೆ. 'ಇದು ನೀರೇ. ಸ್ಪಾರ್ಕ್ಲಿಂಗ್ ವಾಟರ್' ಎನ್ನುತ್ತಿದ್ದರು. 'ಅಪ್ಪ, ಮಹನೀಯರೇ ನನಗೆ ಹೊಳೆಯುವ ನೀರು ಬೇಡ. ಸಾದಾ ನೀರು ಕೊಡಿ' ಎಂದೆ. ಪುಟ್ಟ ಬಾಟಲು ತರಿಸಿದರು. ಸ್ಟಲ್ ವಾಟರ್ ಎಂಬ ಹೊಸ ಪದಪುಂಜವನ್ನು ಕಲಿತೆ. ಅದನ್ನು ಕುಡಿದು ನೋಡಿದರೆ ಅದರಲ್ಲೂ ಅಲ್ಪ ಮಟ್ಟದ ಸೋಡಾ. ಕಡೆಗೂ ದುಡ್ಡು ಕೊಟ್ಟರೂ ಸೀದಾ ಸಾದಾ ನೀರು ಸಿಗುವುದು ಅಪರೂಪವಿತ್ತು. ಏಕೆ ಹೀಗೆ ? ಉತ್ತರ ಹೊಳೆಯುವುದೇನೂ ಕಷ್ಟವಲ್ಲ. ಪುಕ್ಕಟೆಯಾಗಿ ಏನನ್ನೂ ಕೊಡದಿದ್ದರೆ ನೀವು ಕೊಳ್ಳುತ್ತೀರಿ. ಕೊಳ್ಳುತ್ತಿರುವುದು ಸೀದಾಸಾದಾ ಅಲ್ಲ ಎಂದು ನಂಬಿಸಿದರೆ ಮತ್ತಷ್ಟು ಕೊಳ್ಳುತ್ತೀರಿ. ಕೊಳ್ಳುತ್ತಿರುವುದು ಅದ್ಭುತವಾದದ್ದು ಎಂದರೆ ಇನ್ನಷ್ಟು ಕೊಳ್ಳುತ್ತೀರಿ. ಕೊಳ್ಳುಬಾಕ ಸಂಸ್ಕೃತಿಯ ತಳಹದಿಯೇ ಇಲ್ಲಿದೆ. ನೀರು ನಿಮಗೆ ಧಾರಾಳವಾಗಿ ಎಲ್ಲೆಡೆ ಪುಕ್ಕಟೆಯಾಗಿ ದೊರೆತರೆ, ಕೋಲಾ ಕಂಪನಿಗಳ ಜಾಹೀರಾತಿಗೆ ಮಣಿಯುವುದು ಹೇಗೆ? ಇದು ಒಂದು ಬಗೆಯ ಸೂಕ್ಷ್ಮ ರೀತಿಯ ಸೈಕಾಲಜಿಕಲ್ ವಾರ್‌ಫೇರ್. ಅಮೇರಿಕದ ಉದ್ದಗಲವನ್ನೂ ವಾರಗಟ್ಟಲೆ ಅಲೆಯುವಾಗ, ಎಲ್ಲೆಡೆಯಲ್ಲಿ ಗಮನಿಸಿದ್ದೇನೆ. ದೊಡ್ಡ ಗಾತ್ರದ ಕೋಲಾ ಬಾಟಲಿಗಳಿಗೆ 0.99 ಡಾಲರ್ ಬೆಲೆ. ಸಣ್ಣ ಗಾತ್ರದ ನೀರಿನ ಬಾಟಲಿಗೆ ಅದಕ್ಕಿಂತ ಹೆಚ್ಚಿನ ಹಣ! ಕೊಳ್ಳುವ ಗ್ರಾಹಕನ ಮನಸ್ಸಿನಲ್ಲಿ 'ನೀರಿಗೇಕೆ ಅಷ್ಟು ಹಣ? ಅದಕ್ಕಿಂತ ಅಗ್ಗವಾಗಿ ಕೋಲಾ ಸಿಗುತ್ತದೆಯಲ್ಲ' ಎಂಬ ತರ್ಕ ಹೊಳೆದು ಕೋಲಾ ಅಭ್ಯಾಸ ಮಾಡಿಕೊಳ್ಳುತ್ತಾನೆ. ಅಲ್ಲಿಗೆ ನೀರು ಕುಡಿಯುವ ಅಭ್ಯಾಸ ತಪ್ಪುತ್ತದೆ.

ವಿದೇಶಗಳಲ್ಲಿ ಮನೆಯ ನಲ್ಲಿಯಲ್ಲಿ ಬರುವ ನೀರನ್ನು ಯಾರೂ ಕುಡಿಯುವುದಿಲ್ಲ. ಅದನ್ನು ಕುಡಿದರೇನೂ ಪ್ರಾಣ ಹೋಗುವುದಿಲ್ಲ. ಅದರೆ, 'ಅದು ಶುದ್ಧವಲ್ಲ. ಶುದ್ಧ ನೀರನ್ನು ಬಾಟಲಿಯಲ್ಲಿ ಕೊಂಡು ಮಾತ್ರ ತರಬಹುದು' ಎಂದು ಇಡೀ ದೇಶದ ತಲೆ ತೊಳೆದಿರುವಾಗ, ಪ್ರತಿಯೊಬ್ಬರೂ ನೀರನ್ನು ಕೊಂಡು ಕುಡಿಯುತ್ತಾರೆ. ಇಂತಹುದೇ ಹುನ್ನಾರ ಭಾರತದಲ್ಲಿ ಅದಾಗಲೇ ಆರಂಭವಾಗಿದೆ. ಕೀಟನಾಶಕವಿರುವ ನೀರನ್ನೂ ಶುದ್ಧವೆಂದು ಮಾರಿ ಉದ್ಧಾರವಾದ ಕಂಪನಿಗಳಿವೆ! ಕೊಳ್ಳುಬಾಕ ಸಂಸ್ಕೃತಿಯ ಪರಾಕಾಷ್ಠೆಯಾಗಿ ನನಗೆ, 'ನೀರು ಕೊಡದ ನಾಡುಗಳು' ಕಾಣುತ್ತವೆ. ಇಂತಹುದೇ ಮರುಳುತನಕ್ಕೆ ಅದಾಗಲೇ ಭಾರತೀಯರು ಬಲಿಯಾಗಿದ್ದಾರೆ. ನಮ್ಮ ಎಳನೀರು, ಮಜ್ಜಿಗೆ, ಪಾನಕ, ಕಬ್ಬಿನ ಹಾಲು, ತಾಜಾ ಹಣ್ಣಿನರಸ ಎಲ್ಲವನ್ನೂ ತೊರೆದು ಕೋಲಾಗಳಿಗೆ ಮುಗಿ ಬೀಳುತ್ತಿರುವ ಜನರ ಸಂಖ್ಯೆ ಏರುತ್ತಿದೆ. ವೈಯಕ್ತಿಕ ವಿದೇಶ ಪ್ರವಾಸಗಳಲ್ಲಿ ನನಗೆ ಇಷ್ಟು ಕಷ್ಟವಾಗಿದ್ದಿಲ್ಲ. ತಿಂಗಳುಗಟ್ಟಲೆ ಅಲೆದರೂ ನಾವಿಳಿದುಕೊಳ್ಳುತ್ತಿದ್ದ ಅಗ್ಗದ ಹೊಟೆಲಿನಿಂದ ಬೆಳಿಗ್ಗೆ ಹೊರಡುವಾಗಲೇ ಬಾಟಲಿಯಲ್ಲಿ ನಲ್ಲಿ ನೀರನ್ನು ತುಂಬಿಸಿಕೊಂಡು ಹೊರಡುತ್ತಿದ್ದೆವು. ನಮ್ಮ ಭಾರತೀಯ ನಿರೋಧಕ



7th_Kannada_Reader.indd 28 24-06-2019 19:37:41

ಶಕ್ತಿಯ ಎದುರು ಯಾವ ನೀರಾದರೂ ಅಡ್ಡಿಯಿರಲಿಲ್ಲ. ಆದರೆ ಕೆಲಸದ ಮೇಲೆ ಬಂದ ಈ ಪ್ರವಾಸದಲ್ಲಿ ಮಣಮಣ ಫೈಲುಗಳನ್ನು ಹೊತ್ತು, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಅಲೆಯುವಾಗ ನೀರಿನ ಬಾಟಲಿ ಹಿಡಿದು ಹೋಗುವುದು ಅಸಾಧ್ಯವಾಗಿತ್ತು.

ಕೊಳ್ಳುಬಾಕತನ, ಲಾಭಕೋರತನದ ರೋಗಗಳು ಸಾಂಕ್ರಾಮಿಕವಾಗಿ ಎಲ್ಲ ನೆಲದಲ್ಲೂ ಹರಡಿ, ಭಾರತಕ್ಕೂ ಲಗ್ಗೆ ಇಟ್ಟಿವೆ ಎಂದು ತೀರಾ ಇತ್ತೀಚಿನ ದಿನಗಳಲ್ಲಿ ಗಾಢವಾಗಿ ನಮ್ಮೆಲ್ಲರಿಗೂ ಅನುಭವವಾಗಿದೆ. 'ಸಂಸ್ಕೃತಿಯ ಮೇಲೆ ದಾಳಿ' ಎನ್ನುವಾಗ ನನಗೆ ಮದರ್ಸ್ ಡೇ, ಫಾದರ್ಸ್ ಡೇ, ವ್ಯಾಲೆಂಟೇನ್ಸ್ ಡೇ ಆಚರಿಸುವುದು ಅಷ್ಟು ದೊಡ್ಡ ಅನಾಹುತವಾಗಿ ಕಾಣುವುದಿಲ್ಲ. ಈ ಹೊಸ ಹೊಸ ದಿನಗಳೆಲ್ಲ ಉಕ್ಕಿದ ಪ್ರೀತಿಯ ದ್ಯೋತಕವಲ್ಲ. ಗಿಫ್ಟ್ ಗ್ರೀಟಿಂಗ್ ಕಾರ್ಡ್ ಮಾರುವ ಹುನ್ನಾರಗಳೆಂದು ಸರ್ವರಿಗೂ ವೇದ್ಯವಾಗಿದೆ. ಆದರೆ ನನಗೆ ಗಾಭರಿ ಹುಟ್ಟಿಸುವುದು ನಮ್ಮ ಭಾರತೀಯ ಸಂಸ್ಕೃತಿಯ ಬುನಾದಿಯನ್ನು, ಜೀವನ ಶೈಲಿಯನ್ನು, ನಂಬಿಕೆಗಳನ್ನು, ಮೌಲ್ಯಗಳನ್ನು ಅಲುಗಿಸುವ 'ಕೊಳ್ಳುಬಾಕತನ'. ಅಗತ್ಯಗಳಲ್ಲಿ ನಡೆದು ಹೋಗುತ್ತಿದ್ದ ಬದುಕು, ಇಂದು 'ಬೇಕು'ಗಳ ಬಲೆಗೆ ಬಿದ್ದಿದೆ. ಸರ್ಕಾರಿ ಕಾಲೇಜಿನ ಪ್ರೊಫೆಸರ್ ಮತ್ತು ಪ್ರಾಂಶುಪಾಲರಾದ ನಮ್ಮ ತಂದೆಗೆ ಕಾಲೇಜಿಗೆ ಸೈಕಲ್ಲಿನಲ್ಲಿ ಹೋಗುವುದು ಅಪಮಾನಕರವಾಗಿ ಎಂದೂ ಕಂಡಿರಲೇ ಇಲ್ಲ. ಅಂದು, ಕೊಂಡ ಒಂದು ವಸ್ತುವನ್ನು ಬದುಕಿಡೀ ಬಳಸುವ ಪರಿಪಾಠವಿತ್ತು. ಇಂದು ಶಾಲೆಯಲ್ಲಿಯೇ ಬೈಕು ಬೇಕು ಎನ್ನುವ ಮಗ. ಇಂತಹುದೇ ಬ್ರ್ಯಾಂಡಿನ ಶೂ ಬೇಕು ಎನ್ನುವ ಮಕ್ಕಳು. ಮಾರುತಿ ಕಾರಿದ್ದರೆ ಸ್ಯಾಂಟ್ರೋ ಬೇಕು ಎಂದು ಓಡುವ ಹಿರಿಯರು. ಮಾರುಕಟ್ಟೆಗೆ ಬಂದದ್ದೆಲ್ಲವೂ ಬೇಕು. ಬೇಕುಗಳನ್ನು 'ಅಗತ್ಯ'ಗಳಾಗಿ ಹಾಗೂ 'ಅತ್ಯಗತ್ಯ'ಗಳಾಗಿ ಬಲು ಜಾಣತನದಿಂದ ಬದಲಿಸುವ ಜಾಹಿರಾತುಗಳು ಮತ್ತೆ ಮತ್ತೆ ಬಿತ್ತರವಾಗುತ್ತವೆ. ಆರಾಮ, ಐಷಾರಾಮದ ಅಪ್ಪಟ ಅನಗತ್ಯದ ವಸ್ತುಗಳನ್ನು, 'ಇವಿಲ್ಲದೆ ಬದುಕಿಲ್ಲ' ಎಂಬಂತೆ ಬಿಂಬಿಸುತ್ತಾರೆ. 'ಡಿಓಡರೆಂಟ್' ಹಾಕಿಕೊಳ್ಳದೇ ಇದ್ದರೆ ತಾನು ನಾಥ ಬಡಿಯುತ್ತೇನೆ' ಎಂಬಷ್ಟು ಕೀಳರಿಮೆಯನ್ನೂ ಅವರು ಹುಟ್ಟಿಸಬಲ್ಲರು. ಕೊನೆಗೆ ಎಲ್ಲವೂ ನಿಮ್ಮನ್ನು ಕೊಳ್ಳುವಂತೆ ಪ್ರೇರೇಪಿಸುತ್ತವೆ.

ಕೆಲವು ವರ್ಷಗಳ ಹಿಂದೆ ದಿನಪತ್ರಿಕೆಯಲ್ಲಿ ಓದಿದ್ದೆ. ಜನಪ್ರಿಯ ಹೋಟೆಲಿನ ಮಾಲೀಕರೊಬ್ಬರು ಬರೆದಿದ್ದರು... ತಂಪು ಪಾನೀಯದ ಕಂಪನಿಯೊಂದು ಆತನನ್ನು ಸಂಪರ್ಕಿಸಿ ನೀವು ಗ್ರಾಹಕರಿಗೆ, ಬಂದೊಡನೆ ನೀರು ಕೊಡುವುದನ್ನು ನಿಲ್ಲಿಸಿದರೆ, ಇಷ್ಟು ಹಣ ಕೊಡುವುದಾಗಿ ಹೇಳಿತಂತೆ! ಈಗಾಗಲೇ ಬೆಂಗಳೂರಿನಲ್ಲೂ ನನಗೆ, 'ನೀರು ಕೊಡದ ಸಂಸ್ಕೃತಿ'ಯ ಅನುಭವವಾಗಿದೆ. ಮಹಾತ್ಮಾ ಗಾಂಧಿ ರಸ್ತೆಯ, 'ಬಾಂಬೆ ಬಜಾರ್' ಎದುರಿನ ಪುಡ್ ಜಾಯಿಂಟ್‌ನಲ್ಲಿ ನಾನು ಮತ್ತು ಮಗಳು ಕುಳಿತಿದ್ದೆವು. ಅಲ್ಲಿ ನೀರು ತಂದಿಡಲಿಲ್ಲ. ಐಸ್‌ಕ್ರೀಂ ತಿಂದ ನಾವು ನೀರು ಬೇಕು ಎಂದು ಕೇಳಿದೆವು. 'ಮಿನರಲ್ ವಾಟರ್?' ಎಂದು ವೇಟರ್ ಪ್ರಶ್ನಿಸಿದ. 'ಇಲ್ಲಪ್ಪ! ಸಾಮಾನ್ಯ ನೀರು ಕೊಡಿ' ಎಂದೆ. ಮಾಯವಾದ ವೇಟರ್ ಹದಿನೈದು ನಿಮಿಷ ಕಾದರೂ ಬರಲೇ ಇಲ್ಲ. ಕಾದುಕಾದು ಸುಸ್ತಾಗಿ ಕೊನೆಗೆ ಕೌಂಟರಿಗೆ ಹೋಗಿ ಬಿಲ್ಲು ಕೊಟ್ಟು ಹೊರಬಿದ್ದೆವು. ಅದೇ ವೇಟರ್ ಪುಟ್ಟ ಪುಟ್ಟ ಬಾಟಲಿಗಳಲ್ಲಿ ಮಿನರಲ್ ವಾಟರ್‌ಗಳನ್ನು ಬೇರೆಬೇರೆ ಮೇಜಿಗೆ ಸರಬರಾಜು ಮಾಡುವುದು ಕಂಡಿತು! 'ಮಿನರಲ್ ವಾಟರ್' ಎಂದು ಅವರು ಕೇಳುವ ಭಂಗಿ ಭಾವ ಹೇಗಿರುತ್ತದೆ ಎಂದರೆ ನಿಮಗೆ, 'ಆರ್ಡಿನರಿ ವಾಟರ್' ಎಂದು ಹೇಳಲೂ ಹಿಂಜರಿಕೆಯಾಗಬೇಕು.

ಆದರೆ ನಿಜಕ್ಕೂ ಆಘಾತವಾದದ್ದು, ತೀರಾ ಇತ್ತೀಚೆಗೆ ಮಾಲತಿಯೊಡನೆ ಇಂದಿರಾನಗರದ ಮುಖ್ಯ ರಸ್ತೆಯ ಪುಟ್ಟ ಜಾಯಿಂಟ್‌ಗೆ ಹೊಸ ಬಗೆಯ ಐಸ್‌ಕ್ರೀಂ ತಿನ್ನುವ ಬಯಕೆಯಲ್ಲಿ ಹೊಕ್ಕಾಗ! 'ಮಿಸಿಸಿಪಿ ಮಡ್ ಪೀ' ಎಂದು ಎಲ್ಲೋ ಪತ್ರಿಕೆಯಲ್ಲಿ ಹೆಸರು ಓದಿದ್ದ ಮಾಲತಿ ಅದನ್ನೇ ಆರ್ಡರ್ ಮಾಡಿದಳು. ದೊಡ್ಡ ಬಿಳಿಯ ಪಿಂಗಾಣಿ ತಟ್ಟೆಯಲ್ಲಿ ಕೇಕ್ ಮತ್ತು ಐಸ್‌ಕ್ರೀಂ ಇರಿಸಿ, ಮೇಲೆ ಕೋಕೋ ಪುಡಿ ಉದುರಿಸಿ ಆಕರ್ಷಕವಾಗಿ ತಂದಿಟ್ಟರು. ಬೆಲೆ ನೂರು ರೂಪಾಯಿ ಎಂದಾಗ ಹೌಹಾರಿದ್ದುಂಟು. ಇಲ್ಲೂ ನೀರು ಕೊಟ್ಟಿರಲಿಲ್ಲ. 'ನೀರು ಕೊಡಿ' ಎಂದೆ. 'ಮಿನರಲ್ ವಾಟರ್?' ಎಂದಳು ಸರ್ವ್ ಮಾಡುತ್ತಿದ್ದ ಹುಡುಗಿ. 'ಇಲ್ಲ ಸಾಧಾರಣ ನೀರು' ಎಂದಾಗ, 'ನಮ್ಮಲ್ಲಿ ಸಾಧಾರಣ ನೀರು ಇಲ್ಲ' ಎಂದು ಬಿಡುವುದೇ?! ನೂರು ರೂಪಾಯಿ ಐಸ್ ಕ್ರೀಂ ತಿಂದರೂ ಒಂದು ಲೋಟ ನೀರು ಕೊಡದ



7th_Kannada_Reader.indd 29 24-06-2019 19:37:41

ಜಾಯಿಂಟ್‌ಗಳಿವು. ಮತ್ತೆ ಹತ್ತೋ ಇಪ್ಪತ್ತೋ ಪಡೆದು ಮಿನರಲ್ ವಾಟರ್ ಮಾರುವ ಹುನ್ನಾರ. ನನಗೆ ರೇಗಿ ಹೋಯಿತು. ಅಲ್ಲಿ ನೀರು ಕೊಡಲಿಲ್ಲ. ಹೊರಬಂದು, 'ಬನ್ನಿ ಮಾಲತಿ, ಸಾಗರ್‌ಗೆ. ಪಾನಿಪೂರಿ ತಿನ್ನೋಣ' ಎಂದೆ. ಎದುರಿಗೊಂದು ಸಾಗರ್ ಹೋಟೆಲಿತ್ತು. ನುಗ್ಗಿದೆವು. ಕುಳಿತೊಡನೆ ವೆಯಿಟರ್ ಬಂದು ನಾಲ್ಕು ಲೋಟ ನೀರು ತಂದಿಟ್ಟ. ಬರಿ ಬಾಯಲ್ಲ, ಮನಸ್ಸೂ ತಂಪಾಯಿತು!

ಹೇಳಿ, ಕಾಯ್ದುಕೊಳ್ಳಬಲ್ಲೆವೇ ಮಾನವೀಯ ಮೌಲ್ಯಗಳನ್ನು? ಕೊಳ್ಳುಬಾಕತನದ ಕಪಿಮುಷ್ಟಿಯಿಂದ ಬಿಡಿಸಿಕೊಳ್ಳಬಲ್ಲೆವೇ? ಬಾಯಾರಿದವರಿಗೆ ನೀರು ಕೊಡಬಲ್ಲೆವೇ? ಹಸಿದವರಿಗೆ ಅನ್ನ ಕೊಡಬಲ್ಲೆವೇ? ಇನ್ನೊಬ್ಬರ ನೀರು, ಅನ್ನವನ್ನು ಕಸಿದುಕೊಳ್ಳದೆ ಬದುಕಬಲ್ಲೆವೇ? ನಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳುವ ಅಸ್ತ್ರ ನಮ್ಮ ಕೈಯಲ್ಲೇ ಇದೆಯಲ್ಲವೇ? ನಾನು, ಮತ್ತೆಂದೂ ನೀರು ಕೊಡದ ಆ ಜಾಯಿಂಟ್‌ಗೆ ಹೋಗುವುದಿಲ್ಲ. ನನ್ನಿಂದಂತೂ ಇಂತಹ ಜಾಯಿಂಟ್‌ಗಳು ಉದ್ಧಾರವಾಗುವುದು ಬೇಡ ಎಂದುಕೊಂಡಿದ್ದೇನೆ.

## ಕೃತಿ ಕರ್ತೃ ಪರಿಚಯ



ಶ್ರೀಮತಿ ನೇಮಿಚಂದ್ರ ಅವರು ಚಿತ್ರದುರ್ಗದಲ್ಲಿ ಜುಲೈ 16, 1959ರಂದು ಜನಿಸಿದರು. ತಂದೆ : ಪ್ರೊಫೆಸರ್ ಜಿ.ಗುಂಡಣ್ಣ; ತಾಯಿ: ತಿಮ್ಮಕ್ಕ. ಪ್ರಾರಂಭಿಕ ಶಿಕ್ಷಣವನ್ನು ತುಮಕೂರು, ಮೈಸೂರಿನಲ್ಲಿ ಪೂರೈಸಿದರು. ಮೈಸೂರಿನ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಎಂಜಿನಿಯರಿಂಗ್‌ನಿಂದ ಬಿ.ಎಸ್ಸಿ., ಪದವಿಯನ್ನೂ; ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಎಂ.ಎಸ್ಸಿ., ಪದವಿಯನ್ನೂ ಗಳಿಸಿದರು. ಇವರ ಪ್ರಮುಖ ಕೃತಿಗಳೆಂದರೆ – 'ಯಾದ್ ವ ಶೇಮ್' ಕಾದಂಬರಿ; ನಮ್ಮ ಕನಸುಗಳಲ್ಲಿ ನೀವಿದ್ದೀರಿ', 'ಮತ್ತೆ ಬರೆದ ಕಥೆಗಳು' 'ನೇಮಿಚಂದ್ರರ ಕಥೆಗಳು' – ಇವು ಇವರ ಕಥಾ ಸಂಕಲನಗಳು. 'ಒಂದು ಕನಸಿನ ಪಯಣ', 'ಪೆರುವಿನ ಪವಿತ್ರ ಕಣಿವೆಯಲ್ಲಿ' ಇವು ಇವರ ಪ್ರವಾಸ ಕಥನಗಳು. ಪೆರುವಿನ ಪವಿತ್ರ ಕಣಿವೆಯಲ್ಲಿ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಸಂದಿವೆ. ಪ್ರಸ್ತುತ 'ನೀರು ಕೊಡದ ನಾಡಿನಲ್ಲಿ' ಅಂಕಣ ಬರಹವನ್ನು ಇವರ 'ಬದುಕು ಬದಲಿಸಬಹುದು' ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಆಶಯ ಭಾವ

ವಿಶ್ವದ ಜಾಗತೀಕರಣದ ಹೊಡೆತಕ್ಕೆ ಸಿಲುಕಿದ ನಮ್ಮ ನಗರಗಳಿಂದು, ಕೊಳ್ಳುಬಾಕತನವನ್ನು ಲಾಭಕೋರತನವನ್ನು ಹುಟ್ಟು ಹಾಕಿ ವಿಶ್ವದ ಮಾರುಕಟ್ಟೆಯಾಗಲು ಹೊರಟಿರುವುದು ಬಲು ಅಪಾಯಕಾರಿ ಎಂಬ ವೈಚಾರಿಕ ಚಿಂತನೆಯನ್ನು ಹಾಗೂ ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಕಾಪಾಡಿಕೊಳ್ಳುವ ಅನಿವಾರ್ಯತೆಯನ್ನು ನೀರು ಕೊಡದ ನಾಡಿನಲ್ಲಿ ಗದ್ಯಭಾಗದಲ್ಲಿ ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ.

## ಪದಗಳ ಅರ್ಥ

ಅಗ್ಗ–ಕಡಿಮೆ ಬೆಲೆ; ಅಲೆ–ಸುತ್ತಾಡು; ಅಸ್ತ್ರ–ಆಯುಧ; ಜನಪ್ರಿಯ–ಪ್ರಸಿದ್ಧ, ಖ್ಯಾತಿ ಪಡೆದ; ಪರಾಕಾಷ್ಠೆ–ಕೊನೆಯ ಗಡಿ, ತುತ್ತತುದಿ; ಪುಕ್ಕಟೆ–ಉಚಿತ; ಬುನಾದಿ–ತಳಹದಿ; ಮಣ–ಹೆಚ್ಚು ತೂಕವಾದ; ಮರುಳು–ಹುಚ್ಚುತನ; ಮಾಲಿಕ–ಯಜಮಾನ, ಒಡೆಯ; ಹರಡು–ಪಸರಿಸು, ಕೆದರು; ಹಿಂಜರಿಕೆ–ಹಿಂದೆ ಸರಿ, ಕೀಳರಿಮೆ ಪಡು; ಹುನ್ನಾರ–ಸಂಚು; ಹೊಕ್ಕು–ಒಳಗೆ ಹೋಗುವುದು.



7th_Kannada_Reader.indd 30 24-06-2019 19:37:41

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಎಲ್ಲೆಲ್ಲಿ ನೀರು ಕೊಡುವ ಸಂಪ್ರದಾಯವಿಲ್ಲ?
2. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ ?
3. ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು?
4. ಭಾರತದಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ?
5. ಸರ್ವರಿಗೂ ವೇದ್ಯವಾಗುವ ಅಂಶಗಳಾವುವು?
6. ಲೇಖಕಿಗೆ ಹೋಟೆಲ್ಲಿನಲ್ಲಿ ನಾಲ್ಕು ಲೋಟ ನೀರು ತಂದಿಟ್ಟಾಗ ಆದ ಅನುಭವವವೇನು?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ವಿದೇಶಗಳಲ್ಲಿ ಬಾಯಾರಿಕೆಗೆ ಧಾರಾಳವಾಗಿ ಏನೇನು ದೊರೆಯುವುವು ?
2. ಗುರುದ್ವಾರಗಳ ಬಳಿ ಸ್ವಯಂಸೇವಕರು ಏನು ಮಾಡುತ್ತಿದ್ದರು ?
3. ಕೋಲಾಗಳ ಆಸೆಯಿಂದ ನಾವು ಏನೆಲ್ಲವನ್ನೂ ತೊರೆಯುತ್ತಿದ್ದೇವೆ ?
4. ನಾಗರಿಕತೆ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು ?
5. ಜನಪ್ರಿಯ ಹೋಟೆಲಿನ ಮಾಲೀಕನಿಗೆ ತಂಪು ಪಾನೀಯ ಕಂಪನಿ ಏನು ಹೇಳಿತು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ದುಡ್ಡಿಲ್ಲದೇ ಕುಡಿಯಬಲ್ಲ ನೀರು ಸಿಗುತ್ತಿದ್ದ ಕಾಲದ ಬಗ್ಗೆ ಲೇಖಕರ ಅಭಿಪ್ರಾಯವೇನು ?
2. ಕಂಪನಿಗಳು ಅಪ್ಪಟ ಅಗತ್ಯದ ವಸ್ತುಗಳನ್ನು 'ಇದಿಲ್ಲದೆ ಬದುಕಿಲ್ಲ' ಎಂಬಂತೆ ಹೇಗೆ ಬಿಂಬಿಸುತ್ತಿವೆ ?

## ಭಾಷಾಭ್ಯಾಸ

**1. ಕೆಳಗಿನ ಪದಗಳ ವಚನ ಬದಲಿಸಿ ಬರೆಯಿರಿ.**

ನಾನು, ಸೇವಕ, ದನಕರುಗಳು, ಪ್ರತಿಯೊಬ್ಬನೂ, ಭಾರತೀಯರು.

**2. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಊರೂರು, ದುಡ್ಡಿಲ್ಲದೆ, ಪ್ರತಿಯೊಬ್ಬರೂ, ನಮ್ಮೆಲ್ಲರ, ಎದುರಿಗೊಂದು.

**3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಹೊರಗೆ, ಅನುಭವ, ವಿದೇಶ, ಶುದ್ಧ, ಆರಂಭ, ಅಸಾಧ್ಯ.

**4. ಕೆಳಗಿನ ಪದಗಳನ್ನು ಉಪಯೋಗಿಸಿಕೊಂಡು ಸ್ವಂತ ವಾಕ್ಯಗಳನ್ನು ರಚಿಸಿ.**

ಸಂಪ್ರದಾಯ, ವೈಭವ, ಅಪರೂಪ, ಅಭ್ಯಾಸ, ಅನುಭವ.

## ಚಟುವಟಿಕೆ

1. ಅನ್ಯ ಭಾಷೆಯ ಪದಗಳನ್ನು ಸಂಗ್ರಹಿಸಿ ಅದರ ಅರ್ಥ ತಿಳಿದುಕೊಳ್ಳಿರಿ.
2. ನೀರಿನ ಅವಶ್ಯಕತೆಯನ್ನು ಕುರಿತು ಪ್ರಬಂಧ ರಚಿಸಿ.



7th_Kannada_Reader.indd 31 24-06-2019 19:37:41

ಉಪಪಠ್ಯ

ಘಟಕ ಎರಡು

# ಮೊಲದ ತ್ಯಾಗ

– ಜನಪದ ಕಥೆ



ಹಿಂದಿನ ಒಂದು ಜನ್ಮದಲ್ಲಿ ಬುದ್ಧನು ಒಂದು ಮೊಲವಾಗಿ ಜನಿಸಿ, ಒಂದು ಕೊಳದ ಬಳಿ ವಾಸವಾಗಿದ್ದನು. ಆ ಕೊಳದ ನೀರು ತಿಳಿಯಾಗಿ, ಪರಿಶುದ್ಧವಾಗಿತ್ತು. ಇಂದ್ರನೀಲ ಮಣಿಯಂತೆ ಥಳಥಳಿಸುತ್ತಿತ್ತು. ಕೊಳದ ಸುತ್ತಲೂ ಕಾಡಿನಲ್ಲಿ ಹುಲ್ಲು ಪಚ್ಚೆಯಂತೆ ಹಸಿರಾಗಿ ಕೋಮಲವಾಗಿ ಬೆಳೆದಿತ್ತು. ಅಲ್ಲಿನ ಗಿಡಗಳಲ್ಲಿ ಹೂಗಳೂ, ಹಣ್ಣುಗಳೂ, ಗೊಂಚಲು ಗೊಂಚಲಾಗಿ ತುಂಬಿಕೊಂಡಿದ್ದವು. ಆ ಅಡವಿಯು ಗಿಡ, ಮರ, ಬಳ್ಳಿ ವನಸ್ಪತಿಗಳಿಂದ ತುಂಬಿ ನೋಟಕ್ಕೆ ಅತಿ ಸುಂದರವಾಗಿತ್ತು. ಅಲ್ಲಿ ಗಾಳಿಯೂ ಹಿತಕರವಾಗಿ ಸುಳಿಯುತ್ತಿತ್ತು. ಆ ಕಾಡಿನ ಸೊಗಸಿಗೆ ಮನಸೋತು ಜನರು ಅಲ್ಲಿಗೆ ಬರುತ್ತಾ ಇದ್ದರು.

ಮೊಲ ಬಹಳ ಬಲಶಾಲಿಯಾಗಿದ್ದರೂ ಸೌಮ್ಯವಾಗಿಯೂ ಸುಂದರವಾಗಿಯೂ ಬುದ್ಧಿಶಾಲಿಯಾಗಿಯೂ ಇತ್ತು. ಅದರ ತೇಜಸ್ಸನ್ನೂ, ಗಾಂಭೀರ್ಯವನ್ನೂ ಬುದ್ಧಿಶಕ್ತಿಯನ್ನೂ ಮೆಚ್ಚಿ, ಕಾಡಿನ ಎಲ್ಲ ಪ್ರಾಣಿಗಳೂ ಸೇರಿ ಅದನ್ನು ತಮ್ಮ ರಾಜನನ್ನಾಗಿ ಮಾಡಿಕೊಂಡವು.

ಆ ವನದ ಪ್ರಾಣಿಗಳಲ್ಲಿ ಒಂದು ಮಂಗ, ಒಂದು ನರಿ, ಒಂದು ನೀರುನಾಯಿ – ಈ ಮೂವರೂ ಮೊಲದ ಜೀವದ ಗೆಳೆಯರಾಗಿದ್ದರು. ಈ ಮೂವರೂ ಗೆಳೆಯರು ಸಂಜೆಯ ಸಮಯದಲ್ಲಿ ತಪ್ಪದೆ ಸೇರುತ್ತಿದ್ದರು. ನಿತ್ಯವೂ ಮಾತನಾಡುತ್ತಾ, ಚರ್ಚೆ ಮಾಡುತ್ತಾ ಕ್ರಮೇಣ ತಮ್ಮಲ್ಲಿದ್ದ ದುರ್ಗುಣಗಳನ್ನು ಬಿಟ್ಟು ಸದ್ಗುಣವಂತರಾದರು. ಆ ವನದ ಎಲ್ಲ ಪ್ರಾಣಿಗಳೊಡನೆ ಸ್ನೇಹವನ್ನು ಸಂಪಾದಿಸಿ ಸೌಮ್ಯದಿಂದ ನಡೆದುಕೊಳ್ಳುತ್ತಿದ್ದವು.

ಒಂದು ದಿನ ಸಾಯಂಕಾಲ ಈ ಮೂವರು ಆಪ್ತ ಮಿತ್ರರೂ ಮಾತಿಗೆ ಕುಳಿತಾಗ ಬಹಳ ಹೊತ್ತಾಯಿತು. ನಿರ್ಮಲವಾದ ಬಾನಿನಲ್ಲಿ



7th_Kannada_Reader.indd 32 24-06-2019 19:37:41

ಪೂರ್ಣ ಚಂದ್ರ ಹೊಳೆಯುತ್ತಿದ್ದ. ಮಧ್ಯರಾತ್ರಿಯ ಸಮಯವಾಗಿರಬಹುದು. ರಾಜನಾದ ಮೊಲ ಇವರನ್ನು ಕಂಡು, 'ಗೆಳೆಯರೇ! ನಾಳೆ ಪವಿತ್ರವಾದ ಹಬ್ಬ. ಆದುದರಿಂದ ನಾಳೆ ಏನನ್ನೂ ತಿನ್ನಬಾರದು. ಉಪವಾಸ ಮಾಡಿ ದೇವರನ್ನು ಧ್ಯಾನಿಸಬೇಕು. ಅಲ್ಲದೆ ನಮಗೆ ಸಿಕ್ಕ ಆಹಾರವನ್ನು ಹಸಿದವರಿಗೆ ದಾನ ಮಾಡಬೇಕು' ಎಂದು ಹೇಳಿತು. ಮೊಲದ ಈ ಮಾತಿಗೆ ಮೆಚ್ಚಿ ಮುವರೂ ಗೆಳೆಯರೂ ಸಮ್ಮತಿಸಿದರು.

ಮರುದಿನ ಮಂಗ ಸಮೀಪದ ಒಂದು ಮಾವಿನ ತೋಪಿಗೆ ಹೋಗಿ ಒಳ್ಳೊಳ್ಳೆಯ ಹಣ್ಣುಗಳನ್ನು ಆರಿಸಿ ತಂದಿತು. ಆ ಹಣ್ಣುಗಳನ್ನು ಒಂದೆಡೆ ಇಟ್ಟುಕೊಂಡು ಯಾರಾದರೂ ಹಸಿದವರು ಬಂದರೆ ಕೊಡಬೇಕೆಂದು ಕಾಯುತ್ತಾ ಕುಳಿತಿತ್ತು. 'ಯಾರೂ ಬರದಿದ್ದರೆ ತನಗೆ ನಾಳೆ ಒಳ್ಳೆಯ ಆಹಾರವಾಗುತ್ತದೆ' ಎಂದು ಯೋಚಿಸಿತು.

ಅದರಂತೆ ನರಿಯೂ ಆಹಾರವನ್ನು ಹುಡುಕುತ್ತಾ ಹೊರಟಿತು. ಒಂದು ಗುಡಿಸಲಿನ ಹೊರಗೆ ಮೊಸರಿನ ಒಂದು ಚಿಕ್ಕ ಪಾತ್ರೆಯನ್ನು ಕಂಡಿತು. ಅದರ ಒಡೆಯರು ಯಾರಾದರೂ ಇರಬಹುದೇ ಎಂದು ಸ್ವಲ್ಪ ಹೊತ್ತು ಅಲ್ಲಿಯೇ ಕಾದು ಕುಳಿತಿತ್ತು. ಯಾರೂ ಬರಲಿಲ್ಲ. ಇದು ಯಾರ ವಸ್ತು ಎಂದು ಗಟ್ಟಿಯಾಗಿ ಮೂರು ನಾಲ್ಕು ಸಲ ಅದು ಕೂಗಿತು. ಯಾರೂ ಬರಲಿಲ್ಲ. ಆಗ ಮೊಸರಿನ ಪಾತ್ರೆಯನ್ನು ಬಾಯಲ್ಲಿ ಕಚ್ಚಿಕೊಂಡು ಹೋಯಿತು. ಅದನ್ನು ಒಂದು ಕಡೆ ಇಟ್ಟು, ಯಾರಾದರೂ ಹಸಿದು ಬಂದವರಿಗೆ ಕೊಡಬೇಕೆಂದು ಕಾದು ಕುಳಿತುಕೊಂಡಿತು. 'ಯಾರೂ ಬರದಿದ್ದರೆ, ನಾಳೆ ನನಗೆ ಒಳ್ಳೆಯ ಊಟವಾಗುತ್ತದೆ' ಎಂದು ಯೋಚಿಸಿತು.

ಇದೇ ರೀತಿ ನೀರುನಾಯಿ ಆಹಾರವನ್ನು ಹುಡುಕುತ್ತಾ ಹೋಯಿತು. ಒಬ್ಬ ಮೀನುಗಾರ, ಮೀನುಗಳನ್ನು ಹಿಡಿದು ರಾಶಿ ಹಾಕುತ್ತಿದ್ದನು. ಅಲ್ಲಿಯೇ ಸ್ವಲ್ಪ ದೂರದಲ್ಲಿ ಮರಳಿನ ಮೇಲೆ ಒಂದು ಮೀನು ಬಿದ್ದಿತ್ತು. 'ಇದರ ಒಡೆಯರು ಯಾರಾದರೂ ಇರಬಹುದೇನೋ' ಎಂದು ಕಾದು ನೋಡಿತು. ಯಾರೂ ಬರಲಿಲ್ಲ. 'ಈ ಮೀನು ಯಾರದು?' ಎಂದು ಅದು ಮೂರು ನಾಲ್ಕು ಸಲ ಗಟ್ಟಿಯಾಗಿ ಕೂಗಿತು. ಯಾರೂ ಬರಲಿಲ್ಲ. ಆಗ ಆ ಮೀನನ್ನು ಕಚ್ಚಿಕೊಂಡು ಬಂದು ಒಂದು ಕಡೆ ಇಟ್ಟಿತು. ಯಾರಾದರೂ ಹಸಿದು ಬಂದು ಕೇಳಿದರೆ ಕೊಡಬೇಕೆಂದು ಕಾದು ಕುಳಿತಿತ್ತು. 'ಯಾರೂ ಬಾರದಿದ್ದರೆ ನಾಳೆ ತನಗೆ ಒಳ್ಳೆಯ ತಿಂಡಿಯಾಗುತ್ತದೆ' ಎಂದು ಅದೂ ಯೋಚಿಸಿತು.

ಮೊಲದ ಆಹಾರ ಹುಲ್ಲು. ಅದು ಬೇಕಾದಷ್ಟು ಬೆಳೆದಿತ್ತು. 'ಮನುಷ್ಯರು ಹುಲ್ಲನ್ನು ತಿನ್ನುವುದಿಲ್ಲ. ಇದನ್ನು ಯಾರಿಗೆ ಕೊಡಲಿ, ಏನು ಮಾಡಲಿ?' ಎಂದು ಮೊಲ ಬಹಳ ಚಿಂತೆಗೆ ಒಳಗಾಯಿತು. ಆಗ ಮನುಷ್ಯರು ಮಾಂಸವನ್ನು ತಿನ್ನುವರೆಂಬ ವಿಷಯ ಅದಕ್ಕೆ ಹೊಳೆಯಿತು, ಆನಂದದಿಂದ ಕುಣಿದಾಡಿತು. 'ಒಬ್ಬನ ಹಸಿವನ್ನು ಹಿಂಗಿಸಲು ತನ್ನ ಮಾಂಸವನ್ನೇ ಕೊಡುತ್ತೇನೆ. ಖಂಡಿತವಾಗಿಯೂ ಕೊಟ್ಟು ಧನ್ಯನಾಗುತ್ತೇನೆ' ಎಂದು ದೃಢ ನಿರ್ಧಾರದಿಂದ ಪ್ರತಿಜ್ಞೆಮಾಡಿತು. ಈ ಪ್ರತಿಜ್ಞೆಯನ್ನು ಕೇಳಿ ಭೂದೇವಿಗೆ ರೋಮಾಂಚನವಾಯಿತು. ಸಮುದ್ರ ಅಲ್ಲೋಲಕಲ್ಲೋಲವಾಯಿತು. ಆಕಾಶ ನಿರ್ಮಲ ನೀಲವರ್ಣದಿಂದ ಬೆಕ್ಕಸ ಬೆರಗಾಯಿತು. ಆಕಾಶದಿಂದ ಹೂಮಳೆ ಸುರಿಯಿತು. ಗಾಳಿಯು ಸುಳಿಸುಳಿದು ನರ್ತಿಸುತ್ತಾ, ಪುಷ್ಪಪರಾಗವನ್ನು ತಂದು ಸುರಿದು ಸನ್ಮಾನಿಸಿತು.

ಈ ಪ್ರತಿಜ್ಞೆಯನ್ನು ಪರೀಕ್ಷಿಸಬೇಕೆಂದು ದೇವೇಂದ್ರನು ಮನಸ್ಸು ಮಾಡಿದನು. ಬಡ ಹಾದಿಕಾರನ ವೇಷದಿಂದ ಮಧ್ಯಾಹ್ನ ಆ ವನಕ್ಕೆ ಬಂದನು. 'ನನ್ನ ಗುಂಪಿನ ಗೆಳೆಯರನ್ನು ಅಗಲಿ, ದಾರಿ ತಪ್ಪಿ ಬಂದಿದ್ದೇನೆ. ನನಗೆ ಬಹಳ ಹಸಿವಾಗಿದೆ...' ಎಂದು ಕೂಗುತ್ತಾ ಮಂಗನ ಬಳಿಗೆ ಬಂದನು. ಮಂಗ ತನ್ನಲ್ಲಿದ್ದ ಹಣ್ಣುಗಳನ್ನು ಕೊಡಲು ಹೋಯಿತು. ಆಗ ವೇಷಧಾರಿಯಾದ ಶಕ್ರನು 'ಸ್ವಲ್ಪ ತಾಳು, ಬರುತ್ತೇನೆ' ಎಂದು ಮುಂದೆ ಹೋದನು. ನರಿಯ ಬಳಿಗೆ ಹೋಗಿ, 'ಹಸಿವು ಹೆಚ್ಚಾಗಿದೆ. ಆಹಾರ ನೀಡಿ' ಎಂದು ಕೂಗಿದನು. ನರಿಯು ತನ್ನಲ್ಲಿದ್ದ ಆಹಾರವನ್ನು ಕೊಡಲು ಹೋಯಿತು. ಹುಸಿ ವೇಷದ ಇಂದ್ರನು, 'ಬರುತ್ತೇನೆ, ಸ್ವಲ್ಪ ತಾಳು' ಎಂದು ಹೇಳಿ, 'ನೀರು ನಾಯಿಯ ಹತ್ತಿರ ಬಂದು, 'ಹಸಿವನ್ನು ತಾಳಲಾರೆ. ಏನಾದರೂ ದಾನ ಮಾಡಿರಯ್ಯಾ!' ಎಂದು ಕೂಗಿದನು. ನೀರು ನಾಯಿಯು ತನ್ನ ಬಳಿ ಇದ್ದ ಮೀನನ್ನು ಕೊಡಲು ಹೋಯಿತು. ಇಂದ್ರನು, 'ಸ್ವಲ್ಪ ತಾಳು, ಬರುತ್ತೇನೆ' ಎಂದು ಹೇಳಿ, ಮೊಲದ ಸಮೀಪಕ್ಕೆ ಹೋದನು. 'ಅಯ್ಯೋ! ನನಗೆ ತಾಳಲಾರದ ಹಸಿವು.



7th_Kannada_Reader.indd 33 24-06-2019 19:37:42

ಇಲ್ಲಿ ನನ್ನ ಹಸಿವನ್ನು ಇಂಗಿಸುವವರು ಯಾರೂ ಇಲ್ಲವೇ?' ಎಂದು ಕೂಗಿದನು. ಮೊಲ ಬಂದು 'ನನ್ನ ಮಾಂಸವನ್ನು ತಿಂದು ತೃಪ್ತಿ ಪಡು' ಎಂದಿತು. ಅದಕ್ಕೆ ಇಂದ್ರನು, 'ಅಯ್ಯಾ! ಪ್ರಾಣವನ್ನೇ ಕೊಡಲು ಹಿಂಜರಿಯದೆ ದಯೆ ತೋರಿದ ನಿನ್ನನ್ನು ಹೇಗೆ ಕೊಲ್ಲಲಿ? ಖಂಡಿತಾ ಸಾಧ್ಯವಿಲ್ಲ' ಎಂದನು. ಮೊಲಕ್ಕೆ ವ್ಯಥೆಯಾಯಿತು. ಒಬ್ಬರ ಹಸಿವನ್ನು ಹಿಂಗಿಸುವುದು ತನ್ನಿಂದ ಆಗಲಿಲ್ಲವಲ್ಲ ಎಂಬ ದುಃಖದಿಂದ ಸಂಕಟಪಡುತ್ತಿತ್ತು.

ಸ್ವಲ್ಪ ದೂರದಲ್ಲಿ ಇಂದ್ರನ ಮಾಯೆಯಿಂದ ಬೆಂಕಿ ಹತ್ತಿಕೊಂಡಿತು. ಬಂಗಾರದ ಕಿರಣದಂತೆ ಉರಿಗಳು ಮೇಲೇಳುತ್ತಿದ್ದವು. ಅದನ್ನು ಕಂಡ ಮೊಲ ಹರ್ಷದಿಂದ ಅಗ್ನಿಯ ಬಳಿಗೆ ಓಡೋಡಿ ಹೋಯಿತು. ತನ್ನ ಮೈಮೇಲೆ ಸಣ್ಣಪುಟ್ಟ ಕ್ರಿಮಿಕೀಟಗಳಿದ್ದರೆ ಬೆಂಕಿಯಿಂದ ಅವು ಸಾಯಬಾರದೆಂದು ಮೈಯನ್ನು ಎರಡು ಮೂರು ಬಾರಿ ಚೆನ್ನಾಗಿ ಕೊಡವಿತು. ರಭಸದಿಂದ ನುಗ್ಗಿ ಬೆಂಕಿಯಲ್ಲಿ ಬಿದ್ದಿತು. ಆದರೆ ಮೊಲ ಸುಟ್ಟಿತೇ? ಇಲ್ಲ. ಅಗ್ನಿದೇವನು ಹೂವಿನ ರಾಶಿಯಂತೆ ತಂಪಾಗಿ ಅದರ ಪ್ರಯಾಸವನ್ನು ನಿವಾರಿಸಿದನು.

ಇಂದ್ರನು ತನ್ನ ಕೈಗಳಿಂದ ಹೂವನ್ನೆತ್ತುವಂತೆ ಮೃದುವಾಗಿ ಮೊಲವನ್ನೆತ್ತಿಕೊಂಡು ಸ್ವರ್ಗಕ್ಕೆ ಹೋದನು. ದೇವ ಸಭೆಯಲ್ಲಿ ಅದರ ತ್ಯಾಗವನ್ನು ಬಾಯ್ತುಂಬಾ ಹೊಗಳಿದನು. ಅದರ ವಿಗ್ರಹಗಳನ್ನು ರತ್ನದಲ್ಲಿ ಕೆತ್ತಿಸಿ, ಅವುಗಳಲ್ಲಿ ಒಂದನ್ನು ತನ್ನ ಅರಮನೆಯ ಮೇಲೆ ಸ್ಥಾಪಿಸಿ ಅದಕ್ಕೆ 'ವೈಗ್ರವಂತ' ಎಂದು ಹೆಸರಿಟ್ಟನು. ದೇವಸಭಾ ಭವನದಲ್ಲಿ ಇನ್ನೊಂದನ್ನು ಸ್ಥಾಪಿಸಿ ಅದಕ್ಕೆ 'ಸುಧರ್ಮ' ಎಂದು ಹೆಸರಿಟ್ಟನು. ಅಮೃತ ಕಿರಣನಾದ ಚಂದ್ರನಲ್ಲಿ ಮತ್ತೊಂದು ವಿಗ್ರಹವನ್ನು ಸ್ಥಾಪಿಸಿದನು. ಹೀಗೆ ಅದರ ಕೀರ್ತಿಯು ಶಾಶ್ವತವಾಗಿರುವಂತೆ ಮಾಡಿದನು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಮೊಲ ವಾಸವಾಗಿದ್ದ ಕಾಡು ಹೇಗಿತ್ತು?
2. ಮೊಲದ ಗೆಳೆಯರು ಯಾರು ಯಾರು?
3. ಮೊಲವು ಗೆಳೆಯರಿಗೆ ಹಬ್ಬವನ್ನು ಹೇಗೆ ಆಚರಿಸಬೇಕೆಂದು ಹೇಳಿತು?
4. ಮಂಗವು ಏನನ್ನು ತಂದಿಟ್ಟುಕೊಂಡು ಕಾಯುತ್ತಿತ್ತು?
5. ನರಿಯು ಏನನ್ನು ತಂದಿಟ್ಟುಕೊಂಡು ಕಾಯುತ್ತಿತ್ತು?
6. ನೀರು ನಾಯಿಯು ಏನನ್ನು ತಂದಿಟ್ಟುಕೊಂಡು ಕಾಯುತ್ತಿತ್ತು?
7. ಅಗ್ನಿಯು ಹೇಗೆ ಪ್ರತ್ಯಕ್ಷವಾಯಿತು?
8. ಅಗ್ನಿದೇವನು ಏನು ಮಾಡಿದನು?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಮೊಲವು ಕಾಡಿನ ರಾಜನಾದದ್ದು ಹೇಗೆ?
2. ಮೊಲವು ಏನೆಂದು ಪ್ರತಿಜ್ಞೆ ಮಾಡಿತು? ಏಕೆ?
3. ಮಂಗವು ಹೇಗೆ ಆಹಾರವನ್ನು ಸಂಪಾದಿಸಿತು? ಅದನ್ನು ಏನು ಮಾಡಿತು?
4. ನರಿಯು ಹೇಗೆ ಆಹಾರವನ್ನು ಸಂಪಾದಿಸಿತು? ಅದನ್ನು ಏನು ಮಾಡಿತು?
5. ನೀರು ನಾಯಿಯು ಹೇಗೆ ಆಹಾರವನ್ನು ಸಂಪಾದಿಸಿತು? ಅದನ್ನು ಏನು ಮಾಡಿತು?
6. ಮೊಲಕ್ಕೆ ಏಕೆ ದುಃಖವಾಯಿತು?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**


1. ಮಾರು ವೇಷ ಧರಿಸಿದ ಇಂದ್ರನು ಮೊಲದ ಗೆಳೆಯರ ಬಳಿ ಏನು ಕೇಳಿದನು? ಅದಕ್ಕೆ ಅವು ಏನು ಮಾಡಿದವು?
2. ಮೊಲದ ಪ್ರತಿಜ್ಞೆಯನ್ನು ಯಾರು ಪರೀಕ್ಷಿಸಿದರು? ಹೇಗೆ?
3. ಇಂದ್ರನು ಮೊಲವನ್ನು ಎಲ್ಲಿಗೆ ಕರೆದುಕೊಂಡು ಹೋದನು? ಅಲ್ಲಿ ಏನು ನಡೆಯಿತು?



7th_Kannada_Reader.indd 34 24-06-2019 19:37:42

# ಘಟಕ ಎರಡು

# ವರ್ಗೀಯ ವ್ಯಂಜನಗಳು




| ವರ್ಗ | ಅಲ್ಪಪ್ರಾಣ | ಮಹಾಪ್ರಾಣ | ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ | ಒಟ್ಟು ವರ್ಗೀಯ ವ್ಯಂಜನಗಳು |
|---|---|---|---|---|---|---|
| ಕ ವರ್ಗ | ಕ್ | ಖ್ | ಗ್ | ಘ್ | ಙ್ | 5 |
| ಚ ವರ್ಗ | ಚ್ | ಛ್ | ಜ್ | ಝ್ | ಞ್ | 5 |
| ಟ ವರ್ಗ | ಟ್ | ಠ್ | ಡ್ | ಢ್ | ಣ್ | 5 |
| ತ ವರ್ಗ | ತ್ | ಥ್ | ದ್ | ಧ್ | ನ್ | 5 |
| ಪ ವರ್ಗ | ಪ್ | ಫ್ | ಬ್ | ಭ್ | ಮ್ | 5 |
| | 5 | 5 | 5 | 5 | 5 | 25 |

**ವರ್ಗೀಯ ವ್ಯಂಜನಗಳು – 25**

ವರ್ಗೀಯ ವ್ಯಂಜನಗಳಲ್ಲಿ ಅಲ್ಪಪ್ರಾಣ, ಮಹಾಪ್ರಾಣ, ಅನುನಾಸಿಕ ಎಂದು ಮೂರು ವಿಧದ ವರ್ಣಗಳಿವೆ.

**ಅಲ್ಪ ಪ್ರಾಣಾಕ್ಷರಗಳು – 10**

ಕಡಿಮೆ ಕಾಲಾವಧಿಯಲ್ಲಿ ಉಚ್ಚಾರವಾಗುವ ವ್ಯಂಜನಗಳನ್ನು ಅಲ್ಪಪ್ರಾಣಾಕ್ಷರಗಳು ಎಂದು ಕರೆಯಲಾಗುವುದು. ವರ್ಗದ ಮೊದಲ ಹಾಗೂ ಮೂರನೆಯ ಅಕ್ಷರಗಳು ಅಲ್ಪಪ್ರಾಣಾಕ್ಷರಗಳು.

ಅವು, ಕ್ ಗ್ ಚ್ ಜ್ ಟ್ ಡ್ ತ್ ದ್ ಪ್ ಬ್

**ಮಹಾಪ್ರಾಣಾಕ್ಷರಗಳು – 10**

ಹೆಚ್ಚು ಉಸಿರಿನಿಂದ ಉಚ್ಚಾರವಾಗುವ ವ್ಯಂಜನಗಳನ್ನು ಮಹಾಪ್ರಾಣಾಕ್ಷರಗಳು ಎಂದು ಕರೆಯುತ್ತಾರೆ. ಎರಡು ಮತ್ತು ನಾಲ್ಕನೇ ವರ್ಗದ ಅಕ್ಷರಗಳು ಮಹಾಪ್ರಾಣಾಕ್ಷರಗಳು.

ಅವು, ಖ್ ಫ್ ಛ್ ಝ್ ಠ್ ಢ್ ಥ್ ಧ್ ಫ್ ಭ್



7th_Kannada_Reader.indd 35 24-06-2019 19:37:42

**ಅನುನಾಸಿಕ ಅಕ್ಷರಗಳು –5**

ಮೂಗಿನ ಸಹಾಯದಿಂದ ಉಚ್ಚಾರವಾಗುವ ವ್ಯಂಜನಗಳನ್ನು ಅನುನಾಸಿಕ ಅಕ್ಷರಗಳು ಎಂದು ಕರೆಯುತ್ತಾರೆ. ವರ್ಗದ ಕಡೆಯ ಅಕ್ಷರಗಳು ಅನುನಾಸಿಕಾಕ್ಷರಗಳು.

ಅವು, ಙ್ ಞ್ ಣ್ ನ್ ಮ್

**ಅವರ್ಗೀಯ ವ್ಯಂಜನಗಳು – 9**

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

**ಸೂಚನೆ :** ವರ್ಗೀಯ ವ್ಯಂಜನದ ವರ್ಗದ ಪ್ರಥಮ ಅಕ್ಷರಗಳಾದ ಕ್ ಚ್ ಟ್ ತ್ ಪ್ ಗಳನ್ನು **ಅಘೋಷಗಳೆಂದು** ಕರೆಯಲಾಗುವುದು.

ವರ್ಗದ ತೃತೀಯ ಅಕ್ಷರಗಳಾದ ಗ್ ಜ್ ಡ್ ದ್ ಬ್ ಗಳನ್ನು **ಘೋಷ ಧ್ವನಿಮಾಗಳೆಂದು** ಕರೆಯಲಾಗುವುದು.

## ಗುಣಿತಾಕ್ಷರಗಳು

ವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳನ್ನು ಗುಣಿತಾಕ್ಷರಗಳು ಎನ್ನುವರು. ಉದಾಹರಣೆಗೆ, ಕ್+ಅ=ಕ, ಕ್+ಒ=ಕೊ, ಕ್+ೈ=ಕೈ = ಮುಂತಾದವು.

| ವ್ಯಂಜನಗಳು | ಸ್ವರಗಳು | ಸ್ವರ ಚಿಹ್ನೆಗಳು | ಸ್ವರ ಚಿಹ್ನೆಗಳ ಹೆಸರುಗಳು | ಕ್ ಕಾರದ ಕಾಗುಣಿತದ ರೂಪಗಳು (ಸ್ವರ ಚಿಹ್ನೆ ಸೇರಿದ ಬಳಿಕ ತಾಳಿದ ರೂಪ) |
|---|---|---|---|---|
| ಕ್ | ಅ | ◌ | ತಲಕಟ್ಟು | ಕ |
| ಕ್ | ಆ | ◌ಾ | ಇಳಿ(ದೀರ್ಘ) | ಕಾ |
| ಕ್ | ಇ | ◌ಿ | ಗುಡಿಸು(ಇತ್ವ) | ಕಿ |
| ಕ್ | ಈ | ◌ೀ | ಗುಡಿಸು ಇಳಿ (ಈತ್ವ) | ಕೀ |
| ಕ್ | ಉ | ◌ು | ಕೊಂಬು (ಉತ್ವ) | ಕು |
| ಕ್ | ಊ | ◌ೂ | ಕೊಂಬು ಇಳಿ(ಊತ್ವ) | ಕೂ |
| ಕ್ | ೞ | ◌ೃ | ವಟ್ಟರ ಸುಳಿ (ೞತ್ವ) | ಕೃ |
| ಕ್ | ಎ | ◌ೆ | ಎತ್ವ | ಕೆ |
| ಕ್ | ಏ | ◌ೇ | ಏತ್ವ | ಕೇ |
| ಕ್ | ಐ | ◌ೈ | ಐತ್ವ | ಕೈ |
| ಕ್ | ಒ | ◌ೊ | ಒತ್ವ | ಕೊ |
| ಕ್ | ಓ | ◌ೋ | ಓತ್ವ | ಕೋ |
| ಕ್ | ಔ | ◌ೌ | ಔತ್ವ | ಕೌ |

**ಕಂ ಎಂಬುದು ಅನುಸ್ವಾರವನ್ನೂ, ಕಃ ಎಂಬುದು ವಿಸರ್ಗವನ್ನೂ ಸೂಚಿಸುತ್ತದೆ.**



7th_Kannada_Reader.indd 36 24-06-2019 19:37:42

## ಸಂಯುಕ್ತಾಕ್ಷರಗಳು

ವ್ಯಂಜನಕ್ಕೆ ವ್ಯಂಜನ ದ್ವಿತ್ವವಾಗಿ ಸೇರಿಕೊಂಡು (ಸ್ವರದ ಸಹಾಯದಿಂದ) ಉಂಟಾಗುವ ಅಕ್ಷರವನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಅಥವಾ ದ್ವಿತ್ವಾಕ್ಷರವೆಂದು ಕರೆಯುವರು.

ಸಂಯುಕ್ತಾಕ್ಷರಗಳಲ್ಲಿ ಎರಡು ವಿಧಗಳಿವೆ.

1. ಸಜಾತೀಯ ಸಂಯುಕ್ತಾಕ್ಷರ
2. ವಿಜಾತೀಯ ಸಂಯುಕ್ತಾಕ್ಷರ

**ಸಜಾತೀಯ ಸಂಯುಕ್ತಾಕ್ಷರಗಳು**

ಒಂದೇ ಜಾತಿಯ ಎರಡು ವ್ಯಂಜನಗಳು ಸ್ವರದ ಸಹಾಯದಿಂದ ಒಂದಕ್ಕೊಂದು ಸೇರಿದರೆ ಸಜಾತೀಯ ಸಂಯುಕ್ತಾಕ್ಷರಗಳಾಗುವುವು.

**ವಿಜಾತೀಯ ಸಂಯುಕ್ತಾಕ್ಷರಗಳು**

ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಒಂದಕ್ಕೊಂದು ಕೂಡಿಕೊಂಡು ಉಂಟಾಗುವ ಅಕ್ಷರಗಳು ವಿಜಾತೀಯ ಸಂಯುಕ್ತಾಕ್ಷರ ಎನ್ನಿಸುವುದು. ಉದಾಹರಣೆಗೆ,

ವ್+ಯ್+ಅ=ವ್ಯ

ಸ್+ವ್+ಅ=ಸ್ವ

ಕ್+ರ್+ಅ=ಕ್ರ

ರ್+ಕ್+ತ್+ಅ=ರಕ್ತ

ಕ್+ಆ+ವ್+ಯ್+ಅ=ಕಾವ್ಯ

ಅ+ಸ್+ತ್+ರ್+ಅ=ಅಸ್ತ್ರ

ಚ್+ಅ+ಕ್+ರ್+ಅ=ಚಕ್ರ

ರ್+ಆ+ಷ್+ಟ್+ರ್+ಅ=ರಾಷ್ಟ್ರ.

## ಭಾಷಾ ಪ್ರೌಢಿಮೆ

**ಕೇಳಿ ನೋಡಿ ಅರಿತು ಆನಂದಿಸಿ**

1. ನಿಸರ್ಗಕ್ಕೆ ಸಂಬಂಧಿಸಿದ ಕಥೆ ಹಾಡು ಸಂಭಾಷಣೆಗಳನ್ನು ಕೇಳಿ ಸಂತೋಷ ಪಡಿ.
2. ಹಕ್ಕಿಗಳು ಪ್ರಾಣಿಗಳ ಜೀವನ ಕ್ರಮವನ್ನು ಕುರಿತು ದೂರದರ್ಶನದಲ್ಲಿ ನೋಡಿ ಆನಂದಿಸಿ.

**ಶಿಕ್ಷಕರಿಂದ ಅರ್ಥ ಕೇಳಿ ಬರೆಯಿರಿ.**

ಸಂಶೋಧಕ, ವೈಭವ, ಚೆಲುವ, ಕನ್ನಡ ನುಡಿ, ವೈಜ್ಞಾನಿಕ,
ಪ್ರಭೇದ, ಕಾಣಿಕೆ, ಮಹರ್ಷಿ, ನೈಸರ್ಗಿಕ, ಋತುಮಾನ,



7th_Kannada_Reader.indd 37 24-06-2019 19:37:42

ಘಟಕ ಮೂರು

# 3. ದೇಶಪ್ರೇಮ



## ಕಲಿಕಾ ಉದ್ದೇಶಗಳು

- ಭಾರತದ ಹಿರಿಮೆ ಗರಿಮೆಗಳನ್ನು ಕಲಿಯುವುದು.
- ಸರಳ ಜೀವನದ ಘನತೆಯನ್ನು ತಿಳಿಯುವುದು.
- ಸಮಾಜ ಬದಲಾವಣೆಯಲ್ಲಿ ಸುಭಾಷ್ ಚಂದ್ರ ಬೋಸ್‌ರ ಪಾತ್ರವನ್ನು ತಿಳಿಯುವುದು.
- ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಡಗು ನಡೆಸಿದ ದೇಶಪ್ರೇಮಿ ಪಾತ್ರವನ್ನು ತಿಳಿದುಕೊಳ್ಳುವುದು.



7th_Kannada_Reader.indd 38 24-06-2019 19:37:42

ಘಟಕ
ಮೂರು

# 3. ದೇಶಪ್ರೇಮ



| | | |
|---|---|---|
| ಕಾವ್ಯ ಕಣಜ : | ಮಾತೃಭೂಮಿ | – ಅರವಿಂದ ಮಾಲಗತ್ತಿ |
| ಪೂರಕ ಪದ್ಯ : | ಒಂದಾಗಿರಿ – ಮುಂದಾಗಿರಿ | – ಟಿ.ಸಿ.ಪೂರ್ಣಿಮಾ |
| ಗದ್ಯ ವಿಹಾರ : | ಸುಭಾಷ್ ಚಂದ್ರ ಬೋಸ್ | – ಪ್ರೊ.ಕೆ.ಭೈರಪ್ಪ |
| ಉಪಪಠ್ಯ : | ಹಡಗು ನಡೆಸಿದ ದೇಶಪ್ರೇಮಿ | – ರಾ.ವಿ.ಸೇತು (ಅನು : ಕೆ.ಅಂತೋನಿಮುತ್ತು) |
| ವ್ಯಾಕರಣ : | ಅಕ್ಷರಗಳ ಉತ್ಪತ್ತಿ ಸ್ಥಾನಗಳು | |



7th_Kannada_Reader.indd 39 24-06-2019 19:37:42

ಕಾವ್ಯ ಕಣಜ

ಘಟಕ ಮೂರು

# ಮಾತೃಭೂಮಿ

– ಅರವಿಂದ ಮಾಲಗತ್ತಿ

## ಪ್ರವೇಶ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ ಮತ್ತು ದಲಿತ ಸಾಹಿತ್ಯ ಎಂಬ ವಿವಿಧ ಮಜಲುಗಳಿವೆ. ಅಧ್ಯಯನದ ದೃಷ್ಟಿಯಿಂದ ಈ ಕ್ರಮವಿರುವುದಾದರೂ ಸೃಜನಶೀಲ ಕವಿಯೊಬ್ಬ ತನ್ನ ಅನುಭವ, ಕಲ್ಪನೆಗೆ ದನಿ ಕೊಡುವ ಕಾಯಕದಲ್ಲಿ ತೊಡಗುವುದು ಸಹಜ ಪ್ರಕ್ರಿಯೆ.

ಪ್ರತಿಯೊಬ್ಬ ಸಾಹಿತಿಯೂ ತನ್ನ ದೇಶ, ಭಾಷೆಯ ಬಗ್ಗೆ ನೈಜ ಸ್ಪಂದನವನ್ನು ಹೊಂದಿರುತ್ತಾನೆ. ಅದು ಅನಿವಾರ್ಯ ಕೂಡ. ತನ್ನ ಹಾಗೂ ಸಮಾಜದ ನೋವು ನಲಿವನ್ನು ದಾಖಲಿಸುತ್ತಲೇ ನಾಡು ನುಡಿಯ ಮಹತ್ವವನ್ನು ಬಿಂಬಿಸಿರುವುದು ಕಂಡು ಬರುತ್ತದೆ. ಸಾಂದರ್ಭಿಕ ಚಿಂತನೆಯ ನೆಲೆಯಿಂದ ಹೊಸ ಹುಡುಕಾಟದತ್ತ ಸಾಗುವ ಈ ಕವಿತೆ ಪ್ರಸ್ತುತ ಪರಿಸ್ಥಿತಿಯನ್ನು ಅವಲೋಕಿಸುವಂತೆ ಮಾಡಿದೆ. ಬಂಡಾಯ–ದಲಿತ ಚೌಕಟ್ಟನ್ನು ಮೀರಿ ಭಾವಗೀತ ರೂಪವನ್ನು ಈ ಕವಿತೆ ಪಡೆದಿರುವುದು ವಿಶೇಷ. ಅಲ್ಲದೆ, ದೇಶಾಭಿಮಾನವನ್ನು ಉಕ್ಕಿಸುವ ಧ್ವನಿಪೂರ್ಣ ಹಾಡಾಗಿ ಹೊಮ್ಮಿರುವುದು ಗಮನಾರ್ಹ.





7th_Kannada_Reader.indd 40 24-06-2019 19:37:42

ಭಾರತ ದೇವಿಯ ಭವ್ಯ ಕೀರುತಿ
ಕರ್ನಾಟ ದೇವಿಯ ದಿವ್ಯ ಆರತಿ ‖ಪಲ್ಲವಿ‖

ಭಾರತ ಮಾತೆಗೆ ಜಯವಾಗಲಿ – ಜಯವಾಗಲಿ
ಕರ್ನಾಟ ಮಾತೆಗೆ ಜಯವಾಗಲಿ – ಜಯವಾಗಲಿ
ಜಯವಾಗಲಿ ಜಯವಾಗಲಿ ‖ಅನುಪಲ್ಲವಿ‖

ಗಂಧ ಕುಸುಮಗಳ ಹಿಮಾಚಲ
ರಾಗ ನಾದ ಕುಂಕುಮ ಸ್ವರಾಚಲ
ಮಾವು ಬೇವು ಫಲ ಬಲಾಬಲ
ಹಕ್ಕಿ ಸಂಕುಲದ ಜೀವ ಜಾಲ ‖1‖

ಮಹಾಭಾರತದ ಸಿಂಹ ಘರ್ಜನೆ
ರಾಮಾಯಣದ ಸಾತ್ವಿಕ ಕೋಕಿಲ
ಕಲ್ಲು ಕಲ್ಲು ಕಥೆ ಬಹು ಇತಿಹಾಸದ ನುಡಿ
ಗಂಗೆ ತುಂಗೆಯರು ತೊಳೆದ ಪಾದ ಮುಡಿ ‖2‖

ಮುಡಿಕಟ್ಟಿ ನಿಂತು ಉಡಿ ತುಂಬಿ ಬಂತು
ಏಕ ಜೀವಶ್ರುತಿ ವೈವಿಧ್ಯ ಸಂಸ್ಕೃತಿ
ಪ್ರಜಾಮಾತೆ ನೀ ವಿಶ್ವಬಂಧು ನೀ
ವೇದ ಕುರಾನ ಬೈಬಲ್ ಸಿಂಧು ನೀ ‖3‖

ಜನ್ಮ ಭೂಮಿಯ ಮೀರಿದ ಸ್ವರ್ಗವೇ ಇಲ್ಲ
ಮಾತೃ ಭಾಷೆಯ ಮೀರಿದ ಅಮೃತವಿಲ್ಲ
ಕರುಳ ಬಳ್ಳಿಯ ಬಂಧವೆ ಎಲ್ಲ
ರಕ್ತ ಮೀರಿದಾ ಸಂಬಂಧವೇ ಎಲ್ಲ ‖4‖



7th_Kannada_Reader.indd 41 24-06-2019 19:37:42

## ಕವಿ–ಕಾವ್ಯ ಪರಿಚಯ



ಅರವಿಂದ ಮಾಲಗತ್ತಿ (1956) ಅವರು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳದವರು. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ., ಹಾಗೂ ಪಿಎಚ್.ಡಿ., ಪದವೀಧರರಾದ ಇವರು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಸಂಶೋಧನಾತ್ಮಕ ಸಾಹಿತ್ಯ ರಚನೆಯಿಂದ ಪ್ರಸಿದ್ಧರಾಗಿರುವ ಅವರು ವೈಚಾರಿಕ ನೆಲೆಗಟ್ಟಿನಲ್ಲಿ ಶೋಷಣೆಯ ವಿರುದ್ಧ ತೀಕ್ಷ್ಣವಾಗಿ ಬರೆಯುವ ಜವಾಬ್ದಾರಿಯುತ ಜನಪ್ರಿಯ ಸಾಹಿತಿ. ಕಪ್ಪು ಕಾವ್ಯ, ಮೂರನೇ ಕಣ್ಣು, ನಾದ–ನಿನಾದ, ಸಿಲಿಕಾನ್ ಸಿಟಿ ಮತ್ತು ಕೋಗಿಲೆ, ಮೂಕನಿಗೆ ಬಾಯಿ ಬಂದಾಗ, ಚಂಡಾಲ ಸ್ವರ್ಗಾರೋಹಣ ಮೊದಲಾದ ಸಂಕಲನಗಳನ್ನು, ಕಾರ್ಯ ಕಾದಂಬರಿ, ಮುಗಿಯದ ಕತೆಗಳು ಕಥಾಸಂಕಲನಗಳನ್ನು; ಗೌರ್ಮೆಂಟ್ ಬ್ರಾಹ್ಮಣ–ಆತ್ಮಕಥನ, ಜಾನಪದ ಶೋಧ, ಭೂತಾರಾಧನೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ಚಿಂತನೆ, ದಲಿತ ಸಾಹಿತ್ಯ ಚಳವಳಿಯ ತಾತ್ವಿಕ ಚಿಂತನೆ, ದಲಿತ ಪ್ರಜ್ಞೆ, ಸಾಹಿತ್ಯ ಸಮಾಜ ಮತ್ತು ಸಂಸ್ಕೃತಿ – ಎಂಬಿತ್ಯಾದಿ ಸಂಶೋಧನಾತ್ಮಕ ವಿಮರ್ಶೆಗಳನ್ನು ಬರೆದಿದ್ದಾರೆ.

'ಮೂಕನಿಗೆ ಬಾಯಿ ಬಂದಾಗ' ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಪ್ರಶಸ್ತಿ, ಕಪ್ಪು ಕಾವ್ಯ ಕೃತಿಗೆ ನರಸಿಂಹಯ್ಯ ಪುರಸ್ಕಾರ; 'ಗೌರ್ಮೆಂಟ್ ಬ್ರಾಹ್ಮಣ' ಆತ್ಮಕಥನ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಸಮಗ್ರ ಸಾಹಿತ್ಯಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಲಭಿಸಿದೆ.

ಪ್ರಕೃತ 'ಮಾತೃಭೂಮಿ' ಕವಿತೆಯನ್ನು ಅರವಿಂದ ಮಾಲಗತ್ತಿಯವರ ನಾದ–ನಿನಾದ ಎನ್ನುವ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## ಕವನದ ಆಶಯ

ಭಾರತ ಮಾತೆಯ ವೈಭವ ವೈಶಿಷ್ಟ್ಯವನ್ನು ಕವಿ ಅತ್ಯಂತ ಮನೋಜ್ಞವಾಗಿ ವರ್ಣಿಸಿದ್ದಾರೆ. ಭಾರತದ ಸಂಸ್ಕೃತಿ, ಭೌಗೋಳಿಕ ಹಿನ್ನೆಲೆ, ವೈವಿಧ್ಯತೆಯಲ್ಲಿರುವ ಏಕತೆಯ ತತ್ವ ಸೂಚ್ಯವಾಗಿ ಬಿಂಬಿತವಾಗಿದೆ. ಜನ್ಮಭೂಮಿ ಹಾಗೂ ಭಾಷೆಯ ಮೌಲಿಕತೆಯನ್ನು ಸಮೀಕರಿಸಿರುವ ಕವಿ ಅದಕ್ಕಿಂತ ಮಿಗಿಲಾದುದು ಇಲ್ಲವೆಂಬ ಆಶಯವನ್ನು ಮಾತೃಭೂಮಿ ಕವಿತೆಯಲ್ಲಿ ಪರಿಭಾವಿಸಿದ್ದಾರೆ.

## ಪದಗಳ ಅರ್ಥ

ಭವ್ಯ–ಶುಭಕರ; ಕೀರುತಿ–ಕೀರ್ತಿ; ದಿವ್ಯ–ಶ್ರೇಷ್ಠ, ಕುಸುಮ–ಹೂ, ಸಂಕುಲ–ಸಮೂಹ, ಗುಂಪು; ಸಾತ್ವಿಕ–ಸತ್ವಗುಣದಿಂದ ಕೂಡಿದ; ಮುಡಿ–ತಲೆ; ಉಡಿ–ಮಡಿಲು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕವಿ ಭವ್ಯ ಕೀರುತಿ ಯಾವುದು ಎಂದಿದ್ದಾರೆ?
2. ಹಿಮಾಚಲ ಯಾವುದರಿಂದ ಕೂಡಿದೆ?
3. ಯಾವ ಸ್ವರ ಅಚಲವಾದುದು?
4. ಭಾರತೀಯ ಮಹಾಕಾವ್ಯಗಳಾವುವು?
5. ಏನನ್ನು ಮೀರಿದ ಸ್ವರ್ಗವೇ ಇಲ್ಲ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಪ್ರಜಾಮಾತೆಯ ವೈಶಿಷ್ಟ್ಯವೇನು ?
2. ರಕ್ತ ಮೀರಿದ ಸಂಬಂಧದ ಹಿನ್ನೆಲೆ ಯಾವುದು?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ**

1. ಮಾತೃಭೂಮಿ ಕವಿತೆಯ ಸಾರಾಂಶವನ್ನು ಬರೆಯಿರಿ.
2. ಭಾರತ ಮಾತೆಯ ವೈಭವ ವೈಶಿಷ್ಟ್ಯಗಳನ್ನು ಕವಿ ಮಾತೃಭೂಮಿ ಕವನದಲ್ಲಿ ಹೇಗೆ ವ್ಯಕ್ತ ಪಡಿಸಿದ್ದಾರೆ ?



7th_Kannada_Reader.indd 42 24-06-2019 19:37:42

## ಭಾಷಾಭ್ಯಾಸ

1. **ಕೆಳಗಿನ ಪದಗಳ ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯಿರಿ.**

   ಮುಡಿಕಟ್ಟಿ, ಉಡಿತುಂಬಿ, ಪ್ರಜಾಮಾತೆ.

2. **ಈ ಪದಗಳ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

   ಕೀರುತಿ, ಸಿಂಹ, ಕೋಕಿಲ, ಅಮೃತ, ಸ್ವರ್ಗ, ರಕ್ತ.

3. **ಈ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ.**

   ಹಿಮಾಚಲ, ಜಯವಾಗಲಿ, ಸ್ವರಾಚಲ, ಅಮೃತವಿಲ್ಲ, ಬಲಾಬಲ.

4. **ಈ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ**

   ಮಾತೃಭೂಮಿ, ವಿಶ್ವಬಂಧು, ಉಡಿತುಂಬಿ, ಮಾತೃಭಾಷೆ, ಕರುಳಬಳ್ಳಿ.

5. **ಈ ವಾಕ್ಯಗಳಲ್ಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

   1. _____ ದೇವಿಯ ದಿವ್ಯ ಆರತಿ.
   2. ರಾಮಾಯಣದ _____ ಕೋಕಿಲ.
   3. ಪ್ರಜಾಮಾತೆ ನೀ _____ ನೀ.
   4. _____ ಬಳ್ಳಿಯ ಬಂಧವೆ ಎಲ್ಲ.

## ಚಟುವಟಿಕೆ

1. ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ, ಹಾಡಿರಿ.

## ದ್ವಿರುಕ್ತಿ

ಬೇರೆ ಬೇರೆ ಭಾವನೆಗಳನ್ನು ವ್ಯಕ್ತಪಡಿಸಲು ಒಂದೇ ಶಬ್ದವನ್ನು ಎರಡೆರಡು ಬಾರಿ ಉಚ್ಚರಿಸುವುದನ್ನು ದ್ವಿರುಕ್ತಿ ಎನ್ನುವರು.

ಉದಾ: **'ಬೇಗಬೇಗ'** ಬಡೆಯಿರಿ
ಅವರು **'ಓಡಿಓಡಿ'** ದಣಿದರು
**'ಈಗೀಗ'** ಅವರಿಗೆ ವ್ಯಾಪಾರ ಆಗುತ್ತಿದೆ.
ಅವು **'ದೊಡ್ಡದೊಡ್ಡ'** ಗ್ರಂಥಗಳು
**'ಹೌದು!ಹೌದು!'** ಗೆದ್ದವನು ನಾನೇ
**'ಹೆಚ್ಚುಹೆಚ್ಚು'** ಜನ ಬರಬೇಕು
**'ಮನೆಮನೆ'**ಗಳನ್ನು ತಿರುಗಿದನು
**'ದೊಡ್ಡದೊಡ್ಡ'** ಮರಗಳು ಬಿದ್ದವು
**'ನಿಲ್ಲುನಿಲ್ಲು'** ನಾನು ಬಂದೆ
**'ಅಗೋಅಗೋ'** ದೈವ ಬಂದನು
**'ಅಬ್ಬಬ್ಬಾ'** ಎಂತಹಾ ರುಚಿ
**'ಹೌದ್ಹೌದು'** ಅವನು ಹಾಗೆಯೇ
**'ಬೇಡಬೇಡ'** ಅವಳಿಗೆ ಕೊಡಬೇಡ



7th_Kannada_Reader.indd 43 24-06-2019 19:37:42

ಪೂರಕ ಪದ್ಯ

ಘಟಕ ಮೂರು

# ಒಂದಾಗಿರಿ... ಮುಂದಾಗಿರಿ...

– ಟಿ.ಸಿ. ಪೂರ್ಣಿಮಾ

ಶುಭವಾಗಲಿ ಶುಭವಾಗಲಿ ಶುಭವಾಗಲಿ ನಾಡಿಗೆ
ಹಗೆ ಹರಡದೆ ಬಗೆ ಕದಡದೆ ಬಲಿಯಾಗದೆ ಸೇಡಿಗೆ

ಶಾಂತಿ ಸಹನೆ ಬದುಕುಳಿಯಲಿ ಕ್ರಾಂತಿಯೇಕೆ ಬಾಳಿಗೆ
ಮನುಜ ಮತದ ಪಥದ ನಡೆಯೆ ಬಾಳು ಹಿರಿದು ನಾಳೆಗೆ
ದ್ವೇಷ ತೊರೆದು ಸ್ನೇಹ ಮೆರೆದು ನಲಿಯಲಿ ಯುವ ಪೀಳಿಗೆ
ಬೆವರ ಸುರಿಸಿ ದುಡಿದು ಕೈಯ ಚಾಚದಿರಲಿ ಕೂಳಿಗೆ

ದಹಿಸದಿರಲಿ ಪ್ರೀತಿ ಪೈರು ಅನ್ಯಾಯದ ಕಾವಿಗೆ
ಬೆಳೆದು ಬರಲಿ ಕರುಣೆ ಮಾವು ಎಡೆಗೊಡದೆ ದೇವಿಗೆ
ತಾಯ ಮಡಿಲು ಒಂದೆ ತಾನೆ ನಾಡಿನೆಲ್ಲ ಜೀವಿಗೆ
ಭೇದ ಭಾವವೇಕೆ ಬೇಕು ಹೊರಡೆ ತಾಯ ಸೇವೆಗೆ

ಹಾದಿಗೆಲ್ಲ ಚೆಲ್ಲಿ ಹೂವ ಪ್ರಗತಿಯ ನವಚೈತ್ರಗೆ
ಮನಮನಗಳ ನಡುವೆ ಬೆಸುಗೆ ಮೂಡಲಿ ಹೊಸ ಮೈತ್ರಿಗೆ
ಒಂದಾಗಿರಿ ಮುಂದಾಗಿರಿ ಹರುಷವೀಯೆ ಧಾತ್ರಿಗೆ
ಯುಗಯುಗಗಳು ಸಾವಿರಿರಲಿ ನಾಡ ವಿಜಯ ಯಾತ್ರೆಗೆ

## ಕವಿ–ಕಾವ್ಯ ಪರಿಚಯ

ಟಿ.ಸಿ.ಪೂರ್ಣಿಮಾ ಅವರು 03.06.1963ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರು ಬೆಂಗಳೂರಿನ ವಾರ್ತಾ ಇಲಾಖೆಯಲ್ಲಿ ಹಿರಿಯ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ 'ಒಂದಾಗಿರಿ... ಮುಂದಾಗಿರಿ...' ಕವನವನ್ನು ಅವರ ಮೌನಗೀತ ಎನ್ನುವ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಶಾಂತಿಯುತ ಬದುಕಿನಲ್ಲಿ ಭೇದಭಾವ ಮರೆತು ದೇಶಸೇವೆಗೆ ಮುಂದಾಗಬೇಕೆಂದು ಯುವ ಪೀಳಿಗೆಗೆ ಕರೆ ನೀಡಿದ್ದಾರೆ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ನಾಡಿಗೆ ಶುಭವಾಗುವುದೆಂತು?
2. ಯುವ ಪೀಳಿಗೆ ಯಾವುದರಿಂದ ನಲಿಯಬೇಕು?
3. ಜೀವಿಗೆ ಎಡೆ ಕೊಡದೆ ಯಾವ ಗುಣ ಬೆಳೆದು ಬರಬೇಕು?
4. ನಾಡ ವಿಜಯ ಯಾತ್ರೆಗೆ ಏನಿರಬೇಕು?



7th_Kannada_Reader.indd 44 24-06-2019 19:37:43

ಘಟಕ ಮೂರು

# ಸುಭಾಷ್ ಚಂದ್ರ ಬೋಸ್

– ಪ್ರೊ. ಕೆ. ಭೈರಪ್ಪ

**ಪ್ರವೇಶ**

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಜನ ಹೋರಾಡಿದ್ದಾರೆ. ಅವರ ತ್ಯಾಗ ಬಲಿದಾನಗಳಿಂದ ನಾವು ಇಂದು ಸ್ವಾತಂತ್ರ್ಯ ಪಡೆದಿದ್ದೇವೆ. ಗಾಂಧೀಜಿ, ನೆಹರು, ಪಟೇಲ್, ತಿಲಕರು... ಇನ್ನೂ ಮುಂತಾದವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಅವರಲ್ಲಿ ಸುಭಾಷ್ ಚಂದ್ರ ಬೋಸರೂ ಒಬ್ಬರು. ಅವರ ಧೈರ್ಯ ಸಾಹಸ ದೇಶಪ್ರೇಮ ಎಲ್ಲರಿಗೂ ಮಾದರಿಯಾಗಿದೆ. ಅವರ ಜೀವನದ ಪರಿಚಯವನ್ನು ವಿದ್ಯಾರ್ಥಿಗಳಿಗೆ ಮಾಡಿ ಕೊಡುವುದೇ ಈ ಪಾಠದ ಆಶಯವಾಗಿದೆ.



ಸುಭಾಷ್ ಚಂದ್ರ ಬೋಸ್ ಅವರು ಕ್ರಿ.ಶ. 1897, ಜನವರಿ 23ರಂದು ಒರಿಸ್ಸಾ ಪ್ರಾಂತ್ಯದ ಕಟಕ್ ನಗರದಲ್ಲಿ ಜನಿಸಿದರು. ತಂದೆ ವಕೀಲಿ ವೃತ್ತಿಯಲ್ಲಿ ಹೆಸರಾಗಿದ್ದ ಜಾನಕೀನಾಥ ಬೋಸರು; ತಾಯಿ : ಪ್ರಭಾವತಿ ದೇವಿ. ಶುದ್ಧ ಬಂಗಾಳಿ ಮಧ್ಯಮ ವರ್ಗದ ದಂಪತಿಗಳ ಹದಿನಾಲ್ಕು ಮಕ್ಕಳಲ್ಲಿ ಸುಭಾಷರು ಆರನೆಯವರು. ಸುಭಾಷರ ತಂದೆ ಆತ್ಮಾಭಿಮಾನಿ ಹಾಗೂ ನಿಸ್ಪೃಹರು. ಯಾವುದೋ ವ್ಯವಹಾರದಲ್ಲಿ ಮ್ಯಾಜಿಸ್ಟ್ರೇಟರಿಗೂ ಅವರಿಗೂ ಮನಸ್ತಾಪ ಬಂದು ವಕೀಲ ವೃತ್ತಿಗೆ ರಾಜೀನಾಮೆ ನೀಡಿ ಕಲ್ಕತ್ತೆಗೆ ಹೊರಟು ಹೋದರು. ತಮಗೆ ದೊರೆತ 'ರಾಯ ಬಹದ್ದೂರ್' ಬಿರುದನ್ನು ತ್ಯಜಿಸಿ ಬಿಟ್ಟರು. ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ದಾನಧರ್ಮ ಹಾಗೂ ದೀನದಲಿತರ ಸೇವೆಗೆ ಇವರು ಹೆಸರಾಗಿದ್ದರು. ಅಂತಹ ತಂದೆಗೆ ಹೆಮ್ಮೆಯ ಪುತ್ರನಾಗಿ, ಸುಭಾಷ್ ಜನಿಸಿದರು.

ಬಾಲಕ ಸುಭಾಷ್ ಅವರನ್ನು ಆಂಗ್ಲೋ ಇಂಡಿಯನ್ ಶಾಲೆಗೆ ಸೇರಿಸಲಾಯಿತು. ಅಲ್ಲಿನ ಉಪಾಧ್ಯಾಯರೆಲ್ಲರೂ ಆಂಗ್ಲೋ ಇಂಡಿಯನ್ನರೇ ಆಗಿದ್ದರು. ಸುಭಾಷರು ರಾಜಾರಾಮ್ ಮೋಹನರಾಯ್, ಈಶ್ವರ ಚಂದ್ರ ವಿದ್ಯಾಸಾಗರ, ರಾಮಕೃಷ್ಣ ಪರಮಹಂಸ, ವಿವೇಕಾನಂದ ಮೊದಲಾದವರ ಬಗೆಗಿನ ಗ್ರಂಥಗಳನ್ನು ಆಸಕ್ತಿಯಿಂದ ಓದುತ್ತಿದ್ದರು. ಆಂಗ್ಲಭಾಷಾ ಸಾಹಿತ್ಯದ ಜೊತೆ ಜೊತೆಯಲ್ಲಿ ಭಾರತೀಯ ಸಂಸ್ಕೃತಿಯ ಒಳಿತನ್ನೂ ಅರಿಯಲು ಶ್ರಮಿಸುತ್ತಿದ್ದರು.

ಕಟಕ್ ನಗರದ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಕೇಳಿದ ವಿವೇಕಾನಂದರ ಭಾಷಣದ ವಾಣಿ 'ಏಳಿರಿ, ಎಚ್ಚರಗೊಳ್ಳಿರಿ, ದೇಶದ ಸಮಸ್ತರ ಒಳಿತಿಗೆ ಹೋರಾಡಿರಿ. ಜಗತ್ತಿನ ಎಲ್ಲ ಜನರ ಸೇವೆಗೆ ಸಿದ್ಧರಾಗಿ. ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಿರಿ' ಎಂಬುದು ಸುಭಾಷರ ಮನಸ್ಸಿನಲ್ಲಿ ಅಚಲವಾಗಿ ನಿಂತಿತು. ಪ್ರೌಢಶಾಲೆಯ ವ್ಯಾಸಂಗದ ನಂತರ ಸುಭಾಷರು ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜನ್ನು ಸೇರಿದರು. ಆಗ ಬ್ರಿಟಿಷರು ಮದ್ರಾಸು, ಬೊಂಬಾಯಿ, ಕಲ್ಕತ್ತಾಗಳಲ್ಲಿ ನಡೆಸುತ್ತಿದ್ದ ಕಾಲೇಜುಗಳನ್ನು ಪ್ರೆಸಿಡೆನ್ಸಿ ಕಾಲೇಜು ಎನ್ನುತ್ತಿದ್ದರು. ಅವರು ಕಾಲೇಜಿನಲ್ಲಿ ಓದುತ್ತಿದ್ದಾಗ ಒಂದು ದಿನ ಒಬ್ಬ



7th_Kannada_Reader.indd 45 24-06-2019 19:37:43

ಇತಿಹಾಸ ಪ್ರಾಧ್ಯಾಪಕರು ಭಾರತದ ಇತಿಹಾಸವನ್ನು ಬೋಧಿಸುತ್ತಾ, ಅವಹೇಳನ ಮಾಡಿದರು. ಆ ಪ್ರಾಧ್ಯಾಪಕರು ಹೊರಗಡೆ ಹೋಗುತ್ತಿದ್ದಂತೆಯೇ ಪ್ರತಿಭಟಿಸಿದ ದೇಶಪ್ರೇಮಿ ಸುಭಾಷ್. ಅವರು ಬಿ.ಎ., ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ನಂತರ ತಂದೆಯವರ ಮಾತನ್ನು ಮನ್ನಿಸಿ ಇಂಗ್ಲೆಂಡಿಗೆ ಹೋದರು. ಸಿವಿಲ್ ಸರ್ವೀಸ್ ಪರೀಕ್ಷೆಗಾಗಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ, 1921ರಲ್ಲಿ ಭಾರತಕ್ಕೆ ಹಿಂದಿರುಗಿದರು.

ಗಾಂಧೀಜಿ, ದಕ್ಷಿಣ ಆಫ್ರಿಕಾದಿಂದ ಬಂದು ಕಾಂಗ್ರೆಸ್ ನಾಯಕರಾಗಿ ಸ್ವಾತಂತ್ರ್ಯ ಚಳವಳಿಯನ್ನು ತೀವ್ರಗೊಳಿಸಿದ್ದ ಸಂದರ್ಭ ಅದು. ಸುಭಾಷ್ ಗಾಂಧೀಜಿಯನ್ನು ಕಂಡು ಅವರ ಅನುಯಾಯಿಗಳಾದರು. ಸುಭಾಷ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಅರ್ಪಣಾ ಭಾವದಿಂದ ಭಾಗವಹಿಸಿದರು. ಗಾಂಧೀಜಿಯವರ ಅಸಹಕಾರ ಸಿದ್ಧಾಂತ ಅವರಿಗೆ ಹಿಡಿಸಲಿಲ್ಲ. ಆಗ ಬಂಗಾಳದ ಹಿರಿಯ ನಾಯಕರಾಗಿದ್ದ ದೇಶಬಂಧು ಚಿತ್ತರಂಜನ ದಾಸ್ ಅವರನ್ನು ತಮ್ಮ ಗುರುವಾಗಿ ಸ್ವೀಕರಿಸಿದರು. ಭಾರತಕ್ಕೆ 'ಪ್ರಿನ್ಸ್ ಆಫ್ ವೇಲ್ಸ್' ಬರುವುದನ್ನು ವಿರೋಧಿಸಿ ನಡೆದ ಚಳವಳಿಯಲ್ಲಿ ಭಾಗವಹಿಸಿ, ಪ್ರಥಮವಾಗಿ ಸೆರೆಮನೆ ಸೇರಿದರು. ಅಲ್ಲಿ ಅವರಿಗೆ ಗುರು ಚಿತ್ತರಂಜನ ದಾಸ್ ಅವರ ಸಹವಾಸವೂ ಲಭಿಸಿತು. ಇದರ ಫಲವಾಗಿ ಅವರ ಜೀವನದಲ್ಲಿ ಮಹತ್ತರ ಬದಲಾವಣೆಗಳಾದವು. ಸೆರೆಮನೆಯಿಂದ ಹೊರಗೆ ಬಂದ ಚಿತ್ತರಂಜನ ದಾಸ್ ಬಂಗಾಳದಲ್ಲಿ ಸ್ವರಾಜ್ಯ ಪಕ್ಷ ಸ್ಥಾಪಿಸಿದರು. ಕಲ್ಕತ್ತಾದ ಮೇಯರ್ ಆದರು. ಆಗ ಸುಭಾಷರು ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಆಗಿ ಅಲ್ಲಿ ಸೇವೆ ಸಲ್ಲಿಸಿದರು. ಆ ಅವಧಿಯಲ್ಲಿ ಪೌರರಿಗೆ ನಾಗರಿಕ ಸೌಲಭ್ಯಗಳನ್ನು ಅತ್ಯುತ್ತಮ ರೀತಿಯಲ್ಲಿ ಕಲ್ಪಿಸಿ ಕೊಡಲಾಯಿತು.

ಬಂಗಾಳದಲ್ಲಿ ಕ್ರಾಂತಿಕಾರರ ಚಟುವಟಿಕೆಯಿಂದಾಗಿ ಒಬ್ಬ ಯುವಕನು ಆಂಗ್ಲ ಅಧಿಕಾರಿಯನ್ನು ಗುಂಡಿಟ್ಟು ಕೊಂದನು. ಪರಿಣಾಮವಾಗಿ ರೌಲಟ್ ಕಾನೂನು ಬಂಗಾಳದಲ್ಲೆಲ್ಲ ಜಾರಿಗೆ ಬಂದು ಸುಭಾಷರೂ ಸೇರಿದಂತೆ ಹಲವರು ಸೆರೆಯಾದರು. ಆರೋಗ್ಯ ಸರಿಯಿಲ್ಲದಿದ್ದ ಅವರನ್ನು ನಂತರ ಬಿಡುಗಡೆ ಮಾಡಲಾಯಿತು.

ಸುಭಾಷ್ ಮತ್ತು ನೆಹರೂ ಅವರ ವಿಶೇಷ ಪ್ರಯತ್ನಗಳಿಂದ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯವೇ ಭಾರತದ ಗುರಿ ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು. ಗಾಂಧಿ, ಇರ್ವಿನ್ ಒಪ್ಪಂದವಾದಾಗ ಗಾಂಧಿ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಲು ಇಂಗ್ಲೆಂಡಿಗೆ ಹೊರಟರು. ಇದನ್ನು ಸುಭಾಷ್ ಟೀಕಿಸಿದರು. ದುಂಡು ಮೇಜಿನ ಸಭೆ ವಿಫಲವಾಗಿ ಗಾಂಧಿ ವಾಪಸ್ಸಾದಾಗ ಚಳವಳಿ ಮತ್ತೆ ಬಿರುಸಾಯಿತು. ಗಾಂಧಿ ಭೇಟಿಗೆ ಸುಭಾಷರು ಹೊರಟಾಗ ಅವರನ್ನು ಬಂಧಿಸಲಾಯಿತು. ಸುಭಾಷರ ಆರೋಗ್ಯ ಸರಿಯಿಲ್ಲದೆ ಬಿಡುಗಡೆ ಹೊಂದಿ ಚಿಕಿತ್ಸೆಗಾಗಿ ಯೂರೋಪಿಗೆ ಹೋದರು. ಅಲ್ಲಿ ಆರೋಗ್ಯ ಸುಧಾರಣೆಯ ನಂತರ, ಜರ್ಮನಿ, ಇಟಲಿ, ಫ್ರಾನ್ಸ್, ಸ್ವಿಜ್ಜರ್‌ಲೆಂಡ್ ಮೊದಲಾದ ದೇಶಗಳಿಗೆ ಭೇಟಿ ನೀಡಿ ಭಾರತಕ್ಕೆ ಮರಳಿದರು.

ಸುಭಾಷರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದರು. ಹರಿಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸುಭಾಷರು 'ನಮ್ಮ ಹೋರಾಟ ಬ್ರಿಟಿಷ್ ಸರಕಾರದೊಂದಿಗೆ ಮಾತ್ರ, ಬ್ರಿಟಿಷ್ ಜನತೆಯೊಂದಿಗೆ ನಮ್ಮ ವಿರೋಧವಿಲ್ಲ' ಎಂದು ಸಾರಿದರು. ಹಿಂದೂ ಮುಸ್ಲಿಂ ಐಕ್ಯತೆಗಾಗಿ ಶ್ರಮಿಸಿದರು. ದೇಶದಲ್ಲೆಲ್ಲ ಸಂಚಾರ ಮಾಡಿ ಕಾಂಗ್ರೆಸ್ ಪಕ್ಷದವರು ಮಂತ್ರಿ ಪದವಿ ಸ್ವೀಕರಿಸುವುದನ್ನು ವಿರೋಧಿಸಿದರು. ಯುವ ಜನರ ಮೆಚ್ಚಿನ ನಾಯಕರಾದರು. ಜನರು ಗಾಂಧೀಜಿಯನ್ನು ಅಂಧರಂತೆ ಹಿಂಬಾಲಿಸದಿರಲು ಸಲಹೆ ಮಾಡಿದರು. ನಿಧಾನಗತಿಯನ್ನು ವಿರೋಧಿಸಿದರು. ಈ ವಿಷಯ ಇಂದೇ ಏಕೆ ಇತ್ಯರ್ಥವಾಗಬಾರದು ಎಂಬ ರೀತಿ ಅವರು ಆಲೋಚಿಸುತ್ತಿದ್ದರು.

ತ್ರಿಪುರಾದ ಕಾಂಗ್ರೆಸ್ ಅಧಿವೇಶನದಲ್ಲಿ ನಡೆದ ಅಧ್ಯಕ್ಷ ಚುನಾವಣೆಯಲ್ಲಿ ಗಾಂಧೀಜಿಯ ಪಟ್ಟ ಶಿಷ್ಯರಾದ ಪಟ್ಟಾಭಿರಾಮಯ್ಯನವರನ್ನು ಸೋಲಿಸಿ ಮತ್ತೆ ಅಧ್ಯಕ್ಷರಾದರು. ಸುಭಾಷರಿಗೆ ಗಾಂಧಿ ಆಶೀರ್ವಾದ ಸಿಗಲಿಲ್ಲ. ಸ್ವಾತಂತ್ರ್ಯ ಪಡೆಯಲು ಗಾಂಧಿ ಸತ್ಯ ಮತ್ತು ಅಹಿಂಸೆಗಳನ್ನು ನಂಬಿದರೆ ಸುಭಾಷರು ಸ್ವಾಭಿಮಾನ ಮತ್ತು ಶಕ್ತಿಯನ್ನು ನಂಬಿದರು. ಭಾರತಕ್ಕೆ ಸ್ವಾತಂತ್ರ್ಯ ಬೇಕು ಎನ್ನುವುದರಲ್ಲಿ ಗಾಂಧಿ, ಸುಭಾಷ್ ಸಮಾನ ಆಸಕ್ತಿ ಹೊಂದಿದ್ದರೂ ಅದನ್ನು ಪಡೆಯಲು ಅನುಸರಿಸುವ ವಿಧಾನಗಳಲ್ಲಿ ವ್ಯತ್ಯಾಸ ಇತ್ತು. ಈ ಕಾರಣಕ್ಕಾಗಿಯೇ ಕಾಂಗ್ರೆಸ್ ಇಬ್ಭಾಗವಾಯಿತು.



7th_Kannada_Reader.indd 46 24-06-2019 19:37:43

'ಫಾರ್ವರ್ಡ್ ಬ್ಲಾಕ್' ಎಂಬ ಪ್ರಗತಿ ಪಕ್ಷ ಸುಭಾಷರಿಂದ ಸ್ಥಾಪಿಸಲ್ಪಟ್ಟಿತು. ದೇಶದಾದ್ಯಂತ ಇದರ ಶಾಖೆಗಳು ಸ್ಥಾಪನೆಯಾದವು. ಯೂರೋಪಿನಲ್ಲಿ ಯುದ್ಧ ಆರಂಭವಾಯಿತು. ಸುಭಾಷ್ ಬ್ರಿಟೀಷರಿಗೆ ನೆರವು ನೀಡಲು ನಿರಾಕರಿಸಿ ಚಳುವಳಿಯನ್ನು ತೀವ್ರಗೊಳಿಸಿ ಬಂಧನಕ್ಕೊಳಗಾದರು. ನಂತರ ಗೃಹಬಂಧನದಲ್ಲಿ ಇಡಲ್ಪಟ್ಟರು. ಆಗ 1941ರ ಜನವರಿ 17ರಂದು ಮುಸ್ಲಿಂ ಮೌಲ್ವಿಯ ವೇಷ ಧರಿಸಿ ಪೇಶಾವರಕ್ಕೆ ರೈಲಿನಲ್ಲಿ ಯಾರಿಗೂ ಗೊತ್ತಾಗದಂತೆ ಪ್ರಯಾಣಿಸಿ, ಮುಂದೆ ಜರ್ಮನಿಯ ರಾಜಧಾನಿ ಬರ್ಲಿನ್ ಪಟ್ಟಣ ತಲುಪಿದರು.

ಆ ಸಮಯದಲ್ಲಿ ಬ್ರಿಟೀಷರಿಗೂ ಜರ್ಮನಿಯವರಿಗೂ ಘೋರ ಯುದ್ಧ ನಡೆಯುತ್ತಿತ್ತು. ಸುಭಾಷರು ಜರ್ಮನಿಯವರ ಮನವೊಲಿಸಿ ಅವರ ನೆರವಿನಿಂದ ಒಂದು ಚಿಕ್ಕ ಸೈನ್ಯವನ್ನು ಕಟ್ಟಿ, ಅದಕ್ಕೆ 'ಆಜಾದ್ ಹಿಂದ್ ಫೌಜ್' ಎಂದರೆ 'ಸ್ವತಂತ್ರ ಭಾರತ ಸೇನೆ' ಎಂದು ಹೆಸರಿಟ್ಟರು. ಆ ಸೈನ್ಯದವರು ಸುಭಾಷರನ್ನು ಮುಖಂಡ, ಮುಂದಾಳು ಅರ್ಥ ಬರುವ ಹಾಗೆ 'ನೇತಾಜಿ' ಎಂದು ಕರೆದರು. ನೇತಾಜಿ ತಮ್ಮ ಕಾರ್ಯದರ್ಶಿಯಾಗಿದ್ದ ಶೇನ್ ಕೆಲ್ ಎಂಬಾಕೆಯನ್ನು ವಿವಾಹವಾದರು. ಸುಭಾಷ್ ಚಂದ್ರ ಬೋಸ್ ಮತ್ತು ಶೇನ್ ಕೆಲ್‌ರಿಗೆ ಅನಿತಾ ಎಂಬ ಮಗಳು ಇದ್ದಳು. ಸುಭಾಷರು ಜಪಾನಿಗೆ ಭೇಟಿ ನೀಡಿ, ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್ ಸಂಸ್ಥೆಯನ್ನು ಸಂಘಟಿಸಿ ಅದರ ಅಧ್ಯಕ್ಷರಾದರು. 1942ರಲ್ಲಿ ಸಿಂಗಪುರಕ್ಕೆ ಭೇಟಿ ನೀಡಿ ಆಜಾದ್ ಹಿಂದ್ ಫೌಜ್‌ನ ನಾಯಕತ್ವ ವಹಿಸಿಕೊಂಡರು. ಇದರಲ್ಲಿ ಮೂವತ್ತು ಸಾವಿರ ಸೈನಿಕರಿದ್ದರು. ಇದನ್ನು 'ಇಂಡಿಯನ್ ನ್ಯಾಷನಲ್ ಆರ್ಮಿ(ಐ.ಎನ್.ಎ) ಎಂದು ಕರೆದರು.

ಹೀಗೆ ಸುಭಾಷರು ಹೊರದೇಶಗಳಲ್ಲಿ ದೊಡ್ಡ ಸೈನ್ಯ ಕಟ್ಟಿ ಧೈರ್ಯ, ಸಾಹಸ ಶೌರ್ಯಗಳಿಂದ ಬ್ರಿಟೀಷರ ವಿರುದ್ಧ ಹೋರಾಡತೊಡಗಿದರು. 'ಗುಲಾಮರಂತೆ ನೂರು ವರ್ಷ ಬದುಕುವುದಕ್ಕಿಂತ ಸ್ವತಂತ್ರ ಜೀವಿಗಳಾಗಿ ಒಂದು ವರ್ಷ ಬದುಕುವುದೇ ಲೇಸು', 'ದೇಶಪ್ರೇಮಿಗಳೇ, ನನಗೆ ನಿಮ್ಮ ಶಕ್ತಿ ಕೊಡಿ. ನಾನು ನಿಮಗೆ ಸ್ವತಂತ್ರ ಭಾರತವನ್ನು ನೀಡುತ್ತೇನೆ', 'ಸ್ವಾತಂತ್ರ್ಯ ಬೇಡಿ ಪಡೆಯುವ ವಸ್ತುವಲ್ಲ, ರಕ್ತ ಹರಿಸಿ ಬಲಿದಾನ ಮಾಡಿ ಪಡೆಯುವ ವಸ್ತು' ಎಂದು ಮೊದಲಾಗಿ ಹೇಳಿ ಹುರಿದುಂಬಿಸುತ್ತಾ, 'ಜೈ ಹಿಂದ್' ಘೋಷಣೆ ಹುಟ್ಟು ಹಾಕಿ, ಹೆಜ್ಜೆ ಹೆಜ್ಜೆಗೂ ಗಂಡಾಂತರಗಳನ್ನು ಎದುರಿಸುತ್ತಾ ಮುಂದೆ ಸಾಗಿದರು. ಬರ್ಮಾ ಭಾಗದಲ್ಲಿ ಯುದ್ಧ ಸಾಗುತ್ತಿತ್ತು. ಬ್ರಿಟೀಷರ ಕುಟಿಲೋಪಾಯಗಳಿಂದಾಗಿ ಐ.ಎನ್.ಎ., ಸೈನ್ಯಕ್ಕೆ ಆಹಾರ ಪದಾರ್ಥಗಳ ಅಭಾವವುಂಟಾಯಿತು. ಯುದ್ಧೋಪಕರಣಗಳು ಸಾಲದೇ ಹೋದವು. ಅತ್ತ ಜಪಾನ್, ಜರ್ಮನಿ, ಇಟಲಿಗಳ ಸೋಲು ಆರಂಭವಾಯಿತು. 1945ನೇ ಆಗಸ್ಟ್ 18ರಂದು ಯುದ್ಧೋಪಕರಣಗಳನ್ನು ತರಲು, ರಾಜತಾಂತ್ರಿಕ ಕೆಲಸಕ್ಕಾಗಿ ವಿಮಾನದಲ್ಲಿ ಹೊರಟ ಸುಭಾಷ್ ಚಂದ್ರ ಬೋಸ್ ಅಪಘಾತದಲ್ಲಿ ವಿಧಿವಶರಾದರು.

## ಕೃತಿ ಕರ್ತೃ ಪರಿಚಯ

ಪ್ರೊ. ಕೆ. ಭೈರಪ್ಪ ಅವರು ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ವಿಠ್ಠಲಾಪುರ ಗ್ರಾಮದಲ್ಲಿ 1947ರಲ್ಲಿ ಜನಿಸಿದರು. ಮಾಯಸಂದ್ರದ ನೆಹರೂ ವಿದ್ಯಾಪದವಿ ಪೂರ್ವ ಕಾಲೇಜಿನಲ್ಲಿ ಇವರು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಮಹಾತ್ಮಾಗಾಂಧೀಜಿ, ಬಸವೇಶ್ವರ, ಮನು, ಮರೆಯ ಬಾರದ ಮಹಾನುಭಾವರು, ಭಯೋತ್ಪಾದನೆ, ಕೌಟಿಲ್ಯ ಮುಂತಾದ ಅನೇಕ ಪುಸ್ತಕಗಳನ್ನು ಇವರು ರಚಿಸಿದ್ದಾರೆ. ಪ್ರಸ್ತುತ ಗದ್ಯ ಪಾಠವನ್ನು ಇವರ 'ಜಯಂತಿಗಳು' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.



## ಪದಗಳ ಅರ್ಥ

ಚಿರಂತನ–ಶಾಶ್ವತ, ಎಂದೆಂದಿಗೂ; ಅಪ್ರತಿಮ–ಸಾಟಿಯಿಲ್ಲದ, ಹೋಲಿಸಲಾಗದ; ಅಚಲ–ಶಾಶ್ವತ; ಅವಹೇಳನ–ನಿಂದನೆ, ಅಪಮಾನಿಸು; ಅನುಯಾಯಿ–ಹಿಂಬಾಲಕ; ಫೌಜ್–ಸೇನೆ; ಕುಟಿಲ–ಮೋಸ, ಕುತಂತ್ರ; ರೋಮಾಂಚನ–ಪುಳಕ, ಮೈನವಿರೇಳುವುದು, ಕೂದಲು ನಿಮಿರುವುದು.



7th_Kannada_Reader.indd 47 24-06-2019 19:37:43

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಸುಭಾಷ್ ಚಂದ್ರ ಬೋಸರು ಎಲ್ಲಿ ಜನಿಸಿದರು?
2. ಬೋಸರ ತಂದೆ ತಾಯಿಯರ ಹೆಸರೇನು?
3. ಬೋಸರು ಯಾರ ಬಗೆಗಿನ ಗ್ರಂಥಗಳನ್ನು ಓದುತ್ತಿದ್ದರು?
4. ವಿವೇಕಾನಂದರು ಏನು ಹೇಳಿದರು?
5. ಬೋಸರ ಕಾಲೇಜು ಶಿಕ್ಷಣ ಎಲ್ಲಿ ಜರುಗಿತು?
6. ಸುಭಾಷ್ ಚಂದ್ರಬೋಸ್ ಸಿವಿಲ್ ಸರ್ವೀಸ್ ಪರೀಕ್ಷೆಗಾಗಿ ಎಲ್ಲಿ ವ್ಯಾಸಂಗ ಮಾಡಿದರು?
7. ಬೋಸರು ಯಾರನ್ನು ಗುರುವಾಗಿ ಸ್ವೀಕರಿಸಿದರು?
8 ಬೋಸರು ಪ್ರಥಮವಾಗಿ ಸೆರೆಮನೆ ಸೇರಲು ಕಾರಣವೇನು?
9. ಚಿತ್ತರಂಜನ ದಾಸ್ ಮೇಯರ್ ಆಗಿದ್ದಾಗ ಬೋಸರು ಯಾವ ವೃತ್ತಿಯಲ್ಲಿ ಸೇವೆ ಸಲ್ಲಿಸಿದರು?
10. ಲಾಹೋರ್ ಅಧಿವೇಶನದಲ್ಲಿ ಯಾವ ನಿರ್ಣಯವನ್ನು ಅಂಗೀಕರಿಸಲಾಯಿತು?
11. ಭಾರತೀಯ ರಾಷ್ಟ್ರೀಯ ಸೇನೆಯಲ್ಲಿದ್ದ ಸೈನಿಕರ ಸಂಖ್ಯೆ ಎಷ್ಟು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಜಾನಕೀನಾಥ ಬೋಸರು ರಾವ್ ಬಹದ್ದೂರ್ ಪದವಿಯನ್ನು ತ್ಯಜಿಸಲು ಕಾರಣವೇನು?
2. ಬೋಸರು ವಿವೇಕಾನಂದರ ಭಾಷಣ ಕೇಳಿದ ಸಂದರ್ಭವನ್ನು ವಿವರಿಸಿ.
3. ಬೋಸರು ಪ್ರಾಧ್ಯಾಪಕರನ್ನು ಪ್ರತಿಭಟಿಸಲು ಕಾರಣವೇನು?
4. ಬೋಸರು ಮೌಲ್ವಿ ವೇಶ ಧರಿಸಿ ಪರಾರಿಯಾಗಲು ಕಾರಣವೇನು?
5. ಬೋಸರು ವಿಧಿವಶರಾದ ಬಗೆ ಹೇಗೆ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ**

1. ಸ್ವಾತಂತ್ರ್ಯ ಹೋರಾಟದ ಮಾರ್ಗದಲ್ಲಿ ಗಾಂಧೀಜಿ ಮತ್ತು ಸುಭಾಷ್‌ಚಂದ್ರಬೋಸರ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.
2. ಸುಭಾಷ್‌ಚಂದ್ರಬೋಸರು 'ಆಜಾದ್ ಹಿಂದ್ ಫೌಜ್' ಕಟ್ಟಿದ ಬಗೆಯನ್ನು ವಿವರಿಸಿ.

## ಭಾಷಾಭ್ಯಾಸ

**1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ನಿರಾಕರಿಸು, ವಿವಾಹ, ಮುಂದಾಳು, ಸೈನ್ಯ, ವಿಧಿವಶರಾದರು.

**2. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಪ್ರಧಾನ, ಸಾಧಾರಣ, ನಾಗರಿಕ, ಅಚಲ, ಯುದ್ಧ.

**3. ಈ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ.**

ಯುದ್ಧೋಪಕರಣ, ಇತ್ಯರ್ಥ, ದೇಶಾದ್ಯಂತ, ಕುಟಿಲೋಪಾಯ, ಗಂಡಾಂತರ.

**4. ಈ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ**

ಮನಸ್ತಾಪ, ಪ್ರತಿಭಟನೆ, ಪ್ರಾಮಾಣಿಕತೆ, ಆಧ್ಯಾತ್ಮಿಕ ಜೀವಿ, ಸಕ್ರಿಯವಾಗಿ, ನಿರ್ಣಯ, ಚಳವಳಿ, ಮುಂದಾಳು, ರೋಮಾಂಚನ.

## ಚಟುವಟಿಕೆ

1. ಸುಭಾಷ್ ಚಂದ್ರ ಬೋಸರ ಜಯಂತಿಯಂದು ಬೋಸರ ಕುರಿತು ಚರ್ಚಾಗೋಷ್ಠಿ ಏರ್ಪಡಿಸಿ.



7th_Kannada_Reader.indd 48 24-06-2019 19:37:43

ಉಪಪಠ್ಯ

ಘಟಕ ಮೂರು

# ಹಡಗು ನಡೆಸಿದ ದೇಶಪ್ರೇಮಿ

– ರಾ.ಬಿ. ಸೇತು
(ಅನು : ಕೆ.ಅಂತೋನಿಮುತ್ತು)

**ಪ್ರವೇಶ**

ಭಾರತ ದೇಶದ ದಕ್ಷಿಣ ಭಾಗದಲ್ಲಿರುವ ತೂತುಕುಡಿ ಆ ದಿನಗಳಲ್ಲಿ ಎಲ್ಲಾ ದೇಶದವರೂ ತಿಳಿದ ಬಂದರು ನಗರವಾಗಿತ್ತು. ಆ ನಗರದ ಹಿರಿಮೆಯನ್ನು ತಮ್ಮ ಹಿರಿಮೆಯನ್ನಾಗಿ ಮಾಡಿಕೊಂಡವರು ಚಿದಂಬರಂರವರು. ಅವರು ಸ್ವಾರ್ಥವನ್ನು ತೊರೆದು ನಿಸ್ವಾರ್ಥದಿಂದ ದುಡಿದವರು. ಭಾರತದ ಕಡಲಾಡಳಿತ ನಮ್ಮದೇ ಎಂದು ಹೇಳಿಕೊಳ್ಳುತ್ತಿದ್ದ ಆಂಗ್ಲರನ್ನು ನಿದ್ರೆಗೆಡಿಸಿ ಆಶ್ಚರ್ಯಕರ ರೀತಿಯಲ್ಲಿ ಹಡಗು ನಡೆಸಿದ ತಮಿಳರ್ ಚಿದಂಬರಂರವರು. ದೇಶದಲ್ಲಿ ಸ್ವಾತಂತ್ರ್ಯ ಕ್ರಾಂತಿಯನ್ನು ಹೆಚ್ಚಿಸುವಂತೆ ಮಾಡಿದುದರಿಂದ ಅವರನ್ನು ಸೆರೆಮನೆಯಲ್ಲಿ ಹಾಕಿ ಸಂತೋಷ ಪಟ್ಟಿತು ಆಂಗ್ಲರ ಸರ್ಕಾರ. ಸೆರೆವಾಸ ಮುಗಿದ ನಂತರ ತೂತುಕುಡಿಗೆ ಹಿಂದಿರುಗಿದರು ಚಿದಂಬರಂ ಅವರು. ಒಂದು ದಿನ ಸಂಜೆಯ ಸಮಯದಲ್ಲಿ ಬಂದರಿನ ದಡದಲ್ಲಿ ನಡೆದಾಡುತ್ತಿದ್ದರು. ಹಳೆಯ ನೆನಪುಗಳೆಲ್ಲ ಅವರ ಮನಸ್ಸಿನಲ್ಲಿ ಸುಳಿದಾಡಿದವು. ಆ ಕಡಲ ತೀರದಲ್ಲಿ ನಿಂತು ಅವರು ಏನು ಮಾತನಾಡುತ್ತಿದ್ದರು ಎಂಬುದನ್ನು ಅವರ ಬಾಯಿಂದಲೇ ಕೇಳೋಣ...



ದಕ್ಷಿಣ ದೇಶದ ತಮಿಳುನಾಡಿನ ಬಂದರೇ! ಮುನ್ನೂರು ವರ್ಷಗಳಿಂದ ನೀನೇ ಈ ಮುತ್ತಿನ ತೀರದಲ್ಲಿ ಮುಖ್ಯತ್ವ ಪಡೆದುಕೊಂಡಿದ್ದೀಯಾ! ಆ ದಿನಗಳಲ್ಲಿ ಬೆಲೆ ಬಾಳುತ್ತಿದ್ದ ಕೊರ್ಕೈ ಮಹಾಬಂದರಿನ ದಾರಿದೀಪವೇ ನೀನು ಎಂದು ತಿಳಿದು ನಿನಗೆ ನಮಸ್ಕರಿಸುತ್ತೇನೆ, ಆಶೀರ್ವದಿಸುತ್ತೇನೆ. ಆದರೂ ಆ ಕಾಲದ ಬಂದರಿನ ಮಹಿಮೆಯನ್ನು ಈ ಕಾಲದಲ್ಲಿ ಕಾಣುವ ದೃಶ್ಯವನ್ನು ನೆನೆದು ನನ್ನ ಹೃದಯ ಸಂಕಟ ಪಡುತ್ತಿದೆ.

ವಿಶ್ವವಿಖ್ಯಾತ ಕೊರ್ಕೈ ಬಂದರಿನಲ್ಲಿ ಪಾಂಡ್ಯ ರಾಜರ ಮೀನಿನ ಬಾವುಟ ಎತ್ತರಕ್ಕೆ ಹಾರಾಡಿದುದು ಎಲ್ಲರಿಗೂ ತಿಳಿದ ವಿಷಯ. ಕೊರ್ಕೈ ಸಮುದ್ರದಲ್ಲಿ ಮೀನುಗಳು ಹೇರಳವಾಗಿ ದೊರೆಯುತ್ತಿದ್ದವು. ಪರಿಶಿಷ್ಟ ವರ್ಗಗಳಿಗೆ ಸೇರಿದ ಜನರೂ ಸಹ ವ್ಯಾಪಾರದಿಂದ ಅಭಿವೃದ್ಧಿ ಹೊಂದಿ ಮಹಡಿ ಮನೆಗಳನ್ನು ಕಟ್ಟಿಕೊಂಡು ಜೀವಿಸುತ್ತಿದ್ದರು. ಇದು ಭೂತಕಾಲದ ವಿಶೇಷ. ಇಂದು ಮೀನಿನ ಧ್ವಜ ಎಲ್ಲಿ? ಆಂಗ್ಲರ ಧ್ವಜವಲ್ಲವೇ ಇಲ್ಲಿ ಹಾರಾಡುತ್ತಿದೆ! ಬ್ರಿಟೀಷರ ಹಡಗುಗಳು ಮಾತ್ರವೇ ಎಲ್ಲ ಕಡೆ ಚಲಿಸುತ್ತಲಿವೆ. ಅಧಿಕ ಲಾಭ ಪಡೆಯುತ್ತಿರುವ ಬ್ರಿಟೀಷರ ಹಡಗುಗಳಲ್ಲಿ ಕೂಲಿ ಕೆಲಸಗಳನ್ನು ಮಾಡುತ್ತಿದ್ದಾರೆ ನಮ್ಮ ಜನರು. ಸ್ವಂತ ದೇಶದಲ್ಲೇ,



7th_Kannada_Reader.indd 49 24-06-2019 19:37:43

ಹೊರಗಿನಿಂದ ಬಂದವರಿಗೆ ಗುಲಾಮರಾಗಿ ದುಡಿದು ಹೊಟ್ಟೆ ತುಂಬಿಸಿಕೊಳ್ಳುತ್ತಿರುವುದು ಒಂದು ಜೀವನವೇ ಎಂದು ಅವರು ಆವೇಶಪಟ್ಟರು. ತೆಗಳುವವರು ಬಾಳುತ್ತಾರೆ ಎಂಬ ತಿರುವಳ್ಳುವರ್ ಅವರ ಮಾತನ್ನು ಮರೆಯಲಾದೀತೇ?

ಬೆಲೆ ಬಾಳುವ ಬಂದರೇ! ಈ ತೆಗಳಿಕೆಯನ್ನು ಹೋಗಲಾಡಿಸಲು ಈ ನಗರದಲ್ಲಿ ಸ್ವದೇಶೀ ಹಡಗು ಕಂಪನಿಯೊಂದು ಉದಯವಾಯಿತು. ಭಾರತ ದೇಶದ ಶ್ರೀಮಂತರು, ಜ್ಞಾನಿಗಳು, ಆ ಕಂಪನಿಯಲ್ಲಿ ಪಾಲುದಾರರಾಗಿದ್ದಾರೆ. ಹಳೆಯ ಕಾಲದ ಪಾಂಡ್ಯರ ಹಾಗೆ ಮದುರೈ ಮಹಾನಗರದಲ್ಲಿ ತಮಿಳು ಸಂಗಂ ಸ್ಥಾಪಿಸಿ ಕವಿಗಳು ಹಾಡಿ ಹೊಗಳುವಂತೆ ಮಾಡಿದ ಪಾಂಡ್ಯರು ಆ ಕಂಪನಿಯ ಒಡೆಯರಾಗಿದ್ದಾರೆ. ಅದರ ಕಾರ್ಯಕರ್ತರಾಗಿ ಕೆಲಸ ಮಾಡುವ ಹೊಣೆ ನನಗೂ ಸಿಕ್ಕಿತು. ಕಂಪನಿಯವರು ತೆಗೆದುಕೊಂಡ ಸ್ವದೇಶೀ ಹಡಗು ನಿನ್ನ ಬಂದರಿಗೆ ಬಂದು ಸೇರಿತು. ಪ್ರಯೋಗ ನಡೆಸುವುದಕ್ಕಾಗಿ ಆ ಹಡಗನ್ನು ಇಲ್ಲಿಂದ ಕೊಲಂಬೋ(ಶ್ರೀಲಂಕಾ) ಬಂದರಿನ ಕಡೆಗೆ ಚಲಿಸಿದ ಸಂದರ್ಭದಲ್ಲಿ ಪ್ರೀತಿಯ ಅಲೆ ನನ್ನ ಒಡಲಿನಲ್ಲಿ ಉಕ್ಕಿ ಹರಿಯಿತು. ಕಣ್ಣುಗಳಲ್ಲಿ ಆನಂದಬಾಷ್ಪ ಹರಿಯಿತು.

ವಾಣಿಜ್ಯ ಮಹನೀಯನೇ! ಅಂದಿನಿಂದ 'ಸ್ವದೇಶೀ ಹಡಗು ವಾಣಿಜ್ಯ ಸಂಸ್ಥೆ' ಬೆಳೆಯಿತು. ಬ್ರಿಟೀಷರ ವಾಣಿಜ್ಯ ಕುಂಠಿತವಾಯಿತು. ಅದನ್ನು ನೋಡಿ ಅವರ ಒಡಲು ಉರಿಯಿತು. ಕೆಲವು ಕುಟಿಲೋಪಾಯ ಮಾಡಿದರು. ಸ್ವದೇಶೀ ಕಂಪನಿ ಕೆಲಸವನ್ನು ನಾನು ಬಿಟ್ಟುಬಿಟ್ಟರೆ ಲಕ್ಷ ರೂಪಾಯಿ ಕೊಡುವುದಾಗಿ ಮರೆಮುಖವಾಗಿ ತಿಳಿಸಿದರು. ನನಗೆ ಬೆಂಬಲವಾಗಿ ನಿಂತು ಉತ್ತೇಜನ ಕೊಡುತ್ತಿದ್ದ ನನ್ನ ಸ್ನೇಹಿತರನ್ನು ಅನೇಕ ರೀತಿಯಲ್ಲಿ ಭಯಪಡಿಸಿದರು. ಇದೆಲ್ಲ ಉಪಯೋಗವಾಗದ ಕಾರಣ ನನ್ನನ್ನು ಬಂಧಿಸಲು ದಬ್ಬಾಳಿಕೆಯನ್ನು ಉಪಯೋಗಿಸಿ ಸರ್ಕಾರದ ಸಹಾಯವನ್ನು ಕೋರಿದರು.

ಬ್ರಿಟೀಷರು ಆಳುವ ಬಂದರೇ! ಆಂಗ್ಲರ ಸರ್ಕಾರ ಬಲಯುತವಾದುದು ಎಂದೂ, ಅದನ್ನು ಅಲುಗಾಡಿಸಲು ಯಾರಿಂದಲೂ ಸಾಧ್ಯವಿಲ್ಲವೆಂದೂ ಅಂದಿನ ಸಾರ್ವಜನಿಕರು ನೆನೆಸಿಕೊಂಡಿದ್ದಾರು. ಆದುದರಿಂದ ಗುಲಾಮಗಿರಿ ಹಂತಹಂತವಾಗಿ ಬೆಳೆದು ಭೂಮಿಯ ತುಂಬಾ ವ್ಯಾಪಿಸಿತು. ಈ ದೇಶದ ಜನರಲ್ಲಿಯೂ ಬೆಳೆಯಿತು. ಅಧಿಕಾರ ಮಂಡಲಿಯವರು ಏನೇ ಹೇಳಿದರೂ, ಎದುರಿಸಿ ಮಾತನಾಡದೆ, 'ಸಾರ್... ಸಾರ್...' ಎಂದು ವಂದಿಸಿ' 'ಬುದ್ಧೀ... ಬುದ್ಧೀ...' ಎಂದು ಬಾಯಿಮುಚ್ಚಿ; 'ಸರಿಸರಿ...' ಎಂದು ಸಮ್ಮತಿಸಿ ತಾಳ ಹಾಕುತ್ತಿದ್ದ ಹುಸಿಜ್ಞಾನಿಗಳು ಬಿರುದುಗಳನ್ನೂ, ಪದವಿಗಳನ್ನೂ ಪಡೆದು ಅಭಿವೃದ್ಧಿ ಹೊಂದಿದರು. ಸರ್ಕಾರ ಆಡಿಸಿದಂತೆ ಅವರುಗಳೂ ಆಡಿದರು. ಸರ್ಕಾರಕ್ಕೆ ಜೈ ಎಂದು ಜೈಕಾರ ಹಾಕಿದರು. ಈ ಸನ್ನಿವೇಶದಲ್ಲಿಯೇ ಉದಯವಾಯಿತು ಸ್ವಾತಂತ್ರ್ಯನಾದ!

'ವಂದೇ ಮಾತರಂ!' ಎಂಬ ಸ್ವದೇಶ ಮಂತ್ರ ಬಂಗಾಳದಲ್ಲಿ ಹುಟ್ಟಿತು. ಕಾಡ್ಗಿಚ್ಚಿನಂತೆ ದೇಶದಾದ್ಯಂತ ಹರಡಿತು. 'ಸ್ವಾತಂತ್ರ್ಯ ನನ್ನ ಜನ್ಮ ಸಿದ್ಧ ಹಕ್ಕು, ಅದನ್ನು ಪಡೆದೇ ತೀರುತ್ತೇನೆ' ಎಂದು ಉತ್ತರದಲ್ಲಿ ಎದೆ ತಟ್ಟಿ ನಿಂತರು ಮರಾಠೀ ವೀರರು. ಅವರೇ ಭಾರತ ದೇಶ ಹೊಗಳುವ ಬಾಲ ಗಂಗಾಧರ ತಿಲಕರು! ದಕ್ಷಿಣದಲ್ಲಿ ಉದಯಿಸಿದರು, ನಮ್ಮಯ ಗೆಳೆಯರು ಭಾರತಿಯಾರ್! ಅವರು ಅಂಜದ ಎದೆಯುಳ್ಳವರು. ಎದೆಗಾರಿಕೆಯ ಕವಿಗಳು. 'ವಂದೇಮಾತರಂ ಎಂದು ಹೇಳೋಣ; ನಮ್ಮ ರಾಜ್ಯತಾಯಿಯ ವಂದಿಸೋಣ' ಎಂದು ಸುಂದರ ಹಾಡನ್ನು ರಚಿಸಿ ದೇಶದಲ್ಲೇ ಕ್ರಾಂತಿಯನ್ನು ಕಟ್ಟಿ ಎಬ್ಬಿಸಿದರು.

ಹೊಸತನವನ್ನು ಕಂಡ ಬಂದರೇ! ಆ ದಿನಗಳಲ್ಲಿ 'ವಂದೇ ಮಾತರಂ' ಎಂದರೆ ಬಂತು ತೊಂದರೆ. ಆ ವಾರ್ತೆಯಲ್ಲಿ ಒಂದು ವಂಚನೆ ಇರುವುದಾಗಿ ಆಂಗ್ಲ ಸರ್ಕಾರ ತಿಳಿದಿತ್ತು. ಸಾರ್ವಜನಿಕ ಸಭೆಗಳಲ್ಲಿ ನಾನು ಮಾತನಾಡುವಾಗ ವಂದೇ ಮಾತರಂ ಎಂಬುದನ್ನು ಗಟ್ಟಿಯಾಗಿ ಹೇಳುವುದು ಅಭ್ಯಾಸ. ಅದನ್ನು ಕೇಳಿ ದೇಶದ ಜನರು ಅದನ್ನು ಪ್ರೋತ್ಸಾಹಿಸಿದರು, ಕ್ರಾಂತಿ ಎದ್ದರು. ಇದ್ದುದನ್ನು ಹೇಳಿದರೆ ಕಳ್ಳ ಮನಸ್ಸಿನವರ ಮನಸ್ಸು ಉರಿಯುತ್ತದೆಯಲ್ಲವೇ? ಉರಿಯುತ್ತಿರುವ ಸರ್ಕಾರ ನನ್ನನ್ನು ವಿರೋಧಿಯಾಗಿ ನೋಡಿತು. ನನ್ನ ಮೇಲೆ ಹಲವಾರು ರೀತಿ ಅಪರಾಧಗಳನ್ನು ಹೊರಿಸಿದರು. ದೇಶದ ಶಾಂತಿಯನ್ನು ನಾನು ಕೆಡಿಸಿದೆನೆಂದರು. ಒಳ್ಳೆಯ ಮಾಲೀಕರಿಗೂ ಕಷ್ಟ ಕೊಟ್ಟೆನೆಂದರು. ಬ್ರಿಟೀಷರ ಮೇಲೆ ವಿರೋಧ ಬೆಳೆಸಿದೆನೆಂದರು. ವೀರ ಸ್ವಾತಂತ್ರ್ಯ ಹೊಂದಲು ದಾರಿ ತೋರಿಸಿದೆ ಎಂದು ಆರೋಪಿಸಿದರು.



7th_Kannada_Reader.indd 50 24-06-2019 19:37:43

ಬ್ರಿಟೀಷರ ನ್ಯಾಯಾಲಯದಲ್ಲಿ ಈ ಅಪರಾಧ ವಿಚಾರಣೆ ನಡೆಯಿತು. ಎರಡು ಪಟ್ಟು ದಂಡನೆ ನನಗೆ ವಿಧಿಸಲಾಯಿತು. ಅಪೀಲು ಕೋರ್ಟಿನಲ್ಲಿಯೇ ಸೆರೆವಾಸ ದಂಡನೆಯಾಗಿ ತೀರ್ಪು ನೀಡಲಾಯಿತು. ಆರು ವರ್ಷಗಳ ಕಾಲ ಕೊಯಮತ್ತೂರು ಸೆರೆಮನೆಯಲ್ಲಿಯೂ, ಕಣ್ಣಾನೂರು ಸೆರೆಮನೆಯಲ್ಲಿಯೂ ಬಹಳ ಕಷ್ಟ ಅನುಭವಿಸಿದೆ. ನನ್ನ ದೇಹ ಬಳಲಿತು. ಆದರೂ ಆತ್ಮ ಒಂದು ದಿನವೂ ಬಳಲಲಿಲ್ಲ. ಸೆರೆಮನೆಯನ್ನು ತಪಸ್ಸಿನ ಸ್ಥಳವಾಗಿ ಭಾವಿಸಿದೆ. ಕೈ ಬಳಲಿದರೂ ಸತ್ಯ ಬೆಳೆಯುವಂತೆ ಮಾಡಿದ ಕಾರ್ಯವೆಲ್ಲವೂ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಮಾಡಿದ ಧ್ಯಾನ ಎಂದು ತಿಳಿದು ಆತ್ಮಕ್ಕೆ ಸಂತೋಷವಾಯಿತು.

ಸಂಪತ್ತು ತುಂಬಿದ ದೊರೆಯೇ, ಸೆರೆಮನೆಯಲ್ಲಿ ನನ್ನನ್ನು ಅನೇಕರು ವೀಕ್ಷಣೆ ಮಾಡುತ್ತಿದ್ದರು. ಅನೇಕ ಕೆಲಸಗಳನ್ನು ನೀಡುತ್ತಿದ್ದರು, ಅನೇಕರು. ಅವರನ್ನು ನಾನು ಯಾವತ್ತೂ ವಿರೋಧಿಸಲಿಲ್ಲ. ಆದರೆ ವಿಧಿಗಳನ್ನು ಮೀರಿ ನಡೆದವರನ್ನು ವಿರೋಧಿಸಿದ್ದೇನೆ. ಮಿತಿಮೀರಿ ಮಾತನಾಡಿದವರನ್ನು ಬಾಯಲ್ಲೇ ಅಡಗಿಸಿದ್ದೇನೆ.

ಒಂದು ದಿನ ಸಾಯಂಕಾಲದಲ್ಲಿ ದೇಹ ದಣಿದು, ಮನಸ್ಸು ಒಡೆದು ಸೆರೆಮನೆಯಲ್ಲಿ ಕುಳಿತಿದ್ದೆ. ಅಲ್ಲಿಗೆ ಒಬ್ಬ ಜೈಲರ್ ಬಂದನು. ಅಧಿಕಾರ ವಾಣಿಯಿಂದ ನಿಂತುಕೊಂಡು, ನನಗೆ ಕೆಲವು ಬುದ್ಧಿಮಾತುಗಳನ್ನು ಹೇಳತೊಡಗಿದನು. ಆಗ ನನ್ನ ಮನಸ್ಸಿನಲ್ಲಿ ಕೋಪ ಉಕ್ಕಿ ಬಂತು. 'ಅಯ್ಯೋ, ಮೂರ್ಖಾ! ನೀನಾ ನನಗೆ ಬುದ್ಧಿಮಾತು ಹೇಳುವವನು, ಬಾಯಿಮುಚ್ಚು! ನಿನಗೂ ನಿನ್ನ ಅಪ್ಪನಿಗೂ ಬುದ್ಧಿ ಹೇಳುವವನು ನಾನು. ನಿನ್ನ ಗವರ್ನರನಿಗೂ, ಪ್ರಭುಗಳಿಗೂ ಬುದ್ಧಿ ಹೇಳುವವನು ನಾನು' ಎಂದು ಆವೇಶದಿಂದ ಹೇಳಿದೆ. ಮಾನ ಕಳೆದುಕೊಂಡು ಬಾಗಿಲಿನಿಂದ ಹೊರಗೆ ಹೋದನು ಜೈಲರ್.

ತಮಿಳು ಮಹಾಮಣಿಯೇ, ನಿನ್ನ ನೋವಿನಲ್ಲೂ ಜೀವನದಲ್ಲೂ ಯಾವುದೇ ದಿನದಲ್ಲೂ... ನನ್ನ ತಮಿಳುತಾಯೇ ನಿನ್ನ ನಾನು ಮರೆಯೆನು. ಈ ನಗರದಲ್ಲಿ ವಕೀಲಿ ವೃತ್ತಿ ಮಾಡಿಕೊಂಡು ಜೀವಿಸುತ್ತಿದ್ದ ಕಾಲದಲ್ಲಿ ಶ್ರೇಷ್ಠ ದಾನಿ ಪಾಂಡ್ಯದೊರೆಯೊಡನೆ ಜೊತೆಯಾಗಿ ತಮಿಳು ಗ್ರಂಥಗಳನ್ನು ಓದಿ ಕಲಿತೆನು. ಆದ್ದರಿಂದ ನಾನು ಪಡೆದ ಸಂತೋಷಕ್ಕೆ ಅಳತೆಯಿಲ್ಲ. ಸೆರೆಮನೆಯಲ್ಲಿ ಗಾಣ ಎಳೆದ ದುಃಖವನ್ನು ನೀಗಿಸಿತು, ನನ್ನ ಸೆಂದಮಿಳ್! ಕೈಗಳಲ್ಲಿ ಗಾಯವಾಗಿದ್ದರೂ ನನ್ನ ಕಣ್ಣೀರನ್ನು ಒರೆಸಿತು ಕನ್ಯಾತಮಿಳುಭಾಷೆ.

ತೊಲ್‌ಕಾಪ್ಪಿಯಂ ಕೃತಿಯನ್ನು ಓದಿ ಓದಿ ನನ್ನ ಕಷ್ಟವನ್ನೆಲ್ಲ ಮರೆತೆ. ಈ ಸ್ಥಿತಿಯಲ್ಲಿ ಪಾಠಗಳನ್ನು ಕಲಿತು ನನ್ನ ಕಷ್ಟವನ್ನೆಲ್ಲಾ ಗೆದ್ದೆನು. ಆಂಗ್ಲ ಭಾಷೆಯ ಆಲೆನ್ ಎನ್ನುವವರು ಬರೆದ ಜ್ಞಾನಕ್ಕೆ ಸಂಬಂಧಪಟ್ಟ ಕಾವ್ಯಗಳಲ್ಲಿ 'ಮನಸ್ಸಿನಂತೆ ಜೀವನ' ಎಂಬುದನ್ನು ತಮಿಳಿಗೆ ಅನುವಾದಿಸಿದ್ದೇನೆ. ಉತ್ತಮ ಲೇಖನಗಳಲ್ಲಿ ಕಂಡಂತಹ ಸತ್ಯವನ್ನು ಯೌವನಸ್ಥರು ಸುಲಭವಾಗಿ ತಿಳಿದುಕೊಳ್ಳುವಂತೆ. ನಿಜಜ್ಞಾನ, ನಿಜಧರ್ಮ ಎಂಬ ಚಿಕ್ಕ ಲೇಖನಗಳನ್ನು ಬರೆದೆನು. ಇವುಗಳನ್ನು ನನ್ನ ತಮಿಳು ತಾಯಿಯ ಪಾದಗಳಿಗೆ ಸಮರ್ಪಿಸಿದೆ. ಸೆರೆಮನೆಯಲ್ಲಿದ್ದೇ ಬರೆದ ಲೇಖನಗಳನ್ನು ಸ್ವೀಕರಿಸುವಂತೆ ಸೆಂದಮಿಳ್ ತಾಯಿಯ ಆಶೀರ್ವಾದವನ್ನು ಬೇಡುತ್ತೇನೆ.

ಭವಿಷ್ಯದ ಮಹಾಜೀವನವೇ! ಕಾಲವು ಕಳೆದು ಹೋಗುತ್ತದೆ. ನನ್ನ ಸೆರೆವಾಸವೂ ಮುಗಿಯಿತು. ಈ ನಗರಕ್ಕೆ ಬಂದು ಸೇರಿದ್ದೇನೆ. ನನ್ನ ಪ್ರೀತಿಯ ಮಕ್ಕಳನ್ನು ನೋಡಿ ಆನಂದ ಪಟ್ಟೆನು. ಆದರೂ ನನ್ನ ಆಸೆಯ ಮಗುವೇ, ಸ್ವದೇಶೀ ಹಡಗು ಈ ಬಂದರಿನಲ್ಲಿ ಕಾಣಿಸಲಿಲ್ಲ. ಆದ್ದರಿಂದ ಮಹಾದುಃಖ ಪಟ್ಟೆ. ಪಟ್ಟ ಕಷ್ಟವೆಲ್ಲ ವ್ಯರ್ಥವಾಯಿತೇ ಎಂದು ಪರಿತಪಿಸಿದೆ. ಯಾವತ್ತು ಬರುತ್ತದೆಯೋ ಒಳ್ಳೇ ಕಾಲ ಎಂದು ಚಿಂತಿಸಿದೆ. ಇಂದಿಲ್ಲದಿದ್ದರೂ ಯಾವತ್ತಾದರೂ ಸ್ವಾತಂತ್ರ್ಯ ಬಂದೇ ಬರುತ್ತದೆ. ವೀರ ಸ್ವಾತಂತ್ರ್ಯ ಪ್ರಳಯ ಹೊರಟಿದೆ. ಆದನ್ನು ತಡೆಯಲು ಈ ಭಾರತದಲ್ಲಿ ಯಾರೂ ಇಲ್ಲ!

ಹರಿದು ಸಾಗುತ್ತಿದೆ ಸ್ವಾತಂತ್ರ್ಯ ಪ್ರಳಯ

ಅಡಗಿ ಹೋಗುತ್ತಿದೆ ಬ್ರಿಟೀಷರ ಹೃದಯ

ಎಂದು ನಾವು ಹಾಡುವ ಕಾಲ ಯಾವತ್ತು ಬರುತ್ತದೆ ? ಎಂದು ಗಟ್ಟಿಯಾಗಿ ಹೇಳಿ ಸಮುದ್ರ ತೀರವನ್ನು ಬಿಟ್ಟು ಹೊರಟರು ವೀರ ಚಿದಂಬರಂ ಅವರು!



7th_Kannada_Reader.indd 51 24-06-2019 19:37:43

## ಕೃತಿ ಕರ್ತೃ ಪರಿಚಯ



ತಮಿಳು ಮೂಲ : ಪ್ರಸ್ತುತ ಉಪಪಠ್ಯವಾಗಿ ಆರಿಸಿರುವ ಈ ಲೇಖನವು, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ರಾ.ಬಿ. ಸೇತು ಅವರು ಬರೆದಿರುವ ಸಮುದ್ರ ತೀರದಲ್ಲಿ (ಕಡಲ್ ಕರೈ ನಿಲೈ) ಎಂಬ ಲೇಖನದ ಕನ್ನಡ ರೂಪವಾಗಿದೆ. ರಾ.ಬಿ. ಸೇತು ಅವರ 'ತಮಿಳಿನ್ಬಂ' ಎಂಬ ಕೃತಿಗೆ ಭಾರತ ಸರ್ಕಾರದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಅನುವಾದ : ಪ್ರಸ್ತುತ ಲೇಖನವನ್ನು ಶ್ರೀ. ಆಂತೋನಿ ಮುತ್ತು ಅವರು ತಮಿಳಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರು ಕನ್ನಡ ಸ್ನಾತಕೋತ್ತರ ಪದವಿಯನ್ನು ಗಳಿಸಿದ್ದಾರೆ. ಪ್ರಸ್ತುತ ತಾಳವಾಡಿಯ ಸರ್ಕಾರಿ ಉನ್ನತ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹೊರನಾಡಿನ ಕನ್ನಡ ಕಾರ್ಯಕ್ರಮಗಳಲ್ಲಿ ಇವರು ಆಸಕ್ತರಾಗಿರುವರು. ಇವರು ಕನ್ನಡ ಸಾರಸ್ವತ ಸೇವೆ ಮಾಡುತ್ತಿದ್ದಾರೆ.

## ಪದಗಳ ಅರ್ಥ

ತೂತುಕುಡಿ–ತಮಿಳಿನಾಡಿನ ಒಂದು ಪ್ರದೇಶ; ಬಂದರು–ಹಡಗು ನಿಲ್ಲಿಸುವ ಸ್ಥಳ; ಭಾಷ್ಪ–ಕಣ್ಣೀರು, ವಿಖ್ಯಾತ–ಪ್ರಸಿದ್ಧ; ಮಾಲೀಕರು–ಒಡೆಯರು; ಅಭಿವೃದ್ಧಿ–ಬೆಳವಣಿಗೆ; ಭೂತಕಾಲ–ಕಳೆದುಹೋದ ಕಾಲ; ಧ್ವಜ–ಬಾವುಟ; ಗುಲಾಮ–ಸೇವಕ; ತೆಗಳುವುದು–ಬೈಯುವುದು, ತಿರಸ್ಕಾರದಿಂದ ಮಾತನಾಡುವುದು; ಸ್ವದೇಶೀ–ಸ್ವಂತದೇಶದ; ಹೊಣೆ–ಜವಾಬ್ದಾರಿ; ಆಂಗ್ಲರು–ಇಂಗ್ಲಿಷಿನವರು; ಬ್ರಿಟೀಷರು; ಎದುರಿಸಿ–ವಿರೋಧಿಸಿ, ಪ್ರತಿಭಟಿಸಿ; ವಂದೇ ಮಾತರಂ–ತಾಯಿಗೆ ವಂದಿಸುತ್ತೇನೆ, ಭಾರತ ಮಾತೆಗೆ ವಂದನೆ; ದಂಡನೆ–ಶಿಕ್ಷೆ; ಸೆರೆಮನೆ–ಜೈಲು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಚಿದಂಬರಂ ಅವರು ಯಾವ ಬಂದರಿನಲ್ಲಿ ನಡೆದಾಡುತ್ತಿದ್ದರು ?
2. ಕೊರ್ಕೈ ಬಂದರಿನಲ್ಲಿ ಯಾವ ವಸ್ತುಗಳು ಹೇರಳವಾಗಿ ದೊರೆಯುತ್ತಿತ್ತು ?
3. ಚಿದಂಬರಂ ಅವರು ಏಕೆ ಆವೇಶಪಟ್ಟರು ?
4. ಸ್ವದೇಶದಲ್ಲಿ ಯಾವ ಕಂಪನಿ ಉದಯವಾಯಿತು?
5. ಸ್ವದೇಶೀ ಹಡಗನ್ನು ಎಲ್ಲಿಂದ ಎಲ್ಲಿಯವರೆಗೆ ಪ್ರಯೋಗ ನಡೆಸಿದರು ?
6. ಬ್ರಿಟೀಷರು ಚಿದಂಬರಂ ಅವರನ್ನು ಬಂಧಿಸಲು ಯಾವ ಉಪಾಯಗಳನ್ನು ಮಾಡಿದರು ?
7. ಹುಸಿ ಜ್ಞಾನಿಗಳು ಹೇಗೆ ನಡೆದುಕೊಳ್ಳುತ್ತಿದ್ದರು?
8. ತಿಲಕರ ಘೋಷಣೆ ಏನು ?
9. ಅಂಜದ ಎದೆಗಾರಿಕೆಯವರು ಯಾರು ? ಏಕೆ ?
10. ಚಿದಂಬರಂ ಅವರನ್ನು ಯಾವ ಸೆರೆಮನೆಯಲ್ಲಿ ಹಾಕಿದರು ?
11. ಚಿದಂಬರಂ ಅವರು ಜೈಲರ್‌ಗೆ ಏನೆಂದರು ?
12. ಚಿದಂಬರಂ ಅವರು ಏಕೆ ದುಃಖ ಪಟ್ಟರು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕೊರ್ಕೈ ಬಂದರಿನ ಬಗ್ಗೆ ಚಿದಂಬರಂ ಅವರು ಏನು ಹೇಳುತ್ತಾರೆ ?
2. ಚಿದಂಬರಂ ಅವರ ಮೇಲೆ ಯಾವ ಆರೋಪಗಳನ್ನು ಮಾಡಲಾಯಿತು ?

## ಚಟುವಟಿಕೆ

1. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರ ಜೀವನ ಚರಿತ್ರೆಗಳನ್ನು ಸಂಗ್ರಹಿಸಿ ಓದಿರಿ.



7th_Kannada_Reader.indd 52 24-06-2019 19:37:43

ವ್ಯಾಕರಣ 

ಘಟಕ ಮೂರು

# ಅಕ್ಷರಗಳ ಉತ್ಪತ್ತಿ ಸ್ಥಾನಗಳು

ಬಾಯಲ್ಲಿ ಅಕ್ಷರಗಳನ್ನು ಉಚ್ಚರಿಸುವಾಗ ಅವು ಹುಟ್ಟುವ ಸ್ಥಾನಗಳನ್ನು ತಿಳಿದಿದ್ದರೆ ಅವುಗಳಲ್ಲಿ ಇರುವ ಪರಸ್ಪರ ಸಂಬಂಧ ಗೊತ್ತಾಗುತ್ತದೆ. ಸಂಧಿ ಕಾರ್ಯದಲ್ಲಿ ಇದರ ಸಂಬಂಧ ತಿಳಿಯುತ್ತದೆ. ಇವು ಕೆಲವು ಅವಯವಗಳ ಸಹಾಯದಿಂದ ಉಂಟಾಗುವುವು.

| | |
|---|---|
| ಕಂಠದಿಂದ ಹುಟ್ಟುವ ವರ್ಣಗಳು (ಕಂಠ್ಯಗಳು) | ಅ, ಆ, ಕವರ್ಗ, ಹ ಮತ್ತು ವಿಸರ್ಗ |
| ದವಡೆಯಲ್ಲಿ ಹುಟ್ಟುವ ವರ್ಣಗಳು (ತಾಲವ್ಯಗಳು) | ಇ, ಈ, ಚವರ್ಗ, ಯ ಮತ್ತು ಶ |
| ಬಾಯ ಅಂಗಳದಲ್ಲಿ ಹುಟ್ಟುವ ವರ್ಣಗಳು (ಮೂರ್ಧನ್ಯ) | ಋ, ಟವರ್ಗ, ರ, ಷ, ಳ |
| ಹಲ್ಲಿನಲ್ಲಿ ಹುಟ್ಟುವ ವರ್ಣಗಳು (ದಂತ್ಯ) | ತವರ್ಗ, ಲ |
| ತುಟಿಯಲ್ಲಿ ಹುಟ್ಟುವ ವರ್ಣಗಳು (ಓಷ್ಠ್ಯ) | ಉ, ಊ, ಪವರ್ಗ |
| ಕಂಠ–ದವಡೆ ಇವೆರಡರ ಸಹಾಯದಿಂದಲೂ ಹುಟ್ಟುವ ಅಕ್ಷರಗಳು (ಕಂಠತಾಲವ್ಯಗಳು) | ಎ, ಏ, ಐ |
| ಕಂಠ–ತುಟಿ ಇವೆರಡರ ಸಹಾಯದಿಂದ ಹುಟ್ಟುವ ಅಕ್ಷರಗಳು (ಕಂಠೋಷ್ಠ್ಯಗಳು) | ಒ, ಓ, ಔ. |
| ದಂತ–ದವಡೆ ಎರಡೂ ಸ್ಥಾನಗಳಲ್ಲೂ ಹುಟ್ಟುವ ಅಕ್ಷರ (ದಂತ್ಯೋಷ್ಠ್ಯ) | ವ. |

| | | | | | |
|---|---|---|---|---|---|
| ಕ್ | ಖ್ | ಗ್ | ಘ್ | ಙ್ | (ಕ ವರ್ಗ) |
| ಚ್ | ಛ್ | ಜ್ | ಝ್ | ಞ್ | (ಚ ವರ್ಗ) |
| ಟ್ | ಠ್ | ಡ್ | ಢ್ | ಣ್ | (ಟ ವರ್ಗ) |
| ತ್ | ಥ್ | ದ್ | ಧ್ | ನ್ | (ತ ವರ್ಗ) |
| ಪ್ | ಫ್ | ಬ್ | ಭ್ | ಮ್ | (ಪ ವರ್ಗ) |



7th_Kannada_Reader.indd 53 24-06-2019 19:37:43

ಘಟಕ
ನಾಲ್ಕು

# 4. ವಿಜ್ಞಾನ ತಂತ್ರಜ್ಞಾನ



## ಕಲಿಕಾ ಉದ್ದೇಶಗಳು

- ಯಾವುದನ್ನು ಏಕೆ, ಹೇಗೆ ಎಂಬುದರ ಮೂಲಕ ತಿಳಿಯಲು ಪ್ರಯತ್ನಿಸುವುದು.
- ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವುದು
- ನಮ್ಮ ದೇಶದ ಭವಿಷ್ಯದ ಉದ್ಧಾರಕ್ಕಾಗಿ ಯಾವುದೆಲ್ಲಾ ಅಗತ್ಯ ಎಂಬುದನ್ನು ಅರಿತುಕೊಳ್ಳುವುದು
- ವೈಜ್ಞಾನಿಕ ಆವಿಷ್ಕಾರದಿಂದ ಆಗುವ ಪರಿಣಾಮಗಳನ್ನು ಚರ್ಚಿಸುವುದು.
- ಬೆಳವಣಿಗೆ ಹೊಂದುತ್ತಿರುವ ವಿಜ್ಞಾನ/ವೈಜ್ಞಾನಿಕ, ತಾಂತ್ರಿಕ ಸಂಬಂಧಗಳನ್ನು ಕುರಿತು ತಿಳಿಯುವ ಆಸಕ್ತಿ ಬೆಳೆಸಿಕೊಳ್ಳುವುದು.
- ಕನ್ನಡದಲ್ಲಿ ತಪ್ಪಿಲ್ಲದೆ ಬರೆಯುವುದು.



7th_Kannada_Reader.indd 54 24-06-2019 19:37:43

ಘಟಕ
ನಾಲ್ಕು

# 4. ವಿಜ್ಞಾನ ತಂತ್ರಜ್ಞಾನ



| | | | |
|---|---|---|---|
| ಕಾವ್ಯ ಕಣಜ | : | ಮಂಗಳ ಗ್ರಹದಲ್ಲಿ ಪುಟ್ಟಿ | – ಸಿ.ಎಂ.ಗೋವಿಂದರೆಡ್ಡಿ |
| ಪೂರಕ ಪದ್ಯ | : | ಕಾಡಿದ್ದರೆ ನಾಡು | |
| ಗದ್ಯ ವಿಹಾರ | : | ಅರಳಿ ಕಟ್ಟೆ | – ಪ್ರೊ.ಬಿ.ಜಿ.ಎಲ್.ಸ್ವಾಮಿ |
| ಉಪಪಠ್ಯ | : | ತರಕಾರಿಗಳ ಮೇಳ | |
| ವ್ಯಾಕರಣ | : | ದ್ವಿರುಕ್ತಿ, ಜೋಡುನುಡಿ, ದೇಶ್ಯ, ಅನ್ಯದೇಶೀಯ ಪದಗಳು | |



7th_Kannada_Reader.indd 55 24-06-2019 19:37:44

ಕಾವ್ಯ ಕಣಜ

ಘಟಕ ನಾಲ್ಕು

# ಮಂಗಳ ಗ್ರಹದಲ್ಲಿ ಪುಟ್ಟಿ

– ಸಿ.ಎಂ.ಗೋವಿಂದರೆಡ್ಡಿ

## ಪ್ರವೇಶ

ಮಕ್ಕಳ ಮನಸ್ಸಿನಲ್ಲಿ ಕುತೂಹಲ ಭರಿತ ಪ್ರಶ್ನೆಗಳು ಹುಟ್ಟುತ್ತವೆ. ವಿವಿಧ ಕಲ್ಪನೆಗಳು ಕಾಣಿಸುತ್ತವೆ. ಹೊಸ ಹೊಸ ಕನಸುಗಳು ಗೂಡು ಕಟ್ಟುತ್ತವೆ. ಮಕ್ಕಳು ತಮ್ಮ ಕಲ್ಪನೆಯಲ್ಲಿ ನಿರ್ಜೀವ ವಸ್ತುಗಳೊಂದಿಗೂ ಮನ ಬಿಚ್ಚಿ ಮಾತಾಡಬಲ್ಲರು! ಅಪರಿಚಿತ ಸನ್ನಿವೇಶಗಳೂ ಸಹ ಅವರ ಕನಸುಗಳಲ್ಲಿ ಹತ್ತಿರಕ್ಕೆ ಬಂದು ಬಿಡುತ್ತವೆ. ಹೀಗಿರುವ ಅವರ ಕಲ್ಪನೆಗಳಿಗೆ ಮತ್ತಷ್ಟು ಗರಿಗಳನ್ನು ಕಟ್ಟಿ ಇನ್ನಷ್ಟು ಎತ್ತರಕ್ಕೆ ಹಾರಲು ಪ್ರೋತ್ಸಾಹಿಸಿ ಆ ಮೂಲಕ ಪ್ರಸ್ತುತತೆಯ ಅರಿವು ಮೂಡಿಸುವುದು ಇಲ್ಲಿನ ಆಶಯವಾಗಿದೆ.

ಆಗಸದಲ್ಲಿ ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ ? ಇದು ಕಷ್ಟ!

ಒಂದಿನ ಇದ್ದಕ್ಕಿದ್ದಂತೆ
ಪುಟ್ಟಿಗೆ ರೆಕ್ಕೆಯು ಬಂದಿತ್ತು
ಹಕ್ಕಿಯ ಹಾಗೆ ಹಾರುವ ಮನಕೆ
ಹೆಚ್ಚಿನ ಹರುಷವ ತಂದಿತ್ತು!

ಕೂಡಲೆ ಪುಟ್ಟಿ ಠಣ್ಣನೆ ಜಿಗಿದು
ಆಗಸದೊಡಲಿಗೆ ಹಾರಿದಳು
ಹಾರುತ ತೇಲುತ ಮುಂದಕೆ ಸಾಗಿ
ಚಂದ್ರನ ಮಡಿಲನು ಸೇರಿದಳು!

ಚಂದ್ರನ ಮೇಲೆ ನೆಟ್ಟಗೆ ನಿಂತು
ಭೂಮಿಯ ಕಡೆಗೆ ನೋಡಿದರೆ
ನೇರಳೆ ಬಣ್ಣದ ಚೆಂಡಿನ ಹಾಗೆ
ಕಂಡಿತು ಅವಳಿಗೆ ನಮ್ಮ ಧರೆ!



7th_Kannada_Reader.indd 56 24-06-2019 19:37:44

ಚಂದ್ರನ ಬಿಟ್ಟು ಮೇಲಕೆ ಹಾರಿ
ಸೇರಲು ಮಂಗಳನಂಗಳವ
ಕೆಂಪಗೆ ಬಣಬಣಗುಟ್ಟುತಲಿತ್ತು
ಕಾಣಲಿಲ್ಲ ಯಾವುದೆ ಜೀವ!

ಪುಟ್ಟಿಯು ಕಂಡಳು ಮಂಗಳನಲ್ಲಿ
'ಯೋಗಿ' ಹೆಸರಿನ ಹೆಬ್ಬಂಡೆ
ಒಡನೆ ಕೇಳಿದಳು ಕೆಂಪು ಬಂಡೆಯನು
'ನೀನು ಹೇಗೆ ಇಲ್ಲಿಗೆ ಬಂದೆ?!'

ಬಂಡೆಯು ಕಣ್ಣೀರನು ಸುರಿಸುತ್ತಾ
ಹೇಳಿತು ಪುಟ್ಟಿಗೆ ನೋವಿನಲಿ
'ಪುಟ್ಟಿಯೆ, ನಮ್ಮೀ ಮಂಗಳ ಗ್ರಹದ
ದುರಂತ ಕಥೆಯನು ಕೇಳಿ ತಿಳಿ'

ಹಿಂದೊಂದು ಕಾಲದಿ ಈ ಗ್ರಹದಲ್ಲಿ
ಇತ್ತು ಜೀವಜಲ ಹಸಿರು ಮರ
ಆಗಿನ ಜನತೆಯು ನಾಡನು ಕಟ್ಟಲು
ಮರಗಳ ಕಡಿಯೆ ಬಂತು ಬರ

ಮಳೆ ಬೆಳೆ ಕಾಣದೆ ಜೀವಿಗಳಳಿದು
ಬಂದಿತು ನನಗೆ ಇಂಥ ಸ್ಥಿತಿ
ನಿಮ್ಮ ಭೂಮಿಯಲಿ ಗಿಡಮರ ಅಳಿದರೆ
ಮುಂದೆ ಒಂದು ದಿನ ಇದೇ ಗತಿ!

ಬಣಬಣಗುಟ್ಟುವ ಬಯಲನು ಕಂಡು
ಧವಧವಗುಟ್ಟಿತು ಎಳೆ ಹೃದಯ
ಹಸಿರನು ಅಳಿಸದೆ ಗಿಡಮರ ಬೆಳೆಸಿ
ಉಳಿಸುವೆವೆಂದಳು ಈ ಧರೆಯ

ಭೂಮಿಗೆ ಬಂದು ಜನತೆಯ ಕಂಡು
ಹಸಿರನು ಉಳಿಸಲು ಬೇಡಿದಳು
ತಾನು ಕೂಡ ಎಳೆ ಸಸಿಗಳ ನೆಟ್ಟು
ಬೆಳೆಸುತ ಕುಣಿಕುಣಿದಾಡಿದಳು



7th_Kannada_Reader.indd 57 24-06-2019 19:37:44

## ಕವಿ–ಕಾವ್ಯ ಪರಿಚಯ

ಸಿ.ಎಂ.ಗೋವಿಂದರೆಡ್ಡಿಯವರು 11.08.1958ರಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಚೆನ್ನಿಗರಾಯಪುರ ಊರಿನಲ್ಲಿ ಜನಿಸಿದರು. ಪ್ರಸ್ತುತ ಇವರು ಬೆಂಗಳೂರಿನ ಕಾಡುಗೋಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಕ್ಕಳ ಸಾಹಿತ್ಯ ರಚನೆಯಲ್ಲಿ ವಿಶೇಷ ಆಸಕ್ತಿ ಹೊಂದಿರುವ ಇವರು ಬಣ್ಣದ ಚಿಟ್ಟೆ, ಮಕ್ಕಳ ಮಂದಾರ, ಪದ್ಯ ಹೇಳುವ ಮರ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಪೆರ್ಲಾ ಕಾವ್ಯ ಪ್ರಶಸ್ತಿ, ಸಿಸು ಸಂಗಮೇಶ ದತ್ತಿ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ವಿವಿಧ ಬಹುಮಾನಗಳು ದೊರೆತಿವೆ.

ಪ್ರಸ್ತುತ ಪದ್ಯವನ್ನು ಇವರ 'ಮಕ್ಕಳ ಮಂದಾರ' ಎಂಬ ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

## ಪದಗಳ ಅರ್ಥ

ಆಗಸ–ಆಕಾಶ, ಗಗನ, ಬಾನು; ಇಷ್ಟ–ಇಚ್ಛೆ, ಮೆಚ್ಚುಗೆ; ರೆಕ್ಕೆ–ಹಕ್ಕಿಗಳ ಪುಕ್ಕ, ಗರಿ; ಒಡಲು–ದೇಹ, ಶರೀರ, ಹೊಟ್ಟೆ; ಸಾಗು–ಮುಂದೆ ಹೋಗು, ಚಲಿಸು; ಮಡಿಲು–ಉಡಿ; ಧರೆ–ನೆಲ, ಭೂಮಿ; ಹೆಬ್ಬಂಡೆ–ದೊಡ್ಡದಾದ ಬಂಡೆ, ವಿಸ್ತಾರವಾದ ಕಲ್ಲು; ಬರ–ಬರಗಾಲ, ಕ್ಷಾಮಕಾಲ, ಮಳೆ ಬಾರದೆ ಎಲ್ಲವೂ ಬರಡಾಗಿ ಹೋಗಿರುವ ಕಾಲ; ಅಳಿ–ಸಾಯು, ನಾಶ ಹೊಂದು, ಅವನತಿ; ಗತಿ–ಸ್ಥಿತಿ, ದಾರಿ, ಪಾಡು; ಬಯಲು–ಅಂಗಳ, ಮೈದಾನ; ಉಳಿಸು–ರಕ್ಷಿಸು, ಕಾಪಾಡು; ನೆಡು–ನಾಟು.

## ಟಿಪ್ಪಣಿ

**ಪುಟ್ಟಿ** – ಮಕ್ಕಳನ್ನು ಕರೆಯುವ ಒಂದು ಮುದ್ದಿನ ಹೆಸರು, ಆಪ್ತ ಸಂಬೋಧನೆ.

**ಮಂಗಳನಂಗಳ** – ಮಂಗಳ ಗ್ರಹದ ಬಯಲು, ಮಂಗಳ ಗ್ರಹದ ವಿಸ್ತಾರ ಪ್ರದೇಶ.

**ಬಣಬಣಗುಟ್ಟು** – ಖಾಲಿಖಾಲಿಯಾಗಿ ಕಾಣು, ನೀರವತೆಯಿಂದ ಕೂಡಿರುವ.

**ಯೋಗಿ ಹೆಸರಿನ**

**ಬಂಡೆ** – ಮಂಗಳ ಗ್ರಹದಲ್ಲಿ ಕಂಡು ಬಂದಿದೆ ಎನ್ನಲಾದ ಒಂದು ದೊಡ್ಡ ಬಂಡೆ.

**ದುರಂತ** – ದುಃಖದಲ್ಲಿ ಮುಗಿಯುವ, ಕಷ್ಟದಲ್ಲಿ ಕೊನೆಗೊಳ್ಳುವ.

**ಥವಥವಗುಟ್ಟು** – ಒಮ್ಮೆಲೇ ಭಯವಾಗು, ಹೃದಯ ಜೋರಾಗಿ ಹೊಡೆದುಕೊಳ್ಳು.

## ಪ್ರಶ್ನೋತ್ತರಗಳು

**I. ಖಾಲಿ ಬಿಟ್ಟ ಸ್ಥಳವನ್ನು ತುಂಬಿರಿ**

1. ಒಂದಿನ ಇದ್ದಕ್ಕಿದ್ದಂತೆ ಪುಟ್ಟಿಗೆ _____ ಬಂದಿತ್ತು.
2. ಹಾರುತ ತೇಲುತ ಮುಂದಕೆ ಸಾಗಿ ಚಂದ್ರನ _____ ಸೇರಿದಳು.
3. ಪುಟ್ಟಿಯೆ ನಮ್ಮೀ ಮಂಗಳ ಗ್ರಹದ ದುರಂತ _____ ಕೇಳಿ ತಿಳಿ.
4. ಹಸಿರನು ಅಳಿಸದೆ ಗಿಡ ಮರ ಬೆಳೆಸಿ ಉಳಿಸುವೆವೆಂದಳು ಈ _____

**II. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಪುಟ್ಟಿಗೆ ಯಾರ ಹಾಗೆ ಹಾರುವ ಮನಸ್ಸಿತ್ತು ?
2. ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಎಲ್ಲಿಗೆ ಸೇರಿದಳು ?
3. ಪುಟ್ಟಿ 'ಯೋಗಿ'ಗೆ ಏನೆಂದು ಕೇಳಿದಳು ?
4. ಮಂಗಳ ಗ್ರಹದಲ್ಲಿ ಬರ ಏಕೆ ಬಂದಿತು ?
5. ಪುಟ್ಟಿ ಜನರಲ್ಲಿ ಏನನ್ನು ಉಳಿಸಲು ಬೇಡಿದಳು?



7th_Kannada_Reader.indd 58 24-06-2019 19:37:44

**III. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕವಿ ಗೋವಿಂದರೆಡ್ಡಿಯವರ ಪರಿಚಯ ಮಾಡಿ ಕೊಡಿ.
2. ಮಕ್ಕಳ ಮನಸ್ಸಿನಲ್ಲಿ ಪ್ರಸ್ತುತತೆಯ ಅರಿವು ಮೂಡಿಸುವುದು ಹೇಗೆ?

## ಭಾಷಾಭ್ಯಾಸ

**1 ಕೆಳಗಿನ ಪದಗಳ ನಾಮಪದ, ನಾಮಪ್ರಕೃತಿ ಮತ್ತು ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ.**

1. ಗಗನ + ಅನ್ನು = ಗಗನವನ್ನು
2. ಶಾಲೆ + ಇಂದ = ಶಾಲೆಯಿಂದ

**ರಾಮನು, ಕಾಡಿನಲ್ಲಿ, ಮನೆಗೆ, ಸ್ನೇಹಿತನ.**

**2. ಕೊಟ್ಟಿರುವ ವಾಕ್ಯಗಳಲ್ಲಿರುವ ಗುಣವಾಚಕ (ವಿಶೇಷಣ) ಗಳನ್ನು ಗುರುತಿಸಿರಿ.**

**ಉದಾಹರಣೆ : ವಿವೇಕನಿಗೆ ಅಪಾರ ಬುದ್ಧಿವಂತಿಕೆ ಇದೆ – ಅಪಾರ**

1. ರಫೀಕನದು ದೊಡ್ಡ ಮನೆ _____
2. ಅವಳಿಗೆ ಹಸಿರು ಬಣ್ಣ ಇಷ್ಟ _____
3. ಪುಟ್ಟಿಯು ಕಂಡಳು ಕೆಂಪು ಬಂಡೆಯನು _____
4. ತಾನು ಕೂಡ _____ ಸಸಿಗಳನ್ನು ನೆಟ್ಟಳು

**3. ಕೊಟ್ಟಿರುವ ವಾಕ್ಯಗಳಲ್ಲಿ ಸಂಖ್ಯಾವಾಚಕಗಳನ್ನು ಗುರುತಿಸಿ ಬರೆಯಿರಿ.**

1. ಡೇವಿಡ್‌ನ ಊರಿನಲ್ಲಿ ನೂರು ಹಸುಗಳಿವೆ _____
2. ಪೂರ್ಣ ಚಂದ್ರನು ಬೆಳಿಗ್ಗೆ ಐದು ಗಂಟೆಗೆ ಏಳುತ್ತಾನೆ _____
3. ಒಂದು ದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ರೆಕ್ಕೆಯು ಬಂದಿತ್ತು _____

**4. ಕೊಟ್ಟಿರುವ ಸನ್ನಿವೇಶ/ಘಟನೆಯನ್ನು ಬೇರೆಯವರಿಂದ ಓದಿಸಿರಿ. ಚೆನ್ನಾಗಿ ಆಲಿಸಿರಿ. ಕೆಳಗೆ ಕೊಟ್ಟಿರುವ ಪ್ರಶ್ನೆಗೆ ಉತ್ತರಿಸಿರಿ.**

ಚಾರ್ಲ್ಸ್ ಡಾರ್ವಿನ್ನರ ಮೊಮ್ಮಕ್ಕಳು ಒಂದು ಸಲ ತಮ್ಮ ತಾತನನ್ನು ಕೀಟಲೆ ಮಾಡುವುದಕ್ಕಾಗಿ ಒಂದು ಹೂಟ ಹೂಡಿದರು. ಒಂದು ಜೀರುಂಡೆಯನ್ನು ಹಿಡಿದು ತಂದು, ಅದರ ರೆಕ್ಕೆಗಳನ್ನು ಕಿತ್ತು ಹಾಕಿದರು. ಅದಕ್ಕೆ ಚಿಟ್ಟೆಯೊಂದರ ರೆಕ್ಕೆಗಳನ್ನು ಅಂಟಿಸಿದರು. ಅಂಟಿಸುವಿಕೆಯನ್ನು ಬಹಳ ಚತುರತೆಯಿಂದ ಮಾಡಿದ್ದರಿಂದ ಅದು ಒಂದು ನೈಜವಾದ, ಆದರೆ ಅಪರೂಪವಾದ ಕೀಟದಂತೆ ಕಾಣುತ್ತಿತ್ತು. ಅದನ್ನು ಅವರು ಡಾರ್ವಿನ್ನರ ಬಳಿಗೆ ಕೊಂಡೊಯ್ದು, 'ತಾತಾ... ಇದು ಯಾವ ಜಾತಿಯ ಕೀಟ?' ಎಂದು ಕೇಳಿದರು. ಡಾರ್ವಿನ್ನರು ಅದನ್ನು ಒಂದು ಕ್ಷಣ ಪರೀಕ್ಷಿಸಿ ನೋಡಿ, 'ಒಂದು ಹೊಸ ಕೀಟ ಜಾತಿಯನ್ನೇ ಪತ್ತೆ ಮಾಡಿ ಬಿಟ್ಟಿದ್ದೀರಲ್ಲಾ! ತುಂಬಾ ಸಂತೋಷ! ಇದು ನಿಮಗೆ ಎಲ್ಲಿ ಸಿಕ್ಕಿತು? ನೀವು ನೋಡಿದಾಗ ಇದು ಏನು ಮಾಡುತ್ತಿತ್ತು?' ಎಂದು ಕೇಳಿದರು. ತಾತ ತಮ್ಮ ಬಲೆಗೆ ಬಿದ್ದರೆಂದು ಬಹು ಸಂತೋಷ ಪಟ್ಟ ಆ ಮಕ್ಕಳು, 'ನಮ್ಮ ಮನೆಯ ಹಿತ್ತಲ ತೋಟದಲ್ಲಿ ಸಿಕ್ಕಿತು. ಗಿಡದ ಎಲೆಯ ಮೇಲೆ ಕುಳಿತಿತ್ತು. ನಾವು ನೋಡಿದಾಗ ಇದು ಹಂ(ಗುಂಯ್‌ಗುಡು) ಮಾಡುತ್ತಿತ್ತು. ಎಂದರು. ಅದಕ್ಕೆ ಡಾರ್ವಿನ್ನರು, 'ಓಹೋ! ಸರಿ ಮತ್ತೆ... ಹಾಗಾದರೆ ಇದು ಹಮ್‌ಬಗ್ (ಹಮ್‌ಬಗ್= ಗುಂಯ್‌ಗುಡುವ ಕೀಟ) ಎಂದರು.

**ಪ್ರಶ್ನೆಗಳು**

1. ಡಾರ್ವಿನ್ನರು ಹೊಸ ಕೀಟವನ್ನು 'ಹಮ್‌ಬಗ್' ಎಂದು ಏಕೆ ಕರೆದರು?
2. ಮಕ್ಕಳು ಚಿಟ್ಟೆಯ ರೆಕ್ಕೆಯನ್ನು ಯಾವುದಕ್ಕೆ ಅಂಟಿಸಿದರು ?
3. ಮಕ್ಕಳು ತಂದ ಕೀಟವನ್ನು ನೋಡಿ ಡಾರ್ವಿನ್ ಏನೆಂದು ಪ್ರಶ್ನಿಸಿದರು ?

## ಚಟುವಟಿಕೆ

1. ನೀವು ವಾಸಿಸುವ ಪರಿಸರದ ಸುತ್ತಲೂ ಗಿಡಮರಗಳನ್ನು ಬೆಳೆಸಿ.
2. ಈಗಾಗಲೇ ಬೆಳೆದಿರುವ ಮರಗಳನ್ನು ಯಾವುದೇ ಕಾರಣಕ್ಕೂ ಕಡಿಯಬೇಡಿ, ಕಡಿಯಲು ಬಿಡಬೇಡಿ.



7th_Kannada_Reader.indd 59 24-06-2019 19:37:44

ಪೂರಕ ಪದ್ಯ

ಘಟಕ ನಾಲ್ಕು

# ಕಾಡಿದ್ದರೆ ನಾಡು

ಕಾಡ ನಾಶವೆ ನಮ್ಮ ನಾಶವು
ಕಾಡ ಕಡಿಯಲು ಬೇಡಿರೋ
ಕಾಡಿನಿಂದಲೆ ಮಳೆಯು ಬೆಳೆಯು
ಕಾಡನುಳಿಸಿ ಬೆಳೆಸಿರೋ ‖1‖

ಹಸುರೆ ನಮ್ಮಯ ಬಾಳಿನುಸಿರು
ಹಸುರೆ ನಮ್ಮಯ ಅನ್ನವು
ಹಸುರೆ ನಮ್ಮಯ ಬಟ್ಟೆಬರೆಯು
ಹಸುರೆ ನಮಗಾಧಾರವು ‖2‖

ಹಸುರೆ ಇಲ್ಲದ ಮರಳುಗಾಡು
ಉರಿವ ಬಿಸಿಲಿನ ಬೆಂಕಿಯೋಡು
ನೀರಿನೊರತೆಯೆ ಇರದ ನಾಡು
ಬರದ ಕ್ಷಾಮದ ಬೋಳು ಬೀಡು! ‖3‖

ಮರದ ಬುಡಕೆ ಕೊಡಲಿ ಹಾಕುತ
ಕಾಡ ನಾಶವ ಮಾಡಬೇಡಿರಿ
ಕಾಡನುಳಿಸಿ ನೀವು ಉಳಿಯಿರಿ
ಸುಖದ ಶಾಂತಿಯ ಪಡೆಯಿರಿ ‖4‖



7th_Kannada_Reader.indd 60 24-06-2019 19:37:44

## ಪದಗಳ ಅರ್ಥ

ನಾಶ–ಅವನತಿ, ಅಳಿವು; ಕಡಿಯಲು–ಕತ್ತರಿಸಲು; ಅನ್ನ–ಆಹಾರ; ಮರಳುಗಾಡು–ಮರಳಿನಿಂದ ಆವರಿಸಿರುವ ಪ್ರದೇಶ; ಕ್ಷಾಮ–ಬರಗಾಲ; ಒರತೆ–ನೀರಿನ ಸೆಲೆ; ಬುಡ–ತಳ, ಕೆಳಭಾಗ; ಶಾಂತಿ–ನೆಮ್ಮದಿ.


## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಮಳೆ–ಬೆಳೆ ಯಾವುದರಿಂದ ಆಗುವುದು ?
2. ನಮ್ಮ ಉಸಿರು ಯಾವುದು ?
3. 'ಬರದ ನಾಡು' ಹೇಗಿದೆ ? ಕವಿಯ ಮಾತಿನಲ್ಲಿ ಹೇಳಿ.
4. ಈ ಕವನದ ಸಂದೇಶವನ್ನು ಬರೆಯಿರಿ.

## ಚಟುವಟಿಕೆ

1. ನಿಮ್ಮ ಶಾಲೆಯಲ್ಲಿ ಹಾಗೂ ಮನೆಯ ಸುತ್ತಲೂ ಮರಗಳನ್ನು ಬೆಳೆಸಿ.
2. ಪರಿಸರವನ್ನು ಸದಾ ಶುಚಿಯಾಗಿಟ್ಟುಕೊಳ್ಳಲು ಪ್ರಯತ್ನಿಸಿ.





7th_Kannada_Reader.indd 61 24-06-2019 19:37:44

ಗದ್ಯ ವಿಹಾರ

ಘಟಕ ನಾಲ್ಕು

# ಅರಳಿ ಕಟ್ಟೆ

–ಪ್ರೊ. ಬಿ.ಜಿ.ಎಲ್.ಸ್ವಾಮಿ

## ಪ್ರವೇಶ

ಕೆಲವು ಗಿಡಮರಗಳು ನಮ್ಮ ಸಮೀಪದಲ್ಲಿದ್ದರೂ ಅವುಗಳ ಉಪಯೋಗ, ಗುಣ–ಲಕ್ಷಣಗಳು ನಮ್ಮ ಅರಿವಿಗೆ ಬಂದಿರುವುದಿಲ್ಲ. ಎಷ್ಟೋ ಗಿಡಮೂಲಿಕೆಗಳು ಅಳಿವಿನ ಅಂಚಿನಲ್ಲಿವೆ. ಅವುಗಳಲ್ಲಿ ಅಶ್ವತ್ಥ ವೃಕ್ಷವೂ ಒಂದಾಗಿದೆ. ಅಶ್ವತ್ಥ ವೃಕ್ಷವನ್ನು ಅರಳಿ ಮರ, ಬೋಧಿ ವೃಕ್ಷ ಎಂದೂ ಕರೆಯುವರು. ಮಾನವನ ಒಡನಾಡಿಯಾಗಿ, ಅಶ್ವತ್ಥ ಮರ, ಅನಾದಿ ಕಾಲದಿಂದಲೂ ಉಪಯೋಗದಲ್ಲಿದೆ. ಈ ಮರವನ್ನು 'ಆಮ್ಲಜನಕದ ಬ್ಯಾಂಕ್' ಎಂದು ಕರೆಯುವರು. ನಮ್ಮ ಪೂರ್ವಜರು ಈ ಮರದ ಗುಣವನ್ನು ಅರಿತೇ ಪ್ರತಿ ಗ್ರಾಮದ ಮುಂದೆ ಅರಳಿ ಮರದ ಜೊತೆಗೆ ಬೇವಿನ ಮರವನ್ನು ಬೆಳೆಸಿ, ಸುತ್ತಲೂ ಕಟ್ಟೆ ಕಟ್ಟಿ, ನಾಗರ ಕಲ್ಲು ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದರು. ಅರಳಿ ಮರದ ಎಲೆಗಳನ್ನು ಆಡು, ಹಸು, ಎಮ್ಮೆಗಳು ತಿನ್ನುತ್ತವೆ. ಹಣ್ಣುಗಳನ್ನು ಹತ್ತಾರು ಪಕ್ಷಿಗಳು ತಿನ್ನುತ್ತವೆ. ಪಕ್ಷಿಗಳು ಗೂಡು ಕಟ್ಟಿ ಇದರಲ್ಲಿ ವಾಸ ಮಾಡುತ್ತವೆ. ಅಲ್ಲದೆ ಇದು ನೂರಾರು ಕ್ರಿಮಿಕೀಟಗಳ ವಾಸಸ್ಥಾನವೂ ಆಗಿದೆ.

ಬಹು ಉಪಯುಕ್ತವಾದ ಅರಳೀ ಮರವನ್ನು ನೆಟ್ಟು ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ, ಹೃದಯ ಶ್ರೀಮಂತಿಕೆಯನ್ನು ಮೆರೆದ, ಕಡುಬಡತನದ ಶೇಷಪ್ಪನ ಯಶೋಗಾಥೆಯೇ ಪ್ರಸ್ತುತ ಗದ್ಯದ ತಿರುಳು. ಇಂತಹ ಸಾರ್ಥಕ ಬದುಕನ್ನು ಬದುಕಬೇಕು ಎಂಬುದು ಲೇಖಕರ ಆಶಯ.





7th_Kannada_Reader.indd 62 24-06-2019 19:37:44

ನನ್ನ ಚಿಕ್ಕಂದಿನಲ್ಲಿ ನಮ್ಮ ಮನೆಗೊಬ್ಬ ವೃದ್ಧರು ಬರುತ್ತಿದ್ದರು. ವಯಸ್ಸು ಸುಮಾರು 75–80 ಇರಬಹುದು; ಕೃಶವಾದ ದೇಹ, ಕುಳಿ ಬಿದ್ದ ಕಣ್ಣು. ದೃಷ್ಟಿ ಮಾಂದ್ಯ, ಕಿವಿಯಂತೂ ಎಷ್ಟೋ ವರ್ಷಗಳ ಹಿಂದೆಯೇ ತನ್ನ ಕಾರ್ಯದಿಂದ ರಿಟೈರ್ ಆಗಿ ಬಿಟ್ಟಿತ್ತು. ಕೈಯಲ್ಲಿ ಕೋಲು ಹಿಡಿಯದೆ ಒಂದು ಹೆಜ್ಜೆಯನ್ನೂ ಇಡುವಂತಿರಲಿಲ್ಲ. ನಿತ್ಯ ಭಿಕ್ಷೆಯಿಂದ ಜೀವನ. ಇಳಿವಯಸ್ಸಿನಲ್ಲಿ ಇವರನ್ನು ನೋಡಿಕೊಳ್ಳುವವರಾರೂ ಇರಲಿಲ್ಲ. ಶೇಷಪ್ಪ ಎಂದೇನೋ ಹೆಸರು. ಈತನಿಗಿದ್ದದ್ದು ಒಂದೇ ಒಂದು ಆಸೆ, ಉತ್ಕಟವಾದ ಆಸೆ. ಕಣ್ಣು ಮುಚ್ಚುವುದರೊಳಗಾಗಿ ನೆರೆವೇರಿಸಬೇಕೆಂಬ ಆಸೆ, 'ಅಶ್ವತ್ಥ ಪ್ರತಿಷ್ಠೆ'; ಪ್ರತಿಷ್ಠೆಯಾದ ಮರಕ್ಕೊಂದು ಕಟ್ಟೆ ಕಟ್ಟುವುದು. ಈ ಎರಡು ಕರ್ತವ್ಯಗಳ ಹೊರೆ ಅವರ ಹೆಗಲ ಮೇಲೆ ಭಾರವಾಗಿ ಹೇರಿಕೊಂಡಿದ್ದು, ಬಹಳ ತೊಂದರೆ ಕೊಡುತ್ತಿದ್ದವಂತೆ. ಈ ಕಾರ್ಯಕ್ಕಾಗಿ ಅವರು ಉದ್ದೇಶಿಸಿದ್ದ ಪ್ರದೇಶ ಬಸವನ ಗುಡಿ(ಬೆಂಗಳೂರು)ಯಲ್ಲಿರುವ ಮಲ್ಲಿಕಾರ್ಜುನ ಸ್ವಾಮಿ ಗುಡಿಯ ಮುಂಭಾಗ. ಅದು ಸರ್ಕಾರಕ್ಕೋ, ಕಾರ್ಪೋರೇಷನ್ನಿಗೋ ಸೇರಿದ್ದು. ಕಟ್ಟೆ ಹಾಕುವುದಕ್ಕೆ ಈ ಸಂಸ್ಥೆಗಳವರು ಏನೋ ತಕರಾರು ಎತ್ತಿದ್ದರು. ವೃದ್ಧರ ಯತ್ನಕ್ಕೆ ವಿಘ್ನಗಳನ್ನು ಒಡ್ಡಿದ್ದರು. ಇದರ ವಿಷಯವಾಗಿ ಮಾತುಕತೆಯಾಡಿಕೊಂಡು ಹೋಗುವುದಕ್ಕೆ ನನ್ನ ತಂದೆಯವರ ಬಳಿ ಅವರು ಬರುತ್ತಿದ್ದರು. ಕೊನೆಗೊಂದು ದಿನ ವಿಘ್ನಗಳು ನಿವಾರಣೆಯಾದವು. ಪ್ರಶಸ್ತ ದಿನವೊಂದರಲ್ಲಿ ಕಾರ್ಯಗಳನ್ನು ಮುಗಿಸಿದರು. ಬೆಳಿಗ್ಗೆ, ಸುಮಾರು 11 ಗಂಟೆ ಸಮಯಕ್ಕೆ ವೃದ್ಧರು ಮನೆಗೆ ಬಂದರು. ನಮ್ಮ ತಂದೆಯವರು ಹೊರಗೆ ಹೋಗಿದ್ದರು. ವೃದ್ಧರು ಕೈಯಲ್ಲಿ ಹಿಡಿದು ತಂದಿದ್ದ ತಾಮ್ರದ ಪಂಚಪಾತ್ರೆ, ಉದ್ಧರಣೆ, ಒಂದು ಬಾಳೆಹಣ್ಣು, ಎರಡು ಸೇವಂತಿಕೆ ಹೂ, ಒಂದು 'ಅನಂತ ವಸ್ತ್ರ' – ಇವುಗಳನ್ನು ನನ್ನ ಸೋದರತ್ತೆಯವರ ಕೈಯಲ್ಲಿಟ್ಟು, 'ಇವುಗಳನ್ನು ಯಜಮಾನರಿಗೆ ತಲುಪಿಸಿ ಬಿಡಿ. ಕಾರ್ಯ ನನ್ನ ಉದ್ದೇಶಕ್ಕೆ ತಕ್ಕಂತೆ ನೆರವೇರಿತು. ನನ್ನ ಋಣ ತೀರಿತು. ಯಜಮಾನರ ನೆರವಿಲ್ಲದೇ ಹೋಗಿದ್ದಿದ್ದರೆ ನನ್ನ ಋಣದ ಗಂಟನ್ನು ಹೊತ್ತುಕೊಂಡೇ ಕಣ್ಮುಚ್ಚಬೇಕಾಗಿದ್ದಿತು. ಈಗ ನನಗೆ ಯಾವ ಭಯವೂ ಇಲ್ಲ. ನಿಶ್ಚಿಂತೆಯಿಂದ ಮುಂದನ್ನು ಎದುರು ನೋಡುತ್ತಿದ್ದೇನೆ. ಇನ್ನೊಂದು ಸಲ ಬಂದು, ಯಜಮಾನರಿಗೆ ಸಾಷ್ಟಾಂಗ ಬೀಳುತ್ತೇನೆ. ದಯವಿಟ್ಟು ತಿಳಿಸಿಬಿಡಿ' ಎಂದು ಹೇಳಿ ಹೊರಡಲು ಉದ್ಯುಕ್ತರಾದರು. ಸೋದರತ್ತೆ, 'ಒಂದಿಷ್ಟು ಹಾಲು ಕುಡಿದು ಹೋಗಬೇಕು' ಎಂದರು.

'ಇಲ್ಲಮ್ಮಾ... ಇವತ್ತು ನಾಲ್ಕು ಜನಕ್ಕೆ ಭೋಜನ ಬಡಿಸಬೇಕು. ಅವರದಾದ ಬಳಿಕವೇ ನನ್ನದು. ನಾಲ್ಕೈದು ಮನೆಗಳಿಗೆ ಹೋಗಿ ಭಿಕ್ಷೆ ತೆಗೆದುಕೊಳ್ಳಬೇಕು. ಆಮೇಲೆ ಅಡುಗೆ ಮಾಡಬೇಕು. ಅನ್ನ ಶಾಂತಿಗೆ ಬರುವವರನ್ನು ನಾನು ಕಾಯಿಸಬಾರದಮ್ಮಾ...'
'ಅಕ್ಕಿ ಬೇಳೆ ಸಾಮಗ್ರಿಗಳನ್ನು ನಮ್ಮ ಮನೆಯಿಂದಲೇ ಕೊಡುತ್ತೇನೆ'

'ಬೇಡಮ್ಮಾ, ನಾಲ್ಕು ಬಾಗಿಲಲ್ಲಿ ನಿಂತು ಯಾಚಿಸುವುದು ನನಗೆ ರಕ್ತಗತವಾಗಿ ಬಿಟ್ಟಿದೆ. ಇಂದೇಕೆ ಅದನ್ನು ತಪ್ಪಿಸಲಿ?' ಎಂದು ಹೇಳಿ ಹೊರಟು ಹೋದರು.

ನನ್ನ ಬಾಲ್ಯದ ಬುದ್ಧಿಗೆ, 'ಈ ಮುದುಕ ಯಾಚನೆಯಿಂದ ಜನರನ್ನು ತೊಂದರೆಗೀಡು ಮಾಡಿ ಮರ ನೆಟ್ಟು, ಜಗಲಿ ಕಟ್ಟಿಸದೇ ಹೋಗಿದ್ದರೆ ಯಾರು ಅಳುತ್ತಿದ್ದರು' ಎಂದು ಅನ್ನಿಸಿದ್ದೇನೋ ನಿಜ. ಕಾಲಕ್ರಮೇಣ ಶೇಷಪ್ಪನಂತಹ ಮಹಾನುಭಾವರಿಗೆಲ್ಲಾ ಮನಸ್ಸಿನಲ್ಲಿಯೇ ಎಷ್ಟೋ ಸಲ ಮಣಿದಿದ್ದೇನೆ, ಕೃತಜ್ಞತೆ ಅರ್ಪಿಸಿದ್ದೇನೆ. ಅವರ ಜೀವಿತದಲ್ಲಿ ಯಾವುದೋ ಒಂದು–ತಮ್ಮ ಸ್ವಧರ್ಮ ದೃಷ್ಟಿಯಲ್ಲಿ ಪ್ರೇರಿತವಾದ ಯಾವುದೋ ಒಂದು–ಉದ್ದೇಶವನ್ನು ಕಂಡುಕೊಂಡು ಅದನ್ನು ತಮ್ಮ ಋಣ ತೀರಿಸುವ ಕರ್ತವ್ಯವೆಂದು ಬಗೆದು, ತದೇಕ ಚಿತ್ತತೆಯಿಂದ ಅದರ ಸಾಧನೆಯಲ್ಲಿ ತೊಡಗಿ, ಪೂರೈಸಿ ಕೃತಕೃತ್ಯರಾದ ಮಹಾನುಭಾವರು ಎಂಬುದು ನನ್ನ ತಿಳುವಳಿಕೆ. ಇಂತಹವರ ಸತತವಾದ ನಿಷ್ಠೆಯಿಂದಲೇ, ಬೀದಿಗೊಂದು ಹಳ್ಳಿಗೊಂದು ಅಶ್ವತ್ಥಕಟ್ಟೆಗಳು ತಲೆಯೆತ್ತಿವೆ.

ಅಶ್ವತ್ಥ ಬರಿಯ ಮರವಲ್ಲ, ಕಟ್ಟೆ ಯಾವುದೋ ಕಟ್ಟೆಯಲ್ಲ. ಇವೆರಡೂ ಜನಜೀವನದಲ್ಲಿ ಬಹುಕಾಲದಿಂದ ಒಂದಾಗಿ ಬಿಟ್ಟಿವೆ... ಹಳ್ಳಿಯ ಸಾರ್ವಜನಿಕ ಸಮಾರಂಭಗಳು ಅಶ್ವತ್ಥಮರದಡಿಯಲ್ಲಿ ನಡೆಯುತ್ತವೆ. ಪಂಚಾಯಿತಿಗಳಿಗೆ, ಅಶ್ವತ್ಥಮರ



7th_Kannada_Reader.indd 63 24-06-2019 19:37:44

ಛಾವಣಿ, ಕಟ್ಟೆಯೇ ನೆಲಹಾಸು; ಮದುವೆ ಮುಂಜಿಗಳಿಗೆ ಪ್ರಶಸ್ತವಾದ, ಪವಿತ್ರವಾದ ಕಲ್ಯಾಣ ಮಂಟಪ; ಪ್ರವಾಸಿಗಳಿಗೂ ಯಾತ್ರಾರ್ಥಿಗಳಿಗೂ ಆದರವೀಯುವ ಸತ್ರ; ಮಕ್ಕಳ ಆಟ, ಓಟ, ಪಾಠಗಳಿಗೆ ಕಾಪು; ಹಿರಿಯರ ಗಾಳಿ ಸೇವನೆಗೂ ವಿಚಾರ ವಿನಿಮಯಕ್ಕೂ ಒಪ್ಪುವ ಆಶ್ರಯ; ಬೀದಿ ಮಾತಿಗೂ ಕಾಡುಹರಟೆಗೂ, ಕೀಟಲೆ–ಕೋಟಲೆಗಳಿಗೂ ಮಾತೃಸ್ಥಾನವಾಗಿ ಇದು ರೂಪುಗೊಂಡಿದೆ.

## ಕೃತಿ ಕರ್ತೃ ಪರಿಚಯ



**ಪ್ರೊ.ಬಿ.ಜಿ.ಎಲ್.ಸ್ವಾಮಿ**

ಪ್ರೊ.ಬಿ.ಜಿ.ಎಲ್.ಸ್ವಾಮಿ ಅವರ ಪೂರ್ಣ ಹೆಸರು ಬೆಂಗಳೂರು ಗುಂಡಪ್ಪ ಲಕ್ಷ್ಮೀ ನಾರಾಯಣ ಸ್ವಾಮಿ. ಇವರು 1918ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಕನ್ನಡದ ಪ್ರಖ್ಯಾತ ಲೇಖಕರೂ, ಕವಿಗಳೂ ಆದ ಡಿ.ವಿ.ಗುಂಡಪ್ಪನರು.

ಇವರ ಪ್ರಮುಖ ಕೃತಿಗಳೆಂದರೆ 'ದೌರ್ಗಂಧಿಕಾಪಹರಣ', 'ಶಾಸನಗಳಲ್ಲಿ ಗಿಡಮರಗಳು', 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕಾ', 'ಹಸುರು ಹೊನ್ನು', 'ಪಂಚ ಕಲಶ ಗೋಪುರ', 'ಕಾಲೇಜು ರಂಗ', 'ಕಾಲೇಜು ತರಂಗ', 'ತಮಿಳು ತಲೆಗಳ ನಡುವೆ' ಮುಂತಾದವು. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳೂ ದೊರೆತಿವೆ. ಇವರು 1980ರಲ್ಲಿ ಇಹಲೋಕವನ್ನು ತ್ಯಜಿಸಿದರು. ಪ್ರಸ್ತುತ 'ಅರಳಿ ಕಟ್ಟೆ' ಎನ್ನುವ ಈ ಗದ್ಯ ಭಾಗವನ್ನು ಬಿ.ಜಿ.ಎಲ್.ಸ್ವಾಮಿ ಅವರ ಹಸುರು ಹೊನ್ನು ಕೃತಿಯಿಂದ ಆರಿಸಲಾಗಿದೆ.

## ಪದಗಳ ಅರ್ಥ

ಆದರ–ಪ್ರೀತಿ, ಗೌರವ, ವಿಶ್ವಾಸ; ಉತ್ಕಟ–ಅಪಾರವಾದ, ಪ್ರಬಲ; ಉದ್ಧರಣೆ–ತೀರ್ಥದ ಸಣ್ಣ ಚಮಚ; ಉದ್ಯುಕ್ತ–ಕೆಲಸದಲ್ಲಿ ತೊಡಗಿದ, ಪ್ರಯತ್ನಿಸಿದ; ಕಾಪು–ಕಾಯುವಿಕೆ, ಕಾವಲು, ರಕ್ಷಣೆ; ಕೃತಕೃತ್ಯ–ಸಾರ್ಥಕ, ಧನ್ಯ, ಇಚ್ಛೆ ಪೂರ್ಣಗೊಂಡ ಭಾವ; ಕೃಶ–ಬಡಕಲು, ಸಣ್ಣಗೆ, ಅಶಕ್ತ; ಕಾರ್ಪೋರೇಷನ್(ಇಂಗ್ಲಿಷ್‌ಪದ)–ನಗರಪಾಲಿಕೆ; ಪ್ರತಿಷ್ಠೆ–ಸ್ಥಾಪನೆ; ವಿಘ್ನ–ಅಡಚಣೆ; ರಿಟೈರ್–ನಿವೃತ್ತಿ, ವೃದ್ಧ–ವಯಸ್ಸಾದ ವ್ಯಕ್ತಿ, ಮುದುಕ; ಸತ್ರ–ಛತ್ರ; ಸರ್ಕಾರ–ಆಡಳಿತ ನಡೆಸುವ ವ್ಯವಸ್ಥೆ; ಸಾಷ್ಟಾಂಗ ಬೀಳು–ದೀರ್ಘದಂಡ ನಮಸ್ಕಾರ ಮಾಡು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಶೇಷಪ್ಪನವರಿಗೆ ಜೀವನದಲ್ಲಿದ್ದ ಉತ್ಕಟ ಆಸೆ ಯಾವುದು ?
2. ಶೇಷಪ್ಪನವರು ಜೀವನೋಪಾಯಕ್ಕೆ ಏನು ಮಾಡುತ್ತಿದ್ದರು ?
3. ಶೇಷಪ್ಪನವರು ಅಶ್ವತ್ಥಕಟ್ಟೆಯನ್ನು ಕಟ್ಟಲು ಗುರುತಿಸಿದ ಸ್ಥಳ ಯಾವುದು?
4. 'ಅರಳಿ ಕಟ್ಟೆ' ಗದ್ಯ ಭಾಗದ ಆಕರ ಗ್ರಂಥ ಯಾವುದು?
5. ಬಿ.ಜಿ.ಎಲ್.ಸ್ವಾಮಿಯವರ ಪೂರ್ಣ ಹೆಸರೇನು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಶೇಷಪ್ಪನವರ ದೇಹಾರೋಗ್ಯದ ಸ್ಥಿತಿ ಹೇಗಿತ್ತು ?
2. ಶೇಷಪ್ಪನವರು ತಮ್ಮ ಆಸೆ ನೆರವೇರಿದುದರಿಂದ ಕೃತಜ್ಞತೆಯನ್ನು ಹೇಗೆ ಸಲ್ಲಿಸಿದರು ?
3. ಶೇಷಪ್ಪನವರ ಆಸೆಯನ್ನು ಗಮನಿಸಿದ ಲೇಖಕರಿಗೆ ಬಾಲ್ಯದಲ್ಲಿ ಅನ್ನಿಸಿದ್ದೇನು?
4. ಅಶ್ವತ್ಥಕಟ್ಟೆ ಜನರಿಗೆ ಹೇಗೆ ಉಪಯುಕ್ತವಾಗಿದೆ ?
5. ಲೇಖಕರು ಶೇಷಪ್ಪನವರಿಗೆ ಕೃತಜ್ಞತೆ ಅರ್ಪಿಸಿದ್ದು ಏಕೆ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಶೇಷಪ್ಪನವರ ವ್ಯಕ್ತಿತ್ವದ ವಿಶೇಷತೆಗಳೇನು?
2. ಶೇಷಪ್ಪನವರಿಗೂ ಲೇಖಕರ ಸೋದರತ್ತೆಗೂ ನಡುವೆ ಯಾವ ಸಂಭಾಷಣೆ ನಡೆಯಿತು ?



7th_Kannada_Reader.indd 64 24-06-2019 19:37:45

## ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ಬೆರಗು, ಶರೀರ, ಓಲೆ, ಗ್ರಂಥ, ಸಹಾಯ, ಜಡ್ಡು.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**

   ಮನೆಗೊಬ್ಬ, ಕಿವಿಯಂತೂ, ಭಿಕ್ಷೆಯಿಂದ, ಮರಕ್ಕೊಂದು, ಇದೇಕೆ.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ಇಳಿ, ಆಸೆ, ಕೃತಜ್ಞತೆ, ಭಾರ, ಭಯ, ನಿಶ್ಚಿಂತೆ.

4. **ಈ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

   ನಿತ್ಯ, ಕಾರ್ಯ, ಸಂಸ್ಥಾ, ಸ್ಥಾನ, ರಕ್ತ, ಭಿಕ್ಷೆ.

5. **ಕೆಳಗೆ ನೀಡಿರುವ ಪದಗಳನ್ನು, ಮಾದರಿಯಲ್ಲಿ ತೋರಿಸಿರುವಂತೆ ವಿಭಿನ್ನಾರ್ಥಗಳಲ್ಲಿ ವಾಕ್ಯಗಳನ್ನು ರಚಿಸಿರಿ.**

**ಮಾದರಿ :**

**ತಂದೆ** * ನಾನು ಈ ಪುಸ್ತಕವನ್ನು ಅಂಗಡಿಯಿಂದ ತಂದೆ.

ನನ್ನ ತಂದೆ ಬೆಂಗಳೂರಿಗೆ ಹೋಗಿದ್ದಾರೆ.

ತೊರೆ, ಮಡಿ, ಕಳೆ, ಮುಗಿ, ಕಟ್ಟಿರುವೆ, ಸರಳ.

## ಚಟುವಟಿಕೆ

1. ನಿಮ್ಮ ಸುತ್ತಮುತ್ತಲೂ ಇರುವ ಔಷಧೀಯ ಸಸ್ಯಗಳ ಗುಣಗಳನ್ನು ಪಟ್ಟಿ ಮಾಡಿರಿ.
2. ನಿಮ್ಮ ಸುತ್ತಮುತ್ತಲೂ ಇರುವ ಸಸ್ಯಗಳ ವಿವಿಧ ವಿನ್ಯಾಸಗಳ ಎಲೆಗಳನ್ನು ಸಂಗ್ರಹಿಸಿ.

**ನಾಮಪದಗಳು**

**ರೂಢನಾಮಗಳು**

| | | | | |
|---|---|---|---|---|
| ನದಿ | ಪರ್ವತ | ಊರು | ದೇಶ | ಮನುಷ್ಯ |

*****

**ಅಂಕಿತನಾಮಗಳು**

| | | | |
|---|---|---|---|
| ಸಹದೇವ | ಧರ್ಮರಾಯ | ರಾಹುಲ | ಕಮಲಾಕ್ಷ |

*****

**ಅನ್ವರ್ಥನಾಮಗಳು**

| | | | |
|---|---|---|---|
| ವ್ಯಾಪಾರಿ | ವಿದ್ವಾಂಸ | ವಿಜ್ಞಾನಿ | ಪೂಜಾರಿ |

*****

**ಗುಣವಾಚಕಗಳು**

| | | | |
|---|---|---|---|
| ಒಳ್ಳೆಯ | ಕೆಟ್ಟ | ದೊಡ್ಡದು | ಹಳತು |

*****

**ಸಂಖ್ಯಾವಾಚಕಗಳು**

| | | | |
|---|---|---|---|
| ಹನ್ನೆರಡು | ಐವತ್ತು | ಎಂಬತ್ತು | |

*****

**ಸಂಖ್ಯೇಯವಾಚಕಗಳು**

| | | | |
|---|---|---|---|
| ಮೂವರು | ಹನ್ನೆರಡನೆಯ | ಎಂಬತ್ತನೆಯ | ನಾಲ್ವರು |

*****

**ಭಾವನಾಮಗಳು**

| | | | | |
|---|---|---|---|---|
| ಕೆಂಪು | ಹಿರಿಮೆ | ನೋಟ | ಮಾಟ | ಆಟ |

*****

**ಪರಿಮಾಣವಾಚಕಗಳು**

| | | | | |
|---|---|---|---|---|
| ಅಷ್ಟು | ಎಷ್ಟು | ಹಲವು | ಇನಿತು | ಅನಿತು |

*****

**ದಿಗ್ವಾಚಕಗಳು**

| | | | | |
|---|---|---|---|---|
| ಮೂಡಣ | ತೆಂಕಣ | ಪಡುವಣ | ಈಶಾನ್ಯ | ಆಗ್ನೇಯ |



7th_Kannada_Reader.indd 65 24-06-2019 19:37:45

ಉಪಪಠ್ಯ

ಘಟಕ ನಾಲ್ಕು

# ನಾವು ತರಕಾರಿಗಳು

## ಪ್ರವೇಶ

ನಮಗೆ ತಿಳಿದಿರುವ ವಿಷಯವನ್ನು ಇತರರಿಗೆ ಮನ ಮುಟ್ಟುವಂತೆ ಹೇಳುವುದೂ ಒಂದು ಕಲೆ. ಇಲ್ಲಿ ತರಕಾರಿಗಳು ತಮ್ಮನ್ನು ಪರಿಚಯಿಸಿಕೊಳ್ಳುವ ಸಂದರ್ಭವನ್ನು ಕೊಡಲಾಗಿದೆ. ತರಕಾರಿಗಳ ಮಹತ್ವವನ್ನು ಅರಿತು, ಹೆಚ್ಚು ಸೇವಿಸುವ ಮೂಲಕ ನಮ್ಮ ಆರೋಗ್ಯವನ್ನು ಉತ್ತಮಪಡಿಸಿಕೊಳ್ಳಬೇಕು.





7th_Kannada_Reader.indd 66 24-06-2019 19:37:45

ಅಂದು ಫೆಬ್ರವರಿ 07, ವಿಶ್ವ ಆರೋಗ್ಯ ದಿನಾಚರಣೆಯ ಅಂಗವಾಗಿ ತರಕಾರಿಗಳ ಮೇಳವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ತರಕಾರಿಗಳ ದಂಡೇ ಸೇರಿತ್ತು. ಎಲ್ಲಿ ನೋಡಿದರೂ ದವಸ–ಧಾನ್ಯ, ಸೊಪ್ಪು, ತರಕಾರಿ, ಹಣ್ಣುಹಂಪಲು, ಔಷಧೀಯ ಸಸ್ಯಗಳು, ಸಾಂಬಾರ ಪದಾರ್ಥಗಳ ಕಲರವ ತುಂಬಿತ್ತು.

ಅಲಂಕೃತವಾದ ವೇದಿಕೆಯ ಮೇಲೆ ಸೊಪ್ಪು, ತರಕಾರಿಗಳು ಒಂದೊಂದಾಗಿಯೇ ಬಂದು ತಮ್ಮ ತಮ್ಮ ಗುಣವಿಶೇಷತೆಗಳ ಬಗೆಗೆ ನಿರರ್ಗಳವಾಗಿ ಮಾತನಾಡುತ್ತಿದ್ದವು. ಅವುಗಳ ಮಾತುಗಳನ್ನು ಕೇಳಿ ಸಭಿಕರು ಚಪ್ಪಾಳೆ ತಟ್ಟುತ್ತಿದ್ದರು. ಮೊದಲಿಗೆ ಹೀರೆಕಾಯಿ ವೇದಿಕೆಯನ್ನು ಏರಿತು.

**1. ಹೀರೆಕಾಯಿ :** 'ಓ ನನ್ನ ಪ್ರೀತಿಯ ಸಹೋದರರೇ! ನಾನು ಯಾರು ಬಲ್ಲಿರಾ? ನನ್ನ ಮೈಬಣ್ಣ ಹಸಿರು. ನೋಡಿ, ಮೈಯೆಲ್ಲಾ ಸುಕ್ಕುಗಟ್ಟಿದೆ. ನಾನು ಭಾರತದಲ್ಲಿಯೇ ಹುಟ್ಟಿದ್ದು. ಚಪ್ಪರದ ಬಳ್ಳಿಯಲ್ಲಿ ಜೋತು ಬೀಳುತ್ತೇನೆ. ನಾನೆಂದರೆ ನಿಮಗೆಲ್ಲಾ ತುಂಬಾ ಇಷ್ಟ. ನನ್ನ ಹೆಸರನ್ನು ಕೇಳಿದರೆ ಹಿರಿಹಿರಿ ಹಿಗ್ಗುತ್ತೀರಿ! ಈಗಲಾದರೂ ತಿಳಿಯಿತೇ... ನಾನು ಯಾರೆಂದು ? ನಾನೇ ಹೀರೆಕಾಯಿ. ನನ್ನಲ್ಲಿ ಎ ಮತ್ತು ಸಿ ಅನ್ನಾಂಗದ ಜೊತೆಗೆ ಖನಿಜಾಂಶವಿದೆ. ಪಲ್ಯ, ಸಾಂಬಾರು, ಬಜ್ಜಿ, ಗೊಜ್ಜುಗಳಲ್ಲಿ ನನ್ನನ್ನು ಬಳಸುತ್ತಾರೆ. ನಾನು ಜನರಿಗೆ ರುಚಿ ಹಾಗೂ ಆರೋಗ್ಯವನ್ನು ನೀಡುತ್ತೇನೆ' ಎಂದು ಹೇಳಿ ಸಭಿಕರಿಂದ ಜೋರಾದ ಚಪ್ಪಾಳೆಯನ್ನು ಗಿಟ್ಟಿಸಿತು.

**2. ಹೂಕೋಸು :** 'ಇಲ್ಲಿ ಸೇರಿರುವ ಬಂಧುಗಳೇ! ಗೋಬಿ ಮಂಚೂರಿ ಎಂದರೆ ನಿಮಗೆಲ್ಲ ಬಲು ಪ್ರೀತಿ ಅಲ್ಲವೇ? ತಿಂದಿದ್ದು ನೆನಪಿಗೆ ಬಂದು, ಬಾಯಲ್ಲಿ ನೀರು ಬರುತ್ತಿರಬಹುದಲ್ಲವೇ? ಇರಲಿ... ವಿಷಯಕ್ಕೆ ಬರೋಣ. ನಾನಿಲ್ಲದೆ ಗೋಬಿ ಮಂಚೂರಿ ಸಿದ್ಧ ಆಗುವುದೇ ಇಲ್ಲ. ನಾವು ಮೂರು ಜನ ಸಹೋದರರು: ಗೆಡ್ಡೆ ಕೋಸು, ಎಲೆ ಕೋಸು ಮತ್ತು ಹೂಕೋಸು ಎಂದು ನಮ್ಮನ್ನು ಕರೆಯುತ್ತಾರೆ. ಸೂಪ್, ಹುಳಿ, ಪಲ್ಯ, ಪರೋಟ, ಗೋಬಿ ಮಂಚೂರಿ, ಪಕೋಡ ಮುಂತಾದ ಅಡುಗೆಗಳಿಗೆ ನಾವು ಬೇಕು. ನನ್ನ ಸೇವನೆಯಿಂದ ರಕ್ತ ಶುದ್ಧಿಯಾಗುತ್ತದೆ ಹಾಗೂ ಚರ್ಮ ರೋಗಗಳು ದೂರವಾಗುತ್ತವೆ. ನಿಮ್ಮ ಸೇವೆಗೆ ನಾನು ಸದಾ ಸಿದ್ಧ. ನನ್ನನ್ನು ಸೇವಿಸಿ ಆರೋಗ್ಯದಿಂದಿರಿ' ಎಂದು ಹೇಳಿ ತನ್ನ ಮಾತನ್ನು ಮುಗಿಸಿತು.

**3. ಈರುಳ್ಳಿ :** 'ಎಲ್ಲರಿಗೂ ನಮಸ್ಕಾರ! ಏಕೆ... ನನ್ನನ್ನು ನೋಡುತ್ತಿದ್ದಂತೆ ಕಣ್ಣು ಮುಚ್ಚಿಕೊಳ್ಳುವಿರಿ? ನನ್ನನ್ನು ಕೊಯ್ದಾಗ ಮಾತ್ರ ಕಣ್ಣಿನಲ್ಲಿ ನೀರು ಬರುತ್ತದೆ ಎಂಬುದನ್ನು ಮರೆತಿರಾ? ನನ್ನ ತವರು ನೆರೆಯ ಚೀನಾ ದೇಶ. ಆದರೂ ಭಾರತದಲ್ಲಿ ವಾಣಿಜ್ಯ ಬೆಳೆಯಾಗಿ ಪ್ರಮುಖ ಸ್ಥಾನ ಪಡೆದಿದ್ದೇನೆ. ನನ್ನನ್ನು ಇಂಗ್ಲಿಷಿನಲ್ಲಿ ಆನಿಯನ್ ಎಂದೂ, ತೆಲುಗಿನಲ್ಲಿ ಎರ್ರಗಡ್ಡ ಎಂದೂ, ತಮಿಳಿನಲ್ಲಿ ವೆಂಗಾಯಂ ಎಂದೂ, ಕನ್ನಡದಲ್ಲಿ ಈರುಳ್ಳಿ, ಉಳ್ಳಾಗಡ್ಡಿ ಎಂದೂ ಕರೆಯುತ್ತಾರೆ. ನನ್ನಲ್ಲಿ ಆರೋಗ್ಯಕ್ಕೆ ಅಗತ್ಯವಾದ 'ಸಿ ಜೀವಸತ್ವ'ವಿದೆ. ಪಲ್ಯ, ಸಾಂಬಾರು, ಉಪ್ಪಿಟ್ಟು, ಕೋಸಂಬರಿ ಹೀಗೆ ಎಲ್ಲಾ ಬಗೆಯ ಅಡುಗೆಗಳಲ್ಲೂ ನಾನು ಬೆರೆತರೆ ಆಹಾ... ಏನು ರುಚಿ!' ಎಂದು ಹೇಳಿ ವೇದಿಕೆಯಿಂದ ನಿರ್ಗಮಿಸಿತು.

**4. ನುಗ್ಗೆಸೊಪ್ಪು :** 'ಹಿರಿಯರೇ! ವೈದ್ಯರು ತರಕಾರಿಯ ಜೊತೆ ಸೊಪ್ಪು ಬಳಸಲು ಹೇಳುವುದನ್ನು ನೀವು ಕೇಳಿದ್ದೀರಿ. ನಾನು ಮರದಲ್ಲಿ ಬೆಳೆಯುವವನು. ಸೊಪ್ಪಿನ ಜೊತೆಗೆ ಕಾಯಿಯನ್ನೂ ನೀಡುತ್ತೇನೆ. ಯುಗಾದಿ ಹಬ್ಬದಲ್ಲಿ ನನ್ನನ್ನು ಬಹು ಪ್ರೀತಿಯಿಂದ ಕೊಂಡೊಯ್ಯುತ್ತಾರೆ. ನನ್ನನ್ನು ಖರೀದಿಸಲು ನೂಕು ನುಗ್ಗಲು ಏಕೆ? ಆಹಾ... ಆಹಾ...! ತಿಳಿಯಿತೇ, ನಾನು 'ನುಗ್ಗೆ' ಎಂದು! ನನ್ನನ್ನು ಪಲ್ಯ, ಸಾಂಬಾರು, ಮುಂತಾದ ಅಡುಗೆಗಳಲ್ಲಿ ಬಳಸುತ್ತಾರೆ. ನನ್ನಲ್ಲಿ ಕಬ್ಬಿಣ, ಕ್ಯಾಲ್ಸಿಯಂ ಜೊತೆಗೆ ಎ ಮತ್ತು ಸಿ ಜೀವಸತ್ವಗಳಿವೆ. ಮಕ್ಕಳ ಬೆಳವಣಿಗೆಗೆ ನಾನು ಸಹಕಾರಿಯಾಗಿದ್ದೇನೆ. ಇರುಳುಗಣ್ಣಿನ ತೊಂದರೆಯನ್ನು ನಿವಾರಿಸುತ್ತೇನೆ. ನಿಮ್ಮ ಮನೆ ಮತ್ತು ಶಾಲೆಯ ಆವರಣದಲ್ಲಿ ನನ್ನನ್ನು ಬೆಳೆಸಿರಿ. ಖರ್ಚಿಲ್ಲದೆ ಸದಾಕಾಲ ನುಗ್ಗೆ ಸೊಪ್ಪು ಮತ್ತು ನುಗ್ಗೆ ಕಾಯಿ ಕೊಡುತ್ತೇನೆ' ಎಂದು ಭಿನ್ನವಿಸಿತು.

**5. ಸೋರೆಕಾಯಿ :** ವೇದಿಕೆಯ ಮೇಲೆ ಆಜಾನುಬಾಹು ತರಕಾರಿಯೊಂದು ಏರಿತು. 'ಮಾನ್ಯರೇ, ನಾನು ಸೋರೆಕಾಯಿ. ಹುಳಿ, ಕಡುಬು, ಪಲ್ಯ, ಉಪ್ಪಿನಕಾಯಿ, ಸಾಂಬಾರು, ದೋಸೆ, ಹಲ್ವ



7th_Kannada_Reader.indd 67 24-06-2019 19:37:45

ಮುಂತಾದ ಅಡುಗೆಗಳಿಗೆ ನನ್ನನ್ನು ಬಳಸಲಾಗುತ್ತದೆ. ನಾನು ಹಲವು ಪೌಷ್ಟಿಕಾಂಶಗಳ ಕಣಜವೇ ಆಗಿದ್ದೇನೆ. ನಾನು ಬಲಿತ ಮೇಲೆ ನನ್ನ ಹೊಟ್ಟೆಯೊಳಗಿನ ಬೀಜಗಳನ್ನು ಹೊರತೆಗೆದು, ಬುರುಡೆಯಾಕಾರದ ಹೊರ ಕವಚವನ್ನು ಒಣಗಿಸಿ ತಂಬೂರಿ ಮಾಡಿ ಗೀಗೀ ಪದಗಳನ್ನು ಹಾಡುತ್ತಾರೆ. ಸಂಗೀತಕ್ಕೆ ನನ್ನ ಕೊಡುಗೆಯೂ ಇದೆ. ಇದೋ ನಿಮಗೆ ನನ್ನ ನಮನ' ಎಂದು ಹೇಳಿ ವೇದಿಕೆಯಿಂದ ನಿರ್ಗಮಿಸಿತು.

**6. ಮೂಲಂಗಿ :** ಇತರರ ಮಾತುಗಳನ್ನು ಕೇಳಿದ ಮೂಲಂಗಿಗೆ ತಾನೂ ತನ್ನ ಪರಿಚಯ ಮಾಡಿಕೊಳ್ಳಬೇಕೆಂಬ ಬಯಕೆ ಮೂಡಿತು. ತನ್ನ ಗೆಳೆಯರಂತೆ ತಾನೂ ವೇದಿಕೆಯೇರಿ ಮಾತು ಆರಂಭಿಸಿತು... 'ನನ್ನ ಹೆಸರು ಮೂಲಂಗಿ. ನನ್ನ ಬಣ್ಣ ಬಿಳಿ. ನನ್ನ ತವರು ಯೂರೋಪ್ ಮತ್ತು ಏಷ್ಯಾ. ನನ್ನಲ್ಲಿ ಎ.ಬಿ.ಸಿ. ಅನ್ನಾಂಗಗಳಿವೆ. ಪಲ್ಯ, ಸಾಂಬಾರು, ಮೊಸರು ಬಜ್ಜಿಗಳಲ್ಲಿ ನನ್ನನ್ನು ಬಳಸುತ್ತಾರೆ. ಕೆಲವರು ನನ್ನ ಘಾಟು ವಾಸನೆಯನ್ನು ಇಷ್ಟ ಪಡುವುದಿಲ್ಲ. ಇದರಿಂದ ನನಗೂ ಸ್ವಲ್ಪ ಬೇಸರವೇ' ಎಂದು ಹೇಳಿ ಎಲ್ಲರ ಚಪ್ಪಾಳೆ ಗಿಟ್ಟಿಸಿತು.

**7. ಕೊತ್ತಂಬರಿ ಸೊಪ್ಪು :** 'ಹಿರಿಯರೇ, ಇತ್ತೀಚೆಗೆ ನನ್ನನ್ನು ಹುಡುಗಿಯರ ಜುಟ್ಟಿಗೆ ಹೋಲಿಸುತ್ತಾರೆ. ನನಗೇನೂ ಬೇಸರವಿಲ್ಲ. ಏಕೆಂದರೆ ನನಗೆ ಬಿಟ್ಟಿ ಪ್ರಚಾರ ಸಿಕ್ಕಿ, ಖ್ಯಾತಿ ಪಡೆದಿದ್ದೇನೆ. ನಾನು ಹುಡುಗಿಯರಂತೆ ಲಲಿತ, ಮೃದು. ಅಷ್ಟೇ ಹಿತ. ನನ್ನ ಹೆಸರು ಕೊತ್ತಂಬರಿ ಸೊಪ್ಪು. ನಾನು ಎಲ್ಲಾ ಅಡುಗೆಗೂ ಬೇಕು. ವಡೆ, ಉಪ್ಪಿಟ್ಟು, ಚಿತ್ರಾನ್ನ, ಬಾತ್, ಸಾಂಬಾರು, ಪಲ್ಯ, ಮಜ್ಜಿಗೆ, ಪಲಾವ್ ಹೀಗೆ ಒಂದೇ, ಎರಡೇ... ಎಲ್ಲಾ ತಿಂಡಿ ತಿನಿಸುಗಳಿಗೂ ನಾನು ಬೇಕು. ಕರಿಬೇವಿನಂತೆ ನಾನೂ ಸಹ ಪರಿಮಳದಿಂದ ಕೂಡಿದ್ದು, ಅಡುಗೆಯ ರುಚಿಯನ್ನು ಹೆಚ್ಚಿಸುತ್ತೇನೆ. ನನ್ನಲ್ಲಿ ಅಧಿಕ ಪ್ರಮಾಣದ ಕಬ್ಬಿಣಾಂಶ ಇರುವುದನ್ನು ತಿಳಿಯಿರಿ. ಕಬ್ಬಿಣಾಂಶವು ರಕ್ತಹೀನತೆಯನ್ನು ತಡೆಯುತ್ತದೆ' ಎಂದು ಹೇಳಿ ತನ್ನ ಮಾತುಗಳನ್ನು ಮುಗಿಸಿತು.

ಕಾರ್ಯಕ್ರಮದ ಅಂತ್ಯದಲ್ಲಿ ಜನರು 'ಆರೋಗ್ಯವೇ ಭಾಗ್ಯ' ಎಂದು ತಿಳಿದರು. ಹೆಚ್ಚು ಹೆಚ್ಚು ತರಕಾರಿಗಳನ್ನು ಕೊಂಡು ಮನೆಗೆ ತೆರಳಿದರು. ತರತರದ ಅಡುಗೆಗಳನ್ನು ಮಾಡಿ ಉಂಡರು. ಆರೋಗ್ಯವಂತರಾಗಿ ಬಾಳಿದರು. ವ್ಯಕ್ತಿಯ ಆರೋಗ್ಯದಲ್ಲಿ ದೇಶದ ಆರೋಗ್ಯವಿದೆ ಎಂಬುದನ್ನು ಸಾರಿದರು.

## ಪದಗಳ ಅರ್ಥ

ಅಂಗ–ಭಾಗ; ಆಜಾನುಬಾಹು–ಉದ್ದವಾದ, ನೀಳವಾದ ತೋಳು ಉಳ್ಳವ; ಇರುಳುಗಣ್ಣು–ರಾತ್ರಿಯಾದಂತೆ ಕಣ್ಣು ಕಾಣದಿರುವುದು; ಕಣಜ–ಧಾನ್ಯವನ್ನು ಸಂಗ್ರಹಿಸುವ ಸ್ಥಳ; ಕಲರವ–ಮಧುರವಾದ ಧ್ವನಿ; ಖ್ಯಾತಿ–ಪ್ರಸಿದ್ಧಿ; ಘಾಟು–ಕಟುವಾಸನೆ; ತಂಬೂರಿ–ಒಂದು ಬಗೆಯ ತಂತಿ ವಾದ್ಯ; ತವರು–ಮೂಲ, ಹುಟ್ಟಿದ ಮನೆ; ದಂಡು–ಸೈನ್ಯ, ಗುಂಪು; ನಮನ–ನಮಸ್ಕಾರ, ವಂದನೆ; ನೆರೆ–ಅಕ್ಕಪಕ್ಕದ; ಬಿಟ್ಟಿ–ಪುಕ್ಕಟೆ, ಉಚಿತ; ಭಿನ್ನವಿಸು–ಕೋರಿಕೊಳ್ಳು, ಮನವಿ ಮಾಡು; ಮೇಳ–ಕೂಡುವಿಕೆ, ಗುಂಪು; ಸಭಿಕರು–ಪ್ರೇಕ್ಷಕರು, ಸಭೆಯಲ್ಲಿ ಇರುವವರು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಪ್ರತಿ ವರ್ಷವೂ ವಿಶ್ವ ಆರೋಗ್ಯ ದಿನಾಚರಣೆಯನ್ನು ಎಂದು ಆಚರಿಸಲಾಗುತ್ತದೆ ?
2. ವಿಶ್ವ ಆರೋಗ್ಯ ದಿನಾಚರಣೆಯಲ್ಲಿ ಯಾವುದರ ಮೇಳ ಏರ್ಪಟ್ಟಿತ್ತು ?
3. ತರಕಾರಿಗಳ ಮೇಳದಲ್ಲಿ ಯಾರು ಯಾರು ಪಾಲ್ಗೊಂಡಿದ್ದರು ?
4. ಹೂಕೋಸಿನ ಸಹೋದರರು ಯಾರು ಯಾರು?
5. ಹೂಕೋಸು ಯಾವ ರೋಗಗಳನ್ನು ದೂರ ಮಾಡುತ್ತದೆ ?
6. ಈರುಳ್ಳಿಯನ್ನು ಇತರ ಬಾಷೆಗಳಲ್ಲಿ ಯಾವ ಹೆಸರುಗಳಿಂದ ಕರೆಯುತ್ತಾರೆ?
7. ತರಕಾರಿಗಳ ಕಬ್ಬಿಣಾಂಶ ಯಾವ ಕೊರತೆಯನ್ನು ನಿವಾರಿಸುತ್ತದೆ ?



7th_Kannada_Reader.indd 68 24-06-2019 19:37:45

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಹೀರೇಕಾಯಿ ತನ್ನನ್ನು ಹೇಗೆ ಪರಿಚಯಿಸಿಕೊಂಡಿತು?
2. ಸೋರೆಕಾಯಿ ತನ್ನ ವಿಶೇಷತೆಯ ಬಗ್ಗೆ ಏನೆಂದು ಹೇಳಿತು ?
3. ನುಗ್ಗೆಸೊಪ್ಪಿನ ಪ್ರಯೋಜನಗಳೇನು ?
4. ಕೊತ್ತಂಬರಿ ಸೊಪ್ಪನ್ನು ಯಾವ ಯಾವ ಅಡುಗೆಗಳಿಗೆ ಬಳಸುತ್ತಾರೆ ?
5. ತರಕಾರಿಗಳ ಮೇಳದಿಂದ ಜನರಿಗಾದ ಪ್ರಯೋಜನಗಳೇನು ?

**III. ಟಿಪ್ಪಣಿ ಬರೆಯಿರಿ.**

1. ಆರೋಗ್ಯವೇ ಭಾಗ್ಯ.
2. ಹಸಿರು ತರಕಾರಿಗಳ ಸೇವನೆ.

## ಭಾಷಾಭ್ಯಾಸ

**1. ತರಕಾರಿಗಳನ್ನು ಅವುಗಳ ಬಣ್ಣದೊಂದಿಗೆ ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1. ಹೀರೆಕಾಯಿ | ಅ. ಹಳದಿ |
| 2. ಮೂಲಂಗಿ | ಆ. ನೇರಳೆ |
| 3. ಕ್ಯಾರೆಟ್ | ಇ. ಹಸಿರು |
| 4. ಟೊಮೇಟೋ | ಈ. ಬಿಳಿ |
| 5. ಬೀಟ್‌ರೂಟ್ | ಉ. ಕೇಸರಿ |
| 6. ನಿಂಬೆ | ಊ. ಕೆಂಪು |

**2. ತರಕಾರಿಗಳನ್ನು ಅವುಗಳ ರುಚಿಯೊಂದಿಗೆ ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1. ಮೆಣಸಿನಕಾಯಿ | ಅ. ಸಿಹಿ |
| 2. ಮೂಲಂಗಿ | ಆ. ಹುಳಿ |
| 3. ನಿಂಬೆ | ಇ. ಘಾಟು |
| 4. ಟೊಮೇಟೋ | ಈ. ಕಹಿ |
| 5. ಹಾಗಲಕಾಯಿ | ಉ. ಖಾರ |

**3. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ**

1. ದಿನಾಚರಣೆ = _____ + _____
2. ಒಂದೊಂದು = _____ + _____
3. ಖನಿಜಾಂಶ = _____ + _____
4. ಮೈಯೆಲ್ಲ = _____ + _____
5. ಇರುಳುಗಣ್ಣು = _____ + _____
6. ಪೌಷ್ಟಿಕಾಂಶ = _____ + _____
7. ಬುರುಡೆಯಾಕಾರ = _____ + _____

**4. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

1. ಆರೋಗ್ಯ × _____
2. ರುಚಿ × _____
3. ರೋಗ × _____
4. ನಿರ್ಗಮಿಸು × _____
5. ಶುದ್ಧಿ × _____
6. ಪೌಷ್ಟಿಕತೆ × _____

**5. ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿ.**

1 ಕಲರವ: _____

_____

2. ಮೇಳ: _____

_____

3. ಭಿನ್ನವಿಸು: _____

_____

4. ಕಣಜ: _____

_____

## ಚಟುವಟಿಕೆ

1. ಊಟದಲ್ಲಿ ಹೆಚ್ಚು ಹೆಚ್ಚು ತರಕಾರಿ ಮತ್ತು ಸೊಪ್ಪುಗಳನ್ನು ಬಳಸಿರಿ.
2. ತರಕಾರಿಗಳ ಪಾತ್ರಗಳನ್ನು ಹಂಚಿಕೊಂಡು, ತರಕಾರಿಗಳು ಮಾತನಾಡಿದಂತೆ ಅಭಿನಯಿಸಿರಿ.
3. ವಿವಿಧ ಸೊಪ್ಪು ಹಾಗೂ ತರಕಾರಿಗಳ ಪಟ್ಟಿ ತಯಾರಿಸಿ, ಅವುಗಳ ಮಹತ್ವ ತಿಳಿಯಿರಿ.



7th_Kannada_Reader.indd 69 24-06-2019 19:37:45

ವ್ಯಾಕರಣ

ಘಟಕ ನಾಲ್ಕು

# ದ್ವಿರುಕ್ತಿ, ಜೋಡುನುಡಿ, ದೇಶೀಯ, ಅನ್ಯದೇಶೀಯ ಪದಗಳು

## ದ್ವಿರುಕ್ತಿ

**ಕೆಳಗಿನ ವಾಕ್ಯಗಳನ್ನು ಗಮನಿಸಿ**

* ಶಿಕ್ಷಕರು ಮತ್ತೆ ಮತ್ತೆ ವಿವರಣೆ ನೀಡಿದರು.
* ಶರೀಫನು ನಗುತ್ತಾ ನಗುತ್ತಾ ಮಾತನಾಡಿದನು.

ಮೇಲಿನ ವಾಕ್ಯಗಳಲ್ಲಿ 'ಮತ್ತೆ ಮತ್ತೆ', 'ನಗುತ್ತಾ ನಗುತ್ತಾ' ಎಂಬ ಪದಗಳು ಎರಡೆರಡು ಬಾರಿ ಬಳಕೆಯಾಗಿವೆ. ಇವುಗಳನ್ನು ದ್ವಿರುಕ್ತಿ ಎನ್ನುವರು. (ದ್ವಿ=ಎರಡು; ಉಕ್ತಿ=ನುಡಿ, ಮಾತು)

ಸಾಮಾನ್ಯವಾಗಿ ವಿಷಯಕ್ಕೆ ಒತ್ತು ಕೊಡಲು ದ್ವಿರುಕ್ತಿಗಳನ್ನು ಬಳಸುತ್ತಾರೆ. ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ.

* ಇತ್ತ ಕಡೆಗೆ ಬೇಗಬೇಗ ಬಾ!
* ಗುಡ್ಡಗಳಲ್ಲಿ ದೊಡ್ಡದೊಡ್ಡ ಕಲ್ಲುಗಳಿವೆ.

ಇಲ್ಲಿ 'ಬೇಗಬೇಗ' 'ದೊಡ್ಡದೊಡ್ಡ' ಎಂಬ ಪದಗಳು ದ್ವಿರುಕ್ತಿಗಳಾಗಿವೆ.

## ಜೋಡುನುಡಿ

**ಕೆಳಗಿನ ವಾಕ್ಯಗಳನ್ನು ಗಮನಿಸಿ.**

* 'ಚಿಕ್ಕ ಮಕ್ಕಳಿಗೆ ವೇಷಭೂಷಣಗಳನ್ನು ನಾವು ತೊಡಿಸುತ್ತೇವೆ' ಎಂದನು ಪಿಂಟೋ.
* 'ಉಪವಾಸದ ರಾತ್ರಿ ಹಣ್ಣುಹಂಪಲು ತಿನ್ನುತ್ತಾರೆ'

ಮೇಲಿನ ವಾಕ್ಯಗಳಲ್ಲಿ 'ವೇಷಭೂಷಣ', 'ಹಣ್ಣುಹಂಪಲು' – ಈ ಪದಗಳಲ್ಲಿ ಎರಡು ಬೇರೆ ಬೇರೆ ಪದಗಳಿದ್ದು ಅವು ಜೊತೆಜೊತೆಯಾಗಿಯೇ ಬಳಕೆಯಾಗಿವೆ. ಇವು ಜೋಡುನುಡಿಗಳು

ಸಾಮಾನ್ಯವಾಗಿ ಮಾತುಗಳನ್ನು, ವಿಷಯಗಳನ್ನು ಮೆರುಗುಗೊಳಿಸಲು ಜೋಡು ನುಡಿಗಳನ್ನು ಬಳಸುತ್ತಾರೆ. ಇನ್ನು ಕೆಲವು ಉದಾಹರಣೆಗಳನ್ನು ನೋಡೋಣ.

* ಎಲ್ಲರೂ ತಮ್ಮ ನೋವುನಲಿವುಗಳನ್ನು ಹಂಚಿಕೊಂಡರು.
* ಅವರು ಊರುಕೇರಿ ತಿರುಗಿ ಬಂದರು.

ಇಲ್ಲಿ 'ನೋವುನಲಿವು', 'ಊರುಕೇರಿ' ಎಂಬ ಪದಗಳು ಜೋಡು ನುಡಿಗಳಾಗಿವೆ.

## ಅನುಕರಣಾವ್ಯಯ

* ಹಂಪಣ್ಣನು ಸರಸರ ಹೆಜ್ಜೆ ಹಾಕಿದನು.
* ಗಾಳಿಯು ಸುಯ್ಯನೆ ಬೀಸಿತು

ಮೇಲಿನ ವಾಕ್ಯಗಳಲ್ಲಿ 'ಸರಸರ', 'ಸುಯ್ಯನೆ' – ಈ ಪದಗಳಿಗೆ ನಿರ್ದಿಷ್ಟವಾದ ಅರ್ಥವಿಲ್ಲ. ಇವು ಧ್ವನಿ ವಿಶೇಷಣವನ್ನು ಅನುಕರಣೆ ಮಾಡಿದವುಗಳಾಗಿವೆ. ಇವು ಅನುಕರಣಾವ್ಯಯಗಳು.

ಸಾಮಾನ್ಯವಾಗಿ ಧ್ವನಿ ವಿಶೇಷಣಗಳನ್ನು ಕೇಳಿದಂತೆ, ಪುನಃ ಅನುಕರಣೆ ಮಾಡುವಾಗ, ಅನುಕರಣಾವ್ಯಯಗಳನ್ನು ಬಳಸುತ್ತಾರೆ. ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ.

* ಮಳೆಯ ಹನಿಗಳು ಪಟಪಟನೆ ಬಿದ್ದವು.
* ನೀರು ಜುಳುಜುಳು ಎಂದು ಹರಿಯಿತು.

ಇಲ್ಲಿ 'ಪಟಪಟನೆ', 'ಜುಳುಜುಳು' ಎಂಬ ಪದಗಳು ಅನುಕರಣಾವ್ಯಯಗಳಾಗಿವೆ.



7th_Kannada_Reader.indd 70 24-06-2019 19:37:45

## ದೇಶೀಯ, ಅನ್ಯದೇಶೀಯ ಪದಗಳು

ಒಂದು ಭಾಷೆಯ ಜನರು ಬೇರೊಂದು ಭಾಷೆಯ ಜನರೊಂದಿಗೆ ವ್ಯವಹರಿಸಿದಾಗ ಅವರು ಬಳಸುವ ಭಾಷೆಯ ಶಬ್ದಗಳೂ ಪರಸ್ಪರ ವರ್ಗಾವಣೆಯಾಗುತ್ತವೆ. ಹೀಗೆ ಒಂದು ಭಾಷೆಯಲ್ಲಿ ಹಲವು ಭಾಷೆಯ ಬೇರೆ ಶಬ್ದಗಳು ಸೇರಬಹುದು. ನಮ್ಮ ಕನ್ನಡ ಭಾಷೆಯಲ್ಲಿ ಸಂಸ್ಕೃತ, ಇಂಗ್ಲಿಷ್, ಹಿಂದಿ, ಪೋರ್ಚುಗೀಸ್, ಪಾರ್ಸಿ, ಉರ್ದು, ಪ್ರಾಕೃತ ಇತ್ಯಾದಿ ಭಾಷೆಯ ಶಬ್ದಗಳು ಆಯಾ ಕಾಲದ ಜನರ ಸಂಪರ್ಕದೊಂದಿಗೆ ಬೆರೆತು ಹೋಗಿವೆ.

**ಈ ಕೆಳಗಿನ ಉದಾಹರಣೆಯನ್ನು ಗಮನಿಸಿ :**

'ಮೋಟಾರುಗಳಲ್ಲಿ ಜಬರ್‌ದಸ್ತಿನಿಂದ ಓಡಾಡುವುದೇ ಜೀವನದ ಮುಖ್ಯ ಲಕ್ಷ್ಯವಲ್ಲವೆಂದು ನಾವು ತಿಳಿಯಬೇಕು'. – ಈ ವಾಕ್ಯದಲ್ಲಿ,

1. ಮೋಟಾರು – ಇಂಗ್ಲಿಷ್ ಭಾಷೆಯ ಶಬ್ದ
2. ಜಬರ್ದಸ್ತ್ – ಹಿಂದಿ ಭಾಷೆಯ ಶಬ್ದ
3. ಜೀವನ, ಲಕ್ಷ್ಯ, ಮುಖ್ಯ – ಸಂಸ್ಕೃತ ಭಾಷೆಯ ಶಬ್ದಗಳು
4. ಓಡಾಡು, ನಾವು, ತಿಳಿಯಬೇಕು – ಕನ್ನಡ ಭಾಷೆಯ ಶಬ್ದಗಳು.

ಹೀಗೆ ನಾವು ಮಾತನಾಡುವ ಕನ್ನಡ ಭಾಷೆಯಲ್ಲಿ ಬೇರೆಬೇರೆ ಭಾಷೆಯ ಪದಗಳು ಬೆರೆತು, ಅವುಗಳಲ್ಲಿ ಕನ್ನಡದ ಪದಗಳು ಯಾವುವು? ಬೇರೆ ಭಾಷೆಯ ಪದಗಳು ಯಾವುವು? ಎಂಬುದನ್ನು ಗುರುತಿಸುವುದಕ್ಕೆ ಸಾಧ್ಯವಾಗದಷ್ಟು ಚಿರಪರಿಚಿತವಾಗಿವೆ. ಭಾಷೆಯ ತಿಳಿವಳಿಕೆಯ ದೃಷ್ಟಿಯಿಂದ ಅಚ್ಚಗನ್ನಡ ಶಬ್ದಗಳನ್ನು 'ದೇಶೀಯ' ಶಬ್ದಗಳು ಎನ್ನುತ್ತೇವೆ. ಉಳಿದವುಗಳನ್ನು ಅನ್ಯದೇಶೀಯ ಶಬ್ದಗಳು ಎನ್ನುತ್ತೇವೆ.

## ದೇಶೀಯ ಶಬ್ದಗಳು

ಕನ್ನಡ ಭಾಷೆಯ ಮೂಲ ಶಬ್ದಗಳನ್ನು ಅಥವಾ ಅಚ್ಚಗನ್ನಡದ ಶಬ್ದಗಳನ್ನು ದೇಶೀಯ ಶಬ್ದಗಳು ಎನ್ನುತ್ತೇವೆ.
ಉದಾಹರಣೆ : ಮನೆ, ಹೊಲ, ಮರ, ಗದ್ದೆ, ಆಳು, ಗಿಡ, ತೆಂಕಣ, ಬಡಗಣ, ಮೂಡಣ, ನೇಸರು, ಕಲ್ಲು, ಕಡಿಮೆ, ಹೆಚ್ಚು, ನೀರು, ತಿನ್ನು, ಸಣ್ಣ, ದೊಡ್ಡ, ಸಾರು, ಬೆಣ್ಣೆ, ಮಜ್ಜಿಗೆ, ಹಾಲು, ಮೊಸರು, ತುಪ್ಪ, ಬಾಯಿ, ಕಿವಿ, ಮೂಗು, ಕಾಡು, ನುಡಿ, ನಾಡು ಇತ್ಯಾದಿಗಳು.

## ಅನ್ಯದೇಶೀಯ ಶಬ್ದಗಳು

ಮರಾಠಿ, ಅರಬ್ಬೀ, ಪಾರ್ಸಿ, ಪೋರ್ಚುಗೀಸ್, ಸಂಸ್ಕೃತ, ಪ್ರಾಕೃತ, ಇಂಗ್ಲಿಷ್ ಮುಂತಾದ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಶಬ್ದಗಳನ್ನು ಅನ್ಯದೇಶೀಯ ಶಬ್ದಗಳು ಎನ್ನುತ್ತೇವೆ. ಉದಾಹರಣೆ:

**ಅ) ಸಂಸ್ಕೃತ ಭಾಷೆಯಿಂದ ಬಂದ ಶಬ್ದಗಳು :**

ಭೂಮಿ, ಪೃಥ್ವಿ, ರಾತ್ರಿ, ದಿವಸ, ರಾಮ, ಲಕ್ಷ್ಮಣ, ಪುರಾಣ, ಲಕ್ಷ್ಮಿ, ಶಿರ, ಹಸ್ತ, ದೇಶ, ಭಾಷೆ, ಜಲ, ನದಿ, ನಾಮ, ಅಕ್ಷರ, ವರ್ಣ, ಸೂರ್ಯ, ಚಂದ್ರ, ಗ್ರಹ, ಜ್ಯೋತಿಷ್ಯ, ಹಸ್ತ, ಮನುಷ್ಯ, ಸ್ತ್ರೀ, ಪ್ರಾಣ, ಜಠರ, ಜೀರ್ಣ, ಶ್ವಾಸ, ದೇವ, ದೇವತೆ, ಪೂಜೆ, ಪುಷ್ಪ, ಪ್ರಾಣಿ, ನೇತ್ರ, ಸ್ವರ್ಗ, ಔಷಧ, ಶತ್ರು, ಮಿತ್ರ, ರಾಶಿ, ಅರಣ್ಯ, ನಕ್ಷತ್ರ, ಯುದ್ಧ, ಲೇಖನ, ಗ್ರಂಥ, ವಾಕ್ಯ, ಗೃಹ, ನಿವಾಸ, ಅಭಿಮಾನ, ಭಕ್ತಿ, ಪ್ರೇಮ, ದ್ವೇಷ ಇತ್ಯಾದಿಗಳು.

**ಆ) ಹಿಂದಿ ಭಾಷೆಯಿಂದ ಬಂದ ಶಬ್ದಗಳು :**

ಅರ್ಜಿ, ಕಛೇರಿ, ಕಾರ್ಖಾನೆ, ಚುನಾವಣೆ, ಕಾನೂನು, ಜಮೀನು, ಗುಲಾಮ, ರಸ್ತೆ, ಕಾಗದ, ಜವಾನ್, ಸಲಾಮು, ದರ್ಬಾರು, ಪಂಚಾಯಿತಿ, ತಹಸೀಲ್ದಾರ್, ಜಮೀನ್ದಾರ, ಮಹಜರು, ಬಂದೂಕ, ಮಹಲ್, ದವಾಖಾನೆ, ಅಸಲಿ, ನಕಲಿ, ಕುರ್ಚಿ.

**ಇ) ಇಂಗ್ಲಿಷ್ ಭಾಷೆಯಿಂದ ಬಂದ ಶಬ್ದಗಳು :**

ರೋಡ್, ರೈಲ್, ಬ್ಯಾಂಕ್, ಲಾಯರ್, ಸ್ಕೂಲ್, ಕಾಲೇಜ್, ಪೊಲೀಸ್, ಹೋಟೆಲ್, ಸ್ಕೂಟರ್, ಪೆಟ್ರೋಲ್, ಬುಕ್, ನೋಟ್ಸ್, ಪೇಜ್, ಕಾಫಿ, ಟೀ, ಎಲೆಕ್ಟ್ರಿಕ್, ಸರ್ಕಲ್, ಕಂಪ್ಯೂಟರ್, ಬೋರ್ಡ್ ಇತ್ಯಾದಿಗಳು.

**ಈ) ಪೋರ್ಚುಗೀಸ್ ಭಾಷೆಯಿಂದ ಬಂದ ಶಬ್ದಗಳು :**

ಅಲಮಾರು, ಸಾಬೂನು, ಪಾದ್ರಿ, ಮೇಜು, ಇತ್ಯಾದಿಗಳು.



7th_Kannada_Reader.indd 71 24-06-2019 19:37:45

ಘಟಕ
ಐದು

# 5. ಶಿಕ್ಷಣ



## ಕಲಿಕಾ ಉದ್ದೇಶಗಳು

- ಶಿಕ್ಷಣದ ಹಿರಿಮೆ ಹಾಗೂ ಮಹತ್ವವನ್ನು ಗ್ರಹಿಸುವುದು.
- ಶಿಕ್ಷಣಕ್ಕೆ ಕೊಡುಗೆ ನೀಡಿರುವ ಮಹಾತ್ಮರ ಕುರಿತು ತಿಳಿಯುವುದು.
- ಗ್ರಂಥಾಲಯವನ್ನು ಕುರಿತು ತಿಳಿಯುವುದು.
- ಗ್ರಂಥಾಲಯಕ್ಕೆ ಭೇಟಿ ನೀಡುವ ಹವ್ಯಾಸವನ್ನು ಬೆಳೆಸಿಕೊಳ್ಳುವುದು.
- ಲಿಪಿಗಳಿಂದ ಪದಗಳನ್ನು ಬರೆಯುವ ವಿಧಾನವನ್ನು ಅರಿತು ಬಳಸುವುದು.



7th_Kannada_Reader.indd 72 24-06-2019 19:37:45

ಘಟಕ
ಐದು

# 5. ಶಿಕ್ಷಣ



| | | | |
|---|---|---|---|
| ಕಾವ್ಯ ಕಣಜ | : | ಬನ್ನಿ ಶಾಲೆಗೆ ಹೋಗುವ | – ಟಿ.ಆರ್. ಕಣ್ಣನ್ |
| ಪೂರಕ ಪದ್ಯ | : | ಕಲಿಯಿರೊಂದು ಪಾಠವನ್ನು ಕನ್ನಡ ತಾಯ್ಮಕ್ಕಳೇ | – ಜಿ.ವಿ.ಅಯ್ಯರ್ |
| ಗದ್ಯ ವಿಹಾರ | : | ವಿದ್ಯಾರ್ಥಿಗಳ ಆದರ್ಶ | – ಡಾ. ಶ್ರೀಕೃಷ್ಣಭಟ್ ಅರ್ತಿಕಜೆ |
| ಉಪಪಠ್ಯ | : | ಬಾಲಕ ತಿಮ್ಮರಸ | – (ಸಂಗ್ರಹ) |
| ವ್ಯಾಕರಣ | : | ನಾಮಪದ | |



7th_Kannada_Reader.indd 73 24-06-2019 19:37:45

ಕಾವ್ಯ ಕಣಜ

ಘಟಕ ಐದು

# ಬನ್ನಿ ಶಾಲೆಗೆ ಹೋಗುವ

– ಟಿ.ಆರ್. ಕಣ್ಣನ್

## ಪ್ರವೇಶ

'ವಿದ್ಯಾ ವಿಹೀನಾ ಪಶುಃ' 'ವಿನಯಂ ದಧಾತಿ ವಿದ್ಯಾ' – ಎಂಬುದು ಅನುಭಾವಿಗಳ ಮಾತಾಗಿದೆ. ಅಂದರೆ ವಿದ್ಯೆ ಕಲಿಯದವನು ಪಶುವಿಗೆ ಸಮಾನನೆಂದೂ, ವಿನಯದಿಂದಲೇ ವಿದ್ಯೆ ಕೈವಶವಾಗುತ್ತದೆ ಎಂಬುದೂ ಈ ಮಾತಿನ ಅರ್ಥವಾಗಿದೆ. ಮಾನವನನ್ನು ಮೃಗೀಯ ವರ್ತನೆಯಿಂದ ಪಾರು ಮಾಡಿ, ನಾಗರಿಕನ್ನಾಗಿಯೂ ಪ್ರಜ್ಞಾವಂತನನ್ನಾಗಿಯೂ ಮಾಡುವುದು ವಿದ್ಯೆ. ವಿದ್ಯಾರ್ಥಿಗಳ ಪಾಲಿಗಂತೂ ಶಾಲಾ ಶಿಕ್ಷಣದ ಅವಧಿ ಬಂದು ಮಹತ್ವಪೂರ್ಣವಾದ ಕಾಲವೆಂದೇ ಹೇಳಬೇಕು. ಕಾರಣ ಶಾಲಾವಧಿಯಲ್ಲಿ ಅವರು ಕಲಿತ ಸುಗುಣಗಳೇ ಮುಂದೆ ಅವರ ಭಾವೀ ಜೀವನಕ್ಕೆ ದಾರಿದೀಪವಾಗುತ್ತವೆ. ಈ ಆಶಯದ ಕಡೆಗೆ ಈ ಕವನವು ಬೆಳಕು ಚೆಲ್ಲುತ್ತದೆ.

ಬನ್ನಿ ಎಳೆಯರೆ, ಬನ್ನಿ ಗೆಳೆಯರೆ
ಬನ್ನಿ ಶಾಲೆಗೆ ಹೋಗುವ...
ಶಾಲೆಯಲಿ ಕಲಿತು ನಾವು
ಬುದ್ಧಿವಂತರಾಗುವ... ‖1‖

ವಿನಯದಿಂದಲೆ ಕಲಿತು ನಾವು
ಜ್ಞಾನವಂತರಾಗುವ
ವಿದ್ಯೆ ಕಲಿಯದ ಬಾಳು ವ್ಯರ್ಥ
ಎಂಬ ಸತ್ಯವ ಅರಿಯುವ... ‖2‖

ತಾಯಿತಂದೆ ಗುರುಗಳನ್ನು
ದೈವವೆಂದೇ ಬಗೆಯುವ
ಅವರ ಹರಕೆಯು ನಮ್ಮ ಸುಖಕೆ
ಮುಖ್ಯವೆಂಬುದ ತಿಳಿಯುವ... ‖3‖



7th_Kannada_Reader.indd 74 24-06-2019 19:37:45

ಕಾಮ ಕ್ರೋಧವ ತೊರೆದು ನಾವು
ಶಾಂತಿ ಸಹನೆಯ ತಳೆಯುವ
ಪ್ರೀತಿಯಿಂದಲೆ ನೀತಿ ಮಾರ್ಗದಿ
ಜ್ಞಾನ ಗಳಿಸಲು ಬಯಸುವ... ‖ 4 ‖

ಹೆಣ್ಣು–ಗಂಡು ಬೇಧ ಮರೆತು
ಹೆಮ್ಮೆಯಿಂದಲಿ ಕಲಿಯುವ
ಹೆಣ್ಣು ಕಲಿಕೆಗೆ ಒತ್ತು ಕೊಡುತ
ಹೆಣ್ಣು ಘನತೆಯ ಸಾರುವ... ‖ 5 ‖

ಜಾತಿ ಮತದ ಮೌಢ್ಯ ಮರೆತು
ಜಾಣತನದಲಿ ನಲಿಯುವ
'ದೇಶ ಸೇವೆಯೆ–ಈಶ ಸೇವೆ'
ಎಂದು ಅರಿತು ದುಡಿಯುವ... ‖ 6 ‖

ತಾಯಿ ನುಡಿಯಲೆ ಕಲಿತು ನಾವು
ಹೃದಯ ತುಂಬಿ ಹಾಡುವ
ತಾಯಿ ನಾಡದು ಪ್ರಗತಿ ಕಾಣಲು
ದೈವದೊಲುಮೆಯ ಕೋರುವ... ‖ 7 ‖

ಕಲಿತ ಶಾಲೆಯ ಋಣವ ತೀರಿಸೆ
ಬದುಕಿನುದ್ದಕು ಸ್ಮರಿಸುವ
ಕಲಿಸಿ ನಮಗೆ ದಾರಿ ತೋರಿದ
ಗುರುಗಳಡಿಗೆ ನಮಿಸುವ... ‖ 8 ‖

ಜಗದ ಜನತೆಯು ಐಕ್ಯ ಕಾಣಲು
ಶಾಂತಿ ಮಂತ್ರವ ಪಠಿಸುವ
ವಿದ್ಯೆ ಕಲಿತವರೆಂದು ಧನ್ಯರು
ಎಂದು ಲೋಕಕೆ ಸಾರುವ... ‖ 9 ‖



7th_Kannada_Reader.indd 75 24-06-2019 19:37:45

## ಕವಿ–ಕಾವ್ಯ ಪರಿಚಯ



ಶ್ರೀ. ಟಿ.ಆರ್. ಕಣ್ಣನ್ ಅವರು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ., ಪದವೀಧರರಾಗಿದ್ದು ಪ್ರಸ್ತುತ ಸರ್ಕಾರಿ ಉನ್ನತ ಪ್ರೌಢಶಾಲೆ, ಮದಗೊಂಡಹಳ್ಳಿ(ಕೃಷ್ಣಗಿರಿ ಜಿಲ್ಲೆ) ಯಲ್ಲಿ ಕನ್ನಡ ಶಿಕ್ಷಕರಾಗಿದ್ದಾರೆ. ಇವರ ಹುಟ್ಟೂರು ಹೊಸೂರು. ತಂದೆ: ರಂಗಸ್ವಾಮಿ ಅಯ್ಯಂಗಾರ್ಯರು; ತಾಯಿ: ಯಶೋದ. ಕಣ್ಣನ್ ಅವರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಹೊಸೂರಿನ ಆರ್.ವಿ.ಬಾಲಕರ ಸರ್ಕಾರಿ ಉನ್ನತ ಪ್ರೌಢಶಾಲೆಯಲ್ಲಿ ಮುಗಿಸಿದರು. ಇವರ ಮನೆ ಮಾತು ತಮಿಳು. ಕಲಿತದ್ದು ಕನ್ನಡ ಮಾಧ್ಯಮದಲ್ಲಿ. ಕನ್ನಡ, ತೆಲುಗು ಹಾಗೂ ತಮಿಳು ಭಾಷೆಯನ್ನು ಚೆನ್ನಾಗಿ ಬಲ್ಲವರಾಗಿರುವ ಇವರಿಗೆ ಕನ್ನಡವೆಂದರೆ ಬಹಳ ಪ್ರೀತಿ.

ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯಿರುವ ಇವರು ಹಲವು ಕಥೆ ಕವನಗಳನ್ನು ರಚಿಸುವುದರಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಇವರು ಸಲ್ಲಿಸಿರುವ ಸೇವೆಗೆ ಹಲವು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ.

'ಬನ್ನಿ ಶಾಲೆಗೆ ಹೋಗುವ' – ಕವನದಲ್ಲಿ ಮಕ್ಕಳೆಲ್ಲರೂ ಶಾಲೆಯಲ್ಲಿ ಕಲಿತು ವಿನಯವಂತರಾಗಿಯೂ, ಜಾಣ್ಮೆಯಿಂದ ಸಾಮಾಜಿಕ ಪಿಡುಗುಗಳಿಂದ ಮುಕ್ತವಾದ, ಸದೃಢ ರಾಷ್ಟ್ರ ನಿರ್ಮಾಣ ಮಾಡಲು ಶಿಕ್ಷಣ ಅಗತ್ಯ ಎಂಬುದನ್ನು ಮನಗಾಣಬೇಕೆಂದು ತಿಳಿಸಿದ್ದಾರೆ. ಹೆತ್ತ ತಂದೆ–ತಾಯಿಗಳನ್ನು, ಗುರುಗಳನ್ನು ಭಕ್ತಿ ಗೌರವಗಳಿಂದ ಕಾಣಬೇಕೆಂದೂ ಅವರ ಹಾರೈಕೆ ಬಹಳ ಮುಖ್ಯ ಎಂಬುದನ್ನೂ ಅರಿತು ವಿಶ್ವದ ಏಳಿಗೆಗಾಗಿಯೂ, ಶಾಂತಿಗಾಗಿಯೂ ಅನವರತ ದುಡಿದಾಗ ನಾವು ಧನ್ಯರಾಗುತ್ತೇವೆಂದೂ ತಿಳಿಸಿದ್ದಾರೆ.

## ಪದಗಳ ಅರ್ಥ

ಎಳೆಯರು–ಕಿರಿಯರು, ಮಕ್ಕಳು; ಗೆಳೆಯರು–ಸ್ನೇಹಿತರು; ಜ್ಞಾನ–ಅರಿವು, ತಿಳುವಳಿಕೆ; ವ್ಯರ್ಥ–ಅರ್ಥಹೀನ; ಸತ್ಯ–ನಿಜವಾದ; ದೈವ–ದೇವರು; ಹರಕೆ–ಆಶೀರ್ವಾದ; ಸುಖ–ನೆಮ್ಮದಿ; ಕಾಮ–ಅತಿ ಆಸೆ; ಕ್ರೋಧ–ಎಲ್ಲವೂ ತನಗೇ ಬೇಕು ಎಂಬ ದುರ್ಗುಣ; ಪ್ರೀತಿ–ಪ್ರೇಮ; ಜನನಿ–ತಾಯಿ; ಜಗ–ಪ್ರಪಂಚ; ಮೌಢ್ಯ–ಅಜ್ಞಾನ; ಈಶ–ಶಿವ, ಪರಮಾತ್ಮ; ಪ್ರಗತಿ–ಮುನ್ನಡೆ, ಅಭಿವೃದ್ಧಿ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕವಿ ಎಳೆಯರನ್ನು ಎಲ್ಲಿಗೆ ಬರುವಂತೆ ಆಹ್ವಾನಿಸುತ್ತಾರೆ ?
2. ಮಗು ಶಾಲೆಯಲ್ಲಿ ಏನನ್ನು ಗಳಿಸಬೇಕೆಂದು ಕೋರುತ್ತಾರೆ ?
3. ನಾವು ಹೇಗೆ ವಿದ್ಯೆಯನ್ನು ಕಲಿಯಬೇಕೆಂದು ಕವಿ ಬಯಸುತ್ತಾರೆ ?
4. ಯಾವ ಬಾಳು ವ್ಯರ್ಥವಾದುದು ?
5. ಯಾರನ್ನೆಲ್ಲಾ ನಾವು ದೇವರೆಂದು ಪೂಜಿಸಬೇಕು?
6. ಶಾಲೆಯಲ್ಲಿ ನಾವು ಹೇಗೆ ವಿದ್ಯೆಯನ್ನು ಕಲಿಯಬೇಕು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ವಿದ್ಯಾರ್ಥಿಗಳಾದ ನಾವು ಯಾವುದರಿಂದ ದೂರ ಉಳಿದು ವಿದ್ಯೆ ಕಲಿಯಬೇಕು?
2. ದೇಶಸೇವೆಯಲ್ಲಿ ನಾವು ಯಾರನ್ನು ಕಾಣಬೇಕು ಎಂದು ಕವಿ ಹೇಳುತ್ತಾರೆ?
3. ನಾವು ತಾಯಿ ನುಡಿಯಲ್ಲಿಯೇ ಕಲಿತು ಏನು ಮಾಡಬೇಕು ?
4. ಜಗದ ತುಂಬಾ ಹರಡಿರುವ ದೈವ ಶಕ್ತಿಗೆ ಯಾರನ್ನೆಲ್ಲಾ ಕವಿ ಇಲ್ಲಿ ಹೋಲಿಸಿದ್ದಾರೆ ?
5. ನಾವು ಯಾರ ಋಣವನ್ನು ಸದಾ ಸ್ಮರಿಸುತ್ತಿರಬೇಕು?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. 'ಬನ್ನಿ ಶಾಲೆಗೆ ಹೋಗುವ' ಕವನದ ಆಶಯವೇನೆಂಬುದನ್ನು ತಿಳಿಸಿರಿ.
2. ಶಾಲೆಯಲ್ಲಿ ನಾವು ಕಲಿಯಬೇಕಾದ ಒಳ್ಳೆಯ ಗುಣಗಳಾವುವು?



7th_Kannada_Reader.indd 76 24-06-2019 19:37:46

## ಭಾಷಾಭ್ಯಾಸ

**1. ಈ ಕೆಳಗೆ ಕೊಟ್ಟಿರುವ ಪದಗಳ ಅರ್ಥ ಬರೆಯಿರಿ**

ಎಳೆಯರು, ವಿನಯ, ಕಾಮ, ಕ್ರೋಧ, ಸಹನೆ, ಋಣ, ಜಗ.

**2. ಈ ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**

ಜ್ಞಾನ, ವಿದ್ಯೆ, ವಿನಯ, ಸತ್ಯ, ಹರಕೆ, ಪ್ರೀತಿ, ನೀತಿ, ದೂರ, ಧೈರ್ಯ, ಜಾಣ.

**3. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ಜಾಣತನ, ದೈವಶಕ್ತಿ, ಮೊರೆ ಹೋಗು, ಒಂದುಗೂಡು, ಒತ್ತು ಕೊಡು, ದಾರಿ ತೋರು, ಪ್ರಗತಿ ಕಾಣು.

**4. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಗುರುಗಳನ್ನು, ದೈವವೆಂದೆ, ಪ್ರೀತಿಯಿಂದ, ಹೆಮ್ಮೆಯಿಂದ, ಧೈರ್ಯದಿಂದ, ಒಂದುಗೂಡಿ, ಹಗಲಿರುಳು, ಭಕ್ತಿಯಿಂದ.

## ಚಟುವಟಿಕೆ

1. ನಿಮ್ಮ ಶಾಲೆಯಲ್ಲಿ ವಿದ್ಯಾರ್ಥಿಗಳೆಲ್ಲರೂ ಸೇರಿ ಆನಂದಪಟ್ಟ ಸಂದರ್ಭವನ್ನು ಕುರಿತು ನಿಮ್ಮ ಮನೆಯಲ್ಲಿ ಹಿರಿಯರೊಡನೆ ಹಂಚಿಕೊಳ್ಳಿರಿ.
2. ಶಾಲೆಯಲ್ಲಿ ನಡೆಯುವ ರಾಷ್ಟ್ರೀಯ ಹಬ್ಬಗಳಲ್ಲಿ ತಪ್ಪದೇ ಭಾಗವಹಿಸಿರಿ.

## ಕನ್ನಡದ ಅನ್ನ ...

ಹೊನ್ನುಡಿ ಸವಿ ಜೊನ್ನದ ನುಡಿಯಣ್ಣ
ಕನ್ನಡವೆಂದರೆ ಬಲು ಹಿತವು
ಕನ್ನಡ ಚಿನ್ನವೆ, ಅದು ಸರಿಯಣ್ಣ
ಕನ್ನಡಗೇತಕೆ ಇತಿಮಿತಿಯು

ಬಾಯಲಿ ಆಡುತ ಮನದಲಿ ನೆನೆದು
ಬರೆಯುತ ಪದಸಿರಿ ಬೆಳಸೋಣ
ಒಲವಿನ ಮಾತೋ, ಒಳಗುದಿ ಸಿಡುಕೊ
ಕರುನಾಡುಲಿಯನು ಬಳಸೋಣ

ಚಿನ್ನದ ಭಾಷೆಯ ತಟ್ಟೆಯಲುಣುತ
ನನ್ನಿಯ ಬಳಗವ ಕಟ್ಟೋಣ
ಕನ್ನಡವನನ್ನವ ಮಾಡುತಲಾ
ಅನ್ನವ ಬಡಿಸುತು ಹಂಚೋಣ

ಕನ್ನಡ ಕಂದನು ಸಿರಿನುಡಿ ನುಡಿಯೆ
ನನ್ನಯ ವಸಂತ ಮಾಸವದು
ಕನ್ನಡ ಕೋಗಿಲೆಯಾಗುವೆ ನಾನು
ಎನ್ನುವೆ ಪಂಚಮ ವೇದವದು



7th_Kannada_Reader.indd 77 24-06-2019 19:37:46

ಪೂರಕ ಪದ್ಯ

ಘಟಕ ಐದು

# ಕಲಿಯಿರೊಂದು ಪಾಠವನ್ನು ಕನ್ನಡ ತಾಯ್ಮಕ್ಕಳೇ!

– ಜಿ.ವಿ.ಅಯ್ಯರ್

## ಪ್ರವೇಶ

'ಓದು ಬಲ್ಲವನು ಮಾಣಿಕ್ಯ ತಂದ', 'ರಸಿಕನಾಡುವ ಮಾತು ಶಶಿಯುದಿಸಿ ಬಂದಂತೆ' – ಎಂಬುದು ಹಿರಿಯರ ಅನುಭವದ ಮಾತು. ಮಕ್ಕಳು ತಮ್ಮ ಬಾಲ್ಯ ಜೀವನದಲ್ಲಿ ಒಳ್ಳೆಯ ಆಚಾರ–ವಿಚಾರಗಳು, ನಡೆ–ನುಡಿಗಳನ್ನು ಕಲಿಯುವುದು ಅತಿ ಅವಶ್ಯಕ. ಕಾರಣ ಇಂದಿನ ಮಕ್ಕಳೇ ನಾಳಿನ ನಾಡಿನ ಪ್ರಜೆಗಳು. ಈ ಕವನದಲ್ಲಿ ಕವಿಯು, ಮಕ್ಕಳು ಒಳ್ಳೆಯ ವಿದ್ಯೆಯನ್ನು ಕಲಿಯುವಂತೆಯೂ ತನ್ಮೂಲಕ ನಾಡನ್ನು ಸಂರಕ್ಷಿಸಬೇಕೆಂದೂ ಕರೆ ನೀಡಿದ್ದಾರೆ.

ಕಲಿಯಿರೊಂದು ಪಾಠವನ್ನು ಕನ್ನಡ ತಾಯ್ಮಕ್ಕಳೇ
ಕಲ್ಲ ಕಡೆದು ಮೂರ್ತಿ ಮಾಡುವೆನ್ನ ಪುಟ್ಟ ಶಿಲ್ಪಿಗಳೇ
ಕಲಿಯಿರಿದನು ವಿದ್ಯೆಯಲ್ಲೇ ವಿನಯವಿದೆ
ವಿನಯದಲ್ಲೇ ಕೀರ್ತಿಯಿದೆ
ನಿಮ್ಮ ಕೈಯ ಮುಷ್ಠಿಯೊಳಗೆ – ತಾಯ ಬಯಕೆ ಬಹಳವಿದೆ ‖1‖

ವಿಜಯನಗರದಲ್ಲಿ ವಿದ್ಯಾರಣ್ಯರೆಂಬ ಒಬ್ಬರು
ಮಣ್ಣ ತಾಯ ಕಣ್ಣ ನೀರ...
ತೊಡೆಯೆ ತಾವೇ ನಿಂದರು... ಎಳೆಯತನದೆ ಎಲ್ಲ
ವಿದ್ಯೆ ಕಲಿತು ಯೋಗಿಯಾದರು – ಕನ್ನಡ ತಾಯ್ಮಡಿಲ ತುಂಬ
ಹೊನ್ನ ಮಳೆಯ ಸುರಿಸಿದರು ‖2‖

ಇಮ್ಮಡಿ ಪುಲಕೇಶಿಯಂತೆ ನೀವು ವೀರರಾಗಬೇಕು
ವ್ಯಾಸರಾಯರಂತೆ ನೀವು
ಪದವಿ ಮೋಹ ಬಿಡಬೇಕು
ತ್ಯಾಗ ಬುದ್ಧಿಯಿಂದ ನೀವು – ತಾಯಸೇವೆ ಮಾಡಬೇಕು
ಕಲಿತು ಕಲಿಗಳಾಗಬೇಕು – ನಾಳೆ ನಾಡನಾಳಬೇಕು ‖3‖



7th_Kannada_Reader.indd 78 24-06-2019 19:37:46

## ಕವಿ–ಕಾವ್ಯ ಪರಿಚಯ



**ಜಿ.ವಿ.ಅಯ್ಯರ್**

ಈ ಕವನವನ್ನು ರಚಿಸಿದವರು ಖ್ಯಾತ ನಟ, ನಿರ್ಮಾಪಕ, ಸಾಹಿತಿಗಳಾದ ಶ್ರೀ. ಜಿ.ವಿ.ಅಯ್ಯರ್ ಅವರು. ಇವರ ಪೂರ್ಣ ಹೆಸರು ಗಣಪತಿ ವೆಂಕಟರಮಣ ಅಯ್ಯರ್. ಶ್ರೀಯುತರು ಸೆಪ್ಟೆಂಬರ್ 3, 1917ರಂದು ಮೈಸೂರು ಸಂಸ್ಥಾನದ ನಂಜನಗೂಡಿನಲ್ಲಿ ಜನಿಸಿದರು. ಕನ್ನಡ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಚಲನಚಿತ್ರಗಳನ್ನು ನಿರ್ಮಿಸಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಸಂಸ್ಕೃತ ಭಾಷೆಯಲ್ಲಿ 'ಆದಿ ಶಂಕರಾಚಾರ್ಯ' (1983), 'ಶ್ರೀಮದ್ಭಗವದ್ಗೀತಾ'(1983), 'ಸ್ವಾಮಿ ವಿವೇಕಾನಂದ'(1987),'ಮಧ್ವಾಚಾರ್ಯರು'(1988) ಮುಂತಾದ ಚಲನಚಿತ್ರಗಳ ನಿರ್ಮಾಪಕರಾಗಿ ರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಶ್ರೀಯುತರು 21 ಡಿಸೆಂಬರ್, 2003ರಲ್ಲಿ ತಮ್ಮ 86ನೆಯ ವಯಸ್ಸಿನಲ್ಲಿ ವಿಧಿವಶರಾದರು.

## ಪದಗಳ ಅರ್ಥ

ಶಿಲ್ಪಿ–ಶಿಲ್ಪವನ್ನು ನಿರ್ಮಿಸುವವನು; ಕಲ್ಲಿನ ಮೂರ್ತಿ ಕಡೆಯುವವನು; ತಾಯಿ–ಮಾತೆ, ಜನನಿ, ಅಮ್ಮ; ಯೋಗಿ–ತಪಸ್ವಿ, ಋಷಿ, ಜ್ಞಾನಿ; ತಾಯ್ಮಡಿಲು–ತಾಯಿಯ ಮಡಿಲು, ಉಡಿ; ಹೊನ್ನ–ಬಂಗಾರದ, ಚಿನ್ನದ; ಮೋಹ–ಆಸೆ; ಕಲಿ–ವೀರ, ಶೂರ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕಲ್ಲಿನಿಂದ ಮೂರ್ತಿ ಮಾಡುವ ಶಿಲ್ಪಿಗಳು ಯಾರು ?
2. ವಿನಯದಿಂದ ಕಲಿತರೆ ನಮಗೆ ಏನು ದೊರೆಯುತ್ತದೆ ?
3. ಕನ್ನಡ ತಾಯ ಕಣ್ಣೀರು ತೊಡೆದ ಯತಿವರ್ಯರು ಯಾರು ?
4. ಕನ್ನಡ ತಾಯ್ನುಡಿಗೆ ಹೊನ್ನ ಮಳೆ ಸುರಿಸಿದವರು ಯಾರು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕನ್ನಡ ಕಂದಮ್ಮಗಳಿಗೆ ಕವಿಯು ಏನೆಂದು ಬುದ್ಧಿ ಹೇಳಿದ್ದಾರೆ ?
2. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದ ಯತಿವರೇಣ್ಯರು ಯಾರು?
3. ಕವಿಯು ಯಾವ ಮೋಹವನ್ನು ಬಿಡಬೇಕೆಂದು ಬಯಸಿದ್ದಾರೆ ?
4. ನಾವು ಯಾರಂತೆ ವೀರತ್ವದಿಂದ ಮೆರೆಯಬೇಕೆಂದು ಕವಿ ಹೇಳಿದ್ದಾರೆ ?
5. ನಾವು ಕಲಿಗಳಾಗಿ ಯಾವ ಸಾಧನೆಯನ್ನು ಮಾಡಬೇಕು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಕಲಿಯಿರೊಂದು ಪಾಠವನ್ನು ಕವನದಲ್ಲಿ ಕನ್ನಡ ಕಂದರಿಗೆ ಕವಿಯು ಹೇಳಿರುವ ಸವಿ ಮಾತುಗಳನ್ನು ವಿವರಿಸಿ.

## ಚಟುವಟಿಕೆ

1. ದೇಶಪ್ರೇಮದ ಕವನಗಳನ್ನು ಓದಿರಿ.
2. ತಾಯ್ನುಡಿಯ ಮೇಲೆ ಅಭಿಮಾನವನ್ನು ಬೆಳೆಸಿಕೊಳ್ಳಿ.



7th_Kannada_Reader.indd 79 24-06-2019 19:37:46

ಘಟಕ ಐದು

# ವಿದ್ಯಾರ್ಥಿಗಳ ಆದರ್ಶ

– ಡಾ. ಶ್ರೀಕೃಷ್ಣಭಟ್ ಅರ್ತಿಕಜೆ

## ಪ್ರವೇಶ

ಶಿಕ್ಷಣ ಪ್ರತಿಯೊಬ್ಬ ಮಗುವಿನ ಜನ್ಮಸಿದ್ಧ ಹಕ್ಕು. ಶಿಕ್ಷಣದಿಂದ ವ್ಯಕ್ತಿ ಉತ್ತಮ ನಾಗರಿಕನಾಗಿಯೂ, ಪ್ರಜ್ಞಾವಂತನಾಗಿಯೂ ಜೀವನ ನಡೆಸಲು ಸಾಧ್ಯವಾಗುತ್ತದೆ. ಶಿಕ್ಷಣ ಕಲಿಯಲು ವಿದ್ಯಾರ್ಥಿಗಳಿಗೆ ಬಾಲ್ಯವು ಅತ್ಯಂತ ಮಹತ್ವದ ಘಟ್ಟವಾಗಿದೆ. ಈ ಅವಧಿಯಲ್ಲಿ ಕಲಿತ ಸುಗುಣಗಳೇ ಮುಂದೆ ಅವರ ಬದುಕನ್ನು ಉಜ್ವಲಗೊಳಿಸಿ ಭಾವೀ ಭಾರತದ ಪೌರರನ್ನಾಗಿ ರೂಪಿಸಲು ನೆರವಾಗುತ್ತದೆ. ಈ ಲೇಖನದಲ್ಲಿ ವಿದ್ಯಾರ್ಥಿಗಳ ಆದರ್ಶ ಜೀವನ ಕುರಿತಂತೆ ಲೇಖಕರು ತಮ್ಮ ಅಮೂಲ್ಯ ಚಿಂತನೆಗಳನ್ನು ನೀಡಿದ್ದಾರೆ.





7th_Kannada_Reader.indd 80 24-06-2019 19:37:46

ಪ್ರಾಚೀನ ಶಾಸ್ತ್ರಕಾರರು ಬ್ರಹ್ಮಚರ್ಯಾಶ್ರಮವೆಂದು ಏಂಗಡಿಸಿದ ಮಾನವ ಜೀವನದ ಮೊದಲ ಹಂತವೇ ಇಂದಿನ ವಿದ್ಯಾರ್ಥಿ ದೆಸೆ. ತಮ್ಮ ಮುಂದಿನ ಬಾಳು ಹಸನಾಗಬೇಕೆಂದು ಬಯಸುವ ಬಾಲಕರೆಲ್ಲರೂ ವಿದ್ಯೆಯ ಮಹತ್ವವನ್ನು ತಿಳಿದುಕೊಂಡು ಅದನ್ನು 'ಗುರುಗಳ ಗುರು' ಎಂದು ಪೂಜಿಸುತ್ತಾರೆ. ತಮ್ಮ ಏಳಿಗೆ ಅಥವಾ ಅವನತಿಗೆ ಬಾಲ್ಯ–ಯೌವನಗಳಲ್ಲಿ ಕೂಡಿ ಹಾಕಿದ ಜ್ಞಾನ–ಅನುಭವಗಳೂ, ಮೈಗೂಡಿಸಿಕೊಂಡ ಗುಣಗಳೂ, ಕಂಡುಕೊಂಡ ದಾರಿಗಳೂ ಕಾರಣವೆಂಬುದನ್ನು ಅವರು ಮರೆಯುವುದಿಲ್ಲ.

**ಆ ಕಾಲವೊಂದಿತ್ತು ದಿವ್ಯ ತಾನಾಗಿತ್ತು ಬಾಲ್ಯವಾಗಿತ್ತು**
**ಮಣ್ಣು ಹೊನ್ನಾಗಿ ಕಲ್ಲೆ ಹೂವಾಗಿ ನೀರಮೃತವಾಗಿ**
**ಮನೆ ಮೇರುವಾಗಿ ಕವಿಶೈಲ ತಾನೆ ಕೈಲಾಸವಾಗಿ**
**ಕಾಡೆ ನಂದನವಾಗಿ ನೆಲವೆ ನಾಕವಾಗಿ ನಗುವ**
**ಕಾಲವೊಂದಿತ್ತು.**

ಎಂದು ಕವಿ ಕುವೆಂಪು ಅವರು ಹಾಡಿದಂತೆ ಸೌಂದರ್ಯ ದರ್ಶನವನ್ನು ಮಾಡಿ ಕೊಡುವ, ಮಾಧುರ್ಯದ ಚಿರಸ್ಮರಣೀಯ ಅನುಭವಗಳನ್ನು ಚಿತ್ತ ಭಿತ್ತಿಯ ಮೇಲೆ ಚಿತ್ರಿಸಿರುವ ಬಾಲ್ಯದ ಸುವರ್ಣ ದಿನಗಳು ಉರುಳಿ ಹೋದರೆ ಮರಳಿ ಬಾರವು. ಅವು ಬಳಿಯಲ್ಲಿರುವಾಗಲೇ ಜ್ಞಾನೋಪಾಸನೆಯ ವ್ರತವನ್ನು ಕೈಗೊಂಡು ವಿದ್ಯಾರ್ಥಿ ಜೀವನವನ್ನು ಸಾರ್ಥಕಗೊಳಿಸುವುದು ಉತ್ತಮ. ಜಗದ್ವಿಖ್ಯಾತರಾದ ಮಹಾಪುರುಷರನೇಕರ ಯಶಸ್ಸಿನ ಗುಟ್ಟು ಅವರ ಕ್ರಮಬದ್ಧ ಹಾಗೂ ಸಂಯಮದ ವಿದ್ಯಾರ್ಥಿ ದೆಸೆಯಲ್ಲಿ ಅಡಗಿತ್ತು.

ಗುರುಕುಲ ಶಿಕ್ಷಣ ಪದ್ಧತಿಯು ಅಸ್ತಿತ್ವದಲ್ಲಿದ್ದಾಗ ವಿದ್ಯಾರ್ಥಿಗಳು ಅನೇಕ ರೀತಿಯ ಕಟ್ಟುನಿಟ್ಟುಗಳಿಗೆ ಒಳಗಾಗಿ, ಶಿಕ್ಷಕರ ಸೇವೆಯನ್ನು ಮಾಡುತ್ತಾ ವಿದ್ಯಾರ್ಜನೆ ಮಾಡುತ್ತಿದ್ದರು. ಆದರೆ ಕಾಲ ಬದಲಾದಂತೆ ವಿದ್ಯಾರ್ಥಿಗಳೂ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಸಮಾಜದ ಇತರ ಎಲ್ಲಾ ವರ್ಗಗಳಿಗೆ ಸೇರಿದ ವ್ಯಕ್ತಿಗಳಂತೆ ರೀತಿ ನೀತಿ ನಿಯಮಗಳ ಎಲ್ಲೆಯನ್ನು ಮೀರಿ ವರ್ತಿಸತೊಡಗಿದರು. ಇದರಿಂದ ಅಶಿಸ್ತು, ಕಿಡಿಗೇಡಿತನ, ಅಸಭ್ಯತೆ, ಅರಾಜಕತೆಗಳೂ ಹುಟ್ಟಿಕೊಂಡು ಶಿಕ್ಷಣ ರಂಗವನ್ನೇ ಅಲ್ಲೋಲ ಕಲ್ಲೋಲ ಮಾಡುವಂತಹ ಪರಿಸ್ಥಿತಿ ಬಂದೊದಗಿತು. ಕೇವಲ ಪದವಿಯ ಅರ್ಹತಾ ಪತ್ರಗಳನ್ನಷ್ಟೇ ಪಡೆಯುವ ಉದ್ದೇಶದಿಂದ ಶಾಲಾ ಕಾಲೇಜುಗಳಿಗೆ ಬರುವ ವಿದ್ಯಾರ್ಥಿಗಳು ತಮ್ಮ ಕರ್ತವ್ಯಗಳನ್ನು ಮರೆಯುತ್ತಿದ್ದಾರೆ. ಕತ್ತೆಯ ಬೆನ್ನ ಮೇಲಿನ ಭಾರದಂತಿರುವ(ಅರ್ಥ ಮಾಡಿಕೊಳ್ಳದ) ವಿದ್ಯೆಯ ತೂಕಕ್ಕೆ ಅವರು ಹೆಗಲು ಕೊಡುತ್ತಿದ್ದಾರೆ. ಅಧಃಪತನದ ಹಾದಿಯಿಂದ ನಮ್ಮ ವಿದ್ಯಾರ್ಥಿಗಳು ಮೇಲೆದ್ದು ಬರಬೇಕಾದರೆ ಕೆಲವೊಂದು ಆದರ್ಶಗಳನ್ನು ಅವರು ಪಾಲಿಸುವುದು ಅಗತ್ಯ.

**'ಕಾಕಶ್ರದ್ಧಾ ಬಕಧ್ಯಾನಂ ಶ್ವಾನನಿದ್ರಾ ತಥೈವಚ**
**ಅಲ್ಪಾಹಾರೀ ಗೃಹತ್ಯಾಗೀ ವಿದ್ಯಾರ್ಥೀ ಪಂಚ ಲಕ್ಷಣಂ'**

ಎಂಬ ಹೇಳಿಕೆಯಲ್ಲಿ ಆದರ್ಶ ವಿದ್ಯಾರ್ಥಿಗೆ ಇರಬೇಕಾದ ಕಾಗೆಯ ಶ್ರದ್ಧೆ, ಕೊಕ್ಕರೆಯ ಏಕಾಗ್ರತೆಯ ಧ್ಯಾನ, ನಾಯಿಯಂತೆ ಅಲ್ಪ ನಿದ್ರೆ, ಮಿತ ಆಹಾರ, ಗೃಹ ತ್ಯಾಗ ಎಂಬ ಪ್ರಮುಖ ಲಕ್ಷಣಗಳು ಸೂಚಿಸಲ್ಪಟ್ಟಿವೆ.

ಶ್ರದ್ಧೆ ಇದ್ದವನಿಗೆ ಮಾತ್ರ ಜ್ಞಾನ ಲಭಿಸುತ್ತದೆ ಎನ್ನುವುದು ಆರ್ಯೋಕ್ತಿ. 'ಸಾಧಿಸಿದರೆ ಸಬಳ ನುಂಗಬಹುದು' ಎಂಬಂತೆ ಶ್ರದ್ಧೆಯಿಂದೊಡಗೂಡಿದ ಸಾಧನೆಯಿಂದ ವಿದ್ಯಾರ್ಥಿಗಳು ಅಸಾಧ್ಯವಾದ ಕೆಲಸವನ್ನೂ ಸಾಧ್ಯವಾಗಿಸಿಕೊಳ್ಳಬಹುದು. ಸಾಧನೆಯ ಹಾದಿಯಲ್ಲಿ ಕಷ್ಟಗಳು ಬರಬಹುದು. ಆದರೆ ಯಾವ ವ್ಯಕ್ತಿಯೇ ಇರಲಿ, ಸುಖಾರ್ಥಿಯೂ ವಿದ್ಯಾರ್ಥಿಯೂ ಆಗಿ ಎರಡರಲ್ಲೂ ಯಶಸ್ಸು ಗಳಿಸಲು ಸಾಧ್ಯವಿಲ್ಲ. ಸತತಾಭ್ಯಾಸ, ಪ್ರಯತ್ನಗಳಿದ್ದಲ್ಲಿ ವಿದ್ಯೆ ಕರಗತವಾಗುವುದು.

ಏಕಾಗ್ರತೆಯಲ್ಲಿ ವಿದ್ಯಾರ್ಥಿ ಬಕನಂತಿರಬೇಕು. ನಿಷ್ಠೆಯಿಲ್ಲದವನ ಮನಸ್ಸು ಚಂಚಲವಾಗಿದ್ದು, ಎಲ್ಲೆಲ್ಲೂ ಹರಿದಾಡುವುದು. 'ಮನವೆಂಬ ಮರ್ಕಟನ ಬಗೆದಂತೆ ಬಿಡಲು, ತನಗಿಷ್ಟ ಬಂದಂತೆ ಚೇಷ್ಟೆಗೆಳೆಸುವುದು'. ವಿವೇಕದ ಹಗ್ಗದಿಂದ ಅದನ್ನು ಬಿಗಿದು ಜಗ್ಗಿದಾಗ ಮಾತ್ರ ಅದು ಉದ್ದೇಶಿತ ಕಾರ್ಯದಲ್ಲಿ ತೊಡಗುವುದು.

'ವಿದ್ಯಾತುರಾಣಾಂ ನ ಸುಖಂ ನ ನಿದ್ರಾ' ಎನ್ನುತ್ತಾರೆ ನಮ್ಮ ಹಿರಿಯರು. ತಪಸ್ಸಿಗೆ ಸಮಾನವಾದ ಜ್ಞಾನಾರ್ಜನೆಯ ಕಾರ್ಯಕ್ಕೆ ಸ್ವಲ್ಪ ಮಟ್ಟಿನ ಸುಖನಿದ್ರೆಯ ತ್ಯಾಗವು ಅನಿವಾರ್ಯ. ವಿದ್ಯಾರ್ಥಿಗಳಿಗೆ ಕುಂಭಕರ್ಣನ ಮಾದರಿ ಸಲ್ಲದು. ಸದಾ ಎಚ್ಚರದಲ್ಲಿದ್ದು, ಆಲಸ್ಯ, ಸೋಮಾರಿತನಗಳನ್ನು ಹೊಡೆದೋಡಿಸಿ,



7th_Kannada_Reader.indd 81 24-06-2019 19:37:46

ಕರ್ತವ್ಯ ಮಗ್ನರಾಗುವ ವಿದ್ಯಾರ್ಥಿಗಳಿಗೆ ಮಿತಿ ಮೀರಿ ನಿದ್ರೆ ಮಾಡಲು ಸಮಯ ದೊರಕುವುದಿಲ್ಲ.

ಹಿತಮಿತವಾದ ಆಹಾರ ಸೇವನೆ, ಆರೋಗ್ಯದ ದೃಷ್ಟಿಯಿಂದ ಅತ್ಯಂತ ಅಗತ್ಯವಾದುದು. ಇಷ್ಟ ಬಂದಂತೆ ಭಕ್ಷ್ಯ ಭೋಜ್ಯಗಳನ್ನು ಮುಕ್ಕುತ್ತಾ, ಹೊಟ್ಟೆಬಾಕತನವನ್ನು ಬೆಳೆಸಿಕೊಳ್ಳುವವರಿಗೆ ವಿದ್ಯೆಯ ಸಂಪಾದನೆಯ ಲವಲವಿಕೆ ಇರುವುದಿಲ್ಲ. ವಿದ್ಯಾರ್ಥಿ ತನ್ನ ಆರೋಗ್ಯವನ್ನು ಕಾಪಾಡಿಕೊಂಡಿದ್ದರೆ ಮಾತ್ರ Sound mind in a sound body ಎಂಬಂತೆ ಮಾನಸಿಕ ಮತ್ತು ಶಾರೀರಿಕ ಹೊಂದಾಣಿಕೆಯನ್ನು ಪಡೆಯಬಹುದು. ತನಗೆ ಬೇಕಾದ ತಿಳಿವಿನ ಆಹಾರವನ್ನು ಧಾರಾಳವಾಗಿ ಗಳಿಸಿ ಅದನ್ನು ಜೀರ್ಣಿಸಿಕೊಳ್ಳಬಹುದು.

ವಿದ್ಯಾ ಸಂಸ್ಥೆಗಳ ಹೆಚ್ಚಳ ಮತ್ತು ವಾಹನ ಸೌಕರ್ಯಗಳ ದೆಸೆಯಿಂದ ಇಂದಿನ ವಿದ್ಯಾರ್ಥಿಗಳಿಗೆ ಗೃಹತ್ಯಾಗಿಗಳಾಗಿರಬೇಕಾದ ಅವಶ್ಯಕತೆ ಕಡಿಮೆಯಾಗಿರುವುದೇನೋ ನಿಜ. ಆದರೆ, ವಿದ್ಯಾರ್ಜನೆಯ ದೃಷ್ಟಿಯಿಂದ ದೂರದ ಶಾಲೆ, ಕಾಲೇಜುಗಳ ಉತ್ತಮ ವಿದ್ಯಾರ್ಥಿ ನಿಲಯಗಳಲ್ಲಿ ವಾಸ ಮಾಡುವುದು ಅನುಕೂಲಕರ. ಕೌಟುಂಬಿಕ ಕಲಹಗಳು ಮತ್ತು ಕಲುಷಿತ ವಾತಾವರಣಗಳಿಂದ ಕಂಗೆಟ್ಟ ವಿದ್ಯಾರ್ಥಿಗಳಿಗಂತೂ ವಿದ್ಯಾರ್ಥಿ ನಿಲಯಗಳ ವಾಸವೇ ಸರಿಯಾದ ಪರಿಹಾರ.

ವಿದ್ಯಾರ್ಥಿಯು ಜ್ಞಾನ ಪಿಪಾಸುವಾಗಿರಬೇಕು. ತನಗೆ ಗೊತ್ತಿಲ್ಲದ ವಿಚಾರಗಳನ್ನು ಇತರರಿಂದ ಕೇಳಿ ತಿಳಿದುಕೊಳ್ಳುವ, ಸಂದೇಹ ಸಂಶಯಗಳಿಗೆ ಶಿಕ್ಷಕರಿಂದ ಪರಿಹಾರ ಪಡೆಯುವ ಆಸಕ್ತಿ ಅವನಲ್ಲಿರಬೇಕು. ಈ ವಿಷಯದಲ್ಲಿ ನಾಚಿಕೆ ಪಡುವ ಅಗತ್ಯವಿಲ್ಲ. ಏಕೆಂದರೆ 'ಅಜ್ಞಾನವು ಅಪರಾಧವಲ್ಲ, ಅಜ್ಞಾನದ ಅರಿವಿಲ್ಲದಿರುವುದೇ ಅಪರಾಧ'. ಹಿರಿಯರಿಂದಲೂ ಗುರುಗಳಿಂದಲೂ ಗೆಳೆಯರಿಂದಲೂ ಪಡೆಯುವ ಜ್ಞಾನಕ್ಕೆ ಪೂರಕವಾಗಿ ಒಳ್ಳೆಯ ಪುಸ್ತಕಗಳನ್ನು ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು.

ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬನೂ ಯಾವುದಾದರೊಂದು ಪ್ರತಿಭೆಯನ್ನು ಹೊಂದಿರುತ್ತಾನೆ. ಭಾಷಣ, ಕವಿತಾರಚನೆ, ಚಿತ್ರ ರಚನೆ, ಶಿಲ್ಪಕಲೆ, ನಟನೆ, ಸಂಗೀತ, ನೃತ್ಯ, ಆಟೋಟಗಳು, ಕೃಷಿ, ತೋಟಗಾರಿಕೆ... – ಕ್ಷೇತ್ರ ಯಾವುದೇ ಇರಲಿ ತನ್ನಲ್ಲಿರುವ ಪ್ರತಿಭೆ ಮತ್ತು ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಯು ಪ್ರಯತ್ನಿಸಬೇಕು. ಹಾಗೆ ಮಾಡಿದಲ್ಲಿ ಮನಸ್ಸಿಗೆ ಸಂತೋಷವುಂಟಾಗುವುದು. ಜೊತೆಗೆ ತನ್ನದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಸಾಮರ್ಥ್ಯವೂ ರೂಪುಗೊಳ್ಳುತ್ತದೆ.

ಉತ್ತಮ ಗುಣನಡತೆಗಳಿಂದಲೂ, ನಿರಂತರ ಆಸಕ್ತಿಯಿಂದಲೂ ವಿದ್ಯಾರ್ಥಿಗಳು ಅಧ್ಯಾಪಕರನ್ನು ಒಲಿಸಿಕೊಳ್ಳಬೇಕು. ಪ್ರತಿಭಾವಂತರೂ, ಸಾಧಕರೂ ಆದ ವಿದ್ಯಾರ್ಥಿಗಳಿದ್ದಲ್ಲಿ ಶಿಕ್ಷಕರ ಸಾಮರ್ಥ್ಯ ಮತ್ತು ಬೋಧನ ಕಲೆಯ ಮಟ್ಟ ಹೆಚ್ಚುತ್ತದೆ. ಕಡಿದು ಹೋದ ಗುರುಶಿಷ್ಯರ ಆತ್ಮೀಯ ಸಂಬಂಧವನ್ನು ಮತ್ತೆ ಊರ್ಜಿತಗೊಳಿಸುವಲ್ಲಿ ಅಧ್ಯಾಪಕರು ಎಷ್ಟು ಪ್ರಯತ್ನವನ್ನು ಮಾಡಬೇಕೋ ಅಷ್ಟೇ ಪ್ರಯತ್ನವನ್ನು ವಿದ್ಯಾರ್ಥಿಗಳೂ ಮಾಡುವುದು ಹಿತಕರ. ನಮ್ಮ ಜೀವನದಲ್ಲಿ ಗುರುವಿನ ಮಹತ್ವವನ್ನು ಯಾರೂ ಅಲ್ಲಗಳೆಯುವಂತಿಲ್ಲ. 'ಧರಿತ್ರಿಯೇ ಕಾಗದವಾಗಿ, ವೃಕ್ಷ ಸಮೂಹವೇ ಲೇಖನಿಯಾಗಿ, ಸಪ್ತಶರಧಿಗಳ ನೀರೆಲ್ಲ ಶಾಯಿಯಾಗಿ ಪರಿಣಮಿಸಿದರೂ ಗುರುವಿನ ಗುಣಗಳನ್ನು ವರ್ಣಿಸಲು ಸಾಧ್ಯವಿಲ್ಲ' ಎಂದು ಕಬೀರದಾಸರು ಹೇಳಿದ್ದಾರೆ.

ವಿದ್ಯಾರ್ಥಿಯು ವಿನಯ ಸಂಪನ್ನನೂ, ಸಜ್ಜನನೂ, ನಿರಾಡಂಬರ ವ್ಯಕ್ತಿತ್ವವುಳ್ಳವನೂ ಆಗಿರಬೇಕು. ಅವನ ನಡತೆ, ಚಾರಿತ್ರ್ಯ ಶುದ್ಧವಿರಬೇಕು. ಹಣ ಕಳೆದು ಹೋದರೆ ಪುನಃ ಸಂಪಾದಿಸಬಹುದು. ಆರೋಗ್ಯ ಕೆಟ್ಟರೆ ಸುಧಾರಿಸಿಕೊಳ್ಳಬಹುದು. ಆದರೆ ನಡತೆ ಹಾಳಾದರೆ ಮತ್ತೆ ಸಂಪಾದಿಸುವುದು ಅಸಾಧ್ಯ. ಪಾಂಡಿತ್ಯ, ಸಂಪತ್ತು, ಸ್ಥಾನಬಲಗಳಿದ್ದರೂ ಗುಣ ನಡತೆ ಚೆನ್ನಾಗಿಲ್ಲವಾದರೆ ಬದುಕು ನಿಷ್ಪ್ರಯೋಜಕ. ದುರ್ನಡತೆಯ ಮಂದಿಗೆ ತಾತ್ಕಾಲಿಕ ಜಯ ದೊರಕಬಹುದು. ಆದರೆ ನಿರ್ಭೀತಿಯಿಂದ ಸಮಾಜದಲ್ಲಿ ತಲೆಯೆತ್ತಿ ನಡೆಯುವ ಔನ್ನತ್ಯವಿರುವುದು ಪ್ರಾಮಾಣಿಕರಿಗೆ, ಗುಣವಂತರಿಗೆ. ವಿದ್ಯಾರ್ಥಿಗಳು ಈ ಸತ್ಯವನ್ನು ಕಂಡುಕೊಳ್ಳಬೇಕು. ತಮ್ಮ ಶೀಲ, ಚಾರಿತ್ರ್ಯಗಳನ್ನು ಊರ್ಜಿತಗೊಳಿಸುವುದಕ್ಕಾಗಿ ಅವರು ಸಜ್ಜನರ, ಜ್ಞಾನಿಗಳ ಸಂಗವನ್ನು ಮಾಡಬೇಕು. 'ಅಜ್ಞಾನಿಗಳ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳ ಲೇಸು', 'ಸಗಣಿಯವನ ಕೂಡ ಸರಸಕ್ಕಿಂತ ಗಂಧದವನ ಕೂಡ ಗುದ್ದಾಟ ಮೇಲು' ಎನ್ನುತ್ತಾರೆ ತಿಳಿದವರು.



7th_Kannada_Reader.indd 82 24-06-2019 19:37:46

ವಿದ್ಯಾರ್ಥಿಗಳು ರಾಜಕೀಯದಲ್ಲಿ ಸಕ್ರಿಯವಾಗಿ ಪಾತ್ರ ವಹಿಸಬಾರದು. ಹಿಂದೆ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿ ಕೊಡುವುದಕ್ಕಾಗಿ ಗಾಂಧೀಜಿಯವರು ವಿದ್ಯಾರ್ಥಿಗಳನ್ನು ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರು. ಆಗ ವಿದ್ಯಾರ್ಥಿಗಳು ನಡೆಸಿದ ಚಳವಳಿಯ ಉದ್ದೇಶವೂ ಪವಿತ್ರವಾಗಿತ್ತಲ್ಲದೆ ಅದು ಅಹಿಂಸೆಯ ಮಾರ್ಗ ಹಿಡಿದಿತ್ತು. ಆದರೆ ಇಂದು ಹತಾಶ ರಾಜಕೀಯ ಧುರೀಣರನೇಕರು ತಮ್ಮ ಸ್ವಾರ್ಥ ಸಾಧನೆಗಾಗಿ ವಿದ್ಯಾರ್ಥಿಗಳನ್ನು ಹಿಂಸಾತ್ಮಕ ದಂಗೆ, ಹೋರಾಟಗಳಿಗೆ ಪ್ರೇರೇಪಿಸಿ ಅವರ ಜೀವನವನ್ನು ಹಾಳು ಮಾಡುವುದರೊಂದಿಗೆ ಸಮಾಜಕ್ಕೆ ಕಷ್ಟ ನಷ್ಟಗಳನ್ನೂ ಉಂಟು ಮಾಡುತ್ತಿದ್ದಾರೆ. ಅಪಕ್ವ ಬುದ್ಧಿಯ ಭಾವುಕ ವಿದ್ಯಾರ್ಥಿಗಳು ಹಿಂದುಮುಂದಿನ ಯೋಚನೆಯಿಲ್ಲದೆ ರಾಜಕೀಯದಲ್ಲಿ ಭಾಗವಹಿಸಿ ಕೈ ಸುಟ್ಟುಕೊಳ್ಳುವುದರೊಂದಿಗೆ, ಅದು ಅವರ ಜೀವನದ ಪರಮೋದ್ದೇಶ ಸಾಧನೆಗೆ ಅಡ್ಡಿಯುಂಟಾಗುತ್ತದೆ. ಆದುದರಿಂದ ಅವರು ದೇಶದ ರಾಜಕೀಯದ ಆಗುಹೋಗುಗಳನ್ನು ತಿಳಿದುಕೊಳ್ಳುವಲ್ಲಿಗೆ ಮಾತ್ರ ತಮ್ಮ ಚಟುವಟಿಕೆಯನ್ನು ಸೀಮಿತಗೊಳಿಸಿಕೊಳ್ಳಬೇಕು.

## ಕೃತಿ ಕರ್ತೃ ಪರಿಚಯ



ಡಾ.ಶ್ರೀಕೃಷ್ಣಭಟ್ ಅರ್ತಿಕಜೆ : ಚೆನ್ನೈ ಕನ್ನಡ ವಲಯದಲ್ಲಿ ಚಿರಪರಿಚಿತರಾಗಿರುವ ಇವರು ದಕ್ಷಿಣ ಕನ್ನಡದ ಪುತ್ತೂರಿನವರು. ಇವರು ತಮ್ಮ ಶಿಕ್ಷಣವನ್ನು ಪುತ್ತೂರು ಹಾಗೂ ಕಾಸರಗೋಡಿನಲ್ಲಿ ಮುಗಿಸಿ, ಮದರಾಸು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ರೀಡರ್ ಆಗಿ, ಪ್ರಾಧ್ಯಾಪಕರಾಗಿ, ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ.

ಬೋಧನೆ, ಸಂಶೋಧನೆ, ಸಾಹಿತ್ಯ ರಚನೆ, ಅನುವಾದ ಹೀಗೆ ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕನ್ನಡ, ತಮಿಳು, ಮಲಯಾಳಂ, ತೆಲುಗು, ತುಳು, ಹಿಂದಿ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳನ್ನು ತಿಳಿದವರು. ಪಡಿದನಿ, ಚಿಂತನ ಚತುರ್ಮುಖ, ಸಾಹಿತ್ಯ ಸಂಬಂಧ, ಸಾಹಿತ್ಯ ಸ್ಪಂದನ ಮುಂತಾದ ಕೃತಿಗಳನ್ನೂ, ಅಯ್ಯಪ್ಪ, ರಾಮರಾಜ ಬಹದ್ದೂರ, ವಿಷಕನ್ನಿಕೆ ಮೊದಲಾದ ಮಲೆಯಾಳಂ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡಿರುತ್ತಾರೆ. 'ಅನನ್ಯ' ಎಂಬುದು ಇವರ ಅಭಿನಂದನ ಗ್ರಂಥ.

'ವಿದ್ಯಾರ್ಥಿಗಳ ಆದರ್ಶ' ಈ ಲೇಖನವನ್ನು ಇವರ 'ಚಿಂತನ ಚತುರ್ಮುಖ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಪದಗಳ ಅರ್ಥ

ಗುರು–ಅಧ್ಯಾಪಕ, ಶಿಕ್ಷಕ; ಅವನತಿ–ನಾಶ, ಅಳಿವು; ಚಿತ್ತ–ಮನಸ್ಸು; ಕಾಕ–ಕಾಗೆ; ಬಕ–ಕೊಕ್ಕರೆ; ಶ್ವಾನ–ನಾಯಿ; ಹಾದಿ–ದಾರಿ, ಮಾರ್ಗ; ಕಲಹ–ಜಗಳ, ರಂಪ; ಸಜ್ಜನ–ಒಳ್ಳೆಯವರು; ಗುರುಕುಲ–ಹಿಂದಿನ ಕಾಲದ ಶಿಕ್ಷಣ ಕೇಂದ್ರ; ಜಗದ್ವಿಖ್ಯಾತ–ಲೋಕಪ್ರಸಿದ್ಧ; ಮರ್ಕಟ–ಮಂಗ, ಕೋತಿ; ವಿವೇಕ–ಜ್ಞಾನ, ತಿಳಿವಳಿಕೆ; ಕಲುಷಿತ–ಕಲ್ಮಷಗೊಂಡ, ಕೊಳಕಾದ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಮಾನವ ಜೀವನದ ಮೊದಲ ಹಂತ ಯಾವುದು?
2. ಗುರುಕುಲ ಪದ್ಧತಿಯಲ್ಲಿ ವಿದ್ಯಾರ್ಥಿಗಳು ಹೇಗೆ ವಿದ್ಯಾರ್ಜನೆ ಮಾಡುತ್ತಿದ್ದರು?
3. ಎಂತಹವರಿಗೆ ಜ್ಞಾನ ಲಭಿಸುತ್ತದೆ ಎಂದು ಲೇಖಕರು ತಿಳಿಸಿದ್ದಾರೆ?
4. ವಿದ್ಯಾರ್ಥಿಗಳಿಗೆ ಯಾವ ರೀತಿಯ ತ್ಯಾಗ ಅನಿವಾರ್ಯವಾದುದು?
5. ವಿದ್ಯಾರ್ಥಿಗಳು ಹೇಗೆ ತಮ್ಮ ಅಧ್ಯಾಪಕರನ್ನು ಒಲಿಸಿಕೊಳ್ಳಬೇಕು?



7th_Kannada_Reader.indd 83 24-06-2019 19:37:46

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕವಿ ಕುವೆಂಪು ಅವರು ಬಾಲ್ಯವನ್ನು ಕುರಿತು ಹೇಗೆ ಹಾಡಿದ್ದಾರೆ ?
2. ಶಿಕ್ಷಣ ರಂಗವು ಅಲ್ಲೋಲಕಲ್ಲೋಲವಾಗಲು ಕಾರಣವೇನು ?
3. ವಿದ್ಯಾರ್ಥಿಗಳು ಪಾಲಿಸಬೇಕಾದ ಆದರ್ಶಗಳು ಯಾವುವು?
4. ತಮ್ಮ ಆರೋಗ್ಯವನ್ನು ವಿದ್ಯಾರ್ಥಿಗಳು ಯಾವ ರೀತಿ ಕಾಪಾಡಿಕೊಳ್ಳಬೇಕು?
5. ವಿದ್ಯಾರ್ಥಿಗಳು ಜ್ಞಾನಪಿಪಾಸುಗಳಾಗಬೇಕು. ಏಕೆ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಗುರುಕುಲ ಶಿಕ್ಷಣ ಪದ್ಧತಿಯನ್ನು ಕುರಿತು ಬರೆಯಿರಿ.
2. ಶ್ರದ್ಧೆಯಿದ್ದವನಿಗೆ ಮಾತ್ರ ಜ್ಞಾನ ಲಭಿಸುತ್ತದೆ. ಈ ಮಾತನ್ನು ಸಮರ್ಥಿಸಿರಿ.

## ಭಾಷಾಭ್ಯಾಸ

**1. ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

ಜ್ಞಾನ, ನಿದ್ರೆ, ಕಾಗೆ, ತ್ಯಾಗ, ಕವಿ, ವಿದ್ಯೆ, ದೆಸೆ, ಚಿರ, ದೃಷ್ಟಿ, ಸುಖ.

**2. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಜ್ಞಾನೋಪಾಸನೆ, ವಿದ್ಯಾರ್ಥಿ, ಜಗದ್ವಿಖ್ಯಾತ, ಭಕ್ಷ್ಯಭೋಜ್ಯಗಳು, ಹವ್ಯಾಸವನ್ನು.

**3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಉತ್ತಮ, ಸಾರ್ಥಕ, ಅಶಿಸ್ತು, ಅಸಭ್ಯ, ಅಗತ್ಯ, ಕಷ್ಟ, ವಿವೇಕ, ವಿನಯ, ಸ್ವಾರ್ಥ, ಅಜ್ಞಾನ

## ಚಟುವಟಿಕೆ

1. ನಿಮ್ಮ ಜೀವನೋದ್ಯೇಯವನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ.





7th_Kannada_Reader.indd 84 24-06-2019 19:37:47

ಉಪಪಠ್ಯ

ಘಟಕ ಐದು

# ಬಾಲಕ ತಿಮ್ಮರಸ

– (ಸಂಗ್ರಹ)

## ಪ್ರವೇಶ

ಕಥೆ ಯಾರಿಗೆ ಬೇಡ, ಹೇಳಿ? ಬಾಲಕರಿಂದ ಹಿಡಿದು ವೃದ್ಧರವರೆಗೂ ಕಥೆ ಹೇಳುವುದು, ಕಥೆ ಕೇಳುವುದು ಎಂದರೆ ಒಂದು ರೀತಿಯ ವಿಶೇಷ ಆಸಕ್ತಿ. ಅದರಲ್ಲೂ ನೀತಿ ಕಥೆಗಳು, ಪ್ರಾಣಿ ಪಕ್ಷಿಗಳನ್ನು ಕುರಿತ ಕಥೆಗಳು, ಪೌರಾಣಿಕ ಕಥೆಗಳೆಂದರೆ ಮಕ್ಕಳು ಹೆಚ್ಚು ಸಂತೋಷ ಪಡುತ್ತಾರೆ.

ಪ್ರಸ್ತುತ ಕಥೆಯಲ್ಲಿ, ಶ್ರೀಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ವಿವೇಕಿಯೂ ಮೇಧಾವಿಯೂ ಆದ ವ್ಯಕ್ತಿಯೋರ್ವನನ್ನು ಮಂತ್ರಿಯನ್ನಾಗಿ ನೇಮಿಸಲು ಕೈಗೊಂಡ ಪ್ರಯತ್ನವೇ ಈ ಕಥೆಯ ತಿರುಳಾಗಿದೆ.





7th_Kannada_Reader.indd 85 24-06-2019 19:37:47

ವಿಜಯನಗರ ಸಾಮ್ರಾಜ್ಯಕ್ಕೆ ಕೀರ್ತಿ ತಂದ ಕೃಷ್ಣದೇವರಾಯರ ಹೆಸರನ್ನು ಸಾಮಾನ್ಯವಾಗಿ ಪ್ರತಿಯೊಬ್ಬರೂ ಕೇಳಿರಬೇಕು. ಅವರ ತಂದೆ ಸಾಳ್ವ ನರಸಿಂಹರಾಯರು ರಾಜ್ಯವಾಳುತ್ತಿದ್ದಾಗ ಅವರ ಪ್ರಧಾನಮಂತ್ರಿ ಮೃತರಾದರು. ವಿವೇಕಿಯೂ, ಮೇಧಾವಿಯೂ ಆದ ವ್ಯಕ್ತಿ ಲಭಿಸಿದರೆ ಆತನನ್ನು ಮಂತ್ರಿಯನ್ನಾಗಿ ನೇಮಿಸಿಕೊಳ್ಳುವುದಾಗಿ ಸಾಳ್ವ ನರಸಿಂಹರು ಡಂಗುರ ಸಾರಿದರು.

ಅನೇಕರು ಮಂತ್ರಿ ಪದವಿಯನ್ನು ಅಲಂಕರಿಸಲು ಮುಂದೆ ಬಂದರು. ಆದರೆ ಅವರಲ್ಲಿ ಯಾರೂ ಅದಕ್ಕೆ ತಕ್ಕವರಾಗಿ ಕಾಣ ಬರಲಿಲ್ಲ.

ಕೊನೆಗೆ ನರಸಿಂಹರಾಯರು ಒಂದು ಉಪಾಯ ಹೂಡಿದರು. ಅವರು ಒಂದು ಕಾಗದದ ಮೇಲೆ ಮಸಿಯಿಂದ ನಾಲ್ಕು ಅಂಗುಲ ಉದ್ದದ ಒಂದು ಗೆರೆ ಎಳೆದು, ಅದನ್ನು ತನ್ನ ಭಟರಿಗೆ ಕೊಟ್ಟು, 'ಈ ಗೆರೆಯನ್ನು ಅಳಿಸದೆ ಚಿಕ್ಕದು ಮಾಡಿದಾತನನ್ನು ನನ್ನ ಬಳಿಗೆ ಕರೆದುಕೊಂಡು ಬನ್ನಿ' ಎಂದು ಹೇಳಿದರು.

ಭಟರು ಆ ಕಾಗದವನ್ನು ಹಿಡಿದು ಊರೂರು ಅಲೆದರು. ಪಂಡಿತರಂತೆ ತೋರಿದವರಿಗೆಲ್ಲ ಆ ಕಾಗದವನ್ನು ತೋರಿಸಿ, 'ಅಯ್ಯಾ, ನೀವು ಈ ಗೆರೆಯನ್ನು ಅಳಿಸದೆ, ಮುಟ್ಟದೆ ಚಿಕ್ಕದು ಮಾಡಬಲ್ಲಿರಾ?' ಎಂದು ಕೇಳಿದರು.

ಕೆಲವರು 'ಅದು ಹೇಗೆ ಸಾಧ್ಯ?' ಎಂದರು. ಮತ್ತೆ ಕೆಲವರು, 'ನಿಮಗೇನಾದರೂ ಮತಿ ಕೆಟ್ಟಿದೆಯೇ? ಅಲ್ಲಿರುವ ಗೆರೆಯನ್ನು ಅಳಿಸದೆ ಚಿಕ್ಕದು ಮಾಡುವುದೆಂತು ಸಾಧ್ಯ?' ಎಂದರು. ಇನ್ನು ಕೆಲವರು ಕೆರಳಿ, 'ನಿಮಗೆ ನಮ್ಮನ್ನು ಕಂಡರೆ ಹಾಸ್ಯವಾಯಿತಲ್ಲವೇ?' ಎಂದು ಗದರಿದರು.

ದೂತರು ಹೀಗೆ ಅನೇಕ ಗ್ರಾಮಗಳಲ್ಲಿ ಸುತ್ತಾಡಿ ಕೊನೆಗೆ ಒಂದು ಅಗ್ರಹಾರಕ್ಕೆ ಬಂದರು. ಯಥಾಪ್ರಕಾರ ಅಲ್ಲಿದ್ದವರನ್ನು ಕೇಳಿದರು.

ಅಲ್ಲಿ ಅವರಿಗೊಂದು ಶಾಲೆ ಕಾಣಿಸಿತು. ಒಬ್ಬ ಉಪಾಧ್ಯಾಯನು ಕೆಲವರು ಹುಡುಗರಿಗೆ ಅಲ್ಲಿ ಪಾಠ ಹೇಳುತ್ತಿದ್ದನು.

ಚಾರರು ಉಪಾಧ್ಯಾಯನ ಬಳಿ ಹೋಗಿ, 'ಅಯ್ಯಾ, ಈ ಕಾಗದದ ಮೇಲಿರುವ ಗೆರೆಯನ್ನು ಅಳಿಸದೆ, ಮುಟ್ಟದೆ, ಚಿಕ್ಕದು ಮಾಡಬಲ್ಲಿರಾ?' ಎಂದು ಕೇಳಿದರು.

ಉಪಾಧ್ಯಾಯನು ಅವರ ಮಾತನ್ನು ಕೇಳಿ, 'ಆ ಕೆಲಸವನ್ನು ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಯಾವನಾದರೂ ಗಾರುಡಿ ಮಾಡುವವನನ್ನು ಕೇಳಿ ನೋಡಿ' ಎಂದನು. ಚಾರರು ಅಲ್ಲಿಂದ ಮುಂದೆ ನಡೆದರು.

ಆ ಶಾಲೆಯಲ್ಲಿ ಹದಿನಾರು ವರ್ಷದ ಒಬ್ಬ ಬ್ರಾಹ್ಮಣ ತರುಣನಿದ್ದನು. ಅವನ ಹೆಸರು ತಿಮ್ಮರಸ. ಅವನು ಉಪಾಧ್ಯಾಯನೊಂದಿಗೆ, 'ಗುರುಗಳೇ, ಅದೇನೂ ಬ್ರಹ್ಮವಿದ್ಯೆಯಲ್ಲ. ಆ ಗೆರೆಯ ಪಕ್ಕದಲ್ಲಿ ಅದಕ್ಕಿಂತ ದೊಡ್ಡದೊಂದು ಗೆರೆಯನ್ನು ಎಳೆದರೆ ಅದು ಚಿಕ್ಕ ಗೆರೆಯಗುತ್ತದೆ' ಎಂದನು.

ಉಪಾಧ್ಯಾಯನಿಗೆ ಈಗ ಅರ್ಥವಾಯಿತು. ಹೋಗುತ್ತಿದ್ದ ಚಾರರನ್ನು ಹಿಂದಕ್ಕೆ ಕರೆದು, 'ಎಲ್ಲಿ ಆ ಕಾಗದವನ್ನು ಇತ್ತ ಕೊಡಿ' ಎಂದನು. ನಾಲ್ಕು ಅಂಗುಲದ ಗೆರೆಯ ಪಕ್ಕದಲ್ಲಿ ಆರು ಅಂಗುಲದ ಗೆರೆಯನ್ನೆಳೆದು 'ನಿಮ್ಮ ಗೆರೆ ಈಗ ಚಿಕ್ಕದಾಯಿತು, ಹೋಗಿ' ಎಂದನು.

ಕೂಡಲೇ ಆ ಚಾರರು ಅಪಾರ ಆನಂದದಿಂದ ಉಪಾಧ್ಯಾಯನಿಗೆ ವಂದಿಸಿ, 'ಸ್ವಾಮಿ, ಸಾಳ್ವ ನರಸಿಂಹರಾಯರು ಕಳುಹಿಸಿದ ದೂತರು ನಾವು. ಮಹಾಪ್ರಭುಗಳು ಈ ಕಾಗದವನ್ನು ನಮಗೆ ಕೊಟ್ಟು, ಈ ಗೆರೆಯನ್ನು ಚಿಕ್ಕದು ಮಾಡಿದಾತನನ್ನು ತಮ್ಮ ಬಳಿಗೆ ಕರೆ ತರುವಂತೆ ಹೇಳಿದರು. ಎಷ್ಟೋ ಜನ ಆ ಕಾಗದವನ್ನು ನೋಡಿಯೂ ಸಹ ಗೆರೆಯನ್ನು ಚಿಕ್ಕದು ಮಾಡಲು ಅಶಕ್ತರಾದರು. ನೀವೂ ಸಹ ಮಾಡಲಾರಿರೆಂದು ಭಾವಿಸಿದ್ದೆವು. ಆದರೆ ನಿಮ್ಮಿಂದ ನಮ್ಮ ಶ್ರಮ ಸಾರ್ಥಕವಾಯಿತು. ನಿಮ್ಮನ್ನು ಅರಸರ ಬಳಿಗೆ ಕೊಂಡೊಯ್ಯಲು ಪಲ್ಲಕ್ಕಿಯನ್ನು ತರುತ್ತೇವೆ. ರಾಜಧಾನಿಗೆ ಹೊರಡಲು ಸಿದ್ಧರಾಗಿರಿ' ಎಂದು ಹೇಳಿ ಹೊರಟು ಬಿಟ್ಟರು.

ಆ ಉಪಾಧ್ಯಾಯನಿಗೆ ಆದ ಆನಂದ ಹೇಳ ತೀರದು. ಆತನು ತಿಮ್ಮರಸನೊಂದಿಗೆ, 'ಲೋ, ಮಹಾಪ್ರಭುಗಳು ಯಾವುದಾದರೊಂದು ಬಹುಮಾನ ಕೊಡುವಂತಿದೆ. ನಿಜಕ್ಕೂ ಆ ಬಹುಮಾನ ನಿನಗೇ ಸಲ್ಲಬೇಕು. ಆದರೆ ಈ ಬಾರಿ ನಾನು ಬಹುಮಾನ ಪಡೆಯಲು ಅವಕಾಶ ಮಾಡಿಕೊಡು. ಇದೇ ನೀನು



7th_Kannada_Reader.indd 86 24-06-2019 19:37:47

ನನಗೆ ಕೊಡುವ ಗುರುದಕ್ಷಿಣೆ. ನಿನಗಿನ್ನೂ ಚಿಕ್ಕ ವಯಸ್ಸು. ನೀನು ಮೇಧಾವಿ ಬೇರೆ. ಮುಂದೆ ಮುಂದೆ ಇಂತಹ ಅನೇಕ ಬಹುಮಾನಗಳನ್ನು ಪಡೆಯಬಹುದು. ಆದರೆ ಈ ರಹಸ್ಯವನ್ನು ಯಾರೊಂದಿಗೂ ಹೇಳಬೇಡ, ತಿಳಿಯಿತೇ?' ಎಂದು ಹೇಳಿದ.

ತಿಮ್ಮರಸನು ನಸುನಕ್ಕು, 'ಅಲ್ಲ ಗುರುಗಳೇ, ನೀವಿಷ್ಟು ಹೇಳಬೇಕೇ? ಆ ಗೆರೆಯನ್ನು ಚಿಕ್ಕದು ಮಾಡಿದ್ದು ತಾವಲ್ಲದೆ ನಾನೇ?' ಎಂದನು.

ಉಪಾಧ್ಯಾಯನಿಗೆ ಭಾರ ಇಳಿಸಿದಂತಾಯಿತು. ಆತನು ಗ್ರಾಮಸ್ಥರಿಗೆಲ್ಲಾ ತನಗೆ ಅರಸನಿಂದ ಸಲ್ಲಬಹುದಾದ, ಸನ್ಮಾನವನ್ನು ಕುರಿತು ಹೇಳಿಕೊಳ್ಳಲಾರಂಭಿಸಿದನು. ಪಲ್ಲಕ್ಕಿ ಬಂದ ಕೂಡಲೇ ಅದರಲ್ಲಿ ಕುಳಿತು ಹೊರಟೇ ಬಿಟ್ಟನು.

ಆ ಪಲ್ಲಕ್ಕಿಯಲ್ಲಿ ಆಗಮಿಸಿದ ಉಪಾಧ್ಯಾಯನು ಕಾಗದದ ಮೇಲಿದ್ದ ಗೆರೆಯನ್ನು ಚಿಕ್ಕದು ಮಾಡಿ ತೋರಿಸಿದ ಬಗೆಯನ್ನು ಚಾರರು ರಾಯನಿಗೆ ತಿಳಿಸಿದರು.

ಸಾಳ್ವ ನರಸಿಂಹನಿಗೆ ತೃಪ್ತಿಯೂ ಆನಂದವೂ ಆಯಿತು. ಆದರೆ ಉಪಾಧ್ಯಾಯನು ಬುದ್ಧಿಶಾಲಿಯಂತೆ ಅವರಿಗೆ ಕಾಣ ಬರಲಿಲ್ಲ. ಅದರಿಂದ ಪ್ರಭುಗಳು ಉಪಾಧ್ಯಾಯನನ್ನು ಮತ್ತೊಂದು ಪರೀಕ್ಷೆಗೆ ಗುರಿ ಮಾಡಿದರು.

ತುಂಬು ಸಭೆಯ ನಡುಭಾಗದಲ್ಲಿ, ಒಂದು ಕಡೆ ಒಂದು ಪೀಠದ ಮೇಲೆ ಕೆಲವು ರಾಜ ಮುದ್ರಿಕೆಗಳನ್ನಿಟ್ಟರು. ಆ ಪೀಠದ ಸುತ್ತಲೂ ಹಾಸಿಗೆಗಳನ್ನು ಹಾಸಲಾಯಿತು. ಬಳಿಕ ಉಪಾಧ್ಯಾಯನನ್ನು ಆಸ್ಥಾನಕ್ಕೆ ಕರೆಸಿದರು.

'ಅಯ್ಯಾ, ಆ ಕಾಗದದ ತುಂಡಿನ ಮೇಲೆ ಎಳೆದಿದ್ದ ಗೆರೆಯನ್ನು ಚಿಕ್ಕದು ಮಾಡುವ ಪರೀಕ್ಷೆ ಏಕಿಟ್ಟೆನೋ ನಿಮಗಿನ್ನೂ ತಿಳಿಯದು. ನಮ್ಮ ಆಸ್ಥಾನದಲ್ಲಿ ಸಚಿವ ಸ್ಥಾನವೊಂದು ಖಾಲಿಯಾಗಿದೆ. ಆ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಸಚಿವ ಪದವಿಯನ್ನು ನೀಡಲು ನಾನು ನಿರ್ಧರಿಸಿದ್ದೇನೆ. ಅಂತೆಯೇ ನಿಮಗೆ ಮಂತ್ರಿ ಪದವಿಯನ್ನು ಕೊಡುತ್ತಿದ್ದೇನೆ, ಸ್ವೀಕರಿಸಿರಿ. ನಿಮ್ಮ ಪದವಿಗೆ ಸಂಬಂಧಪಟ್ಟ ಅಧಿಕಾರ ಮುದ್ರೆಗಳು ಆ ಪೀಠದ ಮೇಲಿವೆ. ಹೋಗಿ ತೆಗೆದುಕೊಳ್ಳಿ. ಆದರೆ ಆ ಹಾಸಿಗೆಗಳನ್ನು ಮಾತ್ರ ತುಳಿಯಬಾರದು, ಜ್ಞಾಪಕವಿರಲಿ' ಎಂದರು.

ಬಹುಮಾನ ಪಡೆದು ಅಗ್ರಹಾರಕ್ಕೆ ಹಿಂತಿರುಗುವ ಯೋಚನೆಯಿಂದ ಬಂದಿದ್ದ ಉಪಾಧ್ಯಾಯನಿಗೆ ಸಚಿವ ಸ್ಥಾನವೆಂದ ಕೂಡಲೇ ಕೈಕಾಲುಗಳು ಕಂಪಿಸಿದವು, ಮೈಯೆಲ್ಲಾ ಬೆವರಿತು. ಹಾಸಿಗೆಯನ್ನು ತುಳಿಯದೆ ಪೀಠದ ಬಳಿಗೆ ಹೋಗಿ ಮುದ್ರೆಗಳನ್ನು ತೆಗೆದುಕೊಳ್ಳುವುದು ಹೇಗೆ? ಆ ಸಭಿಕರೆಲ್ಲರ ಮುಂದೆ ತನಗೆ ಪರಾಭವವಾಗುವುದು ಖಂಡಿತವೆಂದು ಕೊಂಡನು. ಗರಬಡಿದವನಂತೆ ನಿಂತು ಬಿಟ್ಟನು. ನರಸಿಂಹರಾಯರ ಅನುಮಾನ ದೃಢವಾಯಿತು. ಅವರು ಉಪಾಧ್ಯಾಯನೊಂದಿಗೆ ಅಧಿಕಾರವಾಣಿಯಿಂದ, 'ಹಾಗೇಕೆ ನಿಂತು ಬಿಟ್ಟಿರಿ? ಹೂಂ... ಆ ಗೆರೆಯನ್ನು ಚಿಕ್ಕದು ಮಾಡಿದಾತ ಯಾರು? ನಿಜ ಹೇಳಿ?' ಎಂದರು.

ಉಪಾಧ್ಯಾಯನು ರಾಯರ ಪಾದಗಳಿಗೆ ಎರಗಿ, 'ಮಹಾಪ್ರಭು! ನನ್ನನ್ನು ಕ್ಷಮಿಸಬೇಕು. ದುರಾಶೆಯಿಂದ ಅಪಚಾರವೆಸಗಿದೆ. ಆ ಗೆರೆಯನ್ನು ಚಿಕ್ಕದು ಮಾಡುವ ರೀತಿಯನ್ನು ಹೇಳಿದವನು ನನ್ನ ವಿದ್ಯಾರ್ಥಿ ತಿಮ್ಮರಸ. ನಾನಲ್ಲ...!' ಎಂದು ನಿಜಾಂಶವನ್ನು ತಿಳಿಸಿದನು.

ಕೂಡಲೇ ನರಸಿಂಹರಾಯರು ಅಗ್ರಹಾರಕ್ಕೆ ಮತ್ತೊಂದು ಪಲ್ಲಕ್ಕಿಯನ್ನು ಕಳುಹಿಸಿ ತಿಮ್ಮರಸನನ್ನು ಬರ ಮಾಡಿಕೊಂಡರು.

ರಾಜನು ಅವನೊಂದಿಗೆ, 'ಈ ಕಾಗದದ ಮೇಲೆ ಬರೆದ ಗೆರೆಯನ್ನು ಚಿಕ್ಕದು ಮಾಡಿದಾತ ನೀನಂತೆ, ಹೌದೋ? ನಿನಗೆ ಮಂತ್ರಿ ಪದವಿಯನ್ನು ಕೊಡಲು ಯೋಚಿಸಿದ್ದೇನೆ. ಅದೋ ಅಲ್ಲಿವೆ ಅಧಿಕಾರ ಮುದ್ರೆಗಳು. ಹಾಸಿಗೆಯನ್ನು ತುಳಿಯದೆ ಹೋಗಿ ತೆಗೆದುಕೊ' ಎಂದನು.

ತಿಮ್ಮರಸ ಹಾಸಿಗೆಗಳನ್ನು ಒಂದಾದ ಮೇಲೊಂದರಂತೆ ಸುತ್ತಿಕೊಂಡು ಹೋಗಿ ಪೀಠದ ಮೇಲಿದ್ದ ಅಧಿಕಾರ ಮುದ್ರೆಗಳನ್ನು ತೆಗೆದುಕೊಂಡನು.

ನರಸಿಂಹರಾಯರು ಅವನ ಬುದ್ಧಿವಂತಿಕೆಯನ್ನು ಬಹಳ ಕೊಂಡಾಡಿದರು ಮತ್ತು ಅವನನ್ನು ತನ್ನ ಸಚಿವನನ್ನಾಗಿ ನೇಮಿಸಿಕೊಂಡನು. ಮುಂದೆ ತಿಮ್ಮರಸನು ಅಪ್ಪಾಜಿ ಎಂಬ ಹೆಸರಿನಿಂದ ಬಹಳ ಪ್ರಸಿದ್ಧನಾದನು.



7th_Kannada_Reader.indd 87 24-06-2019 19:37:47

## ಕೃತಿ ಕರ್ತೃ ಪರಿಚಯ

'ಬಾಲಕ ತಿಮ್ಮರಸ' ಎಂಬ ಲೇಖನವನ್ನು ಶ್ರೀಕೃಷ್ಣದೇವರಾಯನ ಕಥೆಗಳು ಎಂಬ ಸಂಗ್ರಹ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

ಮೃತ–ಸತ್ತು ಹೋದ, ನಿಧನ, ಮರಣ; ಕಾಗದ–ಪತ್ರ, ಓಲೆ; ಕೆರಳಿ–ಕೋಪಗೊಂಡು; ಹಾಸ್ಯ–ನಗು; ಉಪಾಧ್ಯಾಯ–ಗುರು, ಬೋಧಕ; ಮೇಧಾವಿ–ಜ್ಞಾನಿ; ಸನ್ಮಾನ–ಗೌರವ; ಸಚಿವ–ಮಂತ್ರಿ; ಕಂಪಿಸು–ನಡುಗು; ಗರ–ದೆವ್ವ, ಭೂತ; ಪ್ರಸಿದ್ಧ–ಪ್ರಖ್ಯಾತ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಸಾಳ್ವ ನರಸಿಂಗರು ಏಕೆ ಡಂಗುರ ಸಾರಿಸಿದರು ?
2. ಭಟರು ಪಂಡಿತರಂತೆ ತೋರಿದವರಲ್ಲೆಲ್ಲ ಏನೆಂದು ಕೇಳಿದರು ?
3. ಚಾರರು ಶಾಲಾ ಉಪಾಧ್ಯಾಯರಲ್ಲಿ ಏನೆಂದು ಕೇಳಿದರು ?
4. ತಿಮ್ಮರಸನೆಂಬ ಬಾಲಕ ಗುರುಗಳಲ್ಲಿ ಏನನ್ನು ಹೇಳಿದನು ?
5. ಪ್ರಭುಗಳು ಉಪಾಧ್ಯಾಯರನ್ನು ಯಾವ ಪರೀಕ್ಷೆಗೆ ಗುರಿ ಮಾಡಿದರು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಮಂತ್ರಿ ಪದವಿಗಾಗಿ ರಾಯರು ಭಟರಿಗೆ ಹೇಳಿದ ಉಪಾಯವೇನು ?
2. ಪಂಡಿತರು ಭಟರನ್ನು ಗದರಿಸಲು ಕಾರಣವೇನು?
3. ಗೆರೆಯನ್ನು ಅಳಿಸದೆ ತಿಮ್ಮರಸ ಚಿಕ್ಕದಾಗಿ ಹೇಗೆ ಗೆರೆ ಎಳೆದನು ?
4. ಉಪಾಧ್ಯಾಯರಿಗೆ ಆನಂದವಾಗಲು ಕಾರಣವಾದ ಸನ್ನಿವೇಶವೇನು?
5. ಉಪಾಧ್ಯಾಯರು ಗರ ಬಡಿದಂತೆ ನಿಂತುಕೊಳ್ಳಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಉಪಾಧ್ಯಾಯರು ಪ್ರಭುಗಳಲ್ಲಿ ಕ್ಷಮೆ ಯಾಚಿಸಲು ಕಾರಣವಾದ ಪ್ರಸಂಗವನ್ನು ವಿವರಿಸಿ.
2. ರಾಯರು ತಿಮ್ಮರಸನನ್ನು ಸಚಿವನನ್ನಾಗಿ ನೇಮಿಸಿಕೊಂಡ ಸಂದರ್ಭವನ್ನು ವಿವರಿಸಿ.





7th_Kannada_Reader.indd 88 24-06-2019 19:37:47

ವ್ಯಾಕರಣ

ಘಟಕ ಐದು

# ನಾಮಪದ

ಭಾಷೆಯಲ್ಲಿರುವ ಶಬ್ದಗಳಲ್ಲಿ ಬಗೆಬಗೆಯ ಹೆಸರುಗಳನ್ನು ತಿಳಿಸತಕ್ಕವುಗಳಿಗೆ ನಾಮಪದ ಎಂಬ ಹೆಸರು ಬಂದಿದೆ. ಇದನ್ನು ನಾಮವಾಚಕ ಹಾಗೂ ವಸ್ತುವಾಚಕಗಳು ಎಂದು ಸಹ ಕರೆಯುತ್ತಾರೆ.

ವಸ್ತುಗಳ ಹೆಸರುಗಳನ್ನು ಹೇಳುವ ಪದಗಳೇ ವಸ್ತುವಾಚಕಗಳು. ವಸ್ತುಗಳನ್ನು ಚೇತನ(ಚೇತನವುಳ್ಳ), ಅಚೇತನ(ಚೇತನವಿಲ್ಲದ್ದು) ಎಂದು ಎರಡು ರೀತಿಯಲ್ಲಿ ವಿಭಾಗಿಸಲಾಗಿದೆ.

ಉದಾಹರಣೆ,

ಚೇತನವುಳ್ಳವು – ಮನುಷ್ಯ, ಪ್ರಾಣಿ, ಪಕ್ಷಿ, ಮುಂತಾದವು.

ಅಚೇತನವಾದವು – ನೆಲ, ಜಲ, ಹಣ್ಣು, ಕಾಯಿ, ಮನೆ, ಬೆಟ್ಟ ಮುಂತಾದವು.

ವಸ್ತುವಾಚಕ: ವಸ್ತು ವಾಚಕ(ನಾಮಪದ)ಗಳನ್ನು ಮೂರು ಭಾಗಗಳಾಗಿ ವಿಭಾಗ ಮಾಡಲಾಗಿದೆ. ಅವುಗಳೆಂದರೆ

1. ರೂಢನಾಮ.

2. ಅಂಕಿತನಾಮ.

3. ಅನ್ವರ್ಥ ನಾಮ.

1. **ರೂಢನಾಮ :** ಹಿಂದಿನ ಕಾಲದಿಂದಲೂ ಕರೆದುಕೊಂಡು ಬಂದಿರುವ (ರೂಢಿಯಿಂದ ಬಂದಿರುವ) ಹೆಸರುಗಳನ್ನು ರೂಢನಾಮ ಎಂದು ಕರೆಯುತ್ತೇವೆ.

ಉದಾಹರಣೆ,

ನದಿ, ಪರ್ವತ, ಹೆಂಗಸು, ಮರ, ದೇಶ, ಭಾಷೆ ಮುಂತಾದ ಪದಗಳು ರೂಢನಾಮಗಳು.

2. **ಅಂಕಿತ ನಾಮ :** ಒಬ್ಬ ವ್ಯಕ್ತಿ, ವಸ್ತು, ಸ್ಥಳ ಮುಂತಾದವುಗಳನ್ನು ಗುರುತಿಸುವುದಕ್ಕಾಗಿ ಇಟ್ಟ ಹೆಸರನ್ನು ಅಂಕಿತ ನಾಮ ಎಂದು ಕರೆಯುವರು.

ಉದಾಹರಣೆ,

ಕಾವೇರಿ, ನಕುಲ, ಹಿಮಾಲಯ, ಶಂಕರ, ಬೇವು, ಮಾವು, ಮುಂತಾದವು.

3. **ಅನ್ವರ್ಥ ನಾಮ :** ಅರ್ಥಕ್ಕೆ ಅನುಗುಣವಾಗಿ ರಚನೆಯಾದ ನಾಮಪದಗಳನ್ನು ಅನ್ವರ್ಥ ನಾಮ ಎಂದು ಕರೆಯುತ್ತೇವೆ.

ಉದಾಹರಣೆ,

ವ್ಯಾಪಾರಿ, ವಿದ್ವಾಂಸ, ಚಾಲಕ, ರೋಗಿ, ಶಿಕ್ಷಕ, ಕುರುಡ, ಕುಂಟ, ಕಿವುಡ ಇತ್ಯಾದಿ.



7th_Kannada_Reader.indd 89 24-06-2019 19:37:47

ಘಟಕ
ಆರು

# 6. ಕಲೆ ಮತ್ತು ಸೌಂದರ್ಯ







## ಕಲಿಕಾ ಉದ್ದೇಶಗಳು

- ಭಾರತ ದೇಶದ ಕಲೆಗಳ ಬಗ್ಗೆ ತಿಳಿಸುವುದು.
- ಜನಪದ ಗೀತೆಗಳಲ್ಲಿರುವ ವಿಶೇಷ ಕಲೆಗಳನ್ನು ತಿಳಿಸುವುದು.
- ಕಲಬುರ್ಗಿಯ ಕಲೆಯ ಬಗ್ಗೆ ತಿಳಿದುಕೊಳ್ಳುವುದು.
- ಚೆನ್ನೈನಲ್ಲಿರುವ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ತಿಳಿದುಕೊಳ್ಳುವುದು.
- ಮಕ್ಕಳಲ್ಲಿ ಕಲೆಯ ಸೌಂದರ್ಯವನ್ನು, ಆಸಕ್ತಿಯನ್ನು ಬೆಳೆಸುವುದು.



7th_Kannada_Reader.indd 90 24-06-2019 19:37:47

ಘಟಕ
ಆರು

# 6. ಕಲೆ ಮತ್ತು ಸೌಂದರ್ಯ



| | | | |
|---|---|---|---|
| ಕಾವ್ಯ ಕಣಜ | : | ಜಾನಪದ ಗೀತೆಗಳು | |
| ಪೂರಕ ಪದ್ಯ | : | ನಾನು ಮತ್ತು ಮೋಡ! | – ಪ್ರೊ. ತಮಿಳ್ ಸೆಲ್ವಿ |
| ಗದ್ಯ ವಿಹಾರ | : | ಪ್ರಾಚೀನ ವೈಭವ ನಗರ ಕಲಬುರ್ಗಿ | – ರೇವಣಸಿದ್ಧಯ್ಯ ರುದ್ರಸ್ವಾಮಿಮಠ |
| ಉಪಪಠ್ಯ | : | ಚೆನ್ನೈ ಪ್ರವಾಸ | |
| ವ್ಯಾಕರಣ | : | ನಾಮಪದ | |



7th_Kannada_Reader.indd 91 24-06-2019 19:37:47

ಘಟಕ
ಆರು

# ಜಾನಪದ ಗೀತೆಗಳು

## ಪ್ರವೇಶ

ಜಾನಪದ ಸಾಹಿತ್ಯವು ನಮ್ಮ ಜೀವನದ ಉಸಿರು. ಈ ಸಾಹಿತ್ಯವನ್ನು ರಚಿಸಿದವರು ಜನ ಸಾಮಾನ್ಯರು. ಎಲ್ಲಾ ಸಾಹಿತ್ಯಕ್ಕೂ ಜಾನಪದ ಸಾಹಿತ್ಯವೇ ಮೂಲ ಎಂಬ ಅಭಿಪ್ರಾಯವಿದೆ. ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಜಾನಪದ ಸಾಹಿತ್ಯವು ಮತ್ತಷ್ಟು ಹೆಚ್ಚಿಸಿದೆ. ಜನ ಸಾಮಾನ್ಯರ ನೋವುನಲಿವು, ಸುಖದುಃಖ, ಬದುಕಿನ ಏರುಪೇರು ಇವುಗಳ ಅನುಭವಗಳೇ ಜಾನಪದ ಸಾಹಿತ್ಯವಾಗಿದೆ.





7th_Kannada_Reader.indd 92 24-06-2019 19:37:48

ಹಾಲುಂಡ ತವರೀಗೆ ಏನೆಂದು ಹಾಡಲೆ
ಹೊಳೆ ದಂಡಿಲಿರುವ ಕರಿಕೀಯ ಕುಡಿ ಹಾಂಗ
ಹಬ್ಬಲಿ ಅವರ ರಸಬಳ್ಳಿ

ಕಾಸೀಗಿ ಹೋಗಲಕ ಏಸೊಂದು ದಿನ ಬೇಕ
ತಾಸ್ಹೊತ್ತಿನ್ಹಾದಿ ತವರೂರ ಮನಿಯಾಗ
ಕಾಸಿ ಕುಂತಾಳ ಹಡೆದವ್ವ

ತಾಯಿದ್ರ ತವರ್ಹೆಚ್ಚು ತಂದಿದ್ರ ಬಳಗ್ಹೆಚ್ಚು
ಸಾವಿರಕೆ ಹೆಚ್ಚು ಪತಿ ಪುರುಷ ಹೊಟ್ಟೀಯ
ಮಾಣಿಕದ ಹರಳು ಮಗ ಹೆಚ್ಚು

ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟರೆ ಕೆಡಲಿ ಮನಿಗೆಲಸ ಕಂದನಂಥ
ಮಕ್ಕಳಿರಲವ್ವ ಮನಿ ತುಂಬ

ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳ ಹೊರಗೆ ಆಡಿದರ
ಬೀಸಣಿಕೆ ಗಾಳಿ ಸುಳಿದಾವ

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡೀಗೆ ಎತ್ತು ದುಡಿದ್ಹಾಂಗ ಬಾಳೆಲೆಯ
ಹಾಸುಂಡು ಬೀಸಿ ಒಗೆದಾಂಗ



7th_Kannada_Reader.indd 93 24-06-2019 19:37:48

## ಕವಿ–ಕಾವ್ಯ ಪರಿಚಯ

ಶಿಷ್ಟ ಸಾಹಿತ್ಯಕ್ಕೆ ಜಾನಪದ ಸಾಹಿತ್ಯವೇ ಮೂಲ. ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಜನಪದ ಸಾಹಿತ್ಯದ ಕೊಡುಗೆ ಬಹಳ ಹಿರಿದು. ಜಾನಪದ ಗೀತೆಗಳು ಹಲವು ಛಂದೋ ಪ್ರಕಾರಗಳಲ್ಲಿ ಕಂಡು ಬಂದರೂ ತ್ರಿಪದಿ ಛಂದಸ್ಸಿನಲ್ಲಿ ಬರೆದ ಗೀತೆಗಳು ಪ್ರಖ್ಯಾತವಾಗಿವೆ. ಜಾನಪದ ಹಾಡುಗಳಲ್ಲಿ ಜೀವನದ ಸುಖದುಃಖ, ಸರಸ–ವಿರಸ, ಹಬ್ಬಹರಿದಿನ, ಸಂಸ್ಕೃತಿ, ದಿನನಿತ್ಯದ ಕಾಯಕ ಮುಂತಾದ ವಿವಿಧ ಅನುಭವಗಳ ಸಾರವೇ ಅಡಗಿದೆ.

ಈ ತ್ರಿಪದಿಗಳಲ್ಲಿ ಹೆಣ್ಣೊಬ್ಬಳು ತನ್ನ ತವರು ಗರಿಕೆಯಂತೆ ಹರಡಲೆಂದೂ, ಕಾಶೀ ಕ್ಷೇತ್ರದಂತೆ ತವರು ಮನೆ ಪುಣ್ಯ ಕ್ಷೇತ್ರವೆಂದೂ ಹೇಳುವ ಪವಿತ್ರ ಭಾವವಿದೆ. ತಾಯಿತಂದೆ, ಗಂಡ ಹಾಗೂ ಮಗುವಿನ ಮೇಲಿರುವ ಅಪಾರ ಪ್ರೀತಿ, ಮಕ್ಕಳನ್ನು ಸಾಕುವ ರೀತಿ, ಮನೆಯಲ್ಲೊಂದು ಮಗುವಿದ್ದರೆ ಸಿಗುವ ಅಪಾರ ಸಂತೋಷ, ನೆಮ್ಮದಿ ಮೊದಲಾದವುಗಳನ್ನು ಇಲ್ಲಿ ವಿವರಿಸಲಾಗಿದೆ. ಅಂತಹ ಮಕ್ಕಳನ್ನು ಹಡೆಯದ ಸ್ತ್ರೀ ಜನ್ಮವನ್ನು ಹಳಿಯುತ್ತಾ, ಆಕೆಯನ್ನು ಸಮಾಜ ಹೇಗೆ ಕೀಳರಿಮೆಯಿಂದ ಕಾಣುತ್ತದೆ ಎಂಬುದನ್ನು ವೇದನೆಯಿಂದಲೇ ವಿವರಿಸುತ್ತಾಳೆ.

## ಪದಗಳ ಅರ್ಥ

ತವರು–ಹುಟ್ಟಿದ ಮನೆ, ತಾಯಿಮನೆ; ಕರಿಕೆ–ಒಂದು ಬಗೆಯ ಸೊಪ್ಪು, ಕರಿಕೆ ಸೊಪ್ಪು, ನೀರಿರುವ ಸ್ಥಳದಲ್ಲಿ ಬೆಳೆಯುವ ಸೊಪ್ಪು,(ಗರಿಕೆ ಹುಲ್ಲು ಅಲ್ಲ); ಹಂಗೆ–ಹಾಗೆ; ಕಾಸಿ–ಕಾಶಿ; ಹಡೆದವ್ವ–ಹೆತ್ತ ತಾಯಿ, ಹಡೆದ ಅಮ್ಮ; ಬಳಗ–ನೆಂಟರಿಷ್ಟರು; ಬಾಲಿ–ಬಾಲೆ, ಹೆಣ್ಣು; ಬಾಡೀಗಿ–ಬಾಡಿಗೆ; ಒಗೆ–ಬೀಸಿ ಎಸೆ, ಬಿಸಾಡು; ದುಡಿ–ಕೆಲಸ ಮಾಡು, ಶ್ರಮಪಡು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕರಿಕೆ ಎಲ್ಲಿ ಇರುತ್ತದೆ ?
2. ತಂದೆ ಇದ್ದರೆ ಏನು ಹೆಚ್ಚುತ್ತದೆ ?
3. ಮನೆ ತುಂಬ ಏನಿರಬೇಕೆಂದು ಹೆಣ್ಣು ಬಯಸುತ್ತಾಳೆ?
4. ಮಗು ಅತ್ತಿತ್ತ ಸುಳಿದರೆ ಯಾವುದು ಬೇಡ ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ತವರು ಮನೆ ಹೇಗೆ ಹಬ್ಬಲೆಂದು ಹೆಣ್ಣು ಬಯಸುತ್ತಾಳೆ ?
2. ತವರು ಮನೆಯನ್ನು ಪವಿತ್ರ ಕ್ಷೇತ್ರವಾಗಿ ಹೆಣ್ಣು ಹೇಗೆ ಕಾಣುತ್ತಾಳೆ ?
3. ತಾಯಿ ತಂದೆ ಪತಿ ಮಗ – ಇವರ ಬಗ್ಗೆ ಹಳ್ಳಿಯ ಹೆಣ್ಣೊಬ್ಬಳ ಅಭಿಪ್ರಾಯವೇನು?
4. ಮಗುವಿನ ಕುರಿತು ಗರತಿಯೊಬ್ಬಳು ವ್ಯಕ್ತ ಪಡಿಸುವ ಅಭಿಪ್ರಾಯಗಳೇನು?
5. ಮಗುವನ್ನು ಹಡೆಯದ ಸ್ತ್ರೀಯ ಜನ್ಮ ಹೇಗಿರುವುದೆಂದು ಜಾನಪದ ಗೀತೆಯಲ್ಲಿ ಹೇಳಲಾಗಿದೆ?

## ಭಾಷಾಭ್ಯಾಸ

**1. ಕೆಳಗಿನ ಆಡು ಭಾಷೆಯ ಪದಗಳನ್ನು ಗ್ರಾಂಥಿಕ ಭಾಷೆಯಲ್ಲಿ ಬರೆಯಿರಿ**

ಹಂಗೆ, ಬಾಡೀಗಿ, ಕುಂತಾಳೆ, ತಂದಿ, ಇದ್ರ, ಮನಿ.

**2. ಈ ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**

ಹೋಗು, ಹೆಚ್ಚು, ಜನನ, ಕೆಡುಕು, ಬೇಕು, ಹೊರಗೆ, ಅಳು.

**3. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ಹಬ್ಬಲಿ, ಹೊಳೆದಂಡೆ, ಮನೆಗೆಲಸ, ಸುಳಿ, ದುಡಿ.

**4. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಹಾಲುಂಡ, ಏಸೊಂದು, ತವರೂರ, ಮನೆಗೆಲಸ, ಬಾಲಕರಿಲ್ಲದ

## ಚಟುವಟಿಕೆ

1. ಇತರ ಜಾನಪದ ಗೀತೆಗಳನ್ನು ಸಂಗ್ರಹಿಸಿ, ಜನಪದ ಧಾಟಿಯಲ್ಲಿ ಹಾಡುವುದನ್ನು ಹಿರಿಯರಿಂದ ಕೇಳಿ ಕಲಿಯಿರಿ.



7th_Kannada_Reader.indd 94 24-06-2019 19:37:48

ಪೂರಕ ಪದ್ಯ

ಘಟಕ ಆರು

# ನಾನು ಮತ್ತು ಮೋಡ!

– ಪ್ರೊ. ತಮಿಳ್ ಸೆಲ್ವಿ

ಚಿತ್ರಗಳ ಬದಲಿಸುತ, ಸಾಗುವ ಮೋಡಗಳ ಕಾಣುತ
ಕಿಟಕಿಯಲಿ... ಗಾಢ ನಿದ್ರೆಗೆ ಜಾರಿದೆ.
ಕಂಡೆ ಕನಸನು... ಬಿಳಿಯ ಬಣ್ಣದ
ದೊಡ್ಡ ಮೋಡವು ಬಂತು ನನ್ನಯ ಎದುರಿಗೆ ! ‖1‖

ಅಕ್ಕರೆಯಿಂದಲಿ ಹೇಳಿತೆನಗೆ,
'ನನ್ನ ಕಂಡರೆ ವಿಸ್ಮಯವು ನಿನಗೆ
ಪ್ರೀತಿಯಿಂದಲಿ ದಿನವು ನೋಡುವೆ ನನ್ನನು
ನಿನ್ನ ಕಾಣಲು, ಹಲವು ದಿನಗಳಿಂದಲು ಕಾದಿಹೆ! ‖2‖

ನಿನ್ನ ಪ್ರೀತಿಗೆ ಮೆಚ್ಚಿ ಬಂದೆನು
ಕೇಳು ನಿನಗೆ ಬೇಕೇನೆಂಬುದನು
ಕೇಳಿದುದ ಕೊಡುವ ಮನಸಿನಿಂದಲೆ
ಇಳಿದು ಬಂದೆನು ಇಲ್ಲಿಗೆ' ‖3‖

'ಬಿಳಿಯ ಮೋಡವೆ
ನಿನ್ನ ಹಾಗೆ ನಾನೂ ಏರಬೇಕು ಮೇಲಕೆ
ಕೂರಬೇಕು ಶಿಖರಗಳ ಸಿಂಹಾಸನದಲಿ
ಬಾನಿನೆತ್ತರ ಬಾಳಬೇಕು ನಿನ್ನ ಹಾಗೆಯೆ!' ‖4‖



7th_Kannada_Reader.indd 95 24-06-2019 19:37:48

ಮೋಡವೆಂದಿತು ನಗುತ, ಮೆಲ್ಲಗೆ
'ಕೆಳಗಿಳಿಯುವುದ ಎಂದೂ ಮರೆಯದಿರು
ನಿನ್ನಂತೆ ಪರರ ಬಗೆಯುವುದ ಬಿಡದಿರು
ಮೇಲೆ ಏರುವೆ ನನಗಿಂತಲೂ' ‖5‖

'ನಿನ್ನಂತೆ ನಾನೂ ಸದಾ ಸಂಚಾರಿಯಾಗಬೇಕು
ದಿಕ್ಕು ದಿಕ್ಕನು ಬಿಡದೆ ನೋಡಬೇಕು'
'ಸಂಕುಚಿತ ಯೋಚನೆಗಳ ಕಡಿವಾಣಗಳ ಕಿತ್ತೊಗೆ
ಜಗದ ಮನುಜರೆಲ್ಲರು ನಿನ್ನವರೆಂದೆ ಭಾವಿಸು' ‖6‖

'ನಿನ್ನಂತೆ ಎಲ್ಲೆಡೆಗಳಲ್ಲೂ ನಾನು ಹಾರಬೇಕು
ನನ್ನಿಚ್ಛೆ ಬಂದ ಕಡೆಗೆ'
'ಎಲ್ಲಿಯೂ ತಂಗದಿರು, ಎಲ್ಲಿಯೂ ನಿಲ್ಲದಿರು
ಎಲ್ಲೆಡೆಯು ನಿನ್ನ ಎಡೆಯೆಂಬುದ ನೆನಪಿಡು' ‖7‖

'ಸಂಜೆಯ ಸೂರ್ಯನ ನೂರು ಬಣ್ಣಗಳಲಿ
ದಿನವೂ ಓಕುಳಿಯಾಡಿ ರಂಗುರಂಗಾಗಬೇಕು'
'ನಿನ್ನದೆನ್ನುವ ಬಣ್ಣಗಳೆಲ್ಲವ ಕಳಚಿಕೊಂಡು ಬಿಡು
ಎಲ್ಲ ಬಣ್ಣಗಳೂ ನಿನ್ನೊಳಗೆ ಸೇರುವುದ ಕಾಣು' ‖8‖

'ಎಷ್ಟೊಂದು ರೂಪಗಳು ನಿನಗೆ
ಕ್ಷಣ ಕ್ಷಣಕು ತೋರುವೆ ಮಾಯಾಜಾಲವ
ಅಂದಚಂದದ ನೂರು ರೂಪಗಳ ತಾಳುತ!'
ರೂಪ ಮೋಹವ ಬಿಟ್ಟು ಬಿಡು, ಎಲ್ಲ ರೂಪವು ನಿನ್ನದೆ' ‖9‖



7th_Kannada_Reader.indd 96 24-06-2019 19:37:48

'ನಿನ್ನ ಗುಡುಗು ಸಿಡಿಲಿನ ಧ್ವನಿ
ಬಲು ಇಷ್ಟ ನನಗೆ'
'ಧರ್ಮ ನೀತಿಯ ಶಬ್ದಗಳ ರೂಢಿಸಿಕೋ
ನಿನ್ನ ಧ್ವನಿಗೂ ಗುಡುಗು ಸಿಡಿಲಿನ ಶಕ್ತಿಯಿರುವುದ ಕಾಣುವೆ!' ‖10‖

'ಹೇಗೆ ಬರೆಯುವೆ ಮಿಂಚು ಬರಹವ
ಎಲ್ಲ ಕಾಣ್ಬುದು ಬೆಳಕಲಿ!'
'ಸ್ವಂತ ಯೋಚನೆಯ ಬೆಳಕಿನಲಿ ವಿಚಾರಗಳ ಬೆಂಕಿಯ
ಮೂಡಿಸು, ನಿನ್ನ ಬರಹವು ಮಿಂಚದು! ‖11‖

'ಕಡೆಯದಾಗಿ ಒಂದು ಪ್ರಶ್ನೆ ಮೋಡವೇ,
ನಿನ್ನಂತೆ ಮಳೆಯಾಗಿ, ಎಲ್ಲರಿಗೆ ಬೇಕಾಗಿ ಬದುಕುವುದ ತಿಳಿಸು ನನಗೆ!'
'ನಿನ್ನ ನಂಬಿದವರಿಗೆ, ಮನೆಯವರಿಗೆ, ನಾಡಿಗೆ ನಿನ್ನನ್ನು
ಸಂಪೂರ್ಣವಾಗಿ ಒಪ್ಪಿಸಿಕೊ, ಧಾರೆಧಾರೆಯಾಗಿ ಸುರಿಯುವೆ!' ‖12‖

## ಕವನದ ಆಶಯ

ಈ ಕವನದಲ್ಲಿ, ಬರುವ ನಾಯಕನು ಮೋಡದೊಂದಿಗೆ ಸಂಭಾಷಿಸುತ್ತಾನೆ. ಮೋಡವು ಹೇಗೆ ಆಕಾಶದಲ್ಲಿ ಜೀವಿಸುತ್ತಾ, ಎತ್ತರಕ್ಕೆ ಹಾರುತ್ತಾ, ಎಲ್ಲೆಡೆಯೂ ಸಂಚರಿಸುತ್ತಾ, ಎಲ್ಲರಿಗೂ ಬೇಕಾದ ಮಳೆ ಸುರಿಸುತ್ತಾ ಬದುಕುತ್ತದೋ ಅದೇ ರೀತಿ ತಾನೂ ಇರಬೇಕೆಂಬ ಆಶಯ ಅವನದು. ಮನುಷ್ಯನಾಗಿದ್ದೂ ಉನ್ನತವಾದ ಬದುಕನ್ನು ಸಾಗಿಸುವುದು ಹೇಗೆ ಎಂಬ ತತ್ವವನ್ನು ಮೋಡ ಅವನಿಗೆ ಹೇಳಿ ಕೊಡುತ್ತದೆ. ಅವನು ಕೇಳುವ ಎಲ್ಲಾ ಪ್ರಶ್ನೆಗಳಿಗೂ ಒಬ್ಬ ಮನುಷ್ಯ ಹೇಗೆ ಬದುಕಬೇಕೆಂಬ ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ಅದು ಉತ್ತರಿಸುತ್ತಾ ಹೋಗುತ್ತದೆ!

ನಾವೆಲ್ಲರೂ ನಮ್ಮ ಭಾವನೆಗಳನ್ನು, ಯೋಚನೆಗಳನ್ನು ಉನ್ನತೀಕರಿಸಿಕೊಂಡು, ವಿಶಾಲ ಮನೋಭಾವದಿಂದ, ವಿಶ್ವಮಾನವನಾಗಿ ಬಾಳಬೇಕೆಂಬ ಸಂದೇಶವನ್ನು ಮೋಡದ ಮೂಲಕ ಕವಿಯಿತ್ರಿ ಇಲ್ಲಿ ಬಹು ಸೊಗಸಾಗಿ ಚಿತ್ರಿಸಿದ್ದಾರೆ.



7th_Kannada_Reader.indd 97 24-06-2019 19:37:48

## ಕವಿ–ಕಾವ್ಯ ಪರಿಚಯ



ಡಾ. ತಮಿಳ್ ಸೆಲ್ವಿಯವರು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಕನ್ನಡ ಹಾಗೂ ತಮಿಳು ಎರಡೂ ಭಾಷೆಗಳಲ್ಲೂ ಪರಿಣತಿ ಗಳಿಸಿದ್ದಾರೆ. ಹಳಗನ್ನಡ ಕಾವ್ಯಗಳ ವಾಚನದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದಾರೆ. ತಮಿಳು ಹಾಗೂ ಕನ್ನಡ ಎರಡೂ ಭಾಷೆಗಳ ನಡುವೆ ಸೌಹಾರ್ದ ಸಂಬಂಧ ಬೆಸೆಯುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವೈಚಾರಿಕ ದೃಷ್ಟಿಕೋನ, ಸೃಜನಶೀಲತೆ ಹಾಗೂ ಶೈಕ್ಷಣಿಕ ವಲಯದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಮೂಲಕ ಹೆಸರು ಮಾಡಿದ್ದಾರೆ. 'ಗಂಗರ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಮೇಲೆ ಪಿಎಚ್.ಡಿ ಪ್ರಬಂಧವನ್ನು ಸಿದ್ಧಪಡಿಸಿ ಡಾಕ್ಟರೇಟ್ ಪದವಿಯನ್ನು ಗಳಿಸಿದ್ದಾರೆ. ಇತ್ತೀಚೆಗೆ ತಮಿಳು ಹಾಗೂ ಕನ್ನಡ ಭಾಷೆಗಳ ನಡುವಿನ ಅನನ್ಯತೆಯನ್ನು ಕುರಿತು ಮಾಡಿರುವ ಸಂಶೋಧನಾ ಪ್ರಬಂಧಕ್ಕೆ ಡಿ.ಲಿಟ್, ಪದವಿಯನ್ನೂ ಗಳಿಸಿದ್ದಾರೆ. ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳ ಹಲವು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಂಡಲಿ, ಪರೀಕ್ಷಾ ಮಂಡಲಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ತಮಿಳು ನಾಡು ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಸಂಕ್ರಾಂತಿ, ನೇಪಥ್ಯ, ಪಲ್ಲವ–ಚೋಳ ಶಿಲ್ಪಕಲೆ, ಅಶೋಕ ಮಿತ್ರನ್ ಕಥೆಗಳು, ಅನನ್ಯ, ಅವಲೋಕನ ಮೊದಲಾದ ಮುವ್ವತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ 'ನಾನು ಅವನಲ್ಲ, ಅವಳು' ಎನ್ನುವ ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

## ಪದಗಳ ಅರ್ಥ

ಅಕ್ಕರೆ–ಪ್ರೀತಿ; ವಿಸ್ಮಯ–ಆಶ್ಚರ್ಯ; ಕಾದಿಹೆ–ಕಾದಿರುವೆ; ಶಿಖರ–ಪರ್ವತದ ಅಂಚು, ಬೆಟ್ಟಗಳ ಎತ್ತರವಾದ ತುದಿ; ಬಾನು–ಆಕಾಶ; ಜಗ–ವಿಶ್ವ, ಲೋಕ; ರಂಗು–ಬಣ್ಣ; ಕಾಣ್ಬುದು–ಕಾಣಿಸುತ್ತದೆ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕವನದ ನಾಯಕನು ಏನನ್ನು ನೋಡುತ್ತಾ ನಿದ್ರೆ ಮಾಡಿದನು ?
2. ಮೋಡವು ಹೇಗೆ ಬಂದಿತು ?
3. ಮೋಡವು ಕವನದ ನಾಯಕನನ್ನು ಏನೆಂದು ಪ್ರಶ್ನಿಸಿತು ?
4. ಎಲ್ಲ ಕಡೆಯೂ ಸಂಚರಿಸುವುದು ಹೇಗೆ ?
5. ಎಲ್ಲಿ ಕುಳಿತುಕೊಳ್ಳಬೇಕೆಂದು ಕವನದ ನಾಯಕನು ಕೇಳಿದನು ?
6. ಹೇಗೆ ರಂಗಾಗಬೇಕೆಂದು ಕವನದ ನಾಯಕನು ಕೇಳುತ್ತಾನೆ ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಮೋಡವು ಹೇಗೆ ಬಂದಿತು ಮತ್ತು ಏನು ಹೇಳಿತು ?
2. ಮೋಡಕ್ಕೂ ಕವನದ ನಾಯಕನಿಗೂ ನಡುವೆ ನಡೆದ ಸಂಭಾಷಣೆಯೇನು?
3. ಈ ಕವನದ ಭಾವಾರ್ಥವನ್ನು ಬರೆಯಿರಿ.

## ಚಟುವಟಿಕೆ

1. ಈ ಕವನವನ್ನು ನಾಟಕವಾಗಿ ಪರಿವರ್ತಿಸಿ, ಅದನ್ನು ತರಗತಿಯಲ್ಲಿ ಅಭಿನಯಿಸಿ.



7th_Kannada_Reader.indd 98 24-06-2019 19:37:48

ಘಟಕ ಆರು

# ಪ್ರಾಚೀನ ವೈಭವ ನಗರ ಕಲಬುರ್ಗಿ

– ರೇವಣಸಿದ್ಧಯ್ಯ ರುದ್ರಸ್ವಾಮಿಮಠ

## ಪ್ರವೇಶ

ಭಾರತೀಯ ಸಂಸ್ಕೃತಿಯು ಇಡೀ ವಿಶ್ವದಲ್ಲಿಯೇ ವಿಶಿಷ್ಟವಾದ ಸಂಸ್ಕೃತಿಯಾಗಿದೆ. ಸಾಹಿತ್ಯ ಸೃಷ್ಟಿ, ಧಾರ್ಮಿಕ ದರ್ಶನ, ಶಿಲ್ಪ ಸಂಗೀತ, ನೃತ್ಯ ಹೀಗೆ ಅನೇಕ ಕ್ಷೇತ್ರಗಳಲ್ಲಿಯೂ ಇದು ವಿಶೇಷತೆಯನ್ನು ಹೊಂದಿದೆ. ಹಾಗೆಯೇ ಕರ್ನಾಟಕವೂ ಸಹ ಅನೇಕ ಕಲೆ, ಸೌಂದರ್ಯಗಳ ನೆಲೆಬೀಡಾಗಿದೆ. ಇಲ್ಲಿ ಅನೇಕ ದೇವಾಲಯಗಳಲ್ಲಿ ಶಿಲ್ಪಕಲೆಗಳನ್ನು ನೋಡಬಹುದು. ಭಾರತ ದೇಶಕ್ಕೆ ಅನೇಕ ಕಲೆ ಸೌಂದರ್ಯವನ್ನು ಕರ್ನಾಟಕ ನೀಡಿದೆ. ನಮ್ಮ ದೇಶದ ಹೆಸರಾಂತ ಪ್ರೇಕ್ಷಣೀಯ ಸ್ಥಳಗಳಲ್ಲಿ ಕಲಬುರ್ಗಿ ನಗರವೂ ಒಂದು. ಅದರ ಬಗ್ಗೆ ಇಲ್ಲಿ ತಿಳಿದುಕೊಳ್ಳೋಣ.









7th_Kannada_Reader.indd 99 24-06-2019 19:37:49

ನಮ್ಮ ದೇಶದ ಹೆಸರಾಂತ ಪ್ರೇಕ್ಷಣೀಯ ಸ್ಥಳಗಳಲ್ಲಿ ಕಲಬುರ್ಗಿ ನಗರವೂ ಒಂದು. ಈ ಚಾರಿತ್ರಿಕ ಸುಂದರ ನಗರ ಹಿಂದೂ ಮುಸ್ಲಿಂ ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಮೇಲಾಗಿ ಇದು ಜಿಲ್ಲಾ ಹಾಗೂ ವಿಭಾಗೀಯ ಕೇಂದ್ರವೂ ಆಗಿದೆ. ಈಗ ಈ ನಗರವನ್ನು ಕಲಬುರ್ಗಿ ಎಂದೇ ಕರೆಯುತ್ತಾರೆ. ಪ್ರಾಚೀನ ಶಾಸನಗಳಲ್ಲಿ ಇದನ್ನು 'ಕಲುಂಬರಿಗೆ' ಎಂದು ಉಲ್ಲೇಖಿಸಲಾಗಿದೆ. ಹೈದರಾಬಾದಿನ ನಿಜಾಮರ ಆಳ್ವಿಕೆಯಲ್ಲಿ ಈ ನಗರಕ್ಕೆ ಗುಲಬರ್ಗಾ ಎಂದು ನಾಮಕರಣ ಮಾಡಲಾಯಿತು. ಗುಲಬರ್ಗಾ, ಗುಲ್ಬರ್ಗಾ ಎಂದರೆ ಗುಲಾಬಿಯ ಎಸಳು, ಎಲೆ ಎಂದು ಅರ್ಥ. ಕ್ರಿ.ಶ. 1347ರಲ್ಲಿ ಬಹಮನಿ ಅರಸು ಅಲ್ಲಾ–ಉದ್ದೀನನು ಈ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಸುಮಾರು ನೂರು ವರ್ಷಗಳ ಕಾಲ ಇದು ರಾಜಧಾನಿಯಾಗಿತ್ತು. ಆದುದರಿಂದ ಈ ನಗರವು ಐತಿಹಾಸಿಕ ಘನತೆಯನ್ನು ಪಡೆದಿದೆ.

ಗುಲಬರ್ಗಾ ನಗರವಿನ್ನೂ ದೂರವಿರುವಾಗಲೇ ಗುಡಿ ಗೋಪುರಗಳು, ಗಗನ ಚುಂಬಿ ಮೀನಾರುಗಳು, ತಲೆಯೆತ್ತಿ ನಿಂತ ಗುಮ್ಮಟಗಳು ಪ್ರವಾಸಿಗರನ್ನು ಸ್ವಾಗತಿಸುತ್ತವೆ. ನಗರವನ್ನು ಪ್ರವೇಶಿಸುತ್ತಿದ್ದಂತೆಯೇ ನಗರ ಮಧ್ಯದ 'ಅಪ್ಪನ ಕೆರೆ' ಯಾತ್ರಿಕರ ಮನಸ್ಸನ್ನು ಸೂರೆಗೊಳ್ಳುತ್ತದೆ. ಇಲ್ಲಿಯ ಸೂರ್ಯೋದಯ, ಸೂರ್ಯಾಸ್ತಗಳ ಸೊಬಗನ್ನು ಕೆರೆಯ ದಡದಲ್ಲಿ ಕುಳಿತು ಕಣ್ಣಾರೆ ನೋಡಿಯೇ ಆನಂದಿಸಬೇಕು.

ನಗರದ ನಟ್ಟನಡುವೆ ಸುಮಾರು ಇಪ್ಪತ್ತು ಎಕರೆಗಳಷ್ಟು ವಿಸ್ತಾರವಾದ ಸ್ಥಳದಲ್ಲಿ ಕರೀಕಲ್ಲಿನ ಸುಂದರವಾದ ಕೋಟೆಯೊಂದು ಕಂಗೊಳಿಸುತ್ತದೆ. ಇದನ್ನು ವಾರಂಗಲ್ಲಿನ ಅರಸನಾದ ಗುಲಚಂದನು ಕಟ್ಟಿಸಿದನೆಂದು ಪ್ರತೀತಿ ಇದೆ. ತರುವಾಯದಲ್ಲಿ ಬಹಮನಿಯ ಅರಸರು ತಮಗೆ ಅನುಕೂಲವಾಗುವಂತೆ ಹಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಮೂರು ಕಿ.ಮೀ. ಸುತ್ತಳತೆಯುಳ್ಳ ಈ ಕೋಟೆ ಎರಡು ಸುತ್ತಿನ ಎತ್ತರವಾದ ಸುಭದ್ರ ಗೋಡೆಗಳುಳ್ಳದ್ದಾಗಿದೆ. ಕೋಟೆಯ ಸುತ್ತಲೂ ಆಳವಾದ ಮುವ್ವತ್ತು ಅಡಿಗಳಷ್ಟು ಅಗಲವಾದ ಕಂದಕವಿದೆ. ಎತ್ತರವಾದ ಹೂಡೆಗಳ ಮೇಲೆ ಬೃಹದಾಕಾರದ ತೋಪುಗಳಿವೆ. ಪೂರ್ವ ದಿಕ್ಕಿನಲ್ಲಿರುವ ಹೆಬ್ಬಾಗಿಲು ಬಿದ್ದು ಹೋಗಿದೆ. ಕೋಟೆಯ ತೀರಾ ಪಶ್ಚಿಮಕ್ಕೆ ದಕ್ಷಿಣಾಭಿಮುಖವಾಗಿ ಇನ್ನೊಂದು ಮಹಾದ್ವಾರವಿದೆ. ಅದಕ್ಕೆ ಮರದ ದಿಮ್ಮಿಗಳಿಂದ ಮಾಡಿದ ಗಟ್ಟಿಮುಟ್ಟಾದ ಕದಗಳಿವೆ.

ಕೋಟೆಯ ಅಂಗಳದಲ್ಲಿ ಸುಪ್ರಸಿದ್ಧವಾದ ಜುಮ್ಮಾ ಮಸೀದಿ ಇದೆ. ಬಹಮನಿ ಅರಸು ಒಂದನೇ ಮಹಮದನು ಇದನ್ನು ಕಟ್ಟಿಸಿದನು. ಇರಾನಿನ ಕ್ವಾಜಿ ಪ್ರಾಂತ್ಯದವನಾದ ರಫಿ ಎಂಬ ಶಿಲ್ಪಿಯು ಈ ಮಸೀದಿಯನ್ನು ನಿರ್ಮಿಸಿದುದಾಗಿ ತಿಳಿದು ಬರುತ್ತದೆ. ಈ ಕಟ್ಟಡವು ಪೂರ್ವ ಪಶ್ಚಿಮವಾಗಿ 216 ಅಡಿ ಉದ್ದವಿದ್ದು, ದಕ್ಷಿಣೋತ್ತರವಾಗಿ 176 ಅಡಿ ಅಗಲವಾಗಿದೆ. 140 ಸ್ಥಂಭಗಳುಳ್ಳ ಈ ಮಸೀದಿ 250 ಕಮಾನುಗಳನ್ನು ಹೊಂದಿದೆ. ಇದು ಸ್ಪೇನಿನ ಕಾರ್ಡೋವಾ ನಗರದ ಪ್ರಸಿದ್ಧ ಮಸೀದಿಯನ್ನು ಹೋಲುತ್ತದೆ. ದಕ್ಷಿಣ ಏಷ್ಯಾದಲ್ಲಿಯೇ ಇಂತಹ ಮಸೀದಿ ಬೇರೊಂದಿಲ್ಲ.

ಕೋಟೆಯ ಹತ್ತಿರದಲ್ಲಿ ವಿಶಾಲವಾದ ಕೆರೆಯ ದಂಡೆಯ ಮೇಲೆ ಶರಣ ಬಸವೇಶ್ವರರ ದೇವಸ್ಥಾನವು ಕಂಗೊಳಿಸುತ್ತದೆ. ಸಂತ ಶರಣ ಶ್ರೀಬಸವೇಶ್ವರರು ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಅರಳಗುಂಡಿಯವರು. ಅವರು ದಾಸೋಹ ಬಲದಿಂದ ದೈವತ್ವಕ್ಕೇರಿದ ಮಹಿಮಾಶಾಲಿಗಳು. ಬಸವಕಲ್ಯಾಣದತ್ತ ಹೊರಟಿದ್ದ ಶರಣ ಶ್ರೀಬಸವೇಶ್ವರರು ಕಲಬುರ್ಗಿಯ ದೊಡ್ಡಪ್ಪ ಶರಣರ ಮಹಾಮನೆಯಲ್ಲಿ ಉಳಿದರು. ತಮ್ಮ ಜೀವಿತಾವಧಿಯಲ್ಲಿ ಅನೇಕ ಮಹಿಮೆಗಳನ್ನು ಮೆರೆದು ಮಹಾತ್ಮರೆನಿಸಿಕೊಂಡರು. ಅವರ ಸಮಾಧಿಯ ಮೇಲೆ ಕಟ್ಟಿದ ಕಪ್ಪು ಕಲ್ಲಿನ ಭವ್ಯ ಮಂದಿರ ಸುಂದರವಾದ ಕಂಬಗಳಿಂದಲೂ, ಕಮಾನುಗಳಿಂದಲೂ ಶೋಭಿಸುತ್ತದೆ. ದೊಡ್ಡದಾದ ರಂಗ ಮಂಟಪವನ್ನೂ ಇದು ಹೊಂದಿದೆ.

ದೇವಾಲಯದ ಮುಂದೆ ಆಳೆತ್ತರದ ನಂದಿ ವಿಗ್ರಹವಿದೆ. ಇಕ್ಕೆಲಗಳಲ್ಲಿ ಎತ್ತರವಾದ ದೀಪಸ್ಥಂಭಗಳಿವೆ. ಗುಡಿಯ ಗೋಪುರದ ಮೇಲೆ ಶರಣರ ಕೀರ್ತಿ ಪತಾಕೆಯೋ ಎಂಬಂತೆ ಬಂಗಾರದ ಕಲಶ ಬೆಳಗುತ್ತದೆ. ಗರ್ಭ ಗುಡಿಯ ನಂದಾದೀಪದ ಬೆಳಕಿನಲ್ಲಿ ಶರಣ ಬಸವೇಶ್ವರರು ಹಾಗೂ ಅವರ ಗುರುಗಳ ಜೋಡಿ ಬೆಳ್ಳಿಯ ಮುಖಗಳು ಭಕ್ತರ ಮನದಲ್ಲಿ ಭಕ್ತಿಯನ್ನುಕ್ಕಿಸುತ್ತವೆ. ಶ್ರಾವಣ ಮಾಸದ



7th_Kannada_Reader.indd 100 24-06-2019 19:37:49

ಸೋಮವಾರಗಳಂದು ನಡೆಯುವ ಪಲ್ಲಕ್ಕಿ ಉತ್ಸವಕ್ಕೂ, ಚೈತ್ರ ಬಹುಳ ಪಂಚಮಿಯಂದು ಜರುಗುವ ರಥೋತ್ಸವಕ್ಕೂ ಲಕ್ಷಾವಧಿ ಜನ ಸೇರುತ್ತಾರೆ.

ಕಲಬುರ್ಗಿಯಲ್ಲಿ ಸೂಫಿ ಸಂತರಾದ ಖ್ವಾಜಾ ಬಂದೇ ನವಾಜರ ದರ್ಗಾ ಇದೆ. ಅವರು ತಮ್ಮ ಎಂಬತ್ತನೇ ವಯಸ್ಸಿನಲ್ಲಿ ಗುಲಬರ್ಗಾಕ್ಕೆ ಬಂದು ನೆಲೆಸಿದರು. ದರ್ಗಾದ ಪ್ರಾಕಾರದ ನಡುವೆ ಅವರ ಗೋರಿ ಇದೆ. ಇದರ ಮೇಲೆ ಬೃಹದಾಕಾರದ ಗುಮ್ಮಟ ಕಟ್ಟಲಾಗಿದೆ. ದರ್ಗಾದ ಗೋಡೆಗಳನ್ನು ಬಂಗಾರ ವರ್ಣದಿಂದ ಚಿತ್ರಿಸಲಾಗಿದೆ ಮತ್ತು ಕುರಾನಿನ ವಚನಗಳಿಂದ ಅಲಂಕರಿಸಲಾಗಿದೆ. ಇಲ್ಲಿನ ಚಿತ್ರಕಲೆ ಟರ್ಕಿ ಹಾಗೂ ಇರಾನೀ ಶೈಲಿಯದು. ಬಂದೇ ನವಾಜರು ಪರ್ಷಿಯನ್ ಭಾಷಾ ಪಂಡಿತರಾಗಿದ್ದರು. ಭಾರತದಲ್ಲಿಯೇ ಮೊದಲ ಬಾರಿಗೆ ಉರ್ದು ಗದ್ಯ ಗ್ರಂಥಗಳನ್ನು ರಚಿಸಿದ ಖ್ಯಾತಿ ಇವರದಾಗಿದೆ. ಕ್ರಿ.ಶ. 1407ರಿಂದ 1422ರತನಕ ಗುಲಬರ್ಗಾದಲ್ಲಿ ಇವರು ಜೀವಿಸಿದ್ದರು. ಈ ಸಂತರ ಉರುಸು ಜಖ್ಖೈದಾ ತಿಂಗಳ ಹದಿನೈದನೇ ದಿನದಂದು ನಡೆಯುತ್ತದೆ.

ಪ್ರವಾಸಿಗರ ಗಮನವನ್ನು ಸೆಳೆಯುವ ಇನ್ನೊಂದು ತಾಣ ಎಂದರೆ ಹಫ್ತಾ ಗುಂಬಜ್. ಇದು ಏಳು ಗುಮ್ಮಟಗಳ ಸಾಲು. ಇವುಗಳಲ್ಲಿ ಫಿರೋಜ್ ಷಾನ ಗುಮ್ಮಟವು ವಿಶಿಷ್ಟವಾದ ಕಲಾ ಕುಸುರಿ ಕೆಲಸದಿಂದ ಕೂಡಿದೆ.

ಭಾರತ ಸ್ವಾತಂತ್ರ್ಯಾ ತರುವಾಯದಲ್ಲಿ ಗುಲಬರ್ಗಾ ನಗರವು ತ್ವರಿತ ಗತಿಯಿಂದ ಬೆಳೆಯುತ್ತಲಿದೆ. ವಿಶ್ವವಿದ್ಯಾಲಯ, ಪ್ರಾಚ್ಯವಸ್ತುಸಂಗ್ರಹಾಲಯ, ನಗರ ಉದ್ಯಾನವನ, ಮತ್ಸ್ಯಾಲಯ ಮತ್ತು ಜಿಲ್ಲಾ ವಿಜ್ಞಾನ ಕೇಂದ್ರಗಳು ಗುಲಬರ್ಗಾದ ಇಂದಿನ ಶೈಕ್ಷಣಿಕ ವೀಕ್ಷಣಾ ಸ್ಥಳಗಳಾಗಿವೆ.

## ಕೃತಿ ಕರ್ತೃ ಪರಿಚಯ

ಶ್ರೀ ರೇವಣಸಿದ್ಧಯ್ಯ ರುದ್ರಸ್ವಾಮಿಮಠ ಅವರು ಗುಲಬರ್ಗಾದವರು. ಇವರು ಶಿಕ್ಷಕರ ತರಬೇತಿ ಕೇಂದ್ರದ ಪ್ರಾಚಾರ್ಯರಾಗಿ ನಿವೃತ್ತರಾಗಿದ್ದಾರೆ. ಸ್ನಾತಕೋತ್ತರ ಪದವೀಧರರಾದ ಇವರು 11.12.1932ರಂದು ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ರಂಗಂ ಪೇಟದಲ್ಲಿ ಜನಿಸಿದರು.

ಇವರು ಚಿತ್ರಕಲಾವಿದರು, ನಾಟಕಕಾರರು ಹಾಗೂ ಕವಿಗಳೂ ಹೌದು. ಇವರು 'ರವ', 'ದಾಳಿಂಬ' ಎಂಬ ಕವನ ಸಂಕಲನಗಳನ್ನೂ, 'ಸಂಗೊಳ್ಳಿರಾಯಣ್ಣ', 'ಬಿದರಕೋಟೆಯ ದುರಂತ', 'ಹಾಲಾಹಲ', 'ಮರಳಿ ಮನೆಗೆ' ಮುಂತಾದ ರಂಗನಾಟಕಗಳನ್ನೂ ರಚಿಸಿದ್ದಾರೆ. ಸುಮಾರು 23 ಬಾನುಲಿ ನಾಟಕಗಳನ್ನು ಪ್ರಕಟಿಸಿದ್ದಾರೆ.

ಪ್ರಸ್ತುತ ಪ್ರಾಚೀನ ವೈಭವ ನಗರ ಕಲಬುರ್ಗಿ ಎಂಬ ಈ ಗದ್ಯಪಾಠವು ಗುಲಬರ್ಗಾ ನಗರದ ಗತವೈಭವವನ್ನು ವರ್ಣಿಸುವ ಲೇಖನವಾಗಿದೆ.

## ಪದಗಳ ಅರ್ಥ

ಪ್ರೇಕ್ಷಣೀಯ – ನೋಡಬೇಕಾದ; ವಾಸ್ತುಶಿಲ್ಪ–ಕಟ್ಟಡ ಕಟ್ಟುವ ಕಲೆ; ಪ್ರತೀತಿ–ಜನಜನಿತವಾಗಿ ಬಂದ ತಿಳಿವಳಿಕೆ; ಹೂಡೆ–ಬುರುಜು; ತೋಪು–ಫಿರಂಗಿ; ವೈಭವ–ಐಶ್ವರ್ಯ; ತರಂಗ–ಅಲೆ; ದಾಸೋಹ–ಶಿವಭಕ್ತರಿಗೆ ಮಾಡುವ ಆರೋಗಣೆ; ಮಹಿಮಾಶಾಲಿ–ಪ್ರಭಾವಶಾಲಿ; ಲಿಂಗೈಕ್ಯ–ನಿಧನ, ಮರಣ; ಉತ್ಸವ–ಹಬ್ಬ, ಮೆರವಣಿಗೆ; ಅಲಂಕರಿಸು–ಸುಂದರಗೊಳಿಸು; ಪ್ರಾಕಾರ–ಪೌಳಿ, ಗೋಡೆ; ಪಂಡಿತ–ವಿದ್ವಾಂಸ; ಸುಭದ್ರ–ಗಟ್ಟಿಮುಟ್ಟಾದ; ಉರುಸು–ಮಹ್ಮದೀಯ ಸಾಧುಗಳ ಪುಣ್ಯತಿಥಿ; ಶಾಸನ–ತಾಮ್ರದ ತಗಡು ಅಥವಾ ಕಲ್ಲಿನಲ್ಲಿ ಕೊರೆದಿಟ್ಟ ಪ್ರಾಚೀನ ಬರಹ.

## ಟಿಪ್ಪಣಿಗಳು

**ಜಖ್ಖೈದ** : ಮುಸಲ್ಮಾನರ ಚಾಂದ್ರಮಾನ ತಿಂಗಳು.
**ಸಂದಲ್** : ಚಂದನ.
**ಮಜಾರು** : ಸಮಾಧಿ



7th_Kannada_Reader.indd 101 24-06-2019 19:37:49

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕಲಬುರ್ಗಿ ಯಾವ ವಾಸ್ತುಶಿಲ್ಪಕ್ಕೆ ಹೆಸರಾಗಿದೆ ?
2. ಶಾಸನಗಳಲ್ಲಿ ಗುಲಬರ್ಗಾ ಯಾವ ಹೆಸರಿನಿಂದ ಉಲ್ಲೇಖಗೊಂಡಿದೆ ?
3. ಕ್ರಿ.ಶ. 1347ರಲ್ಲಿ ಕಲಬುರ್ಗಿ ಯಾವ ಅರಸನ ರಾಜಧಾನಿಯಾಗಿತ್ತು ?
4. ಪ್ರವಾಸಿಗರನ್ನು ಕೈ ಮಾಡಿ ಕರೆಯುವ ಕಟ್ಟಡಗಳು ಯಾವುವು ?
5. ಕಲಬುರ್ಗಿಯ ಕಗ್ಗೋಟೆಯನ್ನು ಕಟ್ಟಿಸಿದ ದೊರೆ ಯಾರು ?
6. ಬಹಮನಿ ಅರಸು ಒಂದನೇ ಮಹಮದನು ಕಟ್ಟಿಸಿದ ಕಟ್ಟಡ ಯಾವುದು ?
7. ಜುಮ್ಮಾ ಮಸೀದಿ ಸ್ಪೇನಿನ ಯಾವ ಮಸೀದಿಯನ್ನು ಹೋಲುತ್ತದೆ ?
8. ಶ್ರೀ ಶರಣ ಬಸವೇಶ್ವರರ ಹುಟ್ಟೂರು ಯಾವುದು?
9. ಶ್ರೀ ಶರಣ ಬಸವೇಶ್ವರರು ಕಲಬುರ್ಗಿಯಲ್ಲಿ ಯಾರ ಮನೆಯಲ್ಲಿ ನೆಲೆಸಿದರು?
10. ಶರಣ ಬಸವೇಶ್ವರ ರಥೋತ್ಸವ ಯಾವಾಗ ಜರುಗುವುದು ?
11. ಬಂದೇ ನವಾಜರ ದರಗಾದ ಗೋಡೆಯನ್ನು ಹೇಗೆ ಅಲಂಕರಿಸಲಾಗಿದೆ ?
12. ಬಂದೇ ನವಾಜರ ಉರುಸು ಯಾವಾಗ ನಡೆಯುವುದು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಗುಲಬರ್ಗಾ ನಗರವನ್ನು ಜನಸಾಮಾನ್ಯರು ಏನೆಂದು ಕರೆಯುತ್ತಾರೆ ?
2. ಗುಲಬರ್ಗಾ ಎಂದು ಯಾವಾಗ ನಾಮಕರಣವಾಯಿತು ?
3. ಲೇಖಕರು ಅಪ್ಪನ ಕೆರೆಯ ಸೌಂದರ್ಯವನ್ನು ಹೇಗೆ ಬಣ್ಣಿಸಿದ್ದಾರೆ ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಗುಲಬರ್ಗಾ ಕೋಟೆಯ ವಿಶೇಷಗಳಾವುವು ?
2. ದಕ್ಷಿಣ ಏಷಿಯಾದಲ್ಲಿಯೇ ಇಂಥ ಜುಮ್ಮಾ ಮಸೀದಿ ಬೇರೊಂದಿಲ್ಲವೆಂದು ಲೇಖಕರು ಏಕೆ ಹೇಳಿದ್ದಾರೆ ?
3. ಗುಲಬರ್ಗಾದ ಶ್ರೀ ಶರಣ ಬಸವೇಶ್ವರ ದೇವಾಲಯವನ್ನು ವರ್ಣಿಸಿ.
4. ಖ್ವಾಜಾ ಬಂದೇ ನವಾಜ್ ದರ್ಗಾದ ವಾಸ್ತುಶಿಲ್ಪದ ವೈಶಿಷ್ಟ್ಯಗಳಾವುವು ?

## ಭಾಷಾಭ್ಯಾಸ

**1. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಪ್ರಾಚೀನ, ಕೀರ್ತಿ, ಹುಟ್ಟು, ಮುಖ್ಯ, ದಕ್ಷಿಣ.

**2. ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

ಸ್ಥಾನ, ಯಾತ್ರೆ, ಕಂಬ, ಪ್ರಯಾಣ, ಕೀರ್ತಿ.

**3. ಕೆಳಗಿನ ಪದಗಳನ್ನು ಕೂಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**

ಸೂರ್ಯ + ಉದಯ =

ದೀಪ + ಅಲಂಕಾರ =

ಸೂರ್ಯ + ಅಸ್ತ =

ಬೃಹತ್ + ಆಕಾರ =

**4. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.**

ಉತ್ಸವ, ಶಾಸನ, ವೈಭವ, ಪಂಡಿತ, ಕೋಟೆ.

**5. ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1. ಹೂಡೆ | ಎ. ಖ್ವಾಜಾ ಬಂದೇ ನವಾಜ |
| 2. ಗುಲಬರ್ಗಾ | ಬಿ. ತೋಪು |
| 3. ಸೂಫಿ ಸಂತ | ಸಿ. ಶ್ರೀ ಶರಣ ಬಸವೇಶ್ವರ |
| 4. ದಾಸೋಹಿ | ಡಿ. ಪ್ರಾಚೀನ ವೈಭವ ನಗರ |

## ಚಟುವಟಿಕೆ

1. ನಿಮ್ಮ ಊರಿನ ಐತಿಹಾಸಿಕ ಮಹತ್ವವನ್ನು ತಿಳಿಯಿರಿ.
2. ನಿಮ್ಮ ಊರಿನ ಪ್ರಾಚೀನ ಹೆಸರೇನು ಎಂಬುದನ್ನು ಕೇಳಿ ತಿಳಿಯಿರಿ.
3. ಕರ್ನಾಟಕದ ಪ್ರಸಿದ್ಧ ಐತಿಹಾಸಿಕ ಸ್ಥಳಗಳನ್ನು ಪಟ್ಟಿ ಮಾಡಿ, ಅವುಗಳ ಮಹತ್ವವನ್ನು ತಿಳಿಯಿರಿ.



7th_Kannada_Reader.indd 102 24-06-2019 19:37:49

ಉಪಪಠ್ಯ

ಘಟಕ ಆರು

# ಚೆನ್ನೈ ಪ್ರವಾಸ

## ಪ್ರವೇಶ

ಪ್ರವಾಸವು ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ. 'ದೇಶ ಸುತ್ತಿ ನೋಡು, ಕೋಶ ಓದಿ ನೋಡು' ಎಂಬ ನಾಣ್ನುಡಿಯಂತೆ ಪ್ರವಾಸ ಅಥವಾ ದೇಶ ಸಂಚಾರ ಕೈಗೊಳ್ಳುವುದು ಶಿಕ್ಷಣದ ಮುಖ್ಯ ಅಂಶವಾಗಿದೆ. ಶಾಲೆಯು ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಯಲ್ಲಿ ಪ್ರವಾಸವು ಮುಖ್ಯ ಪಾತ್ರವನ್ನು ವಹಿಸುತ್ತದೆ.









7th_Kannada_Reader.indd 103 24-06-2019 19:37:51

ವಿದ್ಯಾರ್ಥಿಗಳು ಶಾಲೆಗೆ ಹೋಗಿ ಗುರುಗಳಿಂದ ಪಾಠ ಕಲಿಯುವುದು, ಹೆಚ್ಚಿನ ಜ್ಞಾನ ಪಡೆಯಲು ಗ್ರಂಥಾಲಯಗಳಿಗೆ ಹೋಗಿ ಪುಸ್ತಕಗಳನ್ನು ಓದುವುದು, ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದು, ವೃತ್ತಿಪರ ಶಿಕ್ಷಣದ ತರಬೇತಿ ಪಡೆಯುವುದು, ಸ್ಕೌಟ್ಸ್ ಅಂಡ್ ಗೈಡ್ಸ್, ಜ್ಯೂನಿಯರ್ ರೆಡ್‌ಕ್ರಾಸ್, ಎನ್.ಎಸ್. ಎಸ್. ಮುಂತಾದ ಸ್ವಯಂ ಸೇವಕ ಸಂಘಟನೆಗಳ ಮೂಲಕ ಸಮಾಜಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅತ್ಯವಶ್ಯಕ. ಅಂತೆಯೇ ಶೈಕ್ಷಣಿಕ ಪ್ರವಾಸ ಕೈಗೊಳ್ಳುವುದರ ಮೂಲಕ ದೇಶದ ಇತಿಹಾಸ, ಸಂಸ್ಕೃತಿ, ಕಲೆ, ವಿಜ್ಞಾನ, ಸಾಮಾಜಿಕ ಜನಜೀವನ ಮುಂತಾದವುಗಳನ್ನೂ ತಿಳಿದುಕೊಳ್ಳಬಹುದು.

ಶಾಲಾ ಪ್ರವಾಸ ಎನ್ನುವುದು ಶಿಕ್ಷಕರಿಗಾಗಲೀ, ವಿದ್ಯಾರ್ಥಿಗಳಿಗಾಗಲೀ, ಪೋಷಕರಿಗಾಗಲೀ ಸಂಭ್ರಮದ ಸಡಗರದ ವಿಷಯವಾಗಿರುತ್ತದೆ. ಶಿಕ್ಷಕರು ಪ್ರವಾಸಕ್ಕೆ ಅನುಕೂಲವಾಗುವಂತಹ ಸಂಚಾರ ಸೌಲಭ್ಯಗಳನ್ನು ಒದಗಿಸಿ, ಮಕ್ಕಳಿಗೆ ಬೇಕಾದ ಪ್ರಥಮ ಚಿಕಿತ್ಸೆಯ ಪೆಟ್ಟಿಗೆ, ಕ್ರೀಡೆಗಳ ಉಪಕರಣ ಮುಂತಾದವುಗಳನ್ನು ಸಿದ್ಧಪಡಿಸುತ್ತಾರೆ.

ಶಾಲಾ ಮಕ್ಕಳಿಗಾದರೋ ಪ್ರವಾಸವೆಂದರೆ ಸಂಭ್ರಮವೋ ಸಂಭ್ರಮ. ಬಟ್ಟೆ ಬರೆಗಳನ್ನು ತೆಗೆದಿಡುವುದು, ವಿಷಯ ಸಂಗ್ರಹ ಮಾಡಲು ಪುಸ್ತಕ, ಲೇಖನಗಳನ್ನು ಸಿದ್ಧಪಡಿಸುವುದು, ಪ್ರವಾಸದ ಕುರಿತು ಗೆಳೆಯರೊಡನೆ ಮಾತನಾಡುವುದು, ಮುಂತಾದವುಗಳಲ್ಲಿ ಅವರು ಹೆಚ್ಚು ಆಸಕ್ತರಾಗಿರುತ್ತಾರೆ.

ಪೋಷಕರಿಗೆ ತಮ್ಮ ಮಕ್ಕಳನ್ನು ಪ್ರವಾಸಕ್ಕೆ ಕಳುಹಿಸುವುದೆಂದರೆ ಎಲ್ಲಿಲ್ಲದ ಆನಂದ. ಅವರು ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಮಕ್ಕಳಿಗೆ ಬಣ್ಣಬಣ್ಣದ ಉಡುಪುಗಳನ್ನೂ, ರುಚಿರುಚಿಯಾದ ತಿಂಡಿಗಳನ್ನೂ ಕೊಟ್ಟು ಕಳುಹಿಸುತ್ತಾರೆ. ತಮ್ಮ ಮಕ್ಕಳನ್ನು ಬೇರೆ ಬೇರೆ ಊರುಗಳಿಗೆ ಸ್ವತಃ ತಮಗೆ ಕರೆದುಕೊಂಡು ಹೋಗಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ತಮ್ಮ ಮಕ್ಕಳು ಶಾಲಾ ಪ್ರವಾಸ ಕೈಗೊಳ್ಳುವುದರ ಬಗ್ಗೆ ಪೋಷಕರಿಗೆ ಅತ್ಯಾನಂದವಾಗುತ್ತದೆ.

ಒಟ್ಟಿನಲ್ಲಿ ಶಾಲಾ ಪ್ರವಾಸವು ಎಲ್ಲರಿಗೂ ಆನಂದದಾಯಕವಾಗಿರುತ್ತದೆ. ಚೆನ್ನೈಗೆ ಪ್ರವಾಸ ಕೈಗೊಂಡಿರುವ ಶಾಲಾ ಮಕ್ಕಳ ಅನುಭವವನ್ನು ಅವರ ಮಾತುಗಳಿಂದಲೇ ಕೇಳೋಣವೇ?

**ರಮೇಶ್ :** ಶಾಲೆಯಿಂದ ನಮ್ಮ ಬಸ್ಸು ಹೊರಟು ಬಹಳ ಹೊತ್ತಾಯಿತು. ಇನ್ನೂ ಮುಂದೆ... ಮುಂದೆ... ಹೋಗ್ತಾನೇ ಇದ್ದೀವಲ್ಲೋ... ಚೆನ್ನೈನಲ್ಲಿ ಮೊದಲು ನಾವು ಎಲ್ಲಿಗೆ ಹೋಗ್ತೀವೋ ಉಮೇಶ್ ?

**ಉಮೇಶ್:** ಮೊದಲು ನಾವು ಮೆರೀನಾ ಬೀಚಿಗೆ ಹೋಗ್ತೀವಿ. ಆ! ಹೇಳ್ತಾ ಇರೋ ಹಾಗೇ ಮೆರೀನಾ ಕಡಲ ತೀರ ಬಂದೇ ಬಿಟ್ಟಿತು...! ಅಬ್ಬಾ...! ಎಷ್ಟು ಉದ್ದವಾದ ಬೀಚು ಇದು.

**ಶಿಕ್ಷಕರು :** ನೋಡಿ, ಇದು ಪ್ರಪಂಚದ ಅತಿ ಉದ್ದವಾದ ಎರಡನೆಯ ಕಡಲತೀರ.

**ರಮೇಶ್ :** (ಬಸ್ಸಿನಿಂದ ಇಳಿದು) ಸಾರ್... ಸಾರ್... ಸಮುದ್ರದ ಹತ್ತಿರ ಹೋಗೋಣ ಸಾರ್.

**ಶಿಕ್ಷಕರು :** ಹೂಂ... ಹೋಗೋಣ. ಹೂಂ... ಎಲ್ಲರೂ ಸಾಲಾಗಿ ನಿಲ್ಲಿ. ಸಮುದ್ರದ ಹತ್ತಿರ ಹೋದ ಮೇಲೆ ಎಲ್ಲರೂ ಜಾಗ್ರತೆಯಾಗಿರಿ. ನೀರಿನಲ್ಲಿ ಹೆಚ್ಚು ದೂರ ಹೋಗಬಾರದು. ಸಮುದ್ರ ಬಹಳ ಆಳವಾಗಿರುತ್ತದೆ. ಸ್ವಲ್ಪ ಹೊತ್ತು ನೀರಿನಲ್ಲಿ ನಿಂತು ಆನಂದಿಸೋಣ ಬನ್ನಿ...

**ಕಾರ್ತಿಕ್ :** ನಾವು ಕಣ್ಣು ಹಾಯಿಸದಷ್ಟು ದೂರಕ್ಕೂ ನೀರೇ ನೀರು ಕಾಣಿಸುತ್ತಾ ಇದೆಯಲ್ಲ, ಎಷ್ಟೊಂದು ವಿಶಾಲವಾಗಿದೆ.

**ಶಿಕ್ಷಕರು :** ಅದೋ ನೋಡಿ... ಪಕ್ಕದಲ್ಲೇ ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದ ಅಣ್ಣಾದೊರೈ, ಎಂ.ಜಿ.ರಾಮಚಂದ್ರನ್, ಜಯಲಲಿತಾ, ಕರುಣಾನಿಧಿ ಇವರುಗಳ ಸಮಾಧಿಗಳೂ ಇವೆ. ಈ ಕಡೆ ನೋಡಿ, ಕಾರ್ಮಿಕರ ಪ್ರತಿಮೆ ಎಷ್ಟು ಭವ್ಯವಾಗಿದೆ.



7th_Kannada_Reader.indd 104 24-06-2019 19:37:51

**ಸುರೇಶ್** : ಹೌದು ಸಾರ್... ಅಲ್ಲಿ ನೋಡಿ... ಅಲ್ಲಿ ಸಮಾಧಿಗಳಲ್ಲಿ ನಂದಾದೀಪ ಉರಿಯುತ್ತಲೇ ಇದೆ. ಸುತ್ತಲೂ ರಮ್ಯವಾದ ಉದ್ಯಾನ ಎಷ್ಟು ಚೆನ್ನಾಗಿದೆ.

**ಸೆಂದಿಲ್** : ಹೌದು... ಎದುರಿಗೆ ಕೆಂಪು ಬಣ್ಣದ ಸೌಧ ಕಾಣುತ್ತಿದೆಯಲ್ಲಾ, ಅದೇನು?

**ಶಿಕ್ಷಕರು** : ಅದೇ ಮದರಾಸು ವಿಶ್ವವಿದ್ಯಾನಿಲಯ. ಇದು ಭಾರತದ ಮೊದಲ ಮೂರು ವಿಶ್ವವಿದ್ಯಾನಿಲಯಗಳಲ್ಲಿ ಒಂದು. ಇದು 1857ರಲ್ಲಿ ಸ್ಥಾಪಿತವಾಯಿತು.

**ಕಾರ್ತಿಕ್** : ಇಲ್ಲಿ ರಸ್ತೆಯ ಉದ್ದಕ್ಕೂ ಅನೇಕ ಪ್ರತಿಮೆಗಳು ಇವೆಯಲ್ಲ...!

**ಶಿಕ್ಷಕರು** : ಹೌದು... ಸಮುದ್ರ ತೀರದ ಉದ್ದಕ್ಕೂ ಅಣ್ಣಾ ಸಮಾಧಿಯಿಂದ ಹಿಡಿದು ಚೆನ್ನೈ ಆಕಾಶವಾಣಿ ಕೇಂದ್ರದವರೆಗೆ ಭಾರತಿಯಾರ್, ಸುಭಾಶ್‌ಚಂದ್ರಬೋಸ್, ತಿರುವಳ್ಳುವರ್, ಅವ್ವೈಯಾರ್, ಮಹಾತ್ಮಾಗಾಂಧಿ, ಮುಂತಾದ ಮಹಾನ್ ವ್ಯಕ್ತಿಗಳ ಪ್ರತಿಮೆಗಳು ಇವೆ. ಬೀಚ್‌ರೋಡಿನಲ್ಲಿ ಗಣರಾಜ್ಯದಿನದಂದು ಪರೇಡ್ ನಡೆಯುತ್ತದೆ. ಈ ಪರೇಡನ್ನು ನೋಡುವುದೇ ನಮ್ಮ ಕಣ್ಣುಗಳಿಗೆ ಒಂದು ಹಬ್ಬ.

**ರಮೇಶ್** : ಸಾರ್... ಈ ಚೆನ್ನೈನಲ್ಲಿ ಅನೇಕ ದೇವಾಲಯಗಳಿವೆಯಂತಲ್ಲ. ಹೋಗಿ ನೋಡೋಣವೇ?

**ಶಿಕ್ಷಕರು** : ಹೌದು, ಹೌದು... ಇಲ್ಲಿ ತಿರುವಲ್ಲಿಕೇಣಿಯಲ್ಲಿ ಪಾರ್ಥಸಾರಥಿ ದೇವಸ್ಥಾನವಿದೆ. ಹೋಗೋಣ...

**ಉಮೇಶ್**: ಅಬ್ಬಾ... ಎಷ್ಟು ದೊಡ್ಡ ದೇವಾಲಯ! ಪಾರ್ಥಸಾರಥಿಯ ವಿಗ್ರಹವಂತೂ ಅದೆಷ್ಟು ಎತ್ತರವಾಗಿದೆ!

**ಶಿಕ್ಷಕರು** : ಇತ್ತ ಬನ್ನಿ, ಇಲ್ಲೇ ಇರುವ ತಮಿಳುನಾಡಿನ ಇಪ್ಪತ್ತನೇ ಶತಮಾನದ ಸುಪ್ರಸಿದ್ಧ ಮಹಾಕವಿ ಭಾರತಿಯಾರ್ ಅವರು ವಾಸಿಸಿದ ಮನೆಯನ್ನು ನೋಡೋಣ ಬನ್ನಿ.

**ಉಮೇಶ್**: ಸಾರ್... ಅವರು ಹಾಡಿದ 'ಓಡಿ ವಿಳೈಯಾಡು ಪಾಪ...' ಎಂಬ ಹಾಡು ನನಗೆ ನೆನಪಿಗೆ ಬರುತ್ತಿದೆ.

**ಶಿಕ್ಷಕರು** : ಇನ್ನೂ ಬೆಸೆಂಟ್ ನಗರದ ಅಷ್ಟಲಕ್ಷ್ಮಿ ದೇವಾಲಯ, ಮೈಲಾಪುರದ ಕಪಾಲೀಶ್ವರ ದೇವಸ್ಥಾನಗಳಿಗೂ ಹೋಗಬೇಕು. ಅವೆಲ್ಲಕ್ಕಿಂತ ಮೊದಲು ನುಂಗಂಬಾಕ್ಕಂನಲ್ಲಿರುವ 'ವಳ್ಳುವರ್ ಕೊಟ್ಟಂ'ಗೆ ಹೋಗೋಣ.

**ಕಾರ್ತಿಕ್** : ಹಾಗೆಂದರೇನು ಸಾರ್?

**ಶಿಕ್ಷಕರು** : ಅದು ತಮಿಳುನಾಡಿನ ಸುಪ್ರಸಿದ್ಧ ಕವಿ, ತತ್ವಜ್ಞಾನಿ ಹಾಗೂ ಸಂತರಾದ 'ತಿರುವಳ್ಳುವರ್' ಅವರ ನೆನಪಿಗಾಗಿ ಕಟ್ಟಿದ ಒಂದು ಸ್ಮಾರಕ ಭವನ. ಅವರ ಕೃತಿಯಾದ 'ತಿರುಕ್ಕುರಳ್'ನಲ್ಲಿರುವ 'ಮುಪ್ಪಾಲ್'ಅನ್ನು ಇಲ್ಲಿ ಮೂರು ಬಣ್ಣದ ಗ್ರಾನೈಟ್‌ಗಳಲ್ಲಿ ಕೆತ್ತಿದ್ದಾರೆ. ಇಲ್ಲಿ, ತಿರುವಳ್ಳುವರ್ ಅವರ ಪ್ರತಿಮೆಯು ಅತ್ಯಂತ ಭವ್ಯವಾಗಿದೆ.

**ನರೇಶ್** : ಸರ್... ಈಗ ಎಗ್‌ಮೋರ್‌ನಲ್ಲಿರುವ ವಸ್ತುಸಂಗ್ರಹಾಲಯವನ್ನು ಹೋಗಿ ನೋಡೋಣ.

**ಶಿಕ್ಷಕರು** : ನಡೆಯಿರಿ, ಹೋಗೋಣ...

**ಕಾರ್ತಿಕ್** : ಅಬ್ಬಾ...! ಎಷ್ಟು ದೊಡ್ಡದಾದ ಭವನ...!

**ಶಿಕ್ಷಕರು** : ಇದೋನೋಡಿ, ಇಲ್ಲಿ ಪ್ರಾಚೀನ ಶಿಲಾಯುಗದ ಜನರು ಉಪಯೋಗಿಸುತ್ತಿದ್ದ ಬೆಣಚುಕಲ್ಲು ಹಾಗೂ ಅನೇಕ ಆಯುಧಗಳನ್ನು ಸಂಗ್ರಹಿಸಿ ಇಟ್ಟಿದ್ದಾರೆ. ಅಷ್ಟೇ ಅಲ್ಲದೆ, ಅನೇಕ ಪ್ರಾಣಿಗಳ ಎಲುಬುಗಳನ್ನೂ ಇಟ್ಟಿದ್ದಾರೆ. ಪ್ರಾಚೀನ ರಾಜಮನೆತನದವರು ಉಪಯೋಗಿಸಿದ ನಾಣ್ಯಗಳು, ಬ್ರಿಟೀಷರ ಕಾಲದಲ್ಲಿ ಹೊರಡಿಸಿದ ಅಂಚೆ ಚೀಟಿಗಳನ್ನೂ ಶೇಖರಿಸಿ ಇಡಲಾಗಿದೆ. ಇಲ್ಲಿ ವಿವಿಧ ಕಂಚಿನ ವಿಗ್ರಹಗಳು ಹಾಗೂ ವಿವಿಧ ಚಿತ್ರಕಲೆಗಳ ಸಂಗ್ರಹಗಳೂ ಇವೆ. ಈ ವಸ್ತು ಸಂಗ್ರಹಾಲಯವು ಪ್ರಾಚೀನ ಇತಿಹಾಸವನ್ನು ತಿಳಿಯಲು



7th_Kannada_Reader.indd 105 24-06-2019 19:37:51

ಸಹಾಯಕವಾಗಿದೆ. ಇನ್ನು ನಾವು ಗಿಂಡಿಯಲ್ಲಿರುವ ಮಕ್ಕಳ ಉದ್ಯಾನಕ್ಕೆ ಹೋಗೋಣ(ಎಲ್ಲರೂ ಗಿಂಡಿ ಪಾರ್ಕಿಗೆ ಹೋಗುವರು).

**ಶಿಕ್ಷಕರು** : ಇಲ್ಲಿ ನೋಡಿ... ಹುಲಿ, ಸಿಂಹ, ಕರಡಿ, ಕುದುರೆ, ಅನೆ, ನವಿಲು, ಬಾತುಕೋಳಿ, ಹಂಸ ಮುಂತಾದ ಅನೇಕ ಮೃಗ ಪಕ್ಷಿಗಳು ಇವೆ. ಇವುಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಮಾಡಬಾರದು. ದೂರದಲ್ಲಿಯೇ ನಿಂತು ನೋಡಬೇಕು.

**ನರೇಶ್** : ಸಾರ್... ಎಷ್ಟು ಚೆನ್ನಾಗಿದೆ ಈ ಮಕ್ಕಳ ಉದ್ಯಾನ.

**ಶಿಕ್ಷಕರು** : ಸಂಜೆ ಆಗುತ್ತಾ ಬಂತು... ಹೊರಡಿ. ನಾಳೆ ನಾವೆಲ್ಲಾ ವಂಡಲೂರಿನಲ್ಲಿರುವ ಅತ್ಯಂತ ರಮ್ಯವಾದ ನೈಸರ್ಗಿಕ ಮೃಗಾಲಯಕ್ಕೆ ಹೋಗೋಣ.

## ಪದಗಳ ಅರ್ಥ

ಪ್ರವಾಸ–ಸಂಚಾರ; ಜ್ಞಾನ–ತಿಳುವಳಿಕೆ; ಗ್ರಂಥಾಲಯ–ಪುಸ್ತಕ ಭಂಡಾರ; ಸೌಲಭ್ಯ–ಅನುಕೂಲ; ಪ್ರಾಚೀನ–ಹಳೆಯ; ಮುಪ್ಪಾಲ್–ಧರ್ಮ, ಅರ್ಥ, ಕಾಮ ಎಂಬ ತಿರುಕ್ಕುರಳ್‌ನಲ್ಲಿರುವ ಮೂರು ಭಾಗಗಳು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಶಾಲೆಯಲ್ಲಿರುವ ಸ್ವಯಂ ಸೇವಕ ಸಂಘಟನೆಗಳು ಯಾವುವು ?
2. ಶಾಲಾ ಪ್ರವಾಸವು ಯಾರ್ಯಾರಿಗೆ ಸಂಭ್ರಮದ ವಿಷಯವಾಗಿದೆ ?
3. ಮೆರೀನಾ ಬೀಚು ಎಲ್ಲಿದೆ ?
4. ಮೆರೀನಾ ಬೀಚಿನಲ್ಲಿ ಯಾರು ಯಾರ ಸಮಾಧಿಗಳಿವೆ ?
5. ಮದರಾಸು ವಿಶ್ವವಿದ್ಯಾನಿಲಯ ಯಾವಾಗ ಸ್ಥಾಪಿತವಾಯಿತು ?
6. 'ಪರೇಡ್' ಯಾವಾಗ ನಡೆಯುತ್ತದೆ ?
7. ಸುಬ್ರಹ್ಮಣ್ಯ ಭಾರತಿಯಾರ್ ಅವರ ಸ್ಮಾರಕ ಎಲ್ಲಿದೆ ?
8. ತಿರುವಳ್ಳುವರ್ ಯಾವ ಕೃತಿಯನ್ನು ಬರೆದಿದ್ದಾರೆ?
9. ಮಕ್ಕಳ ಉದ್ಯಾನವನದಲ್ಲಿ ಯಾವ ಯಾವ ಪ್ರಾಣಿಗಳು ಇವೆ ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಶಾಲೆಯು ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಹೇಗೆ ಸಹಾಯಕವಾಗಿದೆ?
2. ಶೈಕ್ಷಣಿಕ ಪ್ರವಾಸ ಕೈಗೊಳ್ಳುವುದರಿಂದ ಆಗುವ ಪ್ರಯೋಜನಗಳೇನು ?
3. ಶಾಲಾ ಪ್ರವಾಸಕ್ಕೆ ಮಕ್ಕಳು ಹೇಗೆ ಸಿದ್ಧತೆ ನಡೆಸುತ್ತಾರೆ ?
4. ಶಾಲಾ ಪ್ರವಾಸಕ್ಕೆ ಪೋಷಕರು ಮಕ್ಕಳನ್ನು ಕಳಹಿಸುವಾಗ ಏನೇನು ಸಿದ್ಧತೆ ಮಾಡುತ್ತಾರೆ ?
5. ಚೆನ್ನೈನಲ್ಲಿರುವ ಪ್ರಮುಖ ದೇವಾಲಯಗಳು ಯಾವುವು ?
6. ಚೆನ್ನೈಯ ಮ್ಯೂಸಿಯಂ ಬಗ್ಗೆ ಟಿಪ್ಪಣಿ ಬರೆಯಿರಿ.

## ಚಟುವಟಿಕೆ

1. 'ದೇಶ ಸುತ್ತು, ಕೋಶ ಓದು' ಇದು ಒಂದು ನಾಣ್ನುಡಿ. ಇದನ್ನು ಗಾದೆ ಎಂದೂ ಕರೆಯುತ್ತಾರೆ. ಇಂತಹ ಗಾದೆ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.
2. ನೀವೂ ಶೈಕ್ಷಣಿಕ ಪ್ರವಾಸ ಕೈಗೊಂಡ ವರದಿಯನ್ನು ಬರೆಯಿರಿ.
3. ನೀವು ನೋಡಿದ ಪ್ರವಾಸಿ ತಾಣದ ಬಗ್ಗೆ ತರಗತಿಯಲ್ಲಿ ಸಂಭಾಷಿಸಿರಿ.



7th_Kannada_Reader.indd 106 24-06-2019 19:37:51

ಘಟಕ ಆರು

# ನಾಮಪದ

1. **ವಸ್ತು ವಾಚಕಗಳು :** ವಸ್ತುವಿನ ಹೆಸರು ಹೇಳುವ ಶಬ್ದಗಳೆಲ್ಲ ವಸ್ತುವಾಚಕ ನಾಮಗಳು. ಇವುಗಳಲ್ಲಿ ಮೂರು ವಿಧ. ರೂಢ ನಾಮ, ಅಂಕಿತ ನಾಮ ಹಾಗೂ ಅನ್ವರ್ಥನಾಮ. ಇವುಗಳನ್ನು ಈಗಾಗಲೇ ನಾವು ನೋಡಿದ್ದೇವೆ.

2. **ಗುಣವಾಚಕಗಳು :** ವಸ್ತುಗಳು ಅಥವಾ ವ್ಯಕ್ತಿಯ ಗುಣವನ್ನು ಹೇಳುವ ಶಬ್ದಗಳು ಗುಣವಾಚಕಗಳು. ಉದಾಹರಣೆಗೆ ಒಳ್ಳೆಯ ಹುಡುಗಿ. ಇಲ್ಲಿ ಒಳ್ಳೆಯ ಎಂಬುದು ವಿಶೇಷವಾಗಿರುವ ಗುಣವಾಚಕ. ಅಂತೆಯೇ, ಕರಿಯ, ಕೆಂಪುಕೋತಿ ಇತ್ಯಾದಿ.

3. **ಸಂಖ್ಯಾವಾಚಗಳು :** ಸಂಖ್ಯೆಗಳನ್ನು ತಿಳಿಸುವ ಶಬ್ದಗಳೇ ಸಂಖ್ಯಾವಾಚಕಗಳು. ಉದಾಹರಣೆಗೆ ಒಂದು, ಹತ್ತು ನೂರು. ಒಬ್ಬ, ಐವರು. ಇತ್ಯಾದಿ.

4. **ಪರಿಮಾಣ(ಪ್ರಮಾಣ) ವಾಚಕಗಳು :** ವಸ್ತುಗಳ ಸಾಮಾನ್ಯ ಅಳತೆ ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು ಪರಿಮಾಣ ವಾಚಕಗಳೆಂದು ಹೇಳುವರು. ಉದಾಹರಣೆಗೆ, ಹಲವು, ಕೆಲವು, ಅಷ್ಟು ಇಷ್ಟು ಇತ್ಯಾದಿ.

5. **ದಿಗ್ವಾಚಕಗಳು :** ದಿಕ್ಕುಗಳ ಹೆಸರುಗಳನ್ನು ಸೂಚಿಸುವ ಶಬ್ದಗಳನ್ನೆಲ್ಲ ದಿಗ್ವಾಚಕ ನಾಮಗಳೆಂದು ಕರೆಯುವರು. ಉದಾಹರಣೆಗೆ ಉತ್ತರ, ದಕ್ಷಿಣ, ಮೂಡಣ, ತೆಂಕಣ, ಕೆಳಗೆ, ಮೇಲೆ, ಅತ್ತ, ಇತ್ತ, ಅಲ್ಲಿ, ಎಲ್ಲಿ ಇತ್ಯಾದಿ.

6. **ಪ್ರಕಾರವಾಚಕಗಳು :** ವ್ಯಕ್ತಿ, ವಸ್ತು ಮತ್ತು ಸ್ಥಳಗಳ ಪ್ರಕಾರವನ್ನು ಎಂದರೆ ಅವುಗಳ ರೀತಿಯನ್ನು ತಿಳಿಸುವ ಪದಗಳನ್ನು ಪ್ರಕಾರ ವಾಚಕಗಳು ಎನ್ನಲಾಗುವುದು. ಉದಾಹರಣೆಗೆ, ಎಂತಹದ್ದು, ಇಂತಹವು, ಎಂತಹವಳು, ಅಂತಹವನು ಇತ್ಯಾದಿ.

7. **ಭಾವವಾಚಕಗಳು :** ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳೇ ಭಾವವಾಚಕಗಳು. ಉದಾಹರಣೆಗೆ, ನೋಟ, ಬಿಳುಪು ಇತ್ಯಾದಿ.



7th_Kannada_Reader.indd 107 24-06-2019 19:37:51

## ಸರ್ವನಾಮಗಳು

ನಾಮಪದಗಳ ಬದಲಾಗಿ ಉಪಯೋಗಿಸುವ ಪದಗಳೇ ಸರ್ವನಾಮಗಳು. ಒಂದು ನಾಮಪದದ ಸ್ಥಾನದಲ್ಲಿ ಬರುವ ಶಬ್ದಕ್ಕೂ ಒಂದು ವಸ್ತುವಿನ ಅಥವಾ ವಿಷಯದ ಹೆಸರು ಹೇಳದೆಯೇ ಅದನ್ನು ಸೂಚಿಸುವ ಶಬ್ದಕ್ಕೂ ಸರ್ವನಾಮವೆಂದು ಹೆಸರು. ಇದೂ ಸಹ ನಾಮಪದದ ಒಂದು ಬಗೆ. ಉದಾಹರಣೆಗೆ, ರಾಮಣ್ಣ ಪೇಟೆಯಿಂದ ಮನೆಗೆ ಬಂದನು. ಅವನು ತುಂಬ ಬಳಲಿದ್ದಂತೆ ತೋರುತ್ತಿತ್ತು. ಹೀಗೆ ನಾಮಪದಗಳಿಗೆ ಬದಲಾಗಿ ಅವನು, ಅವಳು, ನೀನು, ನೀವು, ಅದು, ಅವು, ನಾನು ಮುಂತಾದ ಶಬ್ದಗಳನ್ನು ಬಳಸುತ್ತೇವೆ.

ಸರ್ವನಾಮಗಳಲ್ಲಿ ಮೂರು ಬಗೆಗಳು ಇವೆ. ಅವುಗಳು,

### ಪುರುಷವಾಚಕ ಸರ್ವನಾಮಗಳು

**ಪ್ರಥಮ ಪುರುಷ:**

ಪುಲ್ಲಿಂಗ : ಅವನು, ಅವರು.

ಸ್ತ್ರೀಲಿಂಗ : ಅವಳು, ಅವರು.

ನಪುಂಸಕ ಲಿಂಗ : ಅದು, ಅವು

**ಮಧ್ಯಮ ಪುರುಷ:**

ನೀನು, ನೀವು.

**ಉತ್ತಮ ಪುರುಷ:**

ನಾನು, ನಾವು.

**ಪ್ರಶ್ನಾರ್ಥಕ ಸರ್ವನಾಮಗಳು:**

ಯಾವುದು, ಏನು, ಯಾವಾಗ, ಯಾವನು, ಏತಕ್ಕೆ, ಹೇಗೆ ಇತ್ಯಾದಿಗಳು.

**ಆತ್ಮಾರ್ಥಕ ಸರ್ವನಾಮಗಳು:**

ತಾನು, ತಾವು, ತನ್ನ ಇತ್ಯಾದಿ.



7th_Kannada_Reader.indd 108 24-06-2019 19:37:51

ಘಟಕ ಏಳು

# 7. ನಾಗರಿಕತೆ, ವೃತ್ತಿ, ವಾಣಿಜ್ಯ



## ಕಲಿಕಾ ಉದ್ದೇಶಗಳು

- ಕನ್ನಡಿಗರ ಪ್ರಾಚೀನ ವಾಣಿಜ್ಯದ ಬಗ್ಗೆ ತಿಳಿದುಕೊಳ್ಳುವುದು.
- ಹಲವು ಬಗೆಯ ಕಸುಬುಗಳ ಬಗ್ಗೆ ತಿಳಿದುಕೊಳ್ಳುವುದು.
- ವಾಣಿಜ್ಯದ ಬೆಳವಣಿಗೆಯ ಹಂತಗಳ ಬಗ್ಗೆ ತಿಳಿಯುವುದು.
- ಕಸುಬಿನ ಮೂಲಕ ಕಲಿತುಕೊಳ್ಳುವ ಬೆಳವಣಿಗೆಯ ಬಗ್ಗೆ ತಿಳಿದುಕೊಳ್ಳುವುದು.
- ವ್ಯಾಕರಣದಲ್ಲಿ ಕ್ರಿಯಾಪದದ ಬಗ್ಗೆ ತಿಳಿದುಕೊಳ್ಳುವುದು.



7th_Kannada_Reader.indd 109 24-06-2019 19:37:53

ಘಟಕ ಏಳು

# 7. ನಾಗರಿಕತೆ, ವೃತ್ತಿ, ವಾಣಿಜ್ಯ



| | | | |
|---|---|---|---|
| ಕಾವ್ಯ ಕಣಜ | : | ಕುರುಡು ಕಾಂಚಾಣ | –ದ.ರಾ.ಬೇಂದ್ರೆ |
| ಪೂರಕ ಪದ್ಯ | : | ಮಂಕುತಿಮ್ಮನ ಕಗ್ಗ | –ಡಿ.ವಿ.ಜಿ. |
| ಗದ್ಯ ವಿಹಾರ | : | ಬದುಕಿಗೊಂದು ದಾರಿ | – ಎಚ್.ಎಂ.ಪರಮೇಶ್ವರಯ್ಯ |
| ಉಪಪಠ್ಯ | : | ಆದರ್ಶ ಆಡಳಿತಗಾರ ಕೆಂಪೇಗೌಡ | – ದೇ.ಜ.ಗೌ. |
| ವ್ಯಾಕರಣ | : | ಕ್ರಿಯಾಪದ | |



7th_Kannada_Reader.indd 110 24-06-2019 19:37:54

ಕಾವ್ಯ ಕಣಜ

ಘಟಕ ವಿಳು

# ಕುರುಡು ಕಾಂಚಾಣ

–ದ.ರಾ.ಬೇಂದ್ರೆ

## ಪ್ರವೇಶ

ಲೋಕದಲ್ಲಿ ದುರ್ಬಲ ವರ್ಗದವರ ಮೇಲೆ ಬಲಾಢ್ಯರ ದಬ್ಬಾಳಿಕೆಯು ನಿರಂತರವಾಗಿ ನಡೆಯುತ್ತಾ ಬಂದಿದೆ. ಇದರ ಮೂಲವು ಆರ್ಥಿಕ ಅಸಮಾನತೆಯೆಂಬುದು ನಿಡುಗಾಲದ ಸತ್ಯ. ಕನ್ನಡ ನವೋದಯ ಸಾಹಿತ್ಯದಲ್ಲಿ ಸಾಮಾಜಿಕ ಕಳಕಳಿ ಒಂದು ಪ್ರಮುಖ ನೆಲೆ. ಇದರ ಅಭಿವ್ಯಕ್ತಿಯನ್ನು ನಾವು ಈ ಪದ್ಯದಲ್ಲಿ ಕಾಣಬಹುದು. ವ್ಯಾಪಾರಕ್ಕಾಗಿ ಬಂದು ಈ ದೇಶವನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ಶೋಷಿಸಿದ ಬ್ರಿಟೀಷ್ ಸಾಮ್ರಾಜ್ಯದ ವಿರುದ್ಧವಾದ ಬಂಡಾಯದ ಧ್ವನಿಯನ್ನು ಸಹ ಇಲ್ಲಿ ನಾವು ಕಾಣಬಹುದು.






7th_Kannada_Reader.indd 111 24-06-2019 19:37:54

ಕುರುಡು ಕಾಂಚಾಣ ಕುಣಿಯುತಲಿತ್ತು
ಕಾಲಿಗೆ ಬಿದ್ದವರ ತುಳಿಯುತಲಿತ್ತೋ
ಕುರುಡು ಕಾಂಚಾಣ...

ಬಾಣಂತಿಯೆಲುಬ ಸಾ–
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜಿ ಕಾಲಾಗ ಇತ್ತೋ...

ಸಣ್ಣ ಕಂದಮ್ಮಗಳ
ಕಣ್ಣೀನ ಕವಡೀಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ...

ಬಡವರ ಒಡಲಿನ
ಬಡಬಾನಲದಲ್ಲಿ
ಸುಡುಸುಡು ಪಂಜು ಕೈಯೊಳಗಿತ್ತೋ...

ಕಂಬನಿ ಕುಡಿಯುವ
ಹುಂಬ ಬಾಯಿಲೆ ಮೈ
ದುಂಬಿದಂತುಧೊ ಉಧೊ ಎನ್ನುತಲಿತ್ತೋ...

ಕೂಳಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ...

ಗುಡಿಯೊಳಗೆ ಗಣಣ, ಮಾ
ಹಡಿಯೊಳಗೆ ತನನ, ಅಂ
ಗಡಿಯೊಳಗೆ ಝಣಣ ನುಡಿಗುಡುತಿತ್ತೋ...

ಹ್ಯಾಂಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲ್ಲಿ ಎತ್ತೋ...



7th_Kannada_Reader.indd 112 24-06-2019 19:37:54

## ಕವಿ–ಕೃತಿ ಪರಿಚಯ



ಅಂಬಿಕಾತನಯದತ್ತ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಧಾರವಾಡದ ಸಾಧನಕೇರಿಯವರು. ಧಾರವಾಡದಲ್ಲಿ ಶಾಲಾ ಶಿಕ್ಷಕರಾಗಿ ವೃತ್ತಿಜೀವನವನ್ನು ಆರಂಭಿಸಿದ ಇವರು ಸೊಲ್ಲಾಪುರದ ರಾಜಾರಾಂ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾದರು. ನಂತರ ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಕನ್ನಡ ಸಾಹಿತ್ಯ ನವೋದಯದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಇವರು ಗರಿ, ನಾದಲೀಲೆ, ಗಂಗಾವತರಣ, ಸೂರ್ಯಪಾನ, ಸಖೀಗೀತ ಮುಂತಾದ ಕವನ ಸಂಕಲನಗಳನ್ನೂ; ಸಾಯೋಆಟ ಎನ್ನುವ ನಾಟಕವನ್ನೂ, ನಿರಾಭರಣ ಸುಂದರಿ ಎನ್ನುವ ಕಥಾಸಂಕಲನವನ್ನೂ, ಸಾಹಿತ್ಯದ ವಿರಾಟ್ ಸ್ವರೂಪ, ಸಾಹಿತ್ಯ ಮತ್ತು ವಿಮರ್ಶೆ ಎನ್ನುವ ವಿಮರ್ಶಾ ಗ್ರಂಥಗಳನ್ನೂ ರಚಿಸಿ ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಇವರ 'ಅರಳು–ಮರಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. 'ನಾಕುತಂತಿ' ಎಂಬ ಕವನ ಸಂಕಲನಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿಯೂ ದೊರೆತಿದೆ. ಇವರ 'ನಾದಲೀಲೆ' ಎನ್ನುವ ಕವನ ಸಂಕಲನದಿಂದ ಕುರುಡು ಕಾಂಚಾಣ ಎನ್ನುವ ಈ ಕವನವನ್ನು ಆರಿಸಲಾಗಿದೆ.

ಕೇಂದ್ರ ಸರ್ಕಾರದ ಪದ್ಮಶ್ರೀ ಪುರಸ್ಕಾರಕ್ಕೂ ಭಾಜನರಾದ ಇವರು ಶಿವಮೊಗ್ಗದಲ್ಲಿ 1943ರಲ್ಲಿ ನಡೆದ ಇಪ್ಪತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಉತ್ತರ ಕರ್ನಾಟಕದ ಆಡುಭಾಷೆಯನ್ನು ಜಾನಪದ ಲಯ ಗೇಯಗಳೊಂದಿಗೆ ಸಮರ್ಥವಾಗಿ ಬಳಸಿ ಗಾರುಡಿಗ ಕವಿಯೆಂದೇ ಖ್ಯಾತರಾಗಿದ್ದಾರೆ. ಮೈಸೂರು ವಿಶ್ವವಿದ್ಯಾಲಯ ಹಾಗೂ ಕಾಶೀ ವಿದ್ಯಾಪೀಠಗಳಿಂದ ಗೌರವ ಡಾಕ್ಟರೇಟ್ ಮುಂತಾದ ಅನೇಕ ಗೌರವ ಹಾಗೂ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಬೇಂದ್ರೆಯವರು 26.10.1981ರಲ್ಲಿ ನಿಧನರಾದರು.

## ಕವನದ ಆಶಯ

ಹಣವಂತರಿಂದ ನಡೆಯುತ್ತಿರುವ ಬಡಜನರ ಶೋಷಣೆಯ ವಿರುದ್ಧವಾಗಿ ದನಿಯೆತ್ತುವುದು ಈ ಕವನದ ಆಶಯ. ಕವಿಯು ಈ ಉದ್ದೇಶ ಸಾಧನೆಗಾಗಿ ಒಂದು ಶಕ್ತಿಪೂಜಾ ನರ್ತನವನ್ನು ಪ್ರತಿಮೆಯನ್ನಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ಭಾವಾವೇಶದಿಂದ ನರ್ತಿಸುತ್ತಿರುವ ಪಾತ್ರಿಯೊಬ್ಬನು ಶೋಷಣೆಯ ಸಂಕೇತಗಳಾದ ಕಿರುಗೆಜ್ಜೆ, ಪಂಜು, ಭಂಡಾರ ಮುಂತಾದವುಗಳನ್ನು ಧರಿಸಿಕೊಂಡು ಗುಡಿಗಳನ್ನು, ಮಹಡಿಗಳನ್ನು, ಅಂಗಡಿಗಳನ್ನು, ತನ್ನ ಭೂತ ನರ್ತನದಿಂದ ಹೇಗೆ ಹೇಗೋ ಮಂಗಾಟ ನಡೆಸಿ, ಬಿದ್ದು ಎದ್ದು ನಾಶ ಮಾಡುತ್ತಾನೆ. ಇಡೀ ಕವನವು ಪ್ರತಿಮೆಗಳ ಮೂಲಕ ಮಾತನಾಡುತ್ತದೆ. ಕಾಣದ ಕಿರುಗೆಜ್ಜೆ, ತಣ್ಣನ್ನ ಜೋಮಾಲೆ, ಕುರುಡು ಕಾಂಚಾಣ ಮುಂತಾದ ಭಾವಾರ್ಥ ಸಾಂದ್ರ ಪ್ರಯೋಗಗಳು ವ್ಯಾಪಕವಾದ ಅರ್ಥ ವ್ಯಂಜಕಗಳಾಗಿವೆ. ಈ ದಬ್ಬಾಳಿಕೆಯ ಒಡಲಿನಲ್ಲೇ ಅದರ ವಿನಾಶವೂ ಅಡಗಿದೆ.

## ಪದಗಳ ಅರ್ಥ

ಕುರುಡು–ಕಣ್ಣಿಲ್ಲದ; ಕಾಂಚಾಣ–ಕಾಂಚನ, ಹಣ; ಸಾಬಾಣ–ಸಾಬೂನು, ಸೋಪು, ತೆಳು ಬಿಳುಪು ಬಣ್ಣ; ಜೋಮಾಲೆ–ಉದ್ದವಾದ ಸರ; ಬಡಬಾನಲ–ಸಮುದ್ರ ಗರ್ಭದಲ್ಲಿರುವ ಬೆಂಕಿ; ಉಧೋಉಧೋ–ಭಾವಾವೇಶದಿಂದ ದೇವರಿಗೆ ಜೈಕಾರ ಹಾಕುವ ಒಂದು ಪದ; ಕೂಳಿಕುಂಬಳಿಯವರು–ಬಡವರು; ಕೂಲಿ–ನಾಲಿ ಮಾಡಿ ಜೀವಿಸುವವರು; ಭಂಡಾರ–ಹಣೆಗೆ ಹಚ್ಚಿಕೊಳ್ಳುವ ಅರಿಷಿಣಕುಂಕುಮದ ಪುಡಿ.



7th_Kannada_Reader.indd 113 24-06-2019 19:37:54

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕುರುಡು ಕಾಂಚಾಣವು ಯಾರನ್ನು ತುಳಿಯುತ್ತಲಿತ್ತು ?
2. ಕುರುಡು ಕಾಂಚಾಣದ ಕಿರುಗೆಜ್ಜೆಯ ಬಣ್ಣ ಯಾವುದಾಗಿತ್ತು ?
3. ಕುರುಡು ಕಾಂಚಾಣದ ಜೋಮಾಲೆ ಯಾವುದರದ್ದಾಗಿತ್ತು ?
4. ಕುರುಡು ಕಾಂಚಾಣದ ಕೈಯಲ್ಲಿದ್ದ ಸುಡುಸುಡು ಪಂಜು ಯಾವುದಾಗಿತ್ತು?
5. ಕುರುಡು ಕಾಂಚಾಣವು ಉಧೋಉಧೋ ಎನ್ನುತ್ತಾ ಏನನ್ನು ಕುಡಿಯುತ್ತಲಿತ್ತು?
6. ಕುರುಡು ಕಾಂಚಾಣದ ಹಣೆಯ ಭಂಡಾರವು ಯಾವುದರದ್ದಾಗಿತ್ತು ?
7. ಕುರುಡು ಕಾಂಚಾಣದ ತಾಂಡವ ಎಲ್ಲೆಲ್ಲಿ ನಡೆಯುತ್ತಲಿತ್ತು ?
8. ಅಂಗಾತ ಬಿದ್ದಾಗ ಕುರುಡು ಕಾಂಚಾಣವು ಏನು ಮಾಡಿತು ?
9. ಜ್ಞಾನಪೀಠ ಪ್ರಶಸ್ತಿ ಪಡೆದ ಬೇಂದ್ರೆಯವರ ಕವನ ಸಂಕಲನ ಯಾವುದು?
10. ಕುರುಡು ಕಾಂಚಾಣವನ್ನು ಯಾವ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಬಾಣಂತಿ ಮತ್ತು ಮಕ್ಕಳ ಮೇಲೆ ಕಾಂಚಾಣದ ದೌರ್ಜನ್ಯವನ್ನು ಕವಿ ಹೇಗೆ ಚಿತ್ರಿಸಿದ್ದಾರೆ?
2. ಬಡವರ ಒಡಲಿನ ಬೆಂಕಿಯು ಪ್ರಕಟವಾಗುವ ರೀತಿಯನ್ನು ವಿವರಿಸಿ.
3. ಕಾಂಚಾಣವು ಸಂಗ್ರಹಗೊಂಡು ಅಟ್ಟಹಾಸ ನಡೆಸುವ ಸ್ಥಳಗಳಾವುವು?
4. ಕಾಂಚಾಣದ ನರ್ತನವು ಹೇಗೆ ಕೊನೆಗಾಣುತ್ತದೆ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಕುರುಡು ಕಾಂಚಾಣದ ಭೀಕರ ನರ್ತನವನ್ನು ಕವಿಯು ಹೇಗೆ ಚಿತ್ರಿಸಿದ್ದಾರೆ?
2. ಹಣದ ದಬ್ಬಾಳಿಕೆಗೆ ಗುರಿಯಾಗುವವರು ಯಾರು ಯಾರು?

## ಭಾಷಾಭ್ಯಾಸ

1. **ಈ ಕೆಳಗೆ ಕೊಟ್ಟಿರುವ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ**

   ಕಾಂಚಾಣ, ಒಡಲು, ಕಂಬನಿ, ಮಂಗಾಟ, ಎಲುಬು.

2. **ಈ ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**

   ಸಣ್ಣ, ತಣ್ಣನೆ, ಬಡವ, ಬಿಳುಪು, ಸಣ್ಣ

3. **ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

   ಕಾಂಚಾಣ, ಕುಣಿ, ಅಂಗಾತ, ಭಂಡಾರ, ಧೂಳು, ಗುಡಿ.

4. **ಈ ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**

   ಕೊರಳೊಳಗಿತ್ತೋ, ಮೈದುಂಬಿ, ಹಣೆಯೊಳಗೆ, ನುಡಿಗೊಡು, ಮೈದೊಗಲು, ಬಡಬಾನಲ.

5. **ಕುರುಡು ಕಾಂಚಾಣ ಕವನದಲ್ಲಿ ಬಳಸಿರುವ ಆಡುನುಡಿಗಳನ್ನು ಆರಿಸಿ ಉದಾಹರಣೆಯಂತೆ ಬರೆಯಿರಿ.**

   ಉದಾಹರಣೆ : ಕಾಲಾಗ–ಕಾಲಿನಲ್ಲಿ.

6. **ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1. ಕಾಂಚಾಣ | ಎ. ಬಡಬಾನಲ |
| 2. ಕುರುಡು | ಬಿ. ನಾದಲೀಲೆ |
| 3. ಕಣ್ಣಿನ ಕವಡೀಯ | ಸಿ. ಹಣ |
| 4. ಬಡವರ ಒಡಲು | ಡಿ. ಉಧೋಉಧೋ |
| 5. ಅಂಬಿಕಾತನಯದತ್ತ | ಇ. ತಣ್ಣನ್ನ ಜೋಮಾಲೆ |
| | ಎಫ್. ಕಣ್ಣಿಲ್ಲದ |

## ಚಟುವಟಿಕೆ

1. ಈ ಪದ್ಯವನ್ನು ಹಾಡಿಕೊಂಡು ಅಭಿನಯಿಸಿ.



7th_Kannada_Reader.indd 114 24-06-2019 19:37:54

ಪೂರಕ ಪದ್ಯ


ಘಟಕ ವಿಳು

# ಮಂಕುತಿಮ್ಮನ ಕಗ್ಗ

– ಡಿ.ವಿ.ಜಿ.

**ಪ್ರವೇಶ**

ಜಗತ್ತು ಎಂಬುದು ಸೃಷ್ಟಿಕರ್ತನ ಗುಡಿಯಾಗಿದೆ. ಈ ಜಗತ್ತಿನ ಜನರೆಲ್ಲರೂ ಗುಡಿಯಲ್ಲಿನ ಕೆಲಸದಾಳುಗಳು. ದೇವನೇ ಯಜಮಾನ. ಆ ದೇವನ ಮೆಚ್ಚುಗೆಯನ್ನು ಸಕಲ ಮಾನವರೂ ಪಡೆಯಲೇ ಬೇಕು. ಮಾನವನು, ಉತ್ತಮನಾಗಿ ಸದ್ಧರ್ಮ ನಿರತನಾದರೆ ದೇವನ ಒಲುಮೆಯನ್ನು ಸಂಪಾದಿಸುವನು. ಉತ್ತಮನಾಗಿ ಬಾಳಬೇಕಾದರೆ ಮಾನವನು ಹೇಗಿರಬೇಕೆಂಬುದನ್ನು ಕವಿಯು ಕೆಳಗಿನ ಸಾಲುಗಳಲ್ಲಿ ಪ್ರತಿಪಾದಿಸುತ್ತಾರೆ.






7th_Kannada_Reader.indd 115 24-06-2019 19:37:54

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು – ಮಂಕುತಿಮ್ಮ ||1||

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು
ಪದ ಕುಸಿಯೆ ನೆಲವಿಹುದು – ಮಂಕುತಿಮ್ಮ ||2||

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು
ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ
ಜಸವು ಜನಜೀವನಕೆ – ಮಂಕುತಿಮ್ಮ |3||

ಹೆಸರು ಹೆಸರೆಂದು ನೀಂ ಬಸವಳಿವುದೇಕಯ್ಯ
ಕಸದೊಳಗೆ ಕಸವಾಗಿ ಹೋಹನೆಲೆ ನೀನು ?
ಮುಸುಕಲಿ ಧರೆಯ ಮರೆವೆನ್ನನ್, ಎನ್ನುತ ಬೇಡು
ಮಿಸುಕದಿರು ಮಣ್ಣಿನಲಿ – ಮಂಕುತಿಮ್ಮ ||4||

ಬೇಕುಬೇಕದು ಬೇಕುಬೇಕಿದೆನಗಿನ್ನೊಂದು
ಬೇಕೆನುತ ಬೊಬ್ಬಿಡುತಲಿಹ ಘಟವನಿದನು
ಏಕೆಂದು ರಚಿಸಿದನೋ ಬೊಮ್ಮನೀ ಬೇಕು ಜಪವ
ಸಾಕೆನಿಪುದೆಂದಿಗೆಲೋ – ಮಂಕುತಿಮ್ಮ ||5||



7th_Kannada_Reader.indd 116 24-06-2019 19:37:54

## ಕವಿ ಕಾವ್ಯ ಪರಿಚಯ



ಶ್ರೀ. ಡಿ.ವಿ.ಗುಂಡಪ್ಪನರು ಕನ್ನಡ ಸಾರಸ್ವತ ಲೋಕದಲ್ಲಿ ಡಿ.ವಿ.ಜಿ. ಎಂದೇ ಖ್ಯಾತರು. ಕನ್ನಡ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಕನ್ನಡದ ಪ್ರಸಿದ್ಧ ಸಾಹಿತಿಗಳಾದ ಇವರು 'ಗೋಖಲೆ ಸಾರ್ವಜನಿಕ ಸಂಸ್ಥೆ'ಯನ್ನು ಕಟ್ಟಿ, ಕನ್ನಡ ನಾಡು ನುಡಿಗಳ ಸೇವೆಯಲ್ಲಿ ತಮ್ಮ ಜೀವನವನ್ನು ಸವೆಸಿದರು. 'ಮಂಕುತಿಮ್ಮನ ಕಗ್ಗ' ಎಂಬುದು ಇವರ ಪ್ರಖ್ಯಾತ ಕೃತಿ.

## ಪದಗಳ ಅರ್ಥ

ವಿಧಿ–ಹಣೆಬರಹ, ಅದೃಷ್ಟ; ದೀನ–ಬಡವ; ಮಸಣ–ಸ್ಮಶಾನ; ಮೇಳ–ಕೂಡುವಿಕೆ; ಜಸ–ಯಶ; ಬಸವಳಿವುದು–ಶ್ರಮಪಡು, ಆಯಾಸಪಡು; ಧರೆ–ಭೂಮಿ, ಬುವಿ; ಮಿಸುಕು–ಅಲುಗು, ಚಲಿಸು; ಬೇಕು–ಆಸೆ, ಬಯಕೆ; ಬೊಮ್ಮ–ಬ್ರಹ್ಮ.


## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. 'ಎಲ್ಲರೊಳಗೊಂದಾಗು' ಎಂಬ ಮಾತನ್ನು ಕವಿಯು ಹೇಗೆ ವಿವರಿಸುತ್ತಾರೆ?
2. 'ಬದುಕು ಜಟಕಾ ಬಂಡಿ, ವಿಧಿ ಅದರ ಸಾಹೇಬ' ಎಂಬುದನ್ನು ಅರಿತು ಬಾಳಿನಲ್ಲಿ ಹೇಗೆ ಸಾಗಬೇಕು?
3. ಜೀವನದ ಯಶಸ್ಸಿನ ಗುಟ್ಟೇನು ?
4. ಹೆಸರಿಗೆ ಆಸೆ ಪಡದೆ ಬದುಕೆಂಬ ತತ್ವವನ್ನು ಕವಿಯು ಹೇಗೆ ಪ್ರತಿಪಾದಿಸುತ್ತಾರೆ ?
5. ಮನುಷ್ಯನ ಆಸೆಗಳಿಗೆ ಕೊನೆಯಿಲ್ಲವೆಂಬುದನ್ನು ಕವಿಯು ಹೇಗೆ ವಿಮರ್ಶಿಸಿದ್ದಾರೆ ?

## ಚಟುವಟಿಕೆ

1. ಮಂಕುತಿಮ್ಮ ಕಗ್ಗ ಕೃತಿಯನ್ನು ಸಂಗ್ರಹಿಸಿ, ಅದರಲ್ಲಿರುವ ಇತರ ಪದ್ಯಗಳನ್ನೂ ಓದಿರಿ.









7th_Kannada_Reader.indd 117 24-06-2019 19:37:55

ಘಟಕ ವಿಳು

# ಬದುಕಿಗೊಂದು ದಾರಿ

– ಎಚ್.ಎಂ.ಪರಮೇಶ್ವರಯ್ಯ

## ಪ್ರವೇಶ

ಜಗತ್ತಿನ ಸಕಲ ಜೀವಿಗಳಿಗೂ ಗಾಳಿ ಬೆಳಕು ನೀರು ಹೇಗೆ ಅವಶ್ಯಕವೋ ಅದಕ್ಕಿಂತಲೂ ಹೆಚ್ಚು ಅವಶ್ಯಕ ಉದ್ಯೋಗ. 'ಉದ್ಯೋಗಂ ಪುರುಷ ಲಕ್ಷಣಂ' ಎನ್ನುವ ಮಾತಿನಂತೆ ಬದುಕಿಗೆ ಉದ್ಯೋಗ ಮುಖ್ಯ. ಊರು ಬಿಟ್ಟು ನಗರದತ್ತ ಕೆಲಸವನ್ನು ಅರಸುತ್ತಾ ಸಾಗುವ ಇಂದಿನ ಯುವ ಜನಾಂಗಕ್ಕೆ ವ್ಯವಸಾಯವೂ ಒಂದು ಕಸುಬು. ಅದರಲ್ಲಿ ಸಾಧಿಸಿ ತೋರಿಸು ಎನ್ನುವ ನಿಟ್ಟಿನಲ್ಲಿ ಈ ಕಥೆಯು ಜೀವನಕ್ಕೊಂದು ಉತ್ತಮ ನೀತಿಪಾಠವಾಗಿದೆ.





7th_Kannada_Reader.indd 118 24-06-2019 19:37:55

ಆಲೂರು ಬಯಲುಸೀಮೆಯ ಒಂದು ಊರು. ಸುತ್ತ ಹತ್ತೂ ಹಳ್ಳಿಗೆ ಹೆಸರಾದುದು. ಊರಿನ ಸುತ್ತಮುತ್ತ ಹತ್ತಾರು ತೆಂಗಿನ ತೋಟಗಳಿದ್ದವು. ಕಬ್ಬು ಮತ್ತು ಭತ್ತದ ಗದ್ದೆಗಳು ಊರನ್ನು ಸುತ್ತುವರೆದಿದ್ದವು. ನಾಲ್ಕಾರು ಕೆಂಪು ಹೆಂಚಿನ ಮನೆಗಳು ಊರಿಗೆ ಅಲಂಕಾರವಾಗಿದ್ದವು. ಶಿವಣ್ಣ ವಿದ್ಯಾವಂತ ಯುವಕ. ಬಿ.ಎ., ಪದವೀಧರ. ಆದರೂ ಅವನು ಸರ್ಕಾರಿ ನೌಕರಿಗೆ ಸೇರ ಬಯಸಲಿಲ್ಲ. ಪರತಂತ್ರ ಬದುಕು ಅವನಿಗೆ ಎಳ್ಳಷ್ಟೂ ಇಷ್ಟವಿಲ್ಲ. ಬೆವರು ಸುರಿಸಿ ದುಡಿದು ಬದುಕಬೇಕೆಂಬ ಛಲ ಅವನದು. 'ಭಾರತ ಹಳ್ಳಿಗಳ ದೇಶ'. ಹಳ್ಳಿಗಳಲ್ಲಿ ಬಡತನ ತಾಂಡವವಾಡುತ್ತಿದೆ. ಹಳ್ಳಿಗಳ ಉದ್ಧಾರವಾಗದೆ ದೇಶದ ಪ್ರಗತಿ ಸಾಧ್ಯವಿಲ್ಲ. ವಿದ್ಯಾವಂತ ಯುವಕರು ಹಳ್ಳಿಗಳಿಗೆ ಹಿಂದಿರುಗಿ ಅವುಗಳ ಸರ್ವಾಂಗೀಣ ಪ್ರಗತಿಗೆ ಶ್ರಮಿಸಬೇಕೆಂಬುದು ಗಾಂಧೀಜಿಯವರ ಬಯಕೆಯಾಗಿತ್ತು. ಹಳ್ಳಿಯ ಪ್ರತಿಯೊಬ್ಬ ರೈತನೂ ವ್ಯವಸಾಯದ ಜೊತೆಗೆ ಒಂದು ಉಪಕಸುಬನ್ನೂ ರೂಢಿಸಿಕೊಳ್ಳಬೇಕು. 'ಉಪಕಸುಬು' ಬದುಕಿಗೊಂದು ಊರುಗೋಲು ಎಂದು ಎಲ್ಲಿಯೋ ಓದಿದ್ದ ನೆನಪು. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ನುಡಿ ಅವನ ಆದರ್ಶವಾಗಿತ್ತು. ಓದು ಮುಗಿಸುವ ಹೊತ್ತಿಗೆ ಅವನ ತಂದೆ ತೀರಿಕೊಂಡಿದ್ದರು. ಮನೆಯ ಎಲ್ಲ ಜವಾಬ್ದಾರಿ ಶಿವಣ್ಣನ ಹೆಗಲ ಮೇಲೆ ಬಿತ್ತು. ಶಿವಣ್ಣ ಹೆದರಲಿಲ್ಲ. 'ಕೈ ಕೆಸರಾದರೆ ಬಾಯಿ ಮೊಸರು' ಎಂದು ಅವನು ನಂಬಿದ್ದ. ತಾನೇ ಸ್ವತಃ ವ್ಯವಸಾಯ ಮಾಡಲು ತೊಡಗಿದ. ಮೊದಲ ವರ್ಷವೇ ಅವನಿಗೆ ಒಳ್ಳೆಯ ಫಸಲು ಕೈಗೆ ಬಂತು ಕಡಲೆಕಾಯಿ, ಹತ್ತಿ, ಸೂರ್ಯಕಾಂತಿ ಮೊದಲಾದ ವಾಣಿಜ್ಯ ಬೆಳೆಗಳನ್ನು ಬೆಳೆದು ಮಾರಿದ. ಇದರಿಂದ ಆರು ಸಾವಿರ ರೂಪಾಯಿಗಳಷ್ಟು ಹಣ ಅವನಿಗೆ ಸಿಕ್ಕಿತು. ಬೆಳೆಯಿಂದ ಬಂದ ಹಣದಿಂದ ಒಂದು ಜೊತೆ ಎತ್ತು ಕೊಂಡುಕೊಂಡ. ಬೆವರು ಸುರಿಸಿ ದುಡಿಯುವಂತಾದ. ಒಂದೆರಡು ವರ್ಷಗಳಲ್ಲೇ ಶಿವಣ್ಣ ತನ್ನ ತಂದೆ ಮಾಡಿದ್ದ ಸಾಲವನ್ನೆಲ್ಲ ತೀರಿಸಿದ. ತಾನೊಬ್ಬ ಪ್ರಗತಿಪರ ರೈತನಾಗಬೇಕೆಂಬ ಆಸೆ ಅವನದು. ಹೊಸ ಹೊಸ ಬೇಸಾಯ ಪದ್ಧತಿಗಳನ್ನು ತಿಳಿಯುವ ಕುತೂಹಲ. ಕೃಷಿ ಅಧಿಕಾರಿಗಳನ್ನು ಸಂಪರ್ಕಿಸಿದ. ಅವರು ನೀಡಿದ ಸಲಹೆ ಸೂಚನೆಗಳನ್ನು ಅನುಸರಿಸಿ ವ್ಯವಸಾಯ ಮಾಡಿದ. ಒಂದೆರಡು ವರ್ಷಗಳಲ್ಲೇ ಶಿವಣ್ಣ ಅನುಭವೀ ವ್ಯವಸಾಯಗಾರನೆನಿಸಿಕೊಂಡ. ತಮ್ಮ ಊರಿನ ಹಿರಿಯ ರೈತರಿಗಿಂತ ಹೆಚ್ಚು ಬೆಳೆ ತೆಗೆದ. ಹಳ್ಳಿಯವರು ಎಕರೆಗೆ ಹತ್ತು ಪಲ್ಲ ಬೆಳೆದರೆ ಶಿವಣ್ಣ ಮುವ್ವತ್ತು ಪಲ್ಲ ಭತ್ತ ಬೆಳೆದ. ಹಳ್ಳಿಯ ರೈತರು ಇದನ್ನು ಕಂಡು ಮೂಗಿನ ಮೇಲೆ ಬೆರಳಿಟ್ಟರು. 'ಹುಡುಗಬಟ್ಟೆ ಅಂದುಕೊಂಡಿದ್ದು ಮೀರಿದ ಬ್ಯಾಸಾಯ ಮಾಡ್ತಾನಪ್ಪ!' ಎಂದು ಊರ ಜನ ಸಂತೋಷ ಪಟ್ಟರು. ಅರ್ಧಂಬರ್ಧ ಓದಿದ ತಮ್ಮ ಮಕ್ಕಳು ಮನೆ ಸೇರಿ ಸೋಮಾರಿಗಳಾಗಿದ್ದರು. ಅತ್ತ ನೌಕರಿಯೂ ಇಲ್ಲ, ಇತ್ತ ವ್ಯವಸಾಯವೂ ಇಲ್ಲ. ಎಡಬಿಡಂಗಿಗಳಾಗಿ ತಮಗೆ ಹೊರೆಯಾಗಿದ್ದರು. ಶಿವಣ್ಣನಾದರೋ ಒಂದು ಗಳಿಗೆಯನ್ನೂ ಸೋಮಾರಿಯಾಗಿ ಕಳೆಯುತ್ತಿರಲಿಲ್ಲ. ಒಂದಲ್ಲಾ ಒಂದು ಕೆಲಸದಲ್ಲಿ ತೊಡಗಿದ್ದ. ತಾನಾಯಿತು, ತನ್ನ ಕೆಲಸವಾಯಿತು. ಹೀಗೆ ನಾಲ್ಕಾರು ವರ್ಷ ವ್ಯವಸಾಯ ಮಾಡಿದ. ಕೇವಲ ವ್ಯವಸಾಯದಿಂದ ರೈತರು ಮುಂದುವರೆಯಲಾಗುವುದಿಲ್ಲ ಎಂಬುದನ್ನು ಅನುಭವದಿಂದ ಅರಿತುಕೊಂಡ. ಕೃಷಿ ಅಧಿಕಾರಿಗಳ ಜೊತೆ ಪ್ರಗತಿಪರ ರೈತರನ್ನು ಸಂದರ್ಶಿಸಿದ. ಅವರಂತೆ ತಾನು ವ್ಯವಸಾಯದ ಜೊತೆ ಏನಾದರೂ ಒಂದು ಉಪಕಸುಬು ಮಾಡಬೇಕೆಂದು ತೀರ್ಮಾನಿಸಿದ. ಯಾವ ಉಪಕಸುಬು ಮಾಡಬೇಕೆಂದು ಯೋಚಿಸಿದ. ಕೃಷಿ ಅಧಿಕಾರಿಗಳೊಡನೆ ಚರ್ಚಿಸಿದ. ಮೊದಲಿಗೆ ಹೆಚ್ಚು ಬಂಡವಾಳ ಬಯಸದ ಕಡಿಮೆ ಶ್ರಮದ 'ಜೇನು ಸಾಕಣೆ'ಯನ್ನೇ ಆರಂಭಿಸಲು ನಿರ್ಧರಿಸಿದ. ನಾಲ್ಕಾರು ಕಡೆ ಸುತ್ತಾಡಿ ವಿಷಯ ಸಂಗ್ರಹಿಸಿದ. ಜೇನು ಸಾಕಣೆಗೆ ಬೇಕಾದ ಉಪಕರಣಗಳನ್ನೂ ಕೊಂಡು ತಂದ. ಸಣ್ಣ ಪ್ರಮಾಣದಲ್ಲೇ ಜೇನು ಸಾಕಣೆ ಮಾಡತೊಡಗಿದ. ಇಂದು ಅದರಿಂದ ಅವನಿಗೆ ಸಾವಿರಾರು ರೂಪಾಯಿಗಳ ಆದಾಯ ಬರುತ್ತಿದೆ. ಅನಂತರ ಶಿವಣ್ಣ ಹೈನುಗಾರಿಕೆ, ಕೋಳಿಸಾಕಣೆ, ಕುರಿಸಾಕಣೆ ಮುಂತಾದ ಅನೇಕ ಉಪಕಸುಬುಗಳನ್ನು ರೂಢಿಸಿಕೊಂಡ.

ಚೆನ್ನಪ್ಪ ಶಿವಣ್ಣನ ಭಾವ. ಅವನ ಊರು ಹರ್ತಿಕೋಟೆ. ಈಗ ನಾಲ್ಕಾರು ವರ್ಷಗಳಿಂದ ಅಲ್ಲಿ ಮಳೆ ಬೆಳೆಯಿಲ್ಲ. ಕೂಡಿಟ್ಟ ಕಾಳುಕಡ್ಡಿ, ಹುಲ್ಲುಸೊಪ್ಪು ತೀರುತ್ತಾ ಬಂದಿವೆ. ಕೈತುಂಬಾ ಕೆಲಸವಿಲ್ಲ. ಹೊಟ್ಟೆ ತುಂಬಾ ಅನ್ನವಿಲ್ಲ. ಜನ ಕಂಗಾಲಾಗಿದ್ದಾರೆ. ಸಣ್ಣರೈತರು, ಕೂಲಿಕಾರರು, ಪಟ್ಟಣಗಳಿಗೆ ಗುಳೇ ಹೊರಟಿದ್ದಾರೆ. ದನಕರುಗಳು ಮೇವಿಲ್ಲದೆ ಬಡಕಲಾಗಿವೆ. ಚೆನ್ನಪ್ಪನಿಗೆ ಏನು ಮಾಡಬೇಕೋ ಹೊಳೆಯಲಿಲ್ಲ. ಕೊನೆಗೆ ಹೆಂಡತಿ ಹೊನ್ನಮ್ಮನ ಸಲಹೆಯಂತೆ, ಅವಳ ತೌರುಮನೆಗೆ ಹೋಗಿ ಕಾಳು ಮತ್ತು ಮೇವು ಎರವಲು ತರಲು ನಿರ್ಧರಿಸಿ, ಗಾಡಿ ಕಟ್ಟಿಕೊಂಡು ಆಲೂರಿಗೆ ಹೊರಟ.



7th_Kannada_Reader.indd 119 24-06-2019 19:37:56

ಆಲೂರು ತಲುಪುವ ಹೊತ್ತಿಗೆ ಸಂಜೆಯಾಗಿತ್ತು. ಅಂಗಳದಲ್ಲಿ ಆಡುತ್ತಿದ್ದ ಮಕ್ಕಳು 'ಮಾಮಾ ಬಂತು' ಎಂದು ಕೂಗಿದವು. ಶಿವಣ್ಣ ಹೊರಗೆ ಬಂದು, 'ಇದೇನ್ ಭಾವಾ! ಇದ್ದಕ್ಕಿದ್ದಂಗೆ ಬಂದ್ರಿ. ಎಲ್ಲಾ ಚೆನ್ನಾಗಿದ್ದಾರಾ?' ಎಂದ. ಶಿವಣ್ಣನ ಹೆಂಡತಿ ರತ್ನಮ್ಮ ಕೈಕಾಲಿಗೆ ನೀರು ತಂದು ಕೊಟ್ಟಳು. ಕಾಫಿ ಕುಡಿದು ಇಬ್ಬರೂ ತೋಟದ ಕಡೆ ಸುತ್ತಾಡಿಕೊಂಡು ಬರಲು ಹೊರಟರು. ಮನೆಯ ಹಿಂಬದಿಯಲ್ಲಿ ದನದ ಕೊಟ್ಟಿಗೆ. ಅದರ ಪಕ್ಕದಲ್ಲಿ ಒಂದು ಸಿಮೆಂಟ್ ತೊಟ್ಟಿಯಿತ್ತು. ಅದನ್ನೇ ಚೆನ್ನಪ್ಪ ಮಿಕಮಿಕ ನೋಡತೊಡಗಿದ. 'ಇದೇನ್ ಶಿವು ಸಿಮೆಂಟ್ ತೊಟ್ಟಿ ಇದ್ದಂಗಿದೆ?' ಎಂದ.

**ಶಿವು**: ಸಿಮೆಂಟ್ ತೊಟ್ಟಿಯಲ್ಲ ಭಾವ! ಗೋಬರ್ ಅನಿಲ ಯಂತ್ರ, ಇದರಿಂದ ಗೋಬರ್ ಗ್ಯಾಸ್ ದೊರೆಯುತ್ತೆ.

**ಚೆನ್ನಪ್ಪ**: ಗ್ಯಾಸ್ ಅಂದ್ರೆ ಏನಪ್ಪ? ಸಿಮೆಂಟ್ ತೊಟ್ಟಿಯಿಂದ ಗ್ಯಾಸ್ ಹೆಂಗೆ ಬರುತ್ತೆ?

**ಶಿವು** : ಭಾವಾ! ಈ ಗೋಬರ್ ಅನಿಲಯಂತ್ರ, ರೈತರಿಗೆ ಕಾಮಧೇನು ಇದ್ದಂತೆ. ಇದರಿಂದ ಗ್ಯಾಸ್ ಬರುತ್ತೆ. ಗ್ಯಾಸ್ ಅಂದರೆ ಅನಿಲ ಎಂದು ಅರ್ಥ. ಈ ಅನಿಲ ವಾಯು ರೂಪದ ವಸ್ತು. ಅದರಿಂದ ಬೆಳಕು ಪಡೀಬೌದು, ಒಲೆ ಉರಿಸಬಹುದು ಮತ್ತು ಯಂತ್ರಗಳನ್ನು ನಡೆಸಬಹುದು. ಸಗಣಿಯಲ್ಲಿ ಇಂಥ ಶಕ್ತಿ ಅಡಗಿರುತ್ತದೆ. ಸಗಣಿಯನ್ನು ಈ ತೊಟ್ಟಿಯಲ್ಲಿ ಕೊಳೆಸುವುದರಿಂದ, ಅನಿಲ ಪಡೆಯಬಹುದು. ಹೀಗೆ ಸಗಣಿಯಿಂದ, ಗೊಬ್ಬರದಿಂದ ಪಡೆಯುವ ಅನಿಲವನ್ನೇ 'ಗೋಬರ್ ಅನಿಲ' ಎನ್ನುವುದು.

**ಚೆನ್ನಪ್ಪ**: ಸರಿಯಪ್ಪಾ! ಈ ಅನಿಲದಿಂದ ಇಷ್ಟೆಲ್ಲಾ ಅನುಕೂಲ ಪಡೀಬೌದೇ? ನೀನೇನೋ ಓದಿದೋನು ಇದೆಲ್ಲ ತಿಳಿಯುತ್ತೆ. ನಮಗೆ ಹಳ್ಳಿಜನಕ್ಕೆ ಇದೆಲ್ಲ ಎಲ್ಲಪ್ಪ ಅರ್ಥವಾಗುತ್ತೆ

**ಶಿವು**: ಇದೇನು ಮಹಾ ಅಂಥ ಹಂಗೆ ಹೆದರಿಕೋತೀರಿ ಭಾವಾ! ನೀವು ಹಾಕಿಸೋದಾದರೆ ಹೇಳಿ, ನಾನೇ ಬಂದು ನಿಂತುಕೊಂಡು ಎಲ್ಲ ಮಾಡಿಸಿಕೊಡ್ತೀನಿ.

**ಚೆನ್ನಪ್ಪ**: ಅಲ್ಲ ಶಿವು, ಸಗಣೀನೆಲ್ಲ ಇದಕ್ಕೆ ಸುರಿದರೆ ಗೊಬ್ಬರಕ್ಕೇನು ಮಾಡೋದು? ರೈತರಿಗೆ ಗೊಬ್ಬರ ಬಹಳ ಮುಖ್ಯ ಅಲ್ಲವೇ?

**ಶಿವು**: ಹೌದು, ನೀವು ಕೇಳೋದು ಸರಿ. ಈ ವಿಷಯ ನಿಮಗೆ ಹೇಳಲಿಲ್ಲ. ಗ್ಯಾಸ್ ಪಡೆಯಲು ತೊಟ್ಟಿಗೆ ಹಾಕಿದ ಸಗಣಿ ಬಗ್ಗಡ ರೂಪದಲ್ಲಿ ಹೊರಗೆ ಬರುತ್ತದೆ. ಅದು ಸಗಣಿಗಿಂತಲೂ ಉತ್ತಮವಾದ ಗೊಬ್ಬರವೆಂದು ವಿಜ್ಞಾನಿಗಳು ಹೇಳ್ತಾರೆ.

**ಚೆನ್ನಪ್ಪ**: ಏನಪ್ಪಾ, ಸಗಣಿಯಿಂದ ಇಷ್ಟೊಂದು ಅನುಕೂಲ ಪಡೀಬೌದೇ? ಹಂಗಾದರೆ ನಾವೂ ಇದನ್ನು ಹಾಕಿಸಬಹುದೇ? ನಂಗಂತೂ ಒಲೆ ಸೌದೆ ಜೋಡಿಸಿ ಸಾಕಾಗಿದೆ.

**ಶಿವು**: ನೀವು ಒಪ್ಪಿದರೆ, ನಾನೇ ಮುಂದೆ ನಿಂತು ಮಾಡಿಸಿ ಕೊಡ್ತೀನಿ. ನೋಡಿ ಭಾವಾ... ಈಗಂತೂ ಕಾಲ ಕಾಲಕ್ಕೆ ಮಳೆ ಬೆಳೆ ಆಗೋಲ್ಲ. ಬರೀ ಬೇಸಾಯದಿಂದ ಏನೂ ಸುಖವಿಲ್ಲ. ಎಷ್ಟು ಕಷ್ಟ ಪಟ್ರೂ ಎರಡು ಹೊತ್ತಿನ ಗಂಜಿಗೆ ಕಷ್ಟವಾಗುತ್ತೆ. ಅದರಿಂದ ಬೇಸಾಯದ ಜೊತೆಗೆ ಏನಾದ್ರೂ ಒಂದು ಉಪಕಸುಬೂ ರೂಢಿಸಿಕೊಳ್ಳಬೇಕು. ಇದೊಂದನ್ನೇ ನಂಬಿದರೆ ಬದುಕೋದೇ ಕಷ್ಟ.

**ಚೆನ್ನಪ್ಪ**: ಅಲ್ಲ ಶಿವು, ದಿನವೆಲ್ಲ ಹೊಲದ ಕೆಲಸವೇ ಆಗುತ್ತೆ. ಬಿಡುವೇ ಸಿಗೋಲ್ಲ.

**ಶಿವು**: ನೋಡಿ ಭಾವಾ! ನಾನೀಗ ತೋಟದಲ್ಲಿ ಜೇನು ಸಾಕ್ತಿದ್ದೇನೆ. ಮನೆ ಹತ್ತಿರವೇ ಸಣ್ಣದಾಗಿ ಕೋಳಿ ಫಾರಂ ಮಾಡಿಕೊಂಡಿದ್ದೇನೆ. ಈಗ ಮೂರು ನಾಲ್ಕು ವರ್ಷದಿಂದ ಪ್ರತಿ ವರ್ಷ ಎರಡೆರಡು ಎಮ್ಮೆ ಕೊಂಡುಕೊಂಡೆ. ಈಗ ಹತ್ತು ಎಮ್ಮೆ ಇವೆ. ಪ್ರತಿ ದಿನ ಇಪ್ಪತ್ತು ಲೀಟರ್ ಹಾಲು ಮಾರ್ತೇನೆ. ನಲವತ್ತು ಕುರಿ ಸಾಕಿದ್ದೇನೆ. ಕುರಿ ದನಗಳಿಂದ ಒಳ್ಳೆಯ ಗೊಬ್ಬರ ಸಿಕ್ಕುತ್ತೆ. ಪ್ರತಿ ವರ್ಷ ಇಪ್ಪತ್ತು ಕುರಿ ಮಾರ್ತೇನೆ. ಇದರಿಂದ ಸಾವಿರಾರು ರೂಪಾಯಿ ಕೈಗೆ ಬರುತ್ತೆ. ನೋಡಿ. ಇವೆಲ್ಲ ಒಂದೊಂದಾಗಿ ಆರಂಭಿಸಿದೆ. ಈಗ ಕೈಯಲ್ಲಿ ಹಂಗೂ ಹಿಂಗೂ ಕಾಸು ಆಡ್ತಾ ಇದೆ. ನಾನೂ ಒಬ್ಬ ಮನುಷ್ಯ ಅನ್ನಿಸಿಕೊಂಡೆ. ಹಿಂಗೆ ಏನಾದ್ರೂ ಒಂದು ಉಪಕಸುಬು ಇರಬೇಕು. ಇಲ್ದೇ ಹೋದ್ರೆ ಮೇಲುಖರ್ಚಿನ ಹಣಕ್ಕೆ ರೈತ ಯೋಚನೆ ಮಾಡಬೇಕಾಗುತ್ತೆ.



7th_Kannada_Reader.indd 120 24-06-2019 19:37:56

**ಚೆನ್ನಪ್ಪ:** ಹೌದಪ್ಪಾ, ನೀನು ಹೇಳೋದು ಸರಿ. ನನಗಂತೂ ಹಣದ ತೊಂದರೆ ಹೇಳತೀರದು.

**ಶಿವು:** ಅಲ್ಲಿ ಬಾವಿ ಪಕ್ಕದಲ್ಲಿ ಉದ್ದಕ್ಕೆ ಒಂದು ಗುಡಿಸಲು ಕಾಣುತ್ತೆ ನೋಡಿ ಭಾವ... ಅದೇ ನಮ್ಮ ಕೋಳಿ ಫಾರಂ. ಈಗ ಇನ್ನೂರು ಕೋಳಿಗಳಿವೆ. ಖರ್ಚು ಕಳೆದು ಒಂದು ವರ್ಷಕ್ಕೆ ಹತ್ತು ಸಾವಿರ ರೂಪಾಯಿ ಆದಾಯ ಬರುತ್ತೆ. ಇಂತಹ ಉಪಕಸುಬುಗಳಿಗೆ ಹೆಚ್ಚು ಖರ್ಚು ಮಾಡಬೇಕಾಗಿಲ್ಲ. ಸ್ವಲ್ಪ ಮುತುವರ್ಜಿ ವಹಿಸಿದರೆ ಸಾಕಷ್ಟು ಆದಾಯ ಪಡೆಯಬಹುದು.

**ಚೆನ್ನಪ್ಪ:** ನೋಡು ಶಿವು, ನಮಗೆ ಇದೆಲ್ಲಾ ತಿಳೀದು... ಅಪ್ಪ ಹಾಕಿದ ಆಲದ ಮರ ಅಂತ ಹಳೇ ರೀತೀಲೇ ಬ್ಯಾಸಾಯ ಮಾಡ್ತೀವಿ. ಹೊಟ್ಟೆಗಾದ್ರೆ ಬಟ್ಟೆಗಿಲ್ಲ. ಬಟ್ಟೆಗಾದ್ರೆ ಹೊಟ್ಟೆಗಿಲ್ಲ, ಅನ್ನೋ ಹಂಗೆ ಆಗಿದೆ. ನಾನು ಇನ್ನು ಮೇಲೆ ನಿನ್ನ ಹಂಗೆ ಹೊಸ ಪದ್ಧತಿ ವ್ಯವಸಾಯ ಮಾಡ್ತೀನಪ್ಪ.

**ಶಿವು:** ಆಯ್ತು ಬನ್ನಿ ಭಾವ. ಈಗ ಊಟಕ್ಕೆ ಹೋಗೋಣ.

(ಇಬ್ಬರೂ ಮನೆಯ ಕಡೆ ಹೆಜ್ಜೆ ಹಾಕಿದರು)

ಬೆಳಿಗ್ಗೆ ಎದ್ದು ಶಿವಣ್ಣ, ಚೆನ್ನಪ್ಪ ತೋಟದ ಕಡೆ ಹೊರಟರು. ತೋಟದಲ್ಲಿ ಫಲಭರಿತ ನೂರು ತೆಂಗಿನ ಮರಗಳು, ಅವುಗಳ ನಡುವೆ ಅಡಿಕೆ ಸಸಿಗಳು, ತೋಟದ ಪಕ್ಕದಲ್ಲೇ ಐವತ್ತು ಎಲೆ ಬಳ್ಳಿ ಗುಣಿ ಕಾಣಿಸಿದವು.

**ಚೆನ್ನಪ್ಪ:** ಇದೇನ್ ಶಿವು, ಎಲೆ ಬಳ್ಳಿ ಯಾವಾಗ ಹಾಕಿಸ್ದೆ?

**ಶಿವು:** ಇದೆಲ್ಲಾ ಅಪ್ಪಾಜಿ ಇದ್ದಾಗ್ಲೇ ಹಾಕಿಸಿದ್ರು ಭಾವ. ನಾನು ಸ್ವಲ್ಪ ಮುತುವರ್ಜಿ ವಹಿಸಿ ನೋಡಿಕೊಂಡೆ. ಇದರಿಂದ ವಾರಕ್ಕೆ ನೂರಾರು ರೂಪಾಯಿ ಸಿಕ್ಕುತ್ತೆ. ಅಲ್ಲಿ ನೋಡಿ ಅರ್ಧ ಎಕರೇಲಿ ಕನಕಾಂಬರ ಹೂ ಬೆಳೀತೀನಿ. ಪ್ರತಿ ದಿನ ಹತ್ತು ಕಿಲೋ ಹೂ ಸಿಕ್ಕುತ್ತೆ. ತಿಂಗಳಿಗೆ ಐನೂರು ರೂಪಾಯಿಗೆ ಗುತ್ತಿಗೆ ಕೊಟ್ಟಿದ್ದೀನಿ. ಮುಂದಿನ ವರ್ಷದಿಂದ ರೇಷ್ಮೆ ಹುಳು ಸಾಕಬೇಕು ಅಂದುಕೊಂಡಿದ್ದೀನಿ.

ಚೆನ್ನಪ್ಪನಿಗೆ ಇದೆಲ್ಲಾ ನೋಡಿ ಆಶ್ಚರ್ಯವಾಯಿತು. ಇರುವ ಹದಿನೈದು ಎಕರೆ ಭೂಮಿಯಲ್ಲಿ ಶಿವು ಮೀರಿದ ಬೆಳೆ ತೆಗೀತಿದ್ದಾನೆ. ಎಷ್ಟು ಬಗೆಯ ಬೆಳೆ, ಇದರ ಜೊತೆಗೆ ಉಪಕಸುಬುಗಳು ಬೇರೆ. ಎಲ್ಲವೂ ಆದಾಯ ಕೊಡುವಂತಹವುಗಳು. ನನಗೆ ನಲವತ್ತು ಎಕರೆ ಜಮೀನಿದ್ದರೂ ಎರಡು ಹೊತ್ತಿನ ಗಂಜಿಗೆ ಕಷ್ಟವಾಗಿದೆ. ಮಾಡಿದ್ರೆ ಇವನ ಹಾಗೆ ಬ್ಯಾಸಾಯ ಮಾಡಬೇಕು ಎಂದು ನಿರ್ಧರಿಸಿದನು. ತೋಟದಲ್ಲಿ ಸುತ್ತಾಡಿಕೊಂಡು ಮನೆ ಕಡೆ ಬಂದರು. ಅಷ್ಟು ಹೊತ್ತಿಗೆ ಶಿವು ಅವರ ದೊಡ್ಡಪ್ಪ ಮರೀಗೌಡರು ಬಂದು ಹೊರ ಜಗುಲಿಯಲ್ಲಿ ಕುಳಿತಿದ್ದರು. ಚೆನ್ನಪ್ಪ ಹತ್ತಿರಕ್ಕೆ ಬಂದು, 'ಏನು ಮಾವಾ, ಚೆನ್ನಾಗಿದ್ದೀರಾ?' ಎಂದು ಕೇಳಿದ. ಅವರ ಪಕ್ಕ ಕುಳಿತುಕೊಂಡ. ಶಿವು, ಅಡುಗೆ ಮನೆ ಕಡೆ ಹೋದ.

**ಚೆನ್ನಪ್ಪ:** ಮಾವಾ! ನಾನು ನಾಲ್ಕು ವರ್ಷಗಳಿಂದ ಈ ಕಡೆ ಬಂದಿದ್ದಿಲ್ಲ. ಈಗ ತೋಟದ ಕಡೆ ಹೋಗಿದ್ದೆವು. ಶಿವು ಮೀರಿದ ಬ್ಯಾಸಾಯ ಮಾಡ್ತಿದ್ದಾನೆ. ನನಗೆ ನೋಡಿ ಆಶ್ಚರ್ಯವಾಯಿತು.

**ಮರೀಗೌಡ:** ಶಿವು ಒಳ್ಳೇ ಕೆಲಸಗಾರನಪ್ಪ. ಒಂದು ಗಳಿಗೇನೂ ಸುಮ್ಮನೆ ಕೂತಿರಲ್ಲ. ಒಂದಲ್ಲಾ ಒಂದು ಕೆಲಸ ಹಚ್ಚಿಕೊಂಡು ದುಡೀತಾನೆ. ಹೊಸ ರೀತಿಯ ಬ್ಯಾಸಾಯ ಮಾಡ್ತಾನೆ. ಜೊತೆಗೆ ಕೋಳಿ, ಕುರಿ, ಹೈನುಗಾರಿಗೆ, ತರಕಾರಿ, ಹೂವು... ಒಂದೇ, ಎರಡೇ... ಏನೇನೋ ಉಪಕಸುಬು ಮಾಡ್ತಾನೆ. ಅದರಿಂದ ಕೈತುಂಬಾ ಹಣ ಸಿಗುತ್ತದೆ. ನಮ್ಮ ಹುಡುಗ ಅಂತ ಹೊಗಳೋ ಮಾತಲ್ಲ. ಇದ್ರೆ ಇಂತಹ ಮಕ್ಕಳಿರಬೇಕು. ವರ್ಷಕ್ಕೆ ಹೇಗೂ ಇಪ್ಪತ್ತು ಸಾವಿರ ಆದಾಯ ತೆಗೀತಾನೆ. ಎತ್ತು, ಗಾಡಿ, ದನ ಕರ, ಮನೆಮಠ, ಎಲ್ಲ ರೂಢಿಸಿಕೊಂಡ. ನನಗಂತೂ ಇಂತಹ ಮಕ್ಕಳನ್ನು ಕಂಡ್ರೆ ಸಂತೋಷವಾಗುತ್ತೆ ಎಂದು ಶಿವಣ್ಣನನ್ನು ಮನಸಾರೆ ಹೊಗಳಿದರು.

**ಚೆನ್ನಪ್ಪ:** ಹೌದು ಮಾವ! ನಿಮ್ಮ ಮಾತು ನಿಜ. ನಾನೂ ಶಿವು ಹಂಗೆ ಹೊಸ ರೀತೀಲಿ ಬೇಸಾಯ ಮಾಡ್ತೀನಿ. ಜೊತೆಗೆ ಯಾವುದಾದ್ರೂ ಒಂದೆರಡು ಉಪಕಸುಬು ಮಾಡ್ತೀನಿ. ಇಲ್ಲದಿದ್ರೆ ನಾವು ಎಂದೆಂದಿಗೂ ಉದ್ಧಾರವಾಗೋಲ್ಲ. ಇಲ್ಲಿಗೆ ಬಂದದ್ದರಿಂದ ಎಷ್ಟೋ ವಿಷಯ ತಿಳಕೊಂಡ ಹಾಗಾಯಿತು. ಶಿವು ಬದುಕೋ ದಾರಿ ತೋರಿಸಿಕೊಟ್ಟ. ನಾನು ಬಂದದ್ದು ಸಾರ್ಥಕವಾಯಿತು.



7th_Kannada_Reader.indd 121 24-06-2019 19:37:56

## ಕೃತಿ ಕರ್ತೃ ಪರಿಚಯ

'ಬದುಕಿಗೊಂದು ದಾರಿ' ಪಾಠದ ಲೇಖಕರು ಎಚ್.ಎಂ.ಪರಮೇಶ್ವರಯ್ಯ. ಚಿತ್ರದುರ್ಗ ಜಿಲ್ಲೆಯ ಹರ್ತಿಕೋಟೆಯಲ್ಲಿ 1938ರಲ್ಲಿ ಇವರು ಜನಿಸಿದರು. ಮೈಸೂರಿನ ಮಹಾರಾಣಿ ಕಲಾ ಕಾಲೇಜಿನಲ್ಲಿ ಕನ್ನಡ ವಿಭಾಗದಲ್ಲಿ ಪ್ರಾವಾಚಕರಾಗಿ ಇವರು ಸೇವೆ ಸಲ್ಲಿಸಿರುತ್ತಾರೆ. 'ಪಿಸುಗುಟ್ಟಿತು ಬಯಕೆ' ಎಂಬ ಕವನ ಸಂಕಲನವನ್ನೂ; 'ಹೊತ್ತು ಮುಳುಗುವ ಮುನ್ನ', 'ಕಂತೆಗೆ ತಕ್ಕ ಬೊಂತೆ' ಎಂಬ ನಾಟಕಗಳನ್ನೂ ಇವರು ರಚಿಸಿದ್ದಾರೆ. ಕನಕಸುಧೆ, ಹರಿಭಕ್ತಿಸಾರ ಕೃತಿಗಳನ್ನು ಸಂಪಾದಿಸಿದ್ದಾರೆ. ನವಸಾಕ್ಷರರಿಗಾಗಿ ಇವರು ಬರೆದ ದುಡಿಮೆಗೊಂದು ದಾರಿ, ಬದುಕುವ ದಾರಿ ಎಂಬ ಕೃತಿಗಳು ನವದೆಹಲಿಯ ವಯಸ್ಕರ ಶಿಕ್ಷಣ ನಿರ್ದೇಶನಾಲಯದಿಂದ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿವೆ. ಇವರು ಬರೆದ ಗೋಬರ ಅನಿಲ, ಲೋಕ ನಾಯಕನ ಕಥೆ, ಸಂಗೊಳ್ಳಿರಾಯಣ್ಣ ಮುಂತಾದ ಕೃತಿಗಳು ಪ್ರಕಟವಾಗಿವೆ. ಪ್ರಸ್ತುತ ಲೇಖನವನ್ನು 'ದುಡಿಮೆಗೊಂದು ದಾರಿ' ಕೃತಿಯಿಂದ ಸಂಗ್ರಹಿಸಲಾಗಿದೆ.

ವಿದ್ಯಾವಂತರೆಲ್ಲಾ ಸರ್ಕಾರಿ ಕೆಲಸವನ್ನೇ ಹಿಡಿಯಬೇಕೆಂದೇನಿಲ್ಲ. ನಮ್ಮಲ್ಲಿ ಸರ್ಕಾರಿ ಉದ್ಯೋಗಕ್ಕಾಗಿಯೇ ವಿದ್ಯಾವಂತರಾಗಬೇಕು ಎಂಬ ಭ್ರಮೆ ದೂರವಾಗಬೇಕು. ನಮಗಿರುವ ಜಮೀನಿನಲ್ಲಿ ಬೆಳೆ ತೆಗೆಯುವುದು, ಇದರಂತೆ ಬೇರೆ ಬೇರೆ ಉಪಕಸುಬುಗಳನ್ನು ಬಿಡುವಿನ ವೇಳೆಯಲ್ಲಿ ಮಾಡಿಕೊಂಡು ಬದುಕಬೇಕು. ಈ ದಿಸೆಯಲ್ಲಿ ವಿದ್ಯಾವಂತನಾದ ಶಿವಣ್ಣ ಆಲೂರಿನ ಒಬ್ಬ ಮಾದರಿ ರೈತನಾದ ರೀತಿ ಹೇಗೆಂಬುದನ್ನು ಬದುಕಿಗೊಂದು ದಾರಿ ಎಂಬ ಗದ್ಯಭಾಗದಿಂದ ತಿಳಿದುಕೊಳ್ಳಬಹುದು.

## ಪದಗಳ ಅರ್ಥ

ಪರತಂತ್ರ–ಬೇರೆಯವರಿಗೆ ಅಧೀನವಾಗಿರುವುದು, ದಾಸ್ಯ; ಪಲ್ಲ–ನೂರು ಸೇರು; ತಾಂಡವ–ನೃತ್ಯಪ್ರಬೇಧ, ಅತಿ ಹೆಚ್ಚಿನ; ಕಸುಬು–ಕೆಲಸ; ಬಂಡವಾಳ–ಮೂಲ ಧನ; ಗುಳೆ–ವಲಸೆ; ಎರವಲು–ಸಾಲ; ಗೋಬರ್–ಗೊಬ್ಬರ; ಗ್ಯಾಸ್–ಅನಿಲ; ಮುತುವರ್ಜಿ–ಜೋಪಾನ, ಎಚ್ಚರಿಕೆ, ಆಸಕ್ತಿ; ಬ್ಯಾಸಾಯ–ಬೇಸಾಯ, ವ್ಯವಸಾಯ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ತಂದೆ ತೀರಿಕೊಂಡ ಮೇಲೆ ಶಿವಣ್ಣ ಏನು ಮಾಡತೊಡಗಿದ ?
2. ಶಿವಣ್ಣನ ಆಸೆ ಏನಾಗಿತ್ತು ?
3. ಹಳ್ಳಿಯ ರೈತರು ಮೂಗಿನ ಮೇಲೆ ಬೆರಳಿಟ್ಟುಕೊಂಡದ್ದೇಕೆ ?
4. ಹಳ್ಳಿಯಲ್ಲಿ ಅರ್ಧಂಬರ್ಧ ಓದಿದ ಮಕ್ಕಳು ಹೇಗಿದ್ದರು ?
5. ಶಿವಣ್ಣ ಕೃಷಿ ಅಧಿಕಾರಿಗಳ ಜೊತೆಗೆ ಏನು ವಿಚಾರ ವಿನಿಮಯ ಮಾಡಿದ?
6. ಶಿವಣ್ಣನು ಮಾಡುತ್ತಿದ್ದ ಉಪಕಸುಬುಗಳು ಯಾವು ಯಾವುವು ?
7. ಉಪಕಸುಬು ರೈತರಿಗೆ ಏಕೆ ಬೇಕು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಶಿವಣ್ಣನು ಸರ್ಕಾರಿ ನೌಕರಿಗೆ ಸೇರದಿರಲು ಕಾರಣವೇನು ?
2. ತಂದೆ ಮಾಡಿದ್ದ ಸಾಲವನ್ನು ಶಿವಣ್ಣ ತೀರಿಸಿದ ಬಗೆ ಹೇಗೆ ?
3. ಮಳೆ ಇಲ್ಲದೆ ಹರ್ತಿಕೋಟೆ ರೈತರ ಸ್ಥಿತಿ ಹೇಗಿತ್ತು?
4. ಗೋಬರ್ ಅನಿಲವನ್ನು ಪಡೆಯುವ ರೀತಿ ಹೇಗೆ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಶಿವಣ್ಣ ಆಲೂರಿಗೆ ಒಬ್ಬ ಮಾದರಿ ರೈತನಾದ ರೀತಿಯನ್ನು ವಿವರಿಸಿ.

## ಭಾಷಾಭ್ಯಾಸ

**1. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.**
ತಾಂಡವ, ಉದ್ಧಾರ, ಶ್ರಮ, ಸಂಪರ್ಕ, ಕಂಗಾಲು, ಎಡಬಿಡಂಗಿ, ಗೊಬ್ಬರ.

**2. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**
ಕೆಸರಾದರೆ, ನಾಲ್ಕಾರು, ಸಾವಿರಾರು, ನೂರಾರು, ದಿನವೆಲ್ಲ, ತೊಟ್ಟಿಯಿಂದ.

**3. ಕೆಳಗಿನವುಗಳನ್ನು ಐದಾರು ವಾಕ್ಯಗಳಲ್ಲಿ ವಿಸ್ತರಿಸಿ ಬರೆಯಿರಿ.**
ಅ. ಕೈಕೆಸರಾದರೆ ಬಾಯಿ ಮೊಸರು.
ಆ. ಹಾಸಿಗೆ ಇದ್ದಷ್ಟು ಕಾಲು ಚಾಚು.

## ಚಟುವಟಿಕೆ

1. ನಿಮ್ಮ ಗ್ರಾಮದ ಎರಡು ಕಸುಬುಗಳ ಬಗ್ಗೆ ಮಾಹಿತಿ ಸಂಗ್ರಹಿಸಿರಿ.



7th_Kannada_Reader.indd 122 24-06-2019 19:37:56

ಉಪಪಠ್ಯ

ಘಟಕ ವಿಳು

# ಆದರ್ಶ ಆಡಳಿತಗಾರ ಕೆಂಪೇಗೌಡ

– ದೇ.ಜ.ಗೌ

## ಪ್ರವೇಶ

ಪ್ರಜೆಗಳ ಕಲ್ಯಾಣಕ್ಕಾಗಿ ದುಡಿದ ಆಡಳಿತಗಾರರು, ರಾಜರು, ಇವರೆಲ್ಲಾ ಪ್ರಜಾಪ್ರಭುತ್ವವನ್ನು ಒಂದಿಲ್ಲೊಂದು ಬಗೆಯಿಂದ ಆರಾಧಿಸಿ ತಮ್ಮ ನಾಡನ್ನು, ಅದರೊಡನೆ ತಮ್ಮ ಬಾಳನ್ನು ಚೆಲುವಾಗಿ ಮಾಡಿಕೊಂಡರು. ಇಂತಹವರು ಆದರ್ಶ ಜೀವಿಗಳಾಗಿ ಇಂದಿಗೂ ಅಮರರಾಗಿದ್ದಾರೆ. ಇಂತಹ ಪ್ರಜಾ ಸೇವಕರಲ್ಲಿ ಕೆಂಪೇಗೌಡರು ಹಿರಿದಾದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಇವರ ಆದರ್ಶ ಜೀವನವೇ ಮೈಸೂರು ಒಡೆಯರಿಗೆ ಸ್ಫೂರ್ತಿಯ ಸೆಲೆಯಾಗಿ ಪರಿಣಮಿಸಿ ಅವರನ್ನು ಆದರ್ಶ ರಾಜರ ಮಾಲಿಕೆಯಲ್ಲಿ ನಿಲ್ಲಿಸಿದೆ.














7th_Kannada_Reader.indd 123 24-06-2019 19:37:56

ಕೆಂಪನಂಜೇಗೌಡನ ಯಲಹಂಕ, ಕೆಂಪರಾಯನ ಕಾಲದಲ್ಲಿ 'ಯಲಹಂಕ ನಾಡಾ'ಯಿತು. ಉತ್ತರದಲ್ಲಿ ಹೊಳವನ ಹಳ್ಳಿಯ ಹತ್ತಿರದ ರಾಮಪುರದವರೆಗೂ, ಪಶ್ಚಿಮದಲ್ಲಿ ಕುಣಿಗಲ್‌ವರೆಗೂ, ದಕ್ಷಿಣದಲ್ಲಿ ಆನೇಕಲ್ಲಿನತನಕವೂ, ಪೂರ್ವದಲ್ಲಿ ಹೊಸಕೋಟೆಯವರೆಗೂ ಆ ನಾಡು ಹಬ್ಬಿತ್ತು. ಆ ನಾಡಿಗೆ ಭಾಗ್ಯದೇವತೆಯ ನೆಲೆಬೀಡಾದ ಬೆಂಗಳೂರು ರಾಜಧಾನಿಯಾಯಿತು. ಧರ್ಮದೇವತೆಯ ಆವಾಸ ಕ್ಷೇತ್ರವಾದ ಶಿವಗಂಗೆ ಉಪರಾಜಧಾನಿಯಾಯಿತು. ಆಡಳಿತದ ಸೌಕರ್ಯಕ್ಕಾಗಿ ರಾಜ, ನಾಡನ್ನು ಮೂರು ಪ್ರಾಂತ್ಯಗಳನ್ನಾಗಿ ವಿಂಗಡಿಸಿದನು. ರಾಮಗಿರಿ ಪ್ರಾಂತ್ಯಕ್ಕೆ ಬಸವಯ್ಯನೂ, ಹಂತ್ರಿದುರ್ಗದ ಪ್ರಾಂತ್ಯಕ್ಕೆ ಕೆಂಪಸೋಮಣ್ಣನೂ ಪಾರುಪತ್ಯಗಾರರು. ಬೆಂಗಳೂರು ಪ್ರಾಂತ್ಯವನ್ನು ಅವನು ತಾನೇ ಇಟ್ಟುಕೊಂಡನು. ಈ ಮೂವರೂ ಅಣ್ಣತಮ್ಮಂದಿರು ನಾಡಿನ ಮೂರು ಮೂಲೆಗಳಲ್ಲಿ ನೆಲೆಸಿದುದರಿಂದ ನಾಡಿನ ರಕ್ಷಣೆ ಸುಲಭವಾಯಿತು. ರಾಯನ ಹಗೆಗಳಂತೂ ತಲೆಯೆತ್ತುವಂತಿರಲಿಲ್ಲ. ಯುದ್ಧದ ಭೀತಿಯಿಲ್ಲದೆ ದೇಶದಲ್ಲಿ ಶಾಂತಿ ನೆಲೆಸಿ ಪ್ರಜೆಗಳು ನೆಮ್ಮದಿಯಿಂದ ಬಾಳುತ್ತಿದ್ದರು. ರಾಯನೂ ಅವನ ತಮ್ಮಂದಿರೂ ಪ್ರಜೆಗಳ ಕಲ್ಯಾಣವನ್ನು ಸಾಧಿಸುವುದರಲ್ಲಿ ನಿರತರಾದರು. ಬಸವಯ್ಯ, ಕೆಂಪ ಸೋಮಣ್ಣರು ತಮ್ಮ ಪ್ರಾಂತ್ಯಗಳಲ್ಲಿ ಸ್ವತಂತ್ರರಾಗಿದ್ದರು. ರಾಯನಿಗೂ ಅವರಲ್ಲಿ ತುಂಬ ವಿಶ್ವಾಸವಿತ್ತು.

ರಾಯನಂತೆ ಅವನ ತಮ್ಮಂದಿರೂ ನಿಸ್ಪೃಹತೆ, ನಿಷ್ಪಕ್ಷಪಾತ, ನಿಷ್ಠೆಗಳಿಂದ ಆಡಳಿತವನ್ನು ನಿರ್ವಹಿಸುತ್ತಿದ್ದರು. ರಾಯನ ಶ್ರೀಮುಖಕ್ಕನುಸಾರವಾಗಿ ಕಾಲಕ್ಕೆ ಸರಿಯಾಗಿ ಹೆಜ್ಜುಂಕವನ್ನು ವಸೂಲು ಮಾಡಿ ಶಿವಗಂಗೆಯ ಬೊಕ್ಕಸಕ್ಕೆ ಕಳುಹಿಸುತ್ತಿದ್ದರು. ಅವರಿಗೆ ಆಡಳಿತದಲ್ಲಿ ನೆರವು ನೀಡಲು ಕರಣಿಕರು, ಕಾವಲುಗಾರರು, ಸುಂಕದ ಅಧಿಕಾರಿಗಳು ಮೊದಲಾದವರಿಂದ ಕೂಡಿದ ಸಿಬ್ಬಂದಿಯಿತ್ತು. ಅವರಿಬ್ಬರೂ ಆಗಾಗ್ಗೆ ಹಳ್ಳಿಗಳನ್ನು ಸುತ್ತಿ ಪ್ರಜೆಗಳ ಕಷ್ಟ ನಿಷ್ಠುರಗಳನ್ನು ವಿಚಾರಿಸಿಕೊಂಡು ಅವರಿಗೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಿ ಕೊಡುತ್ತಿದ್ದರು. ವ್ಯವಸಾಯಕ್ಕೆ ಅನುಕೂಲವಾಗುವಂತೆ ಕೆರೆಗಳನ್ನೂ, ಅಣೆಕಟ್ಟುಗಳನ್ನೂ ಕಟ್ಟಿಸುವುದರಲ್ಲಿ, ಸಾಲು ಮರಗಳನ್ನು ನೆಡಿಸುವುದರಲ್ಲಿ, ಗುಂಡು ತೋಪುಗಳನ್ನು ಹಾರಿಸುವುದರಲ್ಲಿ ಅವರಿಗೆ ಅಮಿತ ಆಸಕ್ತಿ. ಬಡವರ ಹುಯಿಲು ಕೇಳಿ ಬಂದಾಗ ಏನು ಕಾರ್ಯವಿದ್ದರೂ ಬಿಟ್ಟು ಅವರ ನೆರವಿಗೆ ನಿಲ್ಲುತ್ತಿದ್ದರು. ಕಳ್ಳ ಸುಳ್ಳರ ಪಡೆಯನ್ನು ಕಂಡ ಕಡೆ ನಿರ್ಮೂಲನ ಮಾಡುತ್ತಿದ್ದರು. ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಅವರೇ ನ್ಯಾಯಾಧೀಶರಾಗಿದ್ದು, ರಾಯನ ಹೆಸರಿನಲ್ಲಿ ತೀರ್ಪು ಕೊಡುತ್ತಿದ್ದರು.

ನಾಡಿನ ಹುಟ್ಟುವಳಿ ಸುಮಾರು ಐವತ್ತು ಸಾವಿರ ಪಗೋಡಗಳಷ್ಟಾಗುತ್ತಿತ್ತು. ಇಷ್ಟೆಲ್ಲಾ ಸುಂಕ ತೆರಿಗೆಗಳ ರೂಪದಲ್ಲಿ ಬರುತ್ತಿತ್ತು. ಅವರು ನೆಲಗಳನ್ನು ತರಗತಿಗಳನ್ನಾಗಿ ವಿಂಗಡಿಸಿದ್ದರು. ಆಯಾಯಾ ತರಗತಿಗನುಗುಣವಾಗಿ ತೆರಿಗೆ ವಿಧಾಯಕವಾಗುತ್ತಿತ್ತು. ಸಾಮಾನ್ಯವಾಗಿ ಪ್ರತಿಯೊಬ್ಬನೂ ತನ್ನ ಆದಾಯದ ಮೂರರಲ್ಲೊಂದು ಪಾಲನ್ನು ರಾಜನಿಗೆ ಸಲ್ಲಿಸಬೇಕಾಗುತ್ತಿತ್ತು. ಮನೆತೆರಿಗೆ, ಹುಲ್ಲುಬನ್ನಿ, ದನಕರುಗಳ ಮೇಲಿನ ಸುಂಕ, ಅಂಗಡಿ ಸುಂಕ, ಕಾಣಿಕೆ, ಗಿಡಗಾಮು, ಮಗ್ಗದ ತೆರಿಗೆ, ಉಪ್ಪಿನಮೋಳೆ... ಇವೇ ಮೊದಲಾದವು ನಾಡಿನ ಆದಾಯವನ್ನು ಹೆಚ್ಚಿಸಿದ್ದವು. ಇವಲ್ಲದೆ ಸಂತೆಗೆ ಬರುತ್ತಿದ್ದ ಸರಕುಗಳ ಮೇಲೂ ಸುಂಕ ವಿಧಿಸಲ್ಪಡುತ್ತಿತ್ತು. ಇವುಗಳನ್ನು ವಸೂಲು ಮಾಡಲು ಮಣೆಗಾರ, ಗೌಡ, ಶಾನುಭೋಗ ಮತ್ತು ಕೋಲುಕಾರರು ನೇಮಕವಾಗಿದ್ದರು. ಕರಕಾಣಿಕೆಗಳನ್ನು ಹಣದ ಮೂಲಕ ಅಥವಾ ಪದಾರ್ಥಗಳ ಮೂಲಕ ತೆರಬಹುದಾಗಿತ್ತು.

ನಾಡಿನ ಉತ್ಪತ್ತಿಯಲ್ಲಿ ಐದರಲ್ಲೊಂದು ಭಾಗ ಸೈನ್ಯದ ಖರ್ಚಿಗಾಗಿಯೂ, ಮದ್ದು ಗುಂಡುಗಳ ತಯಾರಿಕೆಗಾಗಿಯೂ ವಿನಿಯೋಗವಾಗುತ್ತಿತ್ತು. ರಾಯ, 8000 ಕಾಲಾಳುಗಳನ್ನೂ, 1000 ಕುದುರೆ ಸವಾರರನ್ನೂ ಇಟ್ಟಿದ್ದನು. ಕಾಲಾಳುಗಳಲ್ಲಿ ಅನೇಕರು ಹೊಲ ಗದ್ದೆಗಳನ್ನು ಮಾಡಿಕೊಂಡಿದ್ದು, ರಾಯ ಕರೆದಾಗ ಸಿದ್ಧರಾಗಿ ಬರುತ್ತಿದ್ದರು. ಈ ಸೈನ್ಯಕ್ಕೆ ರಾಯನೇ ಮಹಾದಂಡನಾಯಕ. ಬಸವಯ್ಯನೇ ದಂಡನಾಯಕ. ಸೈನ್ಯದ ಬಹುಭಾಗ ರಾಮಗಿರಿ ದುರ್ಗದಲ್ಲಿತ್ತು. ಒಂದೊಂದು ಸಾವಿರ ಕಾಲಾಳುಗಳಿಗೂ ಒಬ್ಬೊಬ್ಬ ಗುರಿಕಾರ ಮುಖಂಡನಾಗುತ್ತಿದ್ದನು. ಮದ್ದುಗುಂಡುಗಳ ತಯಾರಿಕೆ ರಾಮಗಿರಿಯಲ್ಲೇ ನಡೆಯುತ್ತಿತ್ತು.

ನಾಡಿನ ಮುಖ್ಯ ದೇವಾಲಯಗಳಿಗೆ ರಾಯನೇ ಒಡೆಯನಾಗಿದ್ದನು. ಧರ್ಮಕಾರ್ಯಗಳೆಲ್ಲವೂ ಅವನ



7th_Kannada_Reader.indd 124 24-06-2019 19:37:56

ಹೆಸರಿನಲ್ಲಿಯೇ ನಡೆಯುತ್ತಿದ್ದವು. ದೇವಾಲಯಗಳಲ್ಲಿ ನಡೆಯುತ್ತಿದ್ದ ಪೂಜೆ, ಉತ್ಸವಗಳ ಖರ್ಚಿಗಾಗಿ ರಾಯನೇ ಕೊಡುಗೆಗಳನ್ನು ಬಿಟ್ಟಿದ್ದನು. ಪೂಜಾರಿಗಳ ಜೀವನಕ್ಕಾಗಿ ದತ್ತಿಗಳಿದ್ದುವಲ್ಲದೆ, ನೆರೆಹೊರೆಯ ಗ್ರಾಮಸ್ಥರೂ ಸುಗ್ಗಿಯ ಕಾಲದಲ್ಲಿ ದವಸಗಳನ್ನು ಕೊಡುತ್ತಿದ್ದರು. ದೇವಾಲಯ, ಮಠ, ಅಗ್ರಹಾರಗಳು ಧಾರ್ಮಿಕ ಕಾರ್ಯಗಳ ಮತ್ತು ಶಿಕ್ಷಣದ ಕೇಂದ್ರಗಳಾಗಿದ್ದವು; ಸಂಗೀತ, ಶಿಲ್ಪ, ಮೊದಲಾದ ಕಲೆಗಳ ತವರಾಗಿದ್ದವು; ಅನೇಕ ಪಂಡಿತರ ಧರ್ಮೋಪದೇಶಕರ ಆಶ್ರಯ ಸ್ಥಾನವಾಗಿದ್ದವು; ಒಮ್ಮೊಮ್ಮೆ ಅವೇ ನ್ಯಾಯಮಂದಿರಗಳಾಗುತ್ತಿದ್ದವು. ಹಲವಾರು ಊರುಗಳ ಉತ್ಪತ್ತಿ ಅವುಗಳಿಗೆ ಸಲ್ಲುವಂತೆ ದೊರೆ ನಿರೂಪವನ್ನು ಹೊರಡಿಸುತ್ತಿದ್ದರು. ಪ್ರಯಾಣಿಕರು ಇಳಿದುಕೊಳ್ಳಲು, ಅನುಕೂಲವಾಗುವಂತೆ ಅಲ್ಲಲ್ಲಿ ಅರವಟ್ಟಿಗೆಗಳೂ, ವಸತಿ ಗೃಹಗಳೂ ಏರ್ಪಾಡಾಗಿದ್ದವು. ವಿಜಯನಗರದ ಅರಸುಗಳಿಗೆ ಪುಣ್ಯ ಒದಗಲೆಂದೂ, ತೀರಿಕೊಂಡ ತಮ್ಮ ಹಿರಿಯರಿಗೆ ಮೋಕ್ಷ ಸಿಗಲೆಂದೂ ರಾಯ ಅವರ ಹೆಸರಿನಲ್ಲಿ ಅಗ್ರಹಾರಗಳನ್ನು ದತ್ತಿ ಬಿಡುತ್ತಿದ್ದನು.

ರಾಜ್ಯಾಡಳಿತದಲ್ಲಿ ಸಲಹೆ ಕೊಡಲು ರಾಜ ಎಂಟು ಜನ ಮಂತ್ರಿಗಳನ್ನು ನೇಮಿಸಿಕೊಂಡಿದ್ದನು. ಇವರು ಪ್ರತಿನಿತ್ಯದ ಸಾಧಾರಣ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ಕಗ್ಗಂಟಾದ ಒಗಟುಗಳು ತಲೆದೋರಿದಾಗ ಈ ಮಂತ್ರಿಗಳ ಜೊತೆಗೆ ನಾಡಿನ ವೃದ್ಧಪ್ರಮುಖರನ್ನೂ ಸಹ ಕರೆಸಿಕೊಂಡು ಮಂತ್ರಾಲೋಚನೆ ನಡೆಸುತ್ತಿದ್ದನು. ರಾಜ್ಯಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸುವಾಗ ಅವರ ತೀರ್ಪೇ ಕೊನೆಯದಾಗಿತ್ತು. ದೇಶವನ್ನು ಶತ್ರುಗಳು ಆಕ್ರಮಿಸಿದಾಗ ನಾಡಿನಲ್ಲಿ ಕ್ಷಾಮಡಾಮರಗಳು ತಲೆದೋರಿದಾಗ ವೃದ್ಧಪ್ರಮುಖರ ಸಲಹೆಯಿಲ್ಲದೆ ಯಾವ ಕಾರ್ಯಗಳನ್ನೂ ಕೈಗೊಳ್ಳುತ್ತಿರಲಿಲ್ಲ. ಈ ಸಲಹೆಗಳನ್ನು ಕಾರ್ಯ ರೂಪಕ್ಕೆ ತರಲು ರಾಯ ಸಾಕಾದಷ್ಟು ಸಿಬ್ಬಂದಿಯನ್ನು ಹೊಂದಿದ್ದನು. ಮೇಲ್ತರಗತಿಯ ಅಧಿಕಾರಿಗಳನ್ನು ನೇಮಿಸಿಕೊಳ್ಳುವಾಗ ರಾಯ ಎಚ್ಚರಿಕೆಯಿಂದ ಇರುತ್ತಿದ್ದನು. ಆ ಅಧಿಕಾರಿಗಳು ನೀಚರಾದರೆ ಪ್ರಜೆಗಳು ಕೆಡುತ್ತಾರೆ, ಕೆಳಗಣ ಅಧಿಕಾರಿಗಳು ಕೆಡುತ್ತಾರೆ ಎಂಬುದು ರಾಯರಿಗೆ ಗೊತ್ತಿತ್ತು.

ರಾಷ್ಟ್ರದ ಮೂಲಾಧಾರ ಸಮಾಜವಾಗಿತ್ತು. ಸಹಕಾರ ಪದ್ಧತಿ, ಸಾಂಘಿಕ ಜೀವನಗಳೇ ಈ ಸಮಾಜದ ತಿರುಳಾಗಿದ್ದವು. ಹಳ್ಳಿಗಳಿಂದ ಹಿಡಿದು ನಗರದವರೆಗೆ ಸಾಂಘಿಕ ಜೀವನವನ್ನು ಕಾಣಬಹುದಾಗಿತ್ತು. ರಾಯ ಬೆಂಗಳೂರನ್ನು ಕಟ್ಟಿಸಿದಾಗ ನಾನಾ ಪ್ರಾಂತ್ಯಗಳಿಂದ ಹಲವಾರು ಕಸುಬುದಾರರನ್ನು ಕರೆಸಿ ಅವರಿಗೆಲ್ಲಾ ಪ್ರತ್ಯೇಕವಾದ ವಸತಿಗಳನ್ನು ಕಲ್ಪಿಸಿ ಕೊಟ್ಟಿದ್ದನು. ತಮ್ಮ ತಮ್ಮ ವ್ಯಕ್ತಿತ್ವವನ್ನು ಅಭಿವೃದ್ಧಿ ಪಡಿಸುವುದಕ್ಕೂ, ತಮ್ಮ ತಮ್ಮಲ್ಲಿಯೇ ತಲೆದೋರುತ್ತಿದ್ದ ಒಡಕು ಬಿರುಕುಗಳನ್ನು ಸರಿಪಡಿಸಿಕೊಳ್ಳುವುದಕ್ಕೂ ಈ ಕೂಟ ಅನುಕೂಲವಾಗಿತ್ತು. ಇದೇ ರೀತಿ ಹಳ್ಳಿಗಳಲ್ಲಿಯೂ ಒಂದೊಂದು ಜಾತಿಗೂ ಒಂದೊಂದು ಕೂಟವಿರುತ್ತಿತ್ತು. ಒಂದೊಂದು ಕೂಟಕ್ಕೂ ಒಬ್ಬೊಬ್ಬ ಪ್ರಮುಖನಿರುತ್ತಿದ್ದನು. ಆಯಾಯಾ ಜಾತಿಗೆ ಸಂಬಂಧಿಸಿದ ವಿವಾದಗಳನ್ನು ಅವನೇ ತೀರ್ಮಾನಿಸುತ್ತಿದ್ದನು. ಈ ಕೂಟಗಳಿಗೆ ಮೇಲ್ಪಟ್ಟು ಕಟ್ಟೆ ಮನೆಗಳಿರುತ್ತಿದ್ದವು. ಕಟ್ಟೆ ಮನೆಯ ಯಜಮಾನ ನಾಡಗೌಡ. ಅವನ ತೀರ್ಪೇ ಕೊನೆಯ ತೀರ್ಮ. ಹೀಗಾಗಿ ಹಳ್ಳಿಗಳ ವ್ಯಾಜ್ಯಗಳು ಹಳ್ಳಿಗಳನ್ನು ಬಿಟ್ಟು ಹೊರಗೆ ತಲೆ ಹಾಕುತ್ತಿರಲಿಲ್ಲ.

ಜಾತಿಗೆ ಸಂಬಂಧಿಸಿದ ಕೂಟಗಳಿದ್ದಂತೆ ಇಡೀ ಹಳ್ಳಿಯ ಹಿತವನ್ನು ನೋಡಿಕೊಳ್ಳಲು ಗ್ರಾಮಸಭೆ ಅಥವಾ ಗ್ರಾಮಪಂಚಾಯಿತಿಗಳಿದ್ದವು. ಪ್ರತಿಯೊಂದು ಮನೆಯ ಯಜಮಾನನೂ ಅದರ ಸದಸ್ಯನಾಗಿರುತ್ತಿದ್ದನು. ಊರಿಗೆ ಸಂಬಂಧಿಸಿದ ಆರ್ಥಿಕ ಸಾಮಾಜಿಕ ಮತ್ತು ಧಾರ್ಮಿಕ ವ್ಯವಹಾರಗಳನ್ನು ಆ ಸಭೆಯೇ ತೀರ್ಮಾನಿಸುತ್ತಿತ್ತು. ಅಲ್ಲದೆ, ಸುಂಕ ತೆರಿಗೆಗಳನ್ನು ವಸೂಲು ಮಾಡಿ ಬೊಕ್ಕಸಕ್ಕೆ ಕಳುಹಿಸುವುದು, ಕೂಲಿ ಮಠಗಳನ್ನು ವ್ಯವಸ್ಥೆಗೊಳಿಸಿ ವಿದ್ಯಾ ಪ್ರಸಾರ ಮಾಡುವುದು, ಕೆರೆಕಾಲುವೆಗಳನ್ನು ಸರಿ ಪಡಿಸುವುದು, ಮಾರ್ಗಗಳನ್ನು ನಿರ್ಮಿಸುವುದು, ದೇವಾಲಯಗಳ ಉತ್ಸವ, ಸಮಾರಂಭಾದಿಗಳ ಮೇಲ್ವಿಚಾರಣೆ ಮುಂತಾದ ವ್ಯವಹಾರಗಳನ್ನು ನೋಡಿಕೊಂಡು ರಾಜ್ಯದ ಆಡಳಿತದಲ್ಲಿ ಆ ಸಭೆ ರಾಯನಿಗೆ ನೆರವಾಗುತ್ತಿತ್ತು. ರಾಯನೂ ಹಳ್ಳಿಗಳ ಆಡಳಿತದಲ್ಲಿ ಹೆಚ್ಚಾಗಿ ತಲೆ ಹಾಕುತ್ತಿರಲಿಲ್ಲ. ಹಳ್ಳಿಗರು ತಮಗೆ ಸಂಬಂಧಿಸಿದ ವ್ಯವಹಾರಗಳನ್ನು ಹಚ್ಚಿಕೊಳ್ಳದೆ ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿದ್ದರು. ಕಮ್ಮಾರ, ಕೆಲಸಿ, ಅಗಸ, ತೋಟಿ, ತಳವಾರ, ನೀರುಗಂಟಿ, ಓಜ, ಮೊದಲಾದವರು ಕೃಷಿಕನಿಗೆ ನೆರವಾಗುತ್ತಿದ್ದರು. ಅವರ ಸಂಸಾರಕ್ಕೆ ಸಾಕಾಗುವಷ್ಟು ಸಾಮಗ್ರಿಗಳನ್ನೂ, ರಾಗಿ ಭತ್ತ ಮೆಣಸಿನಕಾಯಿ, ತರಕಾರಿ ಇತ್ಯಾದಿಗಳನ್ನು ಕೃಷಿಕ ಅವರಿಗೆ ಕೊಡುತ್ತಿದ್ದನು. ಅವರಲ್ಲಿ ಮೇಲುಕೀಳೆಂಬ



7th_Kannada_Reader.indd 125 24-06-2019 19:37:56

ಭಾವನೆ ಇರಲಿಲ್ಲ. ಯಾವನೊಬ್ಬ ತನ್ನ ಕರ್ತವ್ಯವನ್ನು ಮಾಡದಿದ್ದರೂ ಇಡೀ ಹಳ್ಳಿಯ ಬಾಳಿನ ಯಂತ್ರವೇ ಹದಗೆಡುತ್ತಿತ್ತು.

ಪರಾವಲಂಬನವಿಲ್ಲದ ಸ್ವಪ್ರಭುತ್ವ, ಹಳ್ಳಿಗಳ ಮೂಲ ತತ್ವವಾಗಿತ್ತು. ದಂಡು ದಾಳಿ ಇರಲಿ ಗದ್ದುಗೆಯಿಂದ ಇಳಿಯಲಿ, ಹಳ್ಳಿಯ ಬಾಳು ನಿರಾತಂಕವಾಗಿ ಸುಲಲಿತವಾಗಿ ಸಾಗುತ್ತಿತ್ತು. ಇಲ್ಲಿ ಒಳ್ಳೆಯ ಬಾಳನ್ನು ಅನುಭವಿಸಬೇಕು, ಮುಂದೆ ಈ ಲೋಕದ ಋಣ ತೀರಿದ ಮೇಲೆ ಒಳ್ಳೆಯ ಗತಿ ದೊರೆಯಬೇಕು. ಇದೇ ಹಳ್ಳಿಯ ಜೀವನ ತತ್ವವಾಗಿತ್ತು. ಚೆನ್ನಾಗಿ ದುಡಿದು ಸಂಪಾದಿಸಿ ತಾನುಂಡು, ತನ್ನವರೂ ತಿಂದು, ಪರರಿಗೂ ಕೈ ನೀಡಿ ಇಕ್ಕಬೇಕು. ತನ್ನನ್ನು ಆಶ್ರಯಿಸಿದ ಜೀವರಾಶಿಗೆ ತೃಪ್ತಿಯನ್ನುಂಟು ಮಾಡಬೇಕು. ಆಲಸಿ ಜೀವನ ಶ್ರೇಯೋಭಿವೃದ್ಧಿಯ ಕುರುಹಲ್ಲ. ಪರರ ಎಂಜಲಿಗೆ ಬಾಯಿ ಬಾಯಿ ಬಿಡುತ್ತಾ ತಲೆ ಬಾಗಿ, ದೇಹವನ್ನು ಕುಗ್ಗಿಸಿ ಕೈಯೊಡ್ಡಿ ಕಾಯಬಾರದು. ಬೆವರು ಸುರಿಸಿದರೆ ದೇಹ ಶುದ್ಧವಾಗುತ್ತದೆ. ದೇಗುಲವಾಗುತ್ತದೆ. ದುಡಿಮೆಯ ಮೂಲಕ ಭಗವಂತನನ್ನು ಒಲಿಸಿಕೊಳ್ಳಬೇಕು. ನೆರೆಹೊರೆಯವರ ಮೇಲ್ಮೈ ಸಿರಿಗಳನ್ನು ನೋಡಿ ಕರುಬಬಾರದು. ಅವರು ಕೆಳಗೆ ಕುಸಿದಾಗ ಹಿಗ್ಗಬಾರದು. ಇವು ಹಳ್ಳಿಗರ ಆದರ್ಶ ಜೀವನದ ಆದರ್ಶ ತತ್ವಗಳಾಗಿದ್ದವು. ಆದುದರಿಂದ ಜನತೆಯಲ್ಲಿ ಬಡತನ ಇರಲಿಲ್ಲ. ದ್ವೇಷಾಸೂಯೆಗಳಿರಲಿಲ್ಲ. ಅವರ ಆಸೆ ಆಕಾಂಕ್ಷೆಗಳಿಗೆ ಮಿತಿ ಇತ್ತು. ಹೊಟ್ಟೆಬಟ್ಟೆಗಳಿಗೆ ಕೊರತೆ ಇರಲಿಲ್ಲ. ಸುಗ್ಗಿ ಬಂದಿತೆಂದರೆ ಹಾಡು ತಾನಾಗಿಯೇ ಚಿಮ್ಮಿ ಹರಿಯುತ್ತಿತ್ತು. ಹಳ್ಳಿಗರ ಕೆಚ್ಚು ನಚ್ಚುಗಳು, ನಲಿವು ಒಲವುಗಳು ಔದಾರ್ಯ ಸೌಜನ್ಯಗಳು, ಆತ್ಮಗೌರವ, ಆತ್ಮತೃಪ್ತಿಗಳು ಅನೇಕ ಭಂಗಿಗಳಲ್ಲಿ ಅನೇಕ ನಿಲುವುಗಳಲ್ಲಿ ಅನೇಕ ಸನ್ನಿವೇಶಗಳಲ್ಲಿ ಅವರ ಕುಣಿತದ ಮೂಲಕ ನಗುವಿನ ಮೂಲಕ ಹಬ್ಬ ಹರಿದಿನ ಜಾತ್ರೆಗಳ ಮೂಲಕ ಬೆಳದಿಂಗಳ ಕೋಲಾಟ, ಕತ್ತಿವರಸೆ, ದೊಣ್ಣೆ ವರಸೆಗಳ ಮೂಲಕ ಯಕ್ಷಗಾನಗಳ ಮೂಲಕ ವ್ಯಕ್ತವಾಗುತ್ತಿದ್ದವು.

'ಯಥಾರಾಜ ತಥಾ ಪ್ರಜಾ' ಎಂಬ ಹಿರಿಯರ ವಚನ ಎಂದೂ ಹುಸಿಯಾಗದು. 'ಗುರುವಿನಂತೆ ಶಿಷ್ಯ, ತಂದೆಯಂತೆ ಮಗ, ಹಿರಿಯ ಅಧಿಕಾರಿಯಂತೆ ಕಿರಿಯ ಅಧಿಕಾರಿ, ಹಾಗೆಯೇ ರಾಜನಂತೆ ಪ್ರಜೆ!' ಕೆಂಪರಾಯನ ಸತ್ಯ ಪಕ್ಷಪಾತ, ಧರ್ಮಾಭಿಮಾನ, ಕರ್ತವ್ಯ ನಿಷ್ಠೆಗಳು ಪ್ರತಿಯೊಂದು ಹಳ್ಳಿಯಲ್ಲೂ ಮನೆ ಮಾತಾಗಿದ್ದವು. ಪ್ರಜೆಗಳ ಸುಖವೇ ತನ್ನ ಸುಖವೆಂದು ರಾಯ ಅರಿತಿದ್ದನು. ಅದೇ ರೀತಿಯಲ್ಲಿ ಪ್ರಜೆಗಳು ಸಹ ರಾಯನಿಗೆ ತಮ್ಮ ಪ್ರಾಣಗಳನ್ನು ಕೊಡಲು ಸಿದ್ಧರಾಗಿದ್ದರು. ಅಂತಹವರಿಗೆ ರಾಯ ನೆತ್ತರುಕೊಡುಗೆಗಳನ್ನು ಬಿಡುತ್ತಿದ್ದನು. ಪ್ರಜೆಗಳು ಸಹ ರಾಯನ ಹೆಸರಿನಲ್ಲಿ ದೇವಾಲಯಗಳಿಗೆ ದತ್ತಿಗಳನ್ನು ಬಿಡುತ್ತಿದ್ದರು. ಒಮ್ಮೆ ಬಿಟ್ಟ ದತ್ತಿಗಳನ್ನು, ಮಾಡಿದ ಧರ್ಮ ಕಾರ್ಯಗಳನ್ನು ಯಾರೂ ಅಪಹರಿಸುವಂತಿರಲಿಲ್ಲ. ಸುಗ್ಗಿಯ ಕಾಲದಲ್ಲಂತೂ ಜನರ ಔದಾರ್ಯಕ್ಕೆ ಪಾರವೇ ಇರಲಿಲ್ಲ.

ಮತೀಯ ಸ್ವಾತಂತ್ರ್ಯ, ಪರಮತ ಸಹಿಷ್ಣುತೆಗಳು ಆ ಯುಗದ ವಿಶಿಷ್ಟ ಲಕ್ಷಣಗಳಾಗಿದ್ದವು. ಮತೀಯ ಕಲಹಗಳೇ ಇರಲಿಲ್ಲ. ಇದ್ದರೂ ಸರಾಗವಾಗಿ ತೀರ್ಮಾನವಾಗುತ್ತಿದ್ದವು. ಅನೇಕ ಮತೀಯರು ಒಟ್ಟಾಗಿ ಸೇರಿ ಧರ್ಮ ಕಾರ್ಯಗಳನ್ನು ಕೈಗೊಳ್ಳುತ್ತಿದ್ದ ಸಂದರ್ಭಗಳು ಬೇಕಾದಷ್ಟಿದ್ದವು.

ಕೆಂಪರಾಯನ ಯುಗ ಪೌರುಷ ಯುಗ. ಕಳ್ಳಕಾಕರು, ಮನೆಗಳಿಗೆ ನುಗ್ಗಿ ಕೊಳ್ಳೆ ಹೊಡೆದರೆ, ದನಗಳ ದೊಡ್ಡಿಗೆ ನುಗ್ಗಿ ತುರುಗಳನ್ನು ಅಪಹರಿಸಿಕೊಂಡು ಹೋಗುತ್ತಿದ್ದರೆ ಅಥವಾ ದುಷ್ಟರ ಕೈಗೆ ನಿರಪರಾಧಿಗಳು ಸಿಕ್ಕು ನರಳುತ್ತಿದ್ದರೆ ಜನರು ಒಗ್ಗಟ್ಟಿನಿಂದ ಮುನ್ನುಗ್ಗಿ ಪೀಡಕರನ್ನು ಸದೆ ಬಡಿಯುತ್ತಿದ್ದರು. ಕಳ್ಳಕಾಕರೊಡನೆ ಹೋರಾಡಿ ಮಡಿದ ವೀರರ ಜ್ಞಾಪಕಾರ್ಥವಾಗಿ ಅವರವರ ಕಡೆಯವರು ವೀರಗಲ್ಲುಗಳನ್ನೂ ನಿರ್ಮಿಸಿ ತಮ್ಮ ಭಕ್ತಿ ಗೌರವಗಳ ಕಾಣಿಕೆಯನ್ನು ಸಲ್ಲಿಸುತ್ತಿದ್ದರು.

* * * *

ಕೆಂಪೇಗೌಡನು ಅಶೋಕನಷ್ಟು ದೊಡ್ಡ ದೊರೆಯಾಗಿರಲಿಲ್ಲ ನಿಜ. ಆದರೆ ಅವನಂತೆ ಧರ್ಮವೀರನಾಗಿದ್ದನು. ಅವನು ಯಲಹಂಕ ನಾಡನ್ನು ಬೆಳೆಯಿಸಿದುದು ಕತ್ತಿಯ ಬಲದಿಂದಲ್ಲ. ಧರ್ಮದ ಬಲದಿಂದ! ಮೂರು ಹೊತ್ತೂ ಪ್ರಜೆಗಳ ಹಿತ ಚಿಂತನೆಯಲ್ಲಿಯೇ ಅವನು ಮಗ್ನನಾಗಿರುತ್ತಿದ್ದನು. ಜನರು ಸಂತುಷ್ಟರಾದರೆ ಈಶ್ವರನೂ ಸಂತುಷ್ಟನಾಗುತ್ತಾನೆಂದು ಅವನು ಅರಿತಿದ್ದನು. ಕೆಂಪೇಗೌಡರ ಹಿರಿಮೆಯನ್ನು ಇಂದಿಗೂ ಸಾರುತ್ತಿರುವ ಶಾಶ್ವತ ಕಾರ್ಯವೆಂದರೆ ಬೆಂಗಳೂರು ನಗರ ನಿರ್ಮಾಣ.



7th_Kannada_Reader.indd 126 24-06-2019 19:37:56

## ಕೃತಿ ಕರ್ತೃ ಪರಿಚಯ



ದೇ.ಜ.ಗೌ. ಎಂಬ ಹೆಸರಿನಿಂದ ಜವರೇಗೌಡರು ಆಧುನಿಕ ಸಾಹಿತ್ಯ ಜಗತ್ತಿನಲ್ಲಿ ಹೆಸರುವಾಸಿಯಾಗಿದ್ದಾರೆ. ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಚಕ್ಕೆರೆ ಗ್ರಾಮದಲ್ಲಿ 06.07.1918ರಂದು ಇವರು ಜನಿಸಿದರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಎಂ.ಎ., ಪದವೀಧರರಾಗಿ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ. ಇವರ ಸಾಹಿತ್ಯ ಸೇವೆ ಅವಿರತವಾದುದು.

ಇವರ 'ಬೆಂಗಳೂರು ಕೆಂಪೇಗೌಡ' ಎಂಬ ಕೃತಿಯಿಂದ ಈ ಭಾಗವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮೋತಿಲಾಲ ನೆಹರೂ, ಗೋಪಾಲಕೃಷ್ಣ ಗೋಖಲೆ, ರಾಷ್ಟ್ರಕವಿ ಕುವೆಂಪು ಮುಂತಾದ ಜೀವನ ಚರಿತ್ರೆಗಳನ್ನೂ, ಹರಿಹರನ ಗಿರಿಜಾಕಲ್ಯಾಣ, ಆಂಡಯ್ಯನ ಕಬ್ಬಿಗರ ಕಾವ, ಮೊದಲಾದ ಸುಮಾರು 20 ಸಂಪಾದಿತ ಗ್ರಂಥಗಳನ್ನೂ, ಸುಮಾರು 20 ಸ್ವತಂತ್ರ ಕೃತಿಗಳನ್ನೂ ಇವರು ರಚಿಸಿದ್ದಾರೆ. ಕನ್ನಡದಲ್ಲಿ ಶಕ್ತಿಯುತವಾಗಿ ಹೇಗೆ ಬರೆಯಬೇಕು ಎಂಬುದಕ್ಕೆ ಇವರ ಗದ್ಯ ಕೃತಿಗಳು ಸಾಕ್ಷಿಯಾಗಿವೆ.

## ಪದಗಳ ಅರ್ಥ

ನಿಸ್ಪೃಹತೆ–ಕಪಟವಿಲ್ಲದ, ಪ್ರಾಮಾಣಿಕವಾದ; ನಿಷ್ಪಕ್ಷಪಾತ–ಪಕ್ಷಪಾತವಿಲ್ಲದ, ಭೇದಭಾವವಿಲ್ಲದ; ಸುಂಕ–ತೆರಿಗೆ; ಪಗೋಡ–ಹಿಂದಿನ ಕಾಲದ ಒಂದು ಅಳತೆ; ಸವಾರ–ಕುದುರೆ ಮೇಲೆ ಸವಾರಿ ಮಾಡುವವ; ದತ್ತಿ–ಉಂಬಳಿ, ದಾನ; ತೀರಿಕೊಳ್ಳು–ಮರಣಹೊಂದು; ತೀರ್ಪು–ನ್ಯಾಯನಿರ್ಣಯ; ಓಜ–ಗುರು; ತರಕಾರಿ–ಕಾಯಿಪಲ್ಲೆ; ಯಥಾ–ಅದೇ, ಹೇಗೋ; ತಥಾ–ಹಾಗೇ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಕೆಂಪೇಗೌಡನ ತಮ್ಮಂದಿರು ಅಣ್ಣನಿಗೆ ಆಡಳಿತದಲ್ಲಿ ಹೇಗೆ ನೆರವಾದರು ?
2. ನಾಡಿನ ಆದಾಯಗಳನ್ನು ಹೆಚ್ಚಿಸಲು ಮಾಡಿದ ಯೋಜನೆಗಳಾವುವು?
3. ಹಳ್ಳಿಗಳಲ್ಲಿ ಜಾತಿಯ ಗಲಭೆ ಏಳದಂತೆ ಯಾವ ವ್ಯವಸ್ಥೆ ಇತ್ತು ?
4. ಕೆಂಪೇಗೌಡನ ರಾಜ್ಯದ ಆಡಳಿತದಲ್ಲಿ ಪ್ರಜೆಗಳ ಸ್ಥಾನವೇನು ?
5. 'ಕೆಂಪರಾಯನ ಯುಗ ಪೌರುಷ ಯುಗ' ಹೇಗೆ?






7th_Kannada_Reader.indd 127 24-06-2019 19:37:56

ವ್ಯಾಕರಣ

ಘಟಕ ಏಳು

# ಕ್ರಿಯಾಪದ

## ಕ್ರಿಯಾಪದಗಳು

ಕ್ರಿಯೆಯನ್ನು (ಕೆಲಸವನ್ನು) ಸೂಚಿಸುವ ಪದಗಳನ್ನು ಕ್ರಿಯಾಪದ ಎನ್ನುತ್ತೇವೆ.

ಉದಾಹರಣೆಗೆ, ಈಜು, ದಾಟು, ಹುಟ್ಟು, ಓಡು, ಕೊಡು, ಒದೆ, ಚಿಮ್ಮು.

ಕ್ರಿಯಾಪದದ ಮೂಲರೂಪವನ್ನು ಧಾತು ಎನ್ನುತ್ತೇವೆ. ಕ್ರಿಯಾಪದದಲ್ಲಿ ಎರಡು ವಿಧ.

1. ಸಕರ್ಮಕ ಕ್ರಿಯಾಪದ

2. ಅಕರ್ಮಕ ಕ್ರಿಯಾಪದ.

### 1. ಸಕರ್ಮಕ ಕ್ರಿಯಾಪದ

ಕರ್ಮಪದವನ್ನು ಬಯಸುವ ಕ್ರಿಯಾಪದಗಳನ್ನು ಸಕರ್ಮಕ ಕ್ರಿಯಾಪದ ಎಂದು ಕರೆಯುತ್ತೇವೆ.

ಉದಾಹರಣೆಗೆ,

ರಮೇಶನು ಗಿಡವನ್ನು **ನೆಟ್ಟನು**.
ಶಿಲ್ಪಿಗಳು ಗುಡಿಯನ್ನು **ಕಟ್ಟಿದರು**.
ವಿದ್ಯಾರ್ಥಿಗಳು ಪಾಠವನ್ನು **ಓದಿದರು**.

ಈ ಮೂರೂ ವಾಕ್ಯಗಳಲ್ಲಿರುವ ನೆಟ್ಟನು, ಕಟ್ಟಿದರು, ಓದಿದರು ಎಂಬ ಕ್ರಿಯಾಪದಗಳಿಗೆ ಏನನ್ನು ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ ಅನುಕ್ರಮವಾಗಿ ಗಿಡವನ್ನು, ಗುಡಿಯನ್ನು, ಪಾಠವನ್ನು ಎಂಬ ಉತ್ತರ ದೊರೆಯುವುದು. ಇಂತಹ ಕ್ರಿಯಾಪದವನ್ನು ಸಕರ್ಮಕ ಕ್ರಿಯಾಪದ ಎಂದು ಕರೆಯುವರು.

### 2. ಅಕರ್ಮಕ ಕ್ರಿಯಾಪದ

ಕರ್ಮಪದವನ್ನು ಬಯಸದೇ ಇರುವ ಕ್ರಿಯಾಪದಗಳೇ ಅಕರ್ಮಕ ಕ್ರಿಯಾಪದಗಳು ಎನ್ನಿಸುವುವು.

ಉದಾಹರಣೆಗೆ,

ಕೂಸು **ಮಲಗಿತು**.
ಅವನು **ಬದುಕಿದನು**.
ಆಕಾಶ **ಹೊಳೆಯುತ್ತಿದೆ**.

ಇಲ್ಲಿ ಮಲಗಿತು, ಬದುಕಿದನು, ಹೊಳೆಯುತ್ತಿದೆ ಎಂಬ ಕ್ರಿಯಾಪದಗಳಿಗೆ ಏನನ್ನು ಎಂಬ ಪ್ರಶ್ನೆ ಹಾಕಿಕೊಂಡರೆ ಉತ್ತರ ಇರುವುದಿಲ್ಲ. ಅಂದರೆ ಕರ್ಮಪದವನ್ನು ಇವು ಬಯಸುವುದಿಲ್ಲ. ಇಂತಹ ಕ್ರಿಯಾಪದಗಳಿಗೆ ಅಕರ್ಮಕ ಕ್ರಿಯಾಪದ ಎನ್ನುತ್ತೇವೆ.



7th_Kannada_Reader.indd 128 24-06-2019 19:37:56

ಘಟಕ ಎಂಟು

# 8. ಧರ್ಮ–ತತ್ವ–ಚಿಂತನೆ



## ಕಲಿಕಾ ಉದ್ದೇಶಗಳು

- ದೇವನೊಬ್ಬ ನಾಮ ಹಲವು ಎಂಬ ತತ್ವವನ್ನು ತಿಳಿದುಕೊಳ್ಳುವುದು.
- ಮಾನವನು ಮಾಡುವ ಪೂಜೆ ಪುನಸ್ಕಾರ ಶುದ್ಧವಾಗಿರಬೇಕೆಂಬುದನ್ನು ತಿಳಿದುಕೊಳ್ಳುವುದು.
- ಸತ್ಯ, ಧರ್ಮ, ನ್ಯಾಯಕ್ಕಾಗಿ ಪ್ರಾಣ ತೆತ್ತ ಯೇಸುವಿನ ಬಗ್ಗೆ ತಿಳಿದುಕೊಳ್ಳುವುದು.
- ವಿಭಕ್ತಿ ಪ್ರತ್ಯಯಗಳು, ತತ್ಸಮ–ತದ್ಭವಗಳ ಬಗ್ಗೆ ತಿಳಿದುಕೊಳ್ಳುವುದು.



7th_Kannada_Reader.indd 129 24-06-2019 19:37:56

ಘಟಕ ಎಂಟು

# 8. ಧರ್ಮ–ತತ್ವ–ಚಿಂತನೆ





| | | | |
|---|---|---|---|
| ಕಾವ್ಯ ಕಣಜ | : | ಗುಡಿಯ ನೋಡಿರಣ್ಣ | – ಸಂತ ಶಿಶುನಾಳ ಶರೀಫ |
| ಪೂರಕ ಪದ್ಯ | : | ಪೂಜೆ | –ಮಾಸ್ತಿ ವೆಂಕಟೇಶ ಅಯ್ಯಂಗಾರ್ |
| ಗದ್ಯ ವಿಹಾರ | : | ಯೇಸುವಿನ ಕೊನೆಯ ದಿನ | – ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ |
| ಉಪಪಠ್ಯ | : | ದೇವಶರ್ಮನ ಕಥೆ | – ಎ.ಆರ್.ಕೃಷ್ಣಶಾಸ್ತ್ರಿ |
| ವ್ಯಾಕರಣ | : | ವಿಭಕ್ತಿ ಪ್ರತ್ಯಯಗಳು, ತತ್ಸಮ–ತದ್ಭವಗಳು | |



7th_Kannada_Reader.indd 130 24-06-2019 19:37:56

ಕಾವ್ಯ ಕಣಜ

ಘಟಕ ಎಂಟು

# ಗುಡಿಯ ನೋಡಿರಣ್ಣ

– ಸಂತ ಶಿಶುನಾಳ ಶರೀಫ

## ಪ್ರವೇಶ

ಬದಲಾವಣೆ ಜಗದ ನಿಯಮ. ಸಮಾಜವೂ ಕೂಡ ಕಾಲಕ್ಕೆ ತಕ್ಕ ಹಾಗೆ ಬದಲಾಗುತ್ತದೆ. ಆದರೆ ಇಲ್ಲಾಗುವ ಬದಲಾವಣೆ ಸಮಾಜಕ್ಕೆ ಸಾಧಕವಾಗಿರಬೇಕೇ ಹೊರತು ಬಾಧಕವಾಗಿರಬಾರದು. ಸಮಾಜವು ಅನೀತಿಯಿಂದ ಕೂಡಿರುವಾಗ ಅದನ್ನು ಸರಿಪಡಿಸಲು ನಾಯಕರು ಮಹಾನ್ ಪುರುಷರು, ರೂಪುಗೊಳ್ಳುತ್ತಾರೆ. ಆ ಸಾಲಿನ ಮಹಾನ್ ಪುರುಷರು ಶಿಶುನಾಳ ಶರೀಫರು. ಈ ಕವನದಲ್ಲಿ ದೇಹವೆಂಬ ಗುಡಿಯನ್ನು ವರ್ಣಿಸಿ, ಈ ದೇಹದೊಳಗೆ ದೇವರು ವಾಸಿಸುವನು ಎಂಬ ಸಂದೇಶ ನೀಡಿದ್ದಾರೆ.





7th_Kannada_Reader.indd 131 24-06-2019 19:37:56

ಗುಡಿಯ ನೋಡಿರಣ್ಣ– ದೇಹದ
ಗುಡಿಯ ನೋಡಿರಣ್ಣಾ ||ಪಲ್ಲವಿ||

ಗುಡಿಯ ನೋಡಿರಿದು
ಪೊಡವಿಗೆ ಒಡೆಯನು
ಅಡರಿಕೊಂಡು ಕಡು ಬೆಡಗಿನೊಳಿರುತಿಹ
ಗುಡಿಯ ನೋಡಿರಣ್ಣಾ ||1||

ಮೂರು ಮೂಲಿಯ ಕಲ್ಲು–ಅದರೊಳು
ಜಾರುತಿರುವ ಕಲ್ಲು
ಧೀರ ನಿರ್ಗುಣನು ಸಾರ ಸಗುಣದಲಿ
ತೋರಿ ಅಡಗಿ ತಾ ಬ್ಯಾರಾಗಿರುತಿಹ
ಗುಡಿಯ ನೋಡಿರಣ್ಣಾ ||2||

ಆರು ಮೂರು ಕಟ್ಟಿ – ಮೇಲಕೆ
ಏರಿದವನೇ ಘಟ್ಟಿ
ಭೇರಿ ಕಹಳೆ ಶಂಖ ಭಾರಿ ಸುನಾದದಿ
ಮೀರಿದಾನಂದ ತೋರಿ ಹೊಳೆಯುತಿಹ
ಗುಡಿಯ ನೋಡಿರಣ್ಣಾ ||3||

ಸಾಗುತಿಹವು ದಿವಸ – ಸೇವಿಸಿ
ತೇಗಿ ಹೋಳಿಗಿ ಪಾಯಸ
ಯೋಗಿರಾಜ ಶಿಶುನಾಳಧೀಶ ತಾ–
ನಾಗಿ ಪರಾತ್ಪರ ಬ್ರಹ್ಮರೂಪನಿಹ
ಗುಡಿಯ ನೋಡಿರಣ್ಣಾ ||4||



7th_Kannada_Reader.indd 132 24-06-2019 19:37:57

## ಕವಿ ಕಾವ್ಯ ಪರಿಚಯ



ಸಂತ ಶಿಶುನಾಳ ಶರೀಫ(1819–1889)ರು ಕಳೆದ ಶತಮಾನದಲ್ಲಿ ಆಗಿ ಹೋದ ಹಿರಿಯ ಅನುಭಾವ ಸಂತಕವಿಗಳಲ್ಲಿ ಒಬ್ಬರು. ಧಾರವಾಡ ಜಿಲ್ಲೆಯ ಶಿಶುವಿನ ಹಾಳ ಇವರ ಊರು. ತಂದೆ ಇಮಾಮ ಸಾಹೇಬ. ತಾಯಿ ಹಜುಮಾ. ಪತ್ನಿ ಫಾತಿಮಾ. ಕಲಶದ ಗೋವಿಂದಭಟ್ಟರು ಇವರ ಗುರುಗಳು. ಹಾಡುಗಳ ಮೂಲಕ ಸಮಾಜದ ಅನೀತಿಯನ್ನು ಹೋಗಲಾಡಿಸಿ ಹೊಸ ಸಮಾಜವನ್ನು ನಿರ್ಮಿಸುವಲ್ಲಿ ಶ್ರಮಿಸಿದವರು. ದೇವನೊಬ್ಬ ನಾಮ ಹಲವು ಎಂಬ ತತ್ವವನ್ನು ನಂಬಿದವರು. ಕರ್ನಾಟಕದ ಕಬೀರ ಎಂದು ಕರೆಸಿಕೊಂಡವರು ಶರೀಫರು.

## ಪದಗಳ ಅರ್ಥ

ಪೊಡವಿ–ಭೂಮಿ, ಧರೆ, ನೆಲ; ಒಡೆಯ–ಯಜಮಾನ, ಮಾಲೀಕ; ಬೆಡಗು–ಅಂದ, ಒಯ್ಯಾರ; ಧೀರ–ಧೈರ್ಯಶಾಲಿ; ಅಡಗಿ–ಅವಿತುಕೊಂಡು; ಘಟ್ಟಿ–ಬಿಗಿಯಾದುದು; ಭೇರಿ–ಒಂದು ಬಗೆಯ ಚರ್ಮವಾದ್ಯ; ಕಹಳೆ–ತುತ್ತೂರಿ; ಸುನಾದ–ಇಂಪಾದ ಧ್ವನಿ; ಇಳಾಧೀಶ–ರಾಜ, ಅರಸ, ಇಳೆಯ ಒಡೆಯ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಯಾವುದನ್ನು ನೋಡಿರಣ್ಣಾ ಎಂದು ಶರೀಫರು ಹೇಳಿದ್ದಾರೆ?
2. ಗುಡಿಯು ಯಾರದು ?
3. ಗುಡಿಯೊಳಗೆ ಇರುವವನು ಹೇಗಿದ್ದಾನೆ ?
4. ಕಲ್ಲಿಗೆ ಎಷ್ಟು ಮೂಲೆಯಿದೆ ?
5. ಏನನ್ನು ಸೇವಿಸಿ ದಿವಸಗಳು ಸಾಗುತಿವೆ ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಪೊಡವಿಯ ಒಡೆಯನು ಎಲ್ಲಿ ಹೇಗಿದ್ದಾನೆ ?
2. ಗುಡಿಯೊಳಗಿರುವವನ ಗುಣಗಳನ್ನು ವರ್ಣಿಸಿ.
3. ಗುಡಿಯು ಹೇಗೆ ಹೊಳೆಯುತ್ತಿತ್ತು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಗುಡಿಯ ನೋಡಿರಣ್ಣಾ ಕವನದ ಸಾರಾಂಶವನ್ನು ಬರೆಯಿರಿ.

## ಭಾಷಾಭ್ಯಾಸ

1. **ಈ ಕೆಳಗೆ ಕೊಟ್ಟಿರುವ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.**
   ಗುಡಿ, ದೇಹ, ಪೊಡವಿ, ಒಡೆಯ, ಆನಂದ.
2. **ಈ ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ.**
   ಒಡೆಯ, ಧೀರ, ಮೇಲೆ, ಏರು, ರಾಜ
3. **ಕೊಟ್ಟಿರುವ ಪದಗಳ ವಚನ ಬದಲಿಸಿ ಬರೆಯಿರಿ.**
   ಕಲ್ಲು, ಅಣ್ಣ, ಗುಡಿ, ರಾಜರು, ತಾನು.
4. **ಈ ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.**
   ನೋಡಿರಣ್ಣಾ, ಅದರೊಳು, ಇಳಾಧೀಶ, ಸಾಗುತಿಹವು, ಮೀರಿದಾನಂದ.

## ಚಟುವಟಿಕೆ

1. ಶಿಶುನಾಳ ಶರೀಫರ ಇತರ ಗೀತೆಗಳನ್ನು ಆಲಿಸಿ, ಸಂಗ್ರಹಿಸಿ.
2. ಕಬೀರದಾಸರ ಬಗ್ಗೆ ತಿಳಿದುಕೊಳ್ಳಿರಿ.
3. ಕಬೀರ ದಾಸರ ಹಾಗೂ ಶರೀಫರ ಸೇವೆಗಳನ್ನು ತಿಳಿದುಕೊಳ್ಳಿರಿ.



7th_Kannada_Reader.indd 133 24-06-2019 19:37:57

ಪೂರಕ ಪದ್ಯ

ಘಟಕ ಎಂಟು

# ಪೂಜೆ

– ಮಾಸ್ತಿ ವೆಂಕಟೇಶ ಅಯ್ಯಂಗಾರ್

## ಪ್ರವೇಶ

ದೇವರನ್ನು ಒಲಿಸಿ ಪ್ರಾರ್ಥಿಸಿ ಅವನಿಂದ ವರಗಳನ್ನು ಬೇಡುವುದು ಮಾನವನ ಸಹಜ ಗುಣ. ಆದರೆ ಮಾನವನು ಮಾಡುವ ಪೂಜೆ ಪುನಸ್ಕಾರ ಶುದ್ಧವಾಗಿರಬೇಕು. ದೇವರ ನಾಮವನ್ನು ಹಾಡಿ ಹೊಗಳಿ ಅವನಿಂದ ಒಳಿತನ್ನು ಬೇಡುವುದು ನಮ್ಮ ಕಾಯಕವಾಗಿದೆ. ಈ ದಿಸೆಯಲ್ಲಿ ಕವಿಯು ದೇವರಿಗೆ ಯಾವ ರೀತಿ ಪೂಜೆ ಮಾಡಿದರು ಎಂಬುದನ್ನು ಇಲ್ಲಿ ವರ್ಣಿಸಿ ನಮ್ಮಯ ಪೂಜೆಯೂ ಹೀಗೆಯೇ ದೇವರಿಗೆ ಮೆಚ್ಚುಗೆಯಾಗುವಂತಿರಬೇಕು ಎಂದಿದ್ದಾರೆ.





7th_Kannada_Reader.indd 134 24-06-2019 19:37:57

ಯಾವ ರೂಪದೊಳು ನಿನ್ನನು ಪೂಜಿಸಿದೊಡೇನು ?
ಯಾವ ನಾಮದಿ ನಿನ್ನ ಕರೆದರೇನು?

ಚನ್ನಕೇಶವ ನೀನು; ಶ್ರೀನಿವಾಸನು ನೀನು
ಸನ್ನುತ ಪಿತಾಮಹ ಮಹೇಶ್ವರನು ನೀನು
ಪೊನ್ನವೆಟ್ಟಿನ ಮೇಲೆ ವಿಹರಿಸುವರೆಂದೆನುವ
ಮುನ್ನೂರ ಮುವ್ವತ್ತು ಕೋಟಿ ದೇವರು ನೀನು ||1||

ದೇಶಾಂತರಗಳಲಿ ನೂರಾರು ಕಾಲದಲಿ
ಸಾವಿರಾರು ಹೆಸರನ್ನಿಟ್ಟು ಕರೆದು
ದೇಶದೇಶದ ಜನರು ಗೆಯ್ದ ಪೂಜೆಗಳು ಜಗ
ದೀಶ ನಿನ್ನಡಿಗಳನು ಸೇರಿದವಲೇ! ||2||

ಜೀವಕೋಟಿಗಳ ಮನದಾಸೆಗಳನನುಸರಿಸಿ
ಭಾವ ಭೇದಕೆ ತಕ್ಕ ರೂಪಗಳ ತಳೆದು
ಸಾವಿರಾರು ನಾಮಗಳನು ಪೊತ್ತೆಲ್ಲರ
ಸೇವೆಯನು ಕೊಳುವವನು ಓರ್ವ ನೀನು! ||3||



7th_Kannada_Reader.indd 135 24-06-2019 19:37:57

## ಕವಿ ಕಾವ್ಯ ಪರಿಚಯ



ಶ್ರೀನಿವಾಸ ಎಂಬ ಕಾವ್ಯ ನಾಮದಿಂದ ಪ್ರಸಿದ್ಧರಾಗಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಹುಟ್ಟೂರು ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಮಾಸ್ತಿ. ಅವರ ಜನ್ಮ ದಿನಾಂಕ 06.08.1890. ಎಂ.ಸಿ.ಎಸ್.(ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆ)ಯಲ್ಲಿ ತೇರ್ಗಡೆಯಾಗಿ ಕಂದಾಯ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮೀಷನರ್ ಆಗಿ ವೃತ್ತಿಯನ್ನು ಪ್ರಾರಂಭಿಸಿದರು. ಉನ್ನತ ಸ್ಥಾನಗಳಲ್ಲಿ ಕೆಲಸ ಮಾಡಿ 1944ರಲ್ಲಿ ಸ್ವಇಚ್ಛೆಯಿಂದ ನಿವೃತ್ತಿ ಪಡೆದು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಭಾರತೀಯ ಜ್ಞಾನಪೀಠ ಪ್ರಶಸ್ತಿಗಳು ಬಂದಿವೆ. ಬೆಳಗಾವಿಯಲ್ಲಿ 1929ರಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇನ್ನೂ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ.

ಮಾಸ್ತಿಯವರು ಕನ್ನಡ ಸಣ್ಣ ಕಥೆಗಳ ಜನಕ ಹಾಗೂ ಪ್ರವರ್ತಕ ಎಂದು ಹೆಸರಾಗಿದ್ದಾರೆ. ಹದಿಮೂರು ಸಣ್ಣ ಕಥೆಗಳ ಸಂಕಲನಗಳನ್ನು ಹೊರತಂದಿದ್ದಾರೆ. ಸುಬ್ಬಣ್ಣ ಇವರ ಪ್ರಮುಖ ನೀಳ್ಗತೆ. ನವರಾತ್ರಿ, ಶ್ರೀರಾಮ ಪಟ್ಟಾಭಿಷೇಕ, ಚೆನ್ನಬಸವನಾಯಕ, ಚಿಕ್ಕವೀರರಾಜೇಂದ್ರ, ಆದಿಕವಿ ವಾಲ್ಮೀಕಿ, ವಿಮರ್ಶೆ, ನಮ್ಮ ನುಡಿ ಇವು ಇವರ ಇತರ ಕೆಲವು ಕೃತಿಗಳು. ಯಶೋಧರಾ ಮತ್ತು ಕಾಕನಕೋಟೆ ಇವು ಇವರ ಪ್ರಸಿದ್ಧ ನಾಟಕಗಳು. ಮಾಸ್ತಿಯವರು ಹೊಸಗನ್ನಡದ ಆದ್ಯ ಪ್ರವರ್ತಕರಲ್ಲಿ ಒಬ್ಬರು. ಸಣ್ಣ ಕಥೆಯನ್ನು ಕನ್ನಡದಲ್ಲಿ ಸಮೃದ್ಧವಾಗಿ ಬೆಳೆಸಿದವರು.

## ಪದಗಳ ಅರ್ಥ

ನಾಮ–ಹೆಸರು; ಸನ್ನುತ–ಚೆನ್ನಾಗಿ ಹೊಗಳಿದ; ಪೊನ್ನು–ಹೊನ್ನು, ಬಂಗಾರ, ಚಿನ್ನ; ವೆಟ್ಟು–ವಾಹನ, ಸಂಚರಿಸುವ ಸಾಧನ; ವಿಹರಿಸು–ಸುತ್ತಾಡು; ಅಡಿ–ಹೆಜ್ಜೆ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಚೆನ್ನಕೇಶವನ ಬೇರೆ ಬೇರೆ ನಾಮಗಳೇನು ?
2. ಜಗದೀಶನ ಅಡಿಗೆ ಸೇರುವುದು ಯಾವುದು?
3. ಸೇವೆಯನು ಪಡೆದುಕೊಳ್ಳುವವನು ಯಾರು?





7th_Kannada_Reader.indd 136 24-06-2019 19:37:57

ಘಟಕ ಎಂಟು

# ಯೇಸುವಿನ ಕೊನೆಯ ದಿನ

– ಟಿ.ವಿ. ವೆಂಕಟಾಚಲ ಶಾಸ್ತ್ರಿ

## ಪ್ರವೇಶ

'ಸತ್ಯವೆನ್ನಯ ರಾಜ್ಯ, ಸತ್ಯವನ್ನು ಈಡೇರಿಸುವ ರಾಜ ನಾನು' ಎಂದು ಸತ್ಯಕ್ಕಾಗಿ, ಧರ್ಮಕ್ಕಾಗಿ, ನ್ಯಾಯಕ್ಕಾಗಿ ಪ್ರಾಣ ತೆತ್ತ ಧಾರ್ಮಿಕ ದೇವ ಮಾನವ ಮಹಾಪುರುಷನಾದ ಯೇಸುವಿನ ಕೊನೆಯ ದಿನದ ವರ್ಣನೆಯನ್ನು ಇಲ್ಲಿ ವಿವರಿಸಲಾಗಿದೆ. ಯೆಹೂದ್ಯರು ರಾಜದ್ರೋಹ ಹಾಗೂ ಧರ್ಮದ್ರೋಹದ ಆರೋಪವನ್ನು ಯೇಸುವಿನ ಮೇಲೆ ಹೊರಿಸುತ್ತಾರೆ. ಇದರಿಂದ ಅಂದಿನ ರೋಮಿನ ಸಾಮ್ರಾಟನಾದ ಕೈಸರನ ಪ್ರತಿನಿಧಿಯಾದ ಪಿಲಾತನ ಬಳಿಗೆ ಈತನನ್ನು ನ್ಯಾಯ ವಿಚಾರಣೆಗೆ ಕರೆತಂದು ವಿಚಾರಿಸಿ, ತೀರ್ಪು ನೀಡುವ ಮರಣದ ಸನ್ನಿವೇಶವನ್ನು ಇಲ್ಲಿ ವರ್ಣಿಸಲಾಗಿದೆ.





7th_Kannada_Reader.indd 137 24-06-2019 19:37:57

ಪಿಲಾತನು ಯೇಸುವಿಗೆ ವಧ್ಯನೆಂದು ಘೋಷಿಸಿ ಮರಣಾಜ್ಞೆಯನ್ನು ವಿಧಿಸಿದನು. ಚಮ್ಮಟಿಗೆಯಿಂದ ಬಡಿಸಿ ಸಿಲುಬೆಗೆ ಹಾಕುವಂತೆ ಸಿಪಾಯಿಗಳಿಗೆ ಅವನನ್ನು ಒಪ್ಪಿಸಿದನು. 'ಯೆಹೂದ್ಯರ ರಾಜ ನಜರೇತಿನವನೇಸು' ಎಂದು ಮೂರು ಬರೆಹಗಳಲ್ಲಿ ಹಲಗೆಯ ಮೇಲೆ ಬರೆಸಿ ಅದನ್ನು ಸಿಲುಬೆಯಲ್ಲಿ ತೂಗಲು ತಿಳಿಸಿದನು. ಆಗ ಅಲ್ಲಿ ನೆರೆದ ಯಾಜಕ ಮಂದಿ ನಿಬ್ಬೆರಗಾಗಿ, 'ಇದೇಕೆ ಹೀಗೆ ಮಾಡಿದೆ? ಯೆಹೂದ್ಯರ ರಾಜನೀ ಯೇಸು ಎಂದು ಬರೆಸಿದೆ? ಈತನು ಯೆಹೂದ್ಯರ ರಾಜ ತಾನೆಂದನು ಎಂದಷ್ಟೆ ಬರೆಸು' ಎಂದು ಕೋರಿದರು. ಆ ಪಿಲಾತನು 'ಬರೆಯಿಸಿ ಆಯಿತು. ಮಾಡಿ ಆಯಿತು' ಎಂದು ಮತ್ತೆ ನುಡಿಯದೆ ಹಿಂಗಡೆಯಿಂದ ಇಳಿದು ಆರೋಗಣೆಗೆ ತೆರಳಿದನು.

ಇತ್ತ ಸಿಪಾಯಿಗಳು ಯೇಸುವನ್ನು ಸೆರೆಗೊಯ್ದರು. ಕಾವಲ ದಳ ಸುತ್ತ ನೆರೆದಿತ್ತು. ಅಗ ಅವನ ಬಟ್ಟೆಯನ್ನು ಸೆಳೆ ತೆಗೆದರು. ಕೆಂಪು ಹಚ್ಚಡ ಹೊದಿಸಿದರು. ಮುಳ್ಳಿನ ಕಿರೀಟವಿಟ್ಟರು. ಬಲಗೈಯಲ್ಲಿ ಒಂದು ಬೆತ್ತ ಕೊಟ್ಟರು; ಅವನ ಮುಂದೆ ಮೊಣಕಾಲೂರಿ 'ಯೆಹೂದ್ಯರರಸನೆ, ಸ್ವಸ್ತಿ!' ಎಂದು ಗೊಳ್ಳನೆ ನಕ್ಕು ಮೂದಲಿಸಿದರು; ಆ ಬೆತ್ತದಿಂದಲೆ ಬಡಿದರು. ಪ್ರೇಮದರುಣೋದಯವೆಂಬಂತೆ, ನಿರಪರಾಧಕ್ಕೆ ಮೂಕ ಸಾಕ್ಷಿಯೆಂಬಂತೆ ಬಾಸುಳೆಗಳೆದ್ದು ನೆತ್ತರು ಉಕ್ಕಿ ಹರಿಯಿತು. ಯೇಸುವು 'ಕಾಗೆಗಳ ಕೊತ್ತಲಿ ಕುಕ್ಕುವ ಎಳೆಕುಕಿಲಂತೆ ಕೆಂಡಗಳ ಕೋವೆಯಲಿ ಕಾವ ಕಾಂಚನದಂತೆ, ಮಂಜು ಮುಸುಗಿದ ಬೈಗಿನ ಬೆಳ್ಳಿಯಂತೆ' ಎಲ್ಲ ನೋವನ್ನು ಸಹಿಸಿದನು. 'ಒಂದು ಮಾತನೆತ್ತಿಲ್ಲ, ಮಾ ಎಂದಿಲ್ಲ!' ಈಗ ಕೆಂಪು ಹಚ್ಚಡ ತೆಗೆದು ಅವನ ತೊಡಿಗೆಯನ್ನೇ ತೊಡಿಸಿದರು. ಸಿಲುಬೆಗೆ ಹಾಕಲಿರುವ ಇಬ್ಬರು ಕಳ್ಳರೊಂದಿಗೆ ಯೇಸುವನ್ನು ವಧ್ಯ ಸ್ಥಾನಕ್ಕೆ ನಡೆಸಿಕೊಂಡು ಹೊರಟರು. ಜನರ ಬಲುಗುಂಪು ಅವನ ಬೆಂಬಳಿಗೆ ಬಂದಿತು.

ಅಂದು ವಸಂತಪೂರ್ಣಿಮೆಯ ಭೃಗುವಾರ, ನಡುಹಗಲ ಸಿರಿ ಹೊತ್ತು; ಭಾಸ್ಕರನ ಸುಳಿವಿಲ್ಲ. ಬರಮೋಡವೊಂದು ಬಾನಗಲ ಚಾಚಿತ್ತು. ಬೇಗೆ ತಡೆಯಲಾಗದು, ಇಳೆಯು ಉಬ್ಬಸದಲ್ಲಿ ಏದುತ್ತಿದೆ; ಗಾಳಿ ಸೂಸುತ್ತಿಲ್ಲ; ಮರಗಳಲ್ಲಿ ಎಲೆ ಕದಲುತ್ತಿಲ್ಲ; ಹಕ್ಕಿಗಳ ಉಸುರಿಲ್ಲ; ಜನಪದವೆಲ್ಲ ಧಗೆಯ ಹೆಬ್ಬಾವಂತೆ ಹೊರಟು, ಮಿಡಿತೆಯ ಮೊತ್ತದಂತೆ ತಿಂತಿಣಿವರಿದು ಜೆರುಸೆಲೇಮ್ ನಗರದ ಅಗಸೆಯ ಹೊರಗಣ ಗೊಲ್ಗೊಥಾ ಗಿರಿಗೆ ಬಂದು ಗುಂಪುಗೂಡಿತು. ಸಿಪಾಯಿಗಳು ಬಂಧಿಗಳಿಂದ ಹೊರಿಸಿ ತಂದ ಮೂರು ಸಿಲುಬೆಗಳನ್ನೂ ಗಿರಿಶಿಖರದಲ್ಲಿ ನಟ್ಟು ನಿಲ್ಲಿಸಿದರು. ನಡುವೆ ಯೇಸುವನ್ನೂ ಎಡಬಲದಲಿ ಕಳ್ಳರಿಬ್ಬರನ್ನೂ ಸಿಲುಬೆಗಳಿಗಿಕ್ಕಿ ಕೈಕಾಲುಗಳಿಗೆ ಮೊಳೆ ಜಡಿದರು. 'ಯೆಹೂದ್ಯರರಸನೀ ನಜರಾಯ ಯೇಸು' ಎಂಬ ಬರಹದ ಹಲಗೆಯನ್ನು ಬಲಗಡೆಗೆ ತೂಗಿದರು. ಹದ್ದು ಬಿಗಿವಡೆದ ಲಾವಿಗೆಯಂತೆ, ಪಡುವಣದಿ ಬಿಳಿಯ ಬಿದಿಗೆಯ ತಿಂಗಳಂತೆ, ಬಿಲ್ಲಿಗೆ ತೊಟ್ಟ ಸರಳಂತೆ, ಮರಣ ವೃಕ್ಷದೊಳು ಅಮೃತ ಫಲದಂತೆ ಯೇಸು ಸಿಲುಬೆಯಲ್ಲಿ ತೂಗಿದನು. ನರದೇಹವೆತ್ತ ಆತನಿಗೆ ಆ ತನುವಿನ ಗುಣಧರ್ಮವಾದ ಬೇನೆಯಿಲ್ಲದಿರಲು ಸಾಧ್ಯವೇ? ಆದರೂ ಇನಿಸಾದರೂ ತನ್ನ ಬೇನೆಯನ್ನು ಗಣಿಸಲಿಲ್ಲ. ತಾನು ಯಾರ ತನುಮನಗಳನ್ನಾಗಲೀ ನೋಯಿಸಿಲ್ಲೆಂದು ಬಗೆದು ಅಪಾರ ಯಾತನೆಯನ್ನು ತಣ್ಣನೆ ತಳೆದನು. ಮಗುವ ಮೊಗ ನೋಡಿ ತಾಯಿ ಹೆರಿಗೆ ನೋವನ್ನು ಪ್ರೀತಿಯಿಂದ ಸೈರಿಸುವಂತೆ, ಚೂಣಿಯ ಭಟ ಗಾಯದಳಲನ್ನು ಲೆಕ್ಕಿಸದೆ ಕಾದಾಡಿ ಮಡಿದು ಗೆಲ್ಲುವಂತೆ, ತನ್ನ ತೊರೆದ ಅರ್ಭಕರ ಹಂಬಲಿಸುವ ತಾಯಂತೆ, ತನ್ನ ಕಡಿಯುವವರಿಗೆ ತಂಪಾದ ನೆಳಲೀವ ಮರದಂತೆ, ತನ್ನ ನೋವನ್ನು ಅವರ ಹಂಬಲದಿಂದ ಮರೆತು ಯೇಸು 'ಇವರನ್ನು ಕ್ಷಮಿಸು ತಂದೆ! ತಾವು ಮಾಡುವುದೇನೆಂದು ಇವರು ಅರಿಯರು' ಎಂದು ನುಡಿದನು. 'ನಮಗಾಗಿ ಕ್ಷಮೆ ಯಾಚಿಸುವುದಿರಲಿ, ನೀನು ದೇವಸುತನಾದರೆ ಸಿಲುಬೆಯಿಂದಿಳಿದು ಬಾ, ನೋಡೋಣ' ಎಂದು ಆ ಜನ ಪ್ರತಿಯಾಡಿದರು. 'ಅನ್ಯರನ್ನು ರಕ್ಷಿಸಿದ ಈತನು ತನ್ನನ್ನು ತಾನೇ ರಕ್ಷಿಸಲಾರನೇ? ಯೆಹೂದ್ಯರ ಅರಸನಂತೆ! ಹಾಗಿದ್ದರೆ ಸಿಲುಬೆಯಿಂದ ಇಳಿದು ಬರಲಿ. ಇವನನ್ನು ನಂಬೋಣ. ದೇವರಲ್ಲಿ ಇವನಿಗೆ ಭರವಸೆಯಂತೆ! ದೇವರು ಇವನನ್ನು ರಕ್ಷಿಸಲಿ ನೋಡೋಣ. ದೇವಸುತನೆಂದನಲ್ಲವೆ!' ಎಂದು ಅಲ್ಲಿನ ಯಾಜಕರು ಅಣಕವಾಡಿದರು.

ಅನಿತರಲ್ಲಿ ಬಿರುಗತ್ತಲೊಂದು ಬಾನೆಲ್ಲ ಕವಿಯಿತು. ದೇವಸುತನ, ಅಮೃತನ ಈ ಮೃತಿ ನಾಟಕದ ಕಡೆಯ ತೆರೆಯಂತೆ ಭೂವ್ಯೋಮಗಳನ್ನು ಮುಚ್ಚಿ ಕವಿಯಿತು. ಹಗಲಿನ ದೀಪ ಆರಿಹೋಯಿತೇ? ಎಂದು ನೆರೆದವರೆಲ್ಲರ ಎದೆ ನಡುಗಿತು. ಆಗ ಯೇಸುವು ಆರ್ತಸ್ವರದಿಂದ 'ದೇವರೇ! ದೇವರೇ! ಯಾಕೆನ್ನ ಕೈ ಬಿಟ್ಟೆ?' ಎಂದು




7th_Kannada_Reader.indd 138 24-06-2019 19:37:57

ಕೂಗಿದನು. ಅಲ್ಲಿ ನಿಂತಿದ್ದ ಕೆಲವರು 'ಇವನು ಏಲೀಯನನ್ನು ಕರೆಯುತ್ತಾನೆ. ಏಲೀಯನೇನು ಬಂದು ಕಾಯುವನೇ ನೋಡೋಣ' ಎಂದರು. ಯೇಸುವು ಮೇಘ ನಿರ್ಘೋಷದಿಂದ 'ತಂದೆಯೇ! ನನ್ನ ಆತ್ಮವನ್ನು ನಿನ್ನ ಕೈಗೊಪ್ಪಿಸುವೆ' ಎಂದು ಬಾನತ್ತ ಕಣ್ಣೆತ್ತಿದನು. ತುದಿ ಬೆಟ್ಟದಿಂದ ಕರೆವ ತಾಯೆಡೆಗೆ ಮರಿಜಿಂಕೆ ಜಿಗಿವಂತೆ ಸುಗ್ಗಿಯೆಡೆಗಯ್ದುವಾ ಬಾನಕ್ಕಿಯಂತೆ, ದಿನಮುಖದಲ್ಲಿ ಇರುಳಿನ ಸೊಡರು ನೇಸರಂಬುಗುವಂತೆ, ಕ್ಷಿತಿಜದಿಂದ ಸಿಡಿದು ಮೇಲ್ನೆಗೆದ ಮಿಂಚಿನಂತೆ ಯೇಸುವಿನ ಆತ್ಮ ಬೆಳಕಿನ ಬೀಡನ್ನು ಸೇರಿತು, ಸ್ವರ್ಗಧಾಮವನ್ನು ಸೇರಿತು. ಒಡೆಯನಿಂದ ಪಡೆದ ಎರವಲನ್ನು ಒಡೆಯನಿಗೆ ಮರಳಿ ಕೊಡುವಂತೆ ಯೇಸು ಕಣ್ಮುಗಿದು ತಲೆಬಾಗಿ ತನ್ನ ತಂದೆಗೆ ಪ್ರಾಣವನ್ನು ಅರ್ಪಿಸಿದನು.

ದುಃಖವಾರ್ತೆಯನ್ನು ಜನಕ್ಕೆಲ್ಲ ಕೇಳಿಸುವ ಮೃತಕ ದುಂದುಭಿಯಂತೆ ಗಡಗಡನೆ ಪೊಡವಿ ನಡುಗಿತು. ಆಳಾಳಿನ ಎದೆ ಗುಹೆಯಲ್ಲಿ ಭೀತಿ ಮಾರ್ಮೊಳಗಿತು. ಕಾವಲಿನ ರೋಮಕ ಶತಾಧಿಪತಿ ಕುದುರೆಯಿಂದಿಳಿದು ಸೀಸಕವನ್ನು ತೆಗೆದು 'ಇವಂ ದೇವತನಯಂ ಗಡಾ' ಎಂದು ವಿಸ್ಮಯಪಟ್ಟನು. ಮೆಲ್ಲಮೆಲ್ಲನೆ ಕತ್ತಲ ಮೋಡ ತೆಗೆಯಿತು. ಎಳೆಗಾಳಿ ಸುಳಿಯಿತು. ಹಗಲಿನ ರಾತ್ರಿ ಪಾಳೆಯ ತೆಗೆದು ಸಂಧ್ಯಾರವಿ ಮತ್ತೆ ಮೂಡಿದ. ನಡು ಸಿಲುಬೆಯಲ್ಲಿ ಧರ್ಮ ಪತಾಕೆಯಂತೆ ಪಡುಮೊಗಗೊಂಡು ಚಾಚಿದ್ದ ಅಪರಭಾನುವಾದ ಯೇಸು ಸ್ವಾಮಿಯನ್ನು ಕಂಡು ತಾನೂ ಅಪರ ಸಮುದ್ರದಲ್ಲಿ ಮುಳುಗಿದ. ಅಲ್ಲಿ ನೆರೆದವರೆಲ್ಲ ಕತ್ತಲೆಯ ದಂಡೆಯಿಂದ ಹಿಂಡೆದ್ದ ಕೊಕ್ಕರೆಗಳಂತೆ ಗೊಲ್ಗೊಥಾದಿಂದ ಮನೆಗೆ ಮರಳಿದರು. ಅಲ್ಲಿ ಸದ್ದಿಲ್ಲ, ಸುಳಿವಿಲ್ಲ!

ಒಂದು ಹಳೆಯ ತಲೆಬುರುಡೆ ನಡು ಸಿಲುಬೆಯಿಂದ ಜಗವ ಬಾಯ್ಕಿಸಿದು ನಗುತ್ತಿತ್ತು. ಆ ಜಾಮದ ಪ್ರಹರಿ ತನ್ನ ಸರದಿ ಮುಗಿಯುವ ಹೊತ್ತು ಕಾಯುತ್ತಿದ್ದನು. ಆದರೆ ಗೊಲ್ಗೊಥಾ ಗಿರಿಯಿಂದ ಅನತಿ ದೂರದಲ್ಲಿ ಒಂದು ಅತ್ತಿಯ ಮರದೆಡೆ ಮೆಯ್ಮರಸಿ ಮಗ್ಧಲದ ಮರಿಯ ನಡುಸಿಲುಬೆಯೆಡೆಯಲ್ಲಿ ಕಣ್ಣು ನಟ್ಟು ಕಾದಿದ್ದಾಳೆ. ಗೊಲ್ಗೊಥಾದ ಹಿಂದಿನಿಂದ ಚಂದ್ರನು ಬೆಳಕಿನ ಬೆಳ್ಗೊಡೆ ಎತ್ತಿದನು. ಯೇಸು ಸ್ವಾಮಿಯ ಆತ್ಮದ ಅಮೃತ ತತ್ವದಂತೆ ಬೆಳುದಿಂಗಳು ಎಲ್ಲೆಡೆಯಲ್ಲೂ ತುಂಬಿ ತುಳುಕುತ್ತಿತ್ತು.

## ಕೃತಿ ಕರ್ತೃ ಪರಿಚಯ



ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು 1933ರಲ್ಲಿ ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ತೊಗರೆ ಎಂಬ ಗ್ರಾಮದಲ್ಲಿ ಜನಿಸಿದರು. ಅವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. 'ಶ್ರೀವತ್ಸ ನಿಘಂಟು', 'ಕನ್ನಡ ಛಂದಸ್ಸು', 'ಮಹಾಕಾವ್ಯ ಲಕ್ಷಣ', 'ಸಾಹಿತ್ಯ ಮಂಥನ', 'ಶಬ್ದಾರ್ಥ ವಿಹಾರ', 'ಹೊಸಗನ್ನಡದ ವ್ಯಾಕರಣ', 'ಹಳೆಯ ಹೊನ್ನು', 'ಚಾವುಂಡರಾಯ' ಮುಂತಾದ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. 'ಕನ್ನಡ ಚಿತ್ರ ಕಾವ್ಯ' ಎಂಬ ಅವರ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗ್ರಂಥಲೋಕ ಪ್ರಶಸ್ತಿ ಲಭಿಸಿವೆ. ಪ್ರಸ್ತುತ ಪಠ್ಯಭಾಗವನ್ನು ಅವರ 'ಕಾವ್ಯ ಚಿತ್ರಗಳು' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

'ಸತ್ಯವೆನ್ನಯ ರಾಜ್ಯ, ಸತ್ಯವನ್ನು ಈಡೇರಿಸುವ ರಾಜ ನಾನು' ಎಂದು ಸಾರುತ್ತಿದ್ದ ಯೇಸುವಿನ ಮೇಲೆ ರಾಜದ್ರೋಹ ಹಾಗೂ ಧರ್ಮದ್ರೋಹದ ಆರೋಪವನ್ನು ಯೆಹೂದ್ಯರು ಹೊರಿಸುತ್ತಾರೆ. ರೋಮಿನ ಸಾಮ್ರಾಟ ಕೈಸರನ ಪ್ರತಿನಿಧಿ ಪಿಲಾತನ ಬಳಿಗೆ ಯೇಸುವನ್ನು ಕರೆತರಲಾಗುತ್ತದೆ. ಯೆಹೂದ್ಯರು ಯೇಸುವನ್ನು ಗಲ್ಲಿಗೇರಿಸಬೇಕೆಂದು ಆಗ್ರಹ ಪಡಿಸಿದಾಗ ಅನ್ಯಮಾರ್ಗವಿಲ್ಲದೆ ಪಿಲಾತನು ಆತನನ್ನು ಸಿಲುಬೆಗೇರಿಸುವಂತೆ ಆಜ್ಞಾಪಿಸುತ್ತಾನೆ. ಯೇಸುವಿನ ಈ ಕೊನೆಯ ದಿನವನ್ನು ಆಧರಿಸಿ ಮಂಜೇಶ್ವರ ಗೋವಿಂದ ಪೈಗಳು ಹಳಗನ್ನಡದಲ್ಲಿ ಬರೆದಿರುವ ಖಂಡಕಾವ್ಯವೇ 'ಗೊಲ್ಗೊಥಾ'; ಇದರ ಹೊಸಗನ್ನಡ ಗದ್ಯರೂಪವೇ



7th_Kannada_Reader.indd 139 24-06-2019 19:37:57

ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು ರಚಿಸಿರುವ 'ಯೇಸುವಿನ ಕೊನೆಯ ದಿನ'.

ಗೊಲ್ಗೊಥಾ ಬೆಟ್ಟದಲ್ಲಿ ಯೇಸುವನ್ನು ಸಿಲುಬೆಗೇರಿಸಿದ ಸಂದರ್ಭವನ್ನು ಈ ಭಾಗದಲ್ಲಿ ಹೃದಯಂಗಮವಾಗಿ ಚಿತ್ರಿಸಲಾಗಿದೆ.

## ಪದಗಳ ಅರ್ಥ

ವಧ್ಯಸ್ಥಾನ–ಕೊಲ್ಲುವ ಸ್ಥಳ; ಚಮ್ಮಟಿಗೆ–ಚಾಟಿ, ಯಾಜಕ–ಗುರುಗಳು; ಆರೋಗಣೆ–ಊಟ; ಸ್ವಸ್ಥಿ–ಒಳಿತಾಗಲಿ; ಬಾಸುಳೆ–ಬಾಸುಂಡೆ; ಕೊತ್ತಳಿ–ಸಮೂಹ; ಹಿಂಡು–ಗುಂಪು; ಎಳೆಕುಕಿಲ–ಮರಿಕೋಗಿಲೆ; ಕೋವೆ–ಕುಲುಮೆ; ಭೃಗುವಾರ–ಶುಕ್ರವಾರ; ಮಾಣ್–ಕೂಡದು; ಬರಮೋಡ–ಮಳೆ ಸುರಿಸದ ಬರಿ ಮೋಡ; ಜನಪದ–ಜನಸಮೂಹ; ಕಿಂಕಿಣಿ–ಕಿರುಗೆಜ್ಜೆಯ ನಾದ, ಕಿಣಿಕಿಣಿ ಎಂಬ ಧ್ವನಿ; ಅಗಸೆ–ಕೋಟೆ ಬಾಗಿಲು; ಲಾವಿಗೆ–ಒಂದು ಜಾತಿಯ ಪಕ್ಷಿ; ಚೂಣಿ–ಸೇನೆಯ ಮುಂಭಾಗ; ಅರ್ಭಕ–ಮಗು; ಮೃತಿ–ಸಾವು; ವ್ಯೋಮ–ಆಕಾಶ; ಮೇಘನಿರ್ಘೋಷ–ಗುಡುಗು; ಕಾವಲಿನ ರೋಮಕ ಶತಾಧಿಪತಿ–ರೋಮನ್ ಕಾವಲಿನ ನೂರು ಸೈನಿಕರ ಒಡೆಯ; ಅಪರಾರ್ಕ–ಅಪರ ಭಾನು, ಇನ್ನೊಬ್ಬ ಸೂರ್ಯ; ಪ್ರಹರಿ–ಕಾವಲಿನವನು; ಪುಗು–ಪ್ರವೇಶಿಸು; ಮೃತಕ ದುಂದುಭಿ–ಮರಣ ದುಂದುಭಿ; ಸೀಸಕ–ತಲೆದೊಡಿಗೆ, ಸೈನಿಕರು ತಲೆಗೆ ಹಾಕಿಕೊಳ್ಳುವ ಲೋಹ ರಕ್ಷೆ, ಅಪರಸಮುದ್ರ–ಪಶ್ಚಿಮ ಸಮುದ್ರ.

## ಟಿಪ್ಪಣಿಗಳು

1. **ಗೊಲ್ಗೊಥಾ ಗಿರಿ:** ಹೀಬ್ರೂ ಭಾಷೆಯ ಈ ಶಬ್ದಕ್ಕೆ ಕಪಾಲ ಸ್ಥಾನ ಅಥವಾ ತಲೆಬುರುಡೆಯ ಸ್ಥಳ ಎಂಬ ಅರ್ಥವಿದೆ.
2. **ನಜರೇತಿನವನೇಸು:** ನಜರೇತ್ ಎಂಬ ಊರಿನ ಯೇಸು, ರೋಮಿಯ ಚಕ್ರವರ್ತಿ ಔಗುಸ್ತನ (ಕ್ರಿ.ಪೂ.27–ಕ್ರಿ.ಪೂ.14) ಆಳ್ವಿಕೆಯಲ್ಲಿ ರೋಮ್ ಸಾಮ್ರಾಜ್ಯಕ್ಕೆ ಒಳಪಟ್ಟ ಯಹೂದ್ಯಗಲಿ ಲಾಯದಲ್ಲಿನ ನಜರೇತ. ಆ ಊರಿನ ಯೋಸೆಫ್ ಎಂಬ ಬಡಗಿಯ ಮಗ; ನಜರಾಯ–ನಜರೇತಿನವನು.
3. **ಮಿಸ್ರದೊಂಬತ್ತನೆಯ ಮಾರಿ:** ಈಜಿಪ್ಟಿನಲ್ಲಿ ಸೆರೆಯಾಳುಗಳಾಗಿದ್ದ ಯಹೂದ್ಯರನ್ನು ಅಲ್ಲಿಂದ ಹೊರ ತರಲು ಕಳುಹಿಸಿದ ಹತ್ತು ಮಹಾಮಾರಿಗಳಲ್ಲಿ ಒಂಬತ್ತನೆಯದು. ಮೂರು ದಿನಗಳ ಕಗ್ಗತ್ತಲೆ.
4. **ಏಲೀಯ:** ಈತ ಯಹೂದ್ಯರ ಶ್ರೇಷ್ಠ ಪ್ರವಾದಿಗಳಲ್ಲಿ ಒಬ್ಬ.
5. **ತಲೆಬುರುಡೆ ನಡುಸಿಲುಬೆ:** ಆಲ್ಬರ್ಟ್ ದೊರರ್ ಎಂಬ ಜರ್ಮನಿಯ ಪ್ರಸಿದ್ಧ ಚಿತ್ರಕಾರನೂ ಶಿಲ್ಪಿಯೂ ಮಾಡಿದ ಶಿಲುಬೆಯಲ್ಲಿಯ ಯೇಸುವಿನ ಚಿತ್ರದಲ್ಲಿ ಯೇಸುವಿನ ಕಾಲ ಬುಡದಲ್ಲಿ ಒಂದು ತಲೆಬುರುಡೆ ಇದೆ.
6. **ಮಗ್ಧಲದ ಮರಿಯ:** ಈಕೆ ಯಹೂದ್ಯರಲ್ಲಿದ್ದ ಓರ್ವ ಲಾವಣ್ಯವತಿ. ಯೇಸುವಿನ ಅನುಯಾಯಿ. ಯೇಸುವಿನ ಪುನರುತ್ಥಾನದ ವಾರ್ತೆಯನ್ನು ಸಾರಿದವಳು.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಯೇಸುವಿಗೆ ಮರಣ ದಂಡನೆ ವಿಧಿಸಿದವರು ಯಾರು ?
2. ಸಿಪಾಯಿಗಳು ಯೇಸುವನ್ನು ಎಲ್ಲಿಗೆ ಕರೆತಂದರು ?
3. ತನ್ನ ನೋವನ್ನು ಮರೆಯುತ್ತಾ ಯೇಸುವು ನುಡಿದ ಮಾತೇನು ?
4. ಗೋಲ್ಗೊಥಾ ಬೆಟ್ಟದಿಂದ ಮನೆಗೆ ಮರಳಿದ ಜನರನ್ನು ಲೇಖಕರು ಯಾವುದಕ್ಕೆ ಹೋಲಿಸಿದ್ದಾರೆ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಹಲಗೆಯ ಬರಹವನ್ನು ಕುರಿತು ಪಿಲಾತ ಮತ್ತು ಯಾಜಕರ ನಡುವೆ ನಡೆದ ಸಂಭಾಷಣೆಯನ್ನು ತಿಳಿಸಿ?
2. ಕಾವಲ ದಳದವರು ಯೇಸುವನ್ನು ಹಿಂಸಿಸಿದ ರೀತಿಯನ್ನು ವಿವರಿಸಿ.



7th_Kannada_Reader.indd 140 24-06-2019 19:37:57

3. ಸಿಪಾಯಿಗಳು ಯೇಸುವನ್ನು ಸಿಲುಬೆಗೆ ಏರಿಸಿದ ಸಂದರ್ಭವನ್ನು ತಿಳಿಸಿ.
4. ಸಿಲುಬೆಗೇರಿದ ಯೇಸುವಿನ ಮಾತುಗಳಿಗೆ ಅಲ್ಲಿ ನೆರೆದವರ ಪ್ರತಿಕ್ರಿಯೆ ಏನು?
5. ಯೇಸು ಮರಣ ಹೊಂದಿದ ಸನ್ನಿವೇಶವನ್ನು ವಿವರಿಸಿ.

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಪಿಲಾತನು ಯೇಸುವಿಗೆ ಮರಣ ದಂಡನೆ ವಿಧಿಸಿದ ಸಂದರ್ಭ ಹಾಗೂ ಸಿಪಾಯಿಗಳು ಅವನನ್ನು ಮೂದಲಿಸಿದ ರೀತಿಯನ್ನು ಚಿತ್ರಿಸಿ.

2. ಗೊಲ್ಗೊಥಾ ಗಿರಿಯಲ್ಲಿ ಜನ ಗುಂಪು ಗೂಡಿದ್ದ ಸನ್ನಿವೇಶವನ್ನು ಲೇಖಕರು ಹೇಗೆ ಬಣ್ಣಿಸಿದ್ದಾರೆ ?

3. ಯೇಸುವನ್ನು ಸಿಲುಬೆಗೇರಿಸಿದ ಸಂದರ್ಭದಲ್ಲಿ ಬಂದಿರುವ ಪ್ರಕೃತಿ ವರ್ಣನೆಯನ್ನು ನಿರೂಪಿಸಿ.

## ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ಭಾಸ್ಕರ, ಚಂದ್ರ, ವ್ಯೋಮ, ಇರುಳು, ಬೆಟ್ಟ.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.**

   ಸೆರೆಗೊಯ್ದರು, ಕಿರೀಟವಿಟ್ಟರು, ಗುಂಪುಗೂಡಿತು. ಇನಿಸಾದರೂ, ನೇಸರಂ ಬುಗುವಂತೆ.

3. **ಕೆಳಗಿನ ಪದಗಳಿಗೆ ಅಚ್ಚಗನ್ನಡ ಪದಗಳನ್ನು ಬರೆಯಿರಿ.**

   ಪಶ್ಚಿಮ, ಪೂರ್ವ, ದಕ್ಷಿಣ, ಉತ್ತರ, ಸೂರ್ಯ, ಚಂದ್ರ.

4. **ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪಗಳನ್ನು ಬರೆಯಿರಿ.**

   ಜಾವ, ಚಮ್ಮಟಿಗೆ, ಮೂಕ, ಮೊಗ, ಕಾಗೆ, ಬಿದಿಗೆ, ಬೆತ್ತ, ಹಲಗೆ, ಪ್ರಾಣ, ಪೊಡವಿ, ಸ್ವರ.

5. **ಈ ಪಾಠದಲ್ಲಿ ಬಂದಿರುವ ಉಪಮಾಲಂಕಾರಗಳನ್ನು ಪಟ್ಟಿ ಮಾಡಿ.**

## ಚಟುವಟಿಕೆ

1. ಗೋವಿಂದ ಪೈಯವರ ಗೊಲ್ಗೊಥಾ ಮತ್ತು ವೈಶಾಖಿ ಕಾವ್ಯಗಳನ್ನು ಸಂಗ್ರಹಿಸಿ ಓದಿರಿ.





7th_Kannada_Reader.indd 141 24-06-2019 19:37:58

ಉಪಪಠ್ಯ

ಘಟಕ ಎಂಟು

# ದೇವಶರ್ಮನ ಕಥೆ

– ಎ.ಆರ್.ಕೃಷ್ಣಶಾಸ್ತ್ರಿ

## ಪ್ರವೇಶ

ಕಥೆಗಳು ಮಕ್ಕಳಿಗೆ, ಜನರಿಗೆ ಮುದವನ್ನು ಉಂಟು ಮಾಡುತ್ತವೆ. ಅದರಲ್ಲಿಯೂ ಜನಪದ ಕಥೆಗಳು, ನೀತಿ ಕಥೆಗಳು, ಬೇತಾಳದ ಕಥೆಗಳು, ದುಷ್ಟ ಶಿಕ್ಷೆಯನ್ನು ನೀಡಿ ಸಮಾಜವನ್ನು ಉತ್ತಮಗೊಳಿಸುವ ಸಂದೇಶವನ್ನು ಒಳಗೊಂಡಿರುತ್ತವೆ. ಈ ಕಥೆಯಲ್ಲಿಯೂ ಕೂಡ ಆಪತ್ಕಾಲದಲ್ಲಿ ಹೆದರದೆ ಕುಗ್ಗದೆ ಧೈರ್ಯದಿಂದ ಮುನ್ನುಗ್ಗಬೇಕು. ಸತ್ಯಕ್ಕಾಗಿ ನ್ಯಾಯಕ್ಕಾಗಿ ಏನೇ ಬಂದರೂ ಹೋರಾಡಬೇಕು ಎಂಬ ಸಂದೇಶವಿದೆ. ಒಳಿತನ್ನು ಮಾಡಿದವರಿಗೆ ಖಂಡಿತವಾಗಿ ಮುಂದೆ ಒಳ್ಳೇ ಪ್ರತಿಫಲ ದೊರೆಯುತ್ತದೆ ಎಂಬುದಕ್ಕೆ ಈ ಕಥೆಯು ಉತ್ತಮ ಉದಾಹರಣೆಯಾಗಿದೆ.





7th_Kannada_Reader.indd 142 24-06-2019 19:37:58

ಹಿಂದೆ ಉಜ್ಜಯಿನಿ ನಗರದಲ್ಲಿ ಆದಿತ್ಯಸೇನನೆಂಬ ರಾಜನಿದ್ದನು. ಅವನು ಒಬ್ಬ ಸಾಮಂತರಾಜನ ಮೇಲೆ ಒಮ್ಮೆ ದಂಡೆತ್ತಿ ಹೋಗಬೇಕಾಯಿತು. ತಾನು ತನ್ನ ಕುದುರೆಯ ಮೇಲೆ ಕುಳಿತು, ಸೈನ್ಯದೊಡನೆ ಹೊರಟನು. ಸಮಪ್ರದೇಶ ಬಂದ ಮೇಲೆ ಕುದುರೆಯ ಪಕ್ಕೆಯನ್ನು ತಿವಿದನು. ಅದು ಜನರ ಕಣ್ಣಿಗೆ ಕಾಣದಷ್ಟು ವೇಗವಾಗಿ ಓಡಿ ಹೋಯಿತು. ಸಾವಿರಾರು ಸವಾರರು ಹಿಂಬಾಲಿಸಿ ಹೋದರೂ ಅವನು ಸಿಕ್ಕಲಿಲ್ಲ. ಆದುದರಿಂದ ಅವನಿಗೆ ಏನೋ ಅಪಾಯ ಸಂಭವಿಸಿರಬಹುದೆಂದು ಹೆದರಿ, ಸೈನ್ಯವು ಮರಳಿ ಪಟ್ಟಣಕ್ಕೆ ಬಂದಿತು. ಮಂತ್ರಿಗಳು ಊರು ಬಾಗಿಲುಗಳನ್ನು ಭದ್ರ ಮಾಡಿಕೊಂಡರು. ಅತ್ತ ರಾಜನನ್ನು ಕುದುರೆಯು ಘೋರವಾದ ವಿಂದ್ಯಾಟವಿಗೆ ಕರೆದುಕೊಂಡು ಹೋಗಿ ಬಿಟ್ಟಿತು. ಆಗ ಅವನಿಗೆ ಏನು ಮಾಡುವುದಕ್ಕೂ ತೋರದೆ ಕೆಳಗಿಳಿದು ಕುದುರೆಗೆ ನಮಸ್ಕರಿಸಿ, 'ನೀನು ದೇವತಾ ಸ್ವರೂಪಿ. ನಿನ್ನಂತಹವರು ಪ್ರಭು ದ್ರೋಹ ಮಾಡುವುದಿಲ್ಲ. ಆದುದರಿಂದ ನಿನ್ನನ್ನು ಶರಣು ಹೋಗುತ್ತೇನೆ. ನನ್ನನ್ನು ಸರಿಯಾದ ದಾರಿಯಲ್ಲಿ ಕರೆದುಕೊಂಡು ಹೋಗು' ಎಂದು ಪ್ರಾರ್ಥಿಸಿದನು. ಆಮೇಲೆ ಅದರ ಮೇಲೆ ಕುಳಿತುಕೊಳ್ಳಲು ಅದು ಮಾರ್ಗಾಯಾಸವಾಗದಂತಹ ದಾರಿಯಲ್ಲಿ ಹೋಗುತ್ತಾ ನೂರಾರು ಯೋಜನಗಳನ್ನು ದಾಟಿ ಸಂಜೆಯ ಹೊತ್ತಿಗೆ ಉಜ್ಜಯಿನಿಯ ಹತ್ತಿರಕ್ಕೆ ತಂದು ಬಿಟ್ಟಿತು. ಸಂಜೆಯಾಯಿತೆಂದು ಊರ ಬಾಗಿಲುಗಳನ್ನು ಹಾಕಿ ಬಿಟ್ಟಿದ್ದರಿಂದ ಅವನು ಊರ ಹೊರಗೆ ಸ್ಮಶಾನದ ಸಮೀಪ ಇದ್ದ ಒಂದು ಮಠಕ್ಕೆ ಹೋದನು. ಅವನು ಕಳ್ಳನೋ ಏನೋ ಎಂದು ಹೆದರಿ ಅಲ್ಲಿದ್ದ ಕೆಲವರು ಬ್ರಾಹ್ಮಣರು ಅವನನ್ನು ಒಳಗೆ ಬಿಡದೆ ತಡೆದರು. ಅವರಲ್ಲಿ ದೇವಶರ್ಮನೆಂಬ ಸತ್ಯವಂತನೂ, ಗುಣವಂತನೂ ಆದ ಬ್ರಾಹ್ಮಣನೊಬ್ಬನಿದ್ದನು. ಅವನು ಯಜ್ಞೇಶ್ವರನನ್ನು ಕುರಿತು ತಪಸ್ಸು ಮಾಡಿ ಅವನಿಂದ ಕತ್ತಿಯನ್ನು ಪಡೆದುಕೊಂಡಿದ್ದ ವೀರನು. ಅವನು ಭವ್ಯಾಕಾರನಾದ ರಾಜನನ್ನು ನೋಡಿ ಇವನಾರೋ ವೇಷಧಾರಿಯಾದ ದೇವತೆ ಇರಬೇಕೆಂದುಕೊಂಡು, ಅವನನ್ನು ಒಳಗೆ ಕರೆತಂದು ಊಟ ಉಪಚಾರಾದಿಗಳಿಂದ ಸತ್ಕರಿಸಿ, ಹಾಸಿಗೆ ಹಾಸಿಕೊಟ್ಟು, ತಾನು ಕತ್ತಿ ಹಿಡಿದು ರಾತ್ರಿಯೆಲ್ಲಾ ಬಾಗಿಲಲ್ಲಿ ಕಾವಲಿದ್ದನು. ಬೆಳಿಗ್ಗೆ ಅವನ ಕುದುರೆಗೆ ತಡಿ ಹಾಕಿ ಸಿದ್ಧಪಡಿಸಿದನು. ರಾಜನು ಅವನ ನಿರೂಪ ತೆಗೆದುಕೊಂಡು ಉಜ್ಜಯಿನಿಯನ್ನು ಪ್ರವೇಶಿಸಿದನು. ಮಂತ್ರಿಗಳಿಗೂ ರಾಣಿಗೂ ಅವನನ್ನು ಕಂಡು ಸಂತೋಷವಾಯಿತು. ಮರುದಿವಸ ಅವನು ಮಠಕ್ಕೆ ಹೇಳಿ ಕಳುಹಿಸಿ ದೇವಶರ್ಮನನ್ನು ಕರೆಸಿ, ಎಲ್ಲರಿಗೂ ರಾತ್ರಿ ನಡೆದ ವೃತ್ತಾಂತವನ್ನು ತಿಳಿಸಿ ಅವನಿಗೆ ಒಂದು ಸಾವಿರ ಗ್ರಾಮಗಳನ್ನು ಉಂಬಳಿ ಕೊಟ್ಟನು. ಅಲ್ಲದೆ ಅವನಿಗೆ ಛತ್ರ, ವಾಹನಾದಿಗಳನ್ನೂ ಕೊಟ್ಟು ಅವನನ್ನು ತನ್ನ ಪುರೋಹಿತನನ್ನಾಗಿ ಮಾಡಿಕೊಂಡನು. ಅವನು ಆ ಗ್ರಾಮಗಳನ್ನು ತನ್ನ ಮಠದ ಇತರ ಬ್ರಾಹ್ಮಣರಿಗೂ ಹಂಚಿಕೊಟ್ಟನು. ಆದರೆ ಅವರು ಧನಮದದಿಂದ ಉದ್ಧತರಾಗಿ ಗ್ರಾಮಸ್ಥರಿಗೆ ಹಿಂಸೆ ಕೊಡುತ್ತಾ ಜಗಳ ಗಂಟರಾಗಿದ್ದರು.

ಒಂದು ದಿನ ಚಕ್ರಧರನೆಂಬ ಬ್ರಾಹ್ಮಣನು ಅವರನ್ನು ನೋಡಿ ನಿಷ್ಠುರವಾಗಿ, 'ಅಯ್ಯೋ, ನೀಚರಿರಾ! ತಿರುಕರಾಗಿದ್ದ ನಿಮಗೆ ಸಂಪತ್ತು ಬಂದದ್ದು ಈ ಗ್ರಾಮಗಳಿಗೆ ಮೃತ್ಯು ಬಂದಂತಾಯಿತು. ಇದೆಲ್ಲ ಬಹುನಾಯಕತ್ವದ ಫಲ. ಆದುದರಿಂದ ನಿಮ್ಮಲ್ಲಿ ಒಬ್ಬನನ್ನು ನಾಯಕನನ್ನಾಗಿ ಮಾಡಿಕೊಳ್ಳಿರಿ' ಎಂದನು. ಆಗ ಎಲ್ಲರೂ 'ನಾನು ನಾಯಕನಾಗುತ್ತಾನೆ, ನಾನು ಆಗುತ್ತೇನೆ' ಎಂದು ಮುಂದೆ ಬಂದರು. ಅವನು, 'ನಿಮ್ಮಲ್ಲಿ ಹೀಗೆ ಸ್ಪರ್ಧೆ ಇರುವುದಾದರೆ ಒಂದು ಕರಾರು ಮಾಡಿಕೊಳ್ಳಿರಿ. ಈ ಊರಿನ ಸ್ಮಶಾನದಲ್ಲಿ ಮೂರು ಜನ ಕಳ್ಳರನ್ನು ಇಂದು ಬೆಳಿಗ್ಗೆ ಶೂಲಕ್ಕೇರಿಸಿದ್ದಾರೆ. ಯಾರು ರಾತ್ರಿ ಹೋಗಿ ಅವರ ಮೂಗುಗಳನ್ನು ಕೊಯ್ದು ತರುತ್ತಾರೋ ಅವರೇ ನಿಮ್ಮ ನಾಯಕನಾಗಲಿ' ಎಂದನು. ಎಲ್ಲರೂ ಒಪ್ಪಿದರು. ಆದರೆ ರಾತ್ರಿಯಾಗುತ್ತಿದ್ದಂತೆ ಯಾರಿಗೂ ಧೈರ್ಯವಿರಲಿಲ್ಲ. ದೇವಶರ್ಮನೊಬ್ಬನು ಆಗಲೆಂದು ಕತ್ತಿ ಹಿಡಿದು ಹೋದನು.

ಅಷ್ಟು ಹೊತ್ತಿಗೆ ಆ ಕಳ್ಳರ ಹೆಣಗಳಲ್ಲಿ ಬೇತಾಳಗಳು ಸೇರಿಕೊಂಡು ಅವನನ್ನು ಗುದ್ದುವುದಕ್ಕೆ ಬಂದವು.



7th_Kannada_Reader.indd 143 24-06-2019 19:37:58

ಅವನು ಹೆದರದೆ ಅವರ ಮೂಗುಗಳನ್ನು ಕೊಯ್ದು ಬಟ್ಟೆಯ ಸೆರಗಿನಲ್ಲಿ ಕಟ್ಟಿಕೊಂಡು ಬಂದನು. ಆ ಸ್ಮಶಾನದಲ್ಲಿ ಒಬ್ಬ ಪರಿವ್ರಾಜಕನು ಒಂದು ಹೆಣದ ಮೇಲೆ ಕುಳಿತು ಜಪ ಮಾಡುತ್ತಿದ್ದನು. ಅವನೇನು ಮಾಡುತ್ತಾನೋ ನೋಡೋಣವೆಂದು ದೇವಶರ್ಮನು ಕುತೂಹಲದಿಂದ ಅವನ ಹಿಂದೆ ಮರೆಯಾಗಿ ನಿಂತು ನೋಡುತ್ತಿದ್ದನು. ಕೆಲವು ನಿಮಿಷಗಳು ಕಳೆದ ಮೇಲೆ ಹೆಣದ ಬಾಯಿಯಿಂದ ಬುಸ್ಸೆಂದು ಜ್ವಾಲೆಯುಂಟಾಯಿತು. ಅದರ ಹೊಕ್ಕಳಿಂದ ಸಾಸಿವೆ ಕಾಳುಗಳು ಬಂದವು. ಆ ಸಾಸುವೆ ಕಾಳುಗಳನ್ನು ತೆಗೆದುಕೊಂಡು ಅವನು ಶವವನ್ನು ತಟ್ಟಲು ಅದು ಎದ್ದು ನಿಂತಿತು. ಅದರ ಮೇಲೆ ಹತ್ತಿಕೊಂಡು ಹೊರಟು ಅವನು ಸ್ವಲ್ಪ ದೂರದಲ್ಲಿರುವ ಕಾತ್ಯಾಯನೀ ದೇವರ ದೇವಾಲಯಕ್ಕೆ ಬಂದನು. ದೇವಶರ್ಮನು ಅವನನ್ನು ಹಿಂಬಾಲಿಸಿ ಬಂದು, ಮರೆಯಲ್ಲಿ ನಿಂತು ಗುಡಿಯಲ್ಲಿ ಏನು ನಡೆಯುವುದು ಎಂಬುದನ್ನು ನೋಡುತ್ತಿದ್ದನು. ಪರಿವ್ರಾಜಕನು ದೇವಿಯನ್ನು ಪೂಜಿಸಿ ವರ ಬೇಡಿದನು. ದೇವಿಯು, 'ಆದಿತ್ಯಸೇನ ರಾಜನ ಮಗಳನ್ನು ತಂದು ನನಗೆ ಬಲಿ ಕೊಟ್ಟರೆ ನಿನ್ನ ಇಚ್ಛೆಯನ್ನು ನೆರವೇರಿಸುತ್ತೇನೆ' ಎಂದಳು. ಕೂಡಲೇ ಹೊರ ಹೊರಟು, ಅವನು ಶವವನ್ನು ತಟ್ಟಿ ಎಬ್ಬಿಸಿ, ಅದರ ಮೇಲೆ ಆ ಹುಡುಗಿಯನ್ನು ತರುವುದಕ್ಕೆಂದು ಆಕಾಶ ಮಾರ್ಗದಲ್ಲಿ ಹೊರಟನು. 'ನಾನಿರುವಾಗ ರಾಜಪುತ್ರಿಯನ್ನು ಕೊಲ್ಲಿಸಲೇ? ಆ ನೀಚನು ಬರುವವರೆಗೆ ಇಲ್ಲಿಯೇ ಇರುತ್ತೇನೆ!' ಎಂದು ದೇವಶರ್ಮನು ಅಲ್ಲಿಯೇ ಮರೆಯಾಗಿ ನಿಂತನು. ಪರಿವ್ರಾಜಕನು ಕಿಟಕಿಯ ಮೂಲಕ ಅಂತಃಪುರವನ್ನು ಹೊಕ್ಕು ಮಲಗಿದ್ದ ರಾಜಪುತ್ರಿಯನ್ನು ಹೊತ್ತುಕೊಂಡು ಬಂದಿಳಿದನು. ಅವಳು 'ಅಪ್ಪಾ! ಅಮ್ಮಾ!...' ಎಂದು ಅಳುತ್ತಿದ್ದಳು. ಅವನು ಬೇತಾಳವನ್ನು ಹೊರಗೆ ಬಿಟ್ಟು ಅವಳನ್ನು ಗರ್ಭಗುಡಿಗೆ ಎಳೆದುಕೊಂಡು ಹೋಗಿ, ಕೊಲ್ಲಬೇಕೆನ್ನುವಷ್ಟರಲ್ಲಿ ದೇವಶರ್ಮನು ಒಳಕ್ಕೆ ನುಗ್ಗಿ ಪರಿವ್ರಾಜಕನ ಜುಟ್ಟು ಹಿಡಿದು ಅವನ ತಲೆಯನ್ನು ತನ್ನ ಖಡ್ಗದಿಂದ ಕಡಿದು ಹಾಕಿದನು. ನಂತರ ರಾಜಪುತ್ರಿಯನ್ನು ಸಮಾಧಾನ ಮಾಡಿ, ಅವಳನ್ನು ಮನೆಗೆ ತಲುಪಿಸುವುದು ಹೇಗೆ ಎಂದು ಯೋಚಿಸುತ್ತಿರಲು, 'ಅಯ್ಯಾ! ದೇವಶರ್ಮ, ನೀನು ಕೊಂದ ಪರಿವ್ರಾಜಕನಿಗೆ ಬೇತಾಳವೂ ಸಾಸಿವೆಯೂ ಸಿದ್ಧಿಸಿದ್ದವು. ಅವನ ಸೆರಗಿನಲ್ಲಿರುವ ಸಾಸಿವೆಯನ್ನು ತೆಗೆದುಕೋ. ಅದರ ಸಹಾಯದಿಂದ ನೀನು ಅಂತರಿಕ್ಷದಲ್ಲಿ ಹೋಗಬಹುದು' ಎಂದು ಆಕಾಶವಾಣಿ ನುಡಿಯಿತು.

ಅದರಂತೆ ಅವನು ರಾಜಪುತ್ರಿಯೊಡನೆ ದೇವಸ್ಥಾನದಿಂದ ಆಕಾಶಮಾರ್ಗವಾಗಿ ಹೊರಟು, ಅಂತಃಪುರದಲ್ಲಿ ಅವಳನ್ನು ಬಿಟ್ಟು ಸಮಾಧಾನ ಹೇಳಿ, 'ನಾನು ಇನ್ನು ಹೊರಡುತ್ತೇನೆ. ನಾಳೆ ಬೆಳಿಗ್ಗೆ ಆಕಾಶ ಮಾರ್ಗದಲ್ಲಿ ಹೋಗುವುದಕ್ಕಾಗುವುದಿಲ್ಲ' ಎಂದನು. ಅವಳು ಹೆದರಿ 'ನೀನು ಹೊರಟು ಹೋದರೆ ಭಯದಿಂದ ನನ್ನ ಪ್ರಾಣವೂ ಹೊರಟು ಹೋಗುತ್ತದೆ' ಎಂದಳು. ಅದನ್ನು ಕೇಳಿ ಅವನು, 'ಆದದ್ದಾಗಲಿ. ಈಗ ನಾನು ಹೋಗುವುದಿಲ್ಲ. ಇವಳು ಪ್ರಾಣ ಬಿಟ್ಟರೆ ನಾನು ರಾಜನಿಗೆ ಏನು ಉಪಕಾರ ಮಾಡಿದಂತಾಯಿತು' ಎಂದುಕೊಂಡು ಅವಳ ಅಂತಃಪುರದಲ್ಲೇ ಇದ್ದು ಬಿಟ್ಟನು. ಅವನಿಗೆ ಆಯಾಸದಿಂದ ನಿದ್ರೆ ಬಂತು. ಅವಳಿಗೆ ಹೆದರಿಕೆಯಿಂದ ನಿದ್ರೆಯೇ ಬರಲಿಲ್ಲ. ಆಮೇಲೆ ಬೆಳಗಾದರೂ ಪಾಪ ಅವನಿಗೆ ಎಚ್ಚರವೇ ಆಗಲಿಲ್ಲ. ಒಂದು ಗಳಿಗೆ ವಿಶ್ರಮಿಸಿಕೊಳ್ಳಲಿ ಎಂದು ಅವಳು ಪ್ರೇಮದಿಂದ ಅವನನ್ನು ಎಬ್ಬಿಸಲಿಲ್ಲ. ಅಂತಃಪುರದ ಪರಿಚಾರಕರು ಅವನನ್ನು ನೋಡಿ ರಾಜನಿಗೆ ವಿಷಯ ತಿಳಿಸಿದರು.

ರಾಜನು ದೇವಶರ್ಮನನ್ನು ಕರೆಸಿ, ವಿಚಾರ ಮಾಡಲು ಅವನು ಅಮೂಲಾಗ್ರವಾಗಿ ನಡೆದ ಕಥೆಯನ್ನೆಲ್ಲ ಹೇಳಿ ತನ್ನ ಸೆರಗಿನಲ್ಲಿ ಕಟ್ಟಿಕೊಂಡಿದ್ದ ಕಳ್ಳರ ಮೂಗುಗಳನ್ನೂ, ಪರಿವ್ರಾಜಕನ ಸಾಸಿವೆ ಕಾಳುಗಳನ್ನೂ ತೋರಿಸಿದನು. ರಾಜನು ಮಠದ ಬ್ರಾಹ್ಮಣರನ್ನೂ ಚಕ್ರಧರನನ್ನೂ ಕರೆಸಿ ಕೇಳಿ ಮೂಗು ಹರಿದ ಕಳ್ಳರ ರುಂಡಗಳನ್ನೂ ಪರಿವ್ರಾಜಕನ ಮುಂಡವನ್ನೂ ನೋಡಿದ ಮೇಲೆ ಅವನಿಗೆ ನಂಬಿಕೆ ಉಂಟಾಯಿತು. ಅನಂತರ ತನ್ನ ಮಗಳ ಪ್ರಾಣವನ್ನು ಉಳಿಸಿದ್ದಕ್ಕಾಗಿ ಸಂತೋಷ ಪಟ್ಟು ಅವಳನ್ನು ದೇವಶರ್ಮನಿಗೆ ಮದುವೆ ಮಾಡಿಕೊಟ್ಟನು.



7th_Kannada_Reader.indd 144 24-06-2019 19:37:58

## ಕೃತಿ ಕರ್ತೃ ಪರಿಚಯ



ಎ.ಆರ್.ಕೃಷ್ಣಶಾಸ್ತ್ರಿಗಳು ಚಿಕ್ಕಮಗಳೂರು ಜಿಲ್ಲೆಯ ಅಂಬಳೆಯಲ್ಲಿ 12.02.1980ರಲ್ಲಿ ಜನಿಸಿದರು. ಇವರು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಬಿ.ಎ., ಹಾಗೂ ಎಂ.ಎ., ಪದವಿಯನ್ನು ಪಡೆದ ಮೇಲೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮತ್ತು ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು ಮತ್ತು ಪ್ರಾಧ್ಯಾಪಕರಾಗಿದ್ದು ಕನ್ನಡ ಬಾಷೆಯ ಏಳಿಗೆಗಾಗಿ ತುಂಬ ಶ್ರಮಿಸಿದ್ದಾರೆ. ಇವರು ಕನ್ನಡ ಕರ್ಮಯೋಗಿಗಳಲ್ಲಿ ಒಬ್ಬರು. ಕನ್ನಡ, ಸಂಸ್ಕೃತ, ಬಂಗಾಳಿ ಭಾಷೆಗಳಲ್ಲಿ ಇವರು ಪಂಡಿತರಾಗಿದ್ದರು. ಇವರು 'ಸಂಸ್ಕೃತ ನಾಟಕ', 'ಭಾಸ ಕವಿ', 'ಸರ್ವಜ್ಞ ಕವಿ', 'ನಾಗ ಮಹಾಶಯ', 'ಕಥಾಮೃತ', 'ಶ್ರೀಪತಿಯ ಕಥೆಗಳು' – ಇತ್ಯಾದಿ ಹಲವು ಕೃತಿಗಳನ್ನು ರಚಿಸಿದ್ದಾರೆ. 'ಪ್ರಬುದ್ಧ ಕರ್ನಾಟಕ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ನೆಟ್ಟು ಬೆಳೆಸಿದ ಕೀರ್ತಿ ಇವರದು. ಇವರ ಬರವಣಿಗೆ ಸರಳ, ಸ್ಪಷ್ಟ, ಸಂಗ್ರಹ, ಸರಸ ಹಾಗೂ ಸಾರಭೂತ. ಇವರ 'ಬಂಕಿಮ ಚಂದ್ರ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ. ಇವರು 1941ರಲ್ಲಿ ಹೈದರಾಬಾದಿನಲ್ಲಿ ನಡೆದ 26ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಈ ಕಥಾ ಭಾಗವನ್ನು ದಿವಂಗತ ಎ.ಆರ್. ಕೃಷ್ಣಶಾಸ್ತ್ರಿಗಳು ರಚಿಸಿರುವ 'ಕಥಾಮೃತ'ದಿಂದ ಆರಿಸಿಕೊಳ್ಳಲಾಗಿದೆ.

## ಪದಗಳ ಅರ್ಥ

ಸಾಮಂತ–ಅಧೀನ; ಯೋಜನ–ಸುಮಾರು ಹನ್ನೆರಡು ಮೈಲು; ತ್ರಿಭುವನ–ಮೂರು ಲೋಕ; ಯಜ್ಞೇಶ್ವರ–ಅಗ್ನಿದೇವ; ತಡಿ–ಕುದುರೆಯ ಬೆನ್ನ ಮೇಲೆ ಹಾಕುವ ಜೀನು; ನಿರೂಪ–ಅಪ್ಪಣೆ; ಪರಿವ್ರಾಜಕ–ಸನ್ಯಾಸಿ; ಅಂತಃಪುರ–ರಾಣೀವಾಸ; ರುಂಡ–ದೇಹವಿಲ್ಲದ ಬರಿಯ ತಲೆ; ಮುಂಡ–ತಲೆಯನ್ನುಳಿದ ದೇಹ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಆದಿತ್ಯ ಸೇನನು ಯಾರು ? ಆತನು ಹೇಗೆ ಒಂಟಿಯಾದನು ?
2. ಆದಿತ್ಯನು ಕುದುರೆಗೆ ಏನು ಹೇಳಿದನು ?
3. ದೇವಶರ್ಮನು ಯಾರು ?
4. ಚಕ್ರಧರನು ಏನೆಂದು ಹೇಳಿದನು ?
5. ದೇವಶರ್ಮನಿಗೆ ಏನೆಂದು ಆಕಾಶವಾಣಿಯಾಯಿತು?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಆದಿತ್ಯ ಸೇನನು ವಿಂದ್ಯಾಟವಿಯನ್ನು ಸೇರಲು ಕಾರಣವೇನು? ಅಲ್ಲಿ ಏನಾಯಿತು ?
2. ದೇವಶರ್ಮನಿಗೆ ರಾಜನು ಬಹುಮಾನ ನೀಡಲು ಕಾರಣವೇನು? ವಿವರಿಸಿ.
3. ದೇವಶರ್ಮನು ಪರಿವ್ರಾಜಕನನ್ನು ಕೊಲ್ಲಲು ಕಾರಣವೇನು?
4. ದೇವಶರ್ಮನು ರಾಜನ ಮಗಳನ್ನು ಮದುವೆಯಾದ ಸಂದರ್ಭವನ್ನು ವಿವರಿಸಿ.



7th_Kannada_Reader.indd 145 24-06-2019 19:37:58

ಘಟಕ ಎಂಟು

# ವಿಭಕ್ತಿ ಪ್ರತ್ಯಯಗಳು, ತತ್ಸಮ–ತದ್ಭವಗಳು

## ವಿಭಕ್ತಿ ಪ್ರತ್ಯಯಗಳು

ಸ್ವತಂತ್ರವಾಗಿ ಅರ್ಥವಿಲ್ಲದೆ, ನಾಮ ಪ್ರಕೃತಿಗಳ ಮುಂದೆ ಸೇರಿ ಬೇರೆ ಬೇರೆ ಅರ್ಥವನ್ನುಂಟು ಮಾಡುವ ಉ, ಅನ್ನು, ಇಂದ, ಗೆ ಮುಂತಾದ ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯಗಳೆನ್ನುವರು. ಕ್ರಿಯಾಪದಗಳೊಂದಿಗೆ ನಾಮಪದಗಳ ಸಂಬಂಧವನ್ನು ತಿಳಿಸುವ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಸಂಬಂಧ ಮತ್ತು ಅಧಿಕರಣಗಳು ಕಾರಕಾರ್ಥಗಳೆನಿಸುತ್ತವೆ. ಕಾರಕಾರ್ಥಗಳನ್ನು ವಿಭಜಿಸಿ ಹೇಳುವ ಪ್ರತ್ಯಯಗಳೇ ವಿಭಕ್ತಿ ಪ್ರತ್ಯಯಗಳು.

| ವಿಭಕ್ತಿಗಳು | ವಿಭಕ್ತಿ ಪ್ರತ್ಯಯಗಳು | ಕಾರಕಾರ್ಥ | ಏಕವಚನ | ಬಹುವಚನ |
|---|---|---|---|---|
| ಪ್ರಥಮಾ | ಉ | ಕರ್ತೃ | ಹುಡುಗನು | ಹುಡುಗರು |
| ದ್ವಿತೀಯಾ | ಅನ್ನು | ಕರ್ಮ | ಹುಡುಗನನ್ನು | ಹುಡುಗರನ್ನು |
| ತೃತೀಯಾ | ಇಂದ | ಕರಣ | ಹುಡುಗನಿಂದ | ಹುಡುಗರಿಂದ |
| ಚತುರ್ಥಿ | ಗೆ, ಇಗೆ, ಅಕ್ಕೆ | ಸಂಪ್ರದಾನ | ಹುಡುಗನಿಗೆ | ಹುಡುಗರಿಗೆ |
| ಪಂಚಮೀ | ಇಂದ, ದೆಸೆಯಿಂದ | ಅಪಾದಾನ | ಹುಡುಗನಿಂದ | ಹುಡುಗರಿಂದ |
| ಷಷ್ಠೀ | ಅ | ಸಂಬಂಧ | ಹುಡುಗನ | ಹುಡುಗರ |
| ಸಪ್ತಮೀ | ಅಲ್ಲಿ, ಒಳಗೆ | ಅಧಿಕರಣ | ಹುಡುಗನಲ್ಲಿ | ಹುಡುಗರಲ್ಲಿ |

(ಸೂಚನೆ : ತೃತೀಯಾ ವಿಭಕ್ತಿ ಪ್ರತ್ಯಯವೇ ಪಂಚಮೀ ವಿಭಕ್ತಿಯ ಕೆಲಸವನ್ನೂ ಮಾಡುವುದರಿಂದ ತೃತೀಯಾ ವಿಭಕ್ತಿಯ 'ಇಂದ'ವನ್ನೇ ಪಂಚಮಿಗೂ ಉಪಯೋಗಿಸಲಾಗುತ್ತದೆ)

## ತತ್ಸಮ–ತದ್ಭವಗಳು

**ತತ್ಸಮ :**

ತತ್ಸಮ ಎಂದರೆ ಸಂಸ್ಕೃತಕ್ಕೆ ಸಮಾನವಾದುದು ಎಂದರ್ಥ. ಸಂಸ್ಕೃತ ಭಾಷೆಯ ಶಬ್ದವನ್ನು ಅದು ಇರುವಂತೆಯೇ ಅಥವಾ ಕಡೆಯಲ್ಲಿ ಸ್ವಲ್ಪ ಬದಲಾಯಿಸಿ ಕನ್ನಡದಲ್ಲಿ ಬಳಸಿದರೆ ಅಂತಹ ಪದಗಳನ್ನು ತತ್ಸಮ ಅಥವಾ ಸಮಸಂಸ್ಕೃತಗಳೆಂದು ಕರೆಯುತ್ತಾರೆ.
**ಉದಾ :** ಸೀತೆ, ಗ್ರಹ, ಧರ್ಮ, ರಾಜ, ಮಾರ್ತ್ಯ, ಕರ್ತೃ ಇತ್ಯಾದಿ.

**ತದ್ಭವ :**

ಕೆಲವು ಸಂಸ್ಕೃತ ಪದಗಳು ರೂಪ ವ್ಯತ್ಯಾಸ ಹೊಂದಿ ಕನ್ನಡದಲ್ಲಿ ಬಳಕೆಯಾಗುತ್ತವೆ. ಇವುಗಳಿಗೆ ತದ್ಭವಗಳೆಂದು ಕರೆಯುತ್ತಾರೆ.
**ಉದಾ :** ಜಾತ್ರೆ, ಜೋಗಿ, ಆಸೆ, ದಡ, ಜಾವ ಇತ್ಯಾದಿ.

| ತತ್ಸಮ | ತದ್ಭವ |
|---|---|
| ಅಕ್ಷರ | ಅಕ್ಕರ |
| ಅಗ್ನಿ | ಅಗ್ಗಿ |
| ಆಶಾ | ಆಸೆ |
| ಇಂದ್ರ | ಇಂದಿರ |
| ಈಶ | ಈಸ |
| ಕೋಕಿಲ | ಕೋಗಿಲೆ |
| ಕುಮಾರ | ಕುವರ |
| ಚಂದ್ರ | ಚಂದಿರ |
| ಯಾತ್ರಾ | ಜಾತ್ರಾ |
| ಯೋಗಿ | ಜೋಗಿ |



7th_Kannada_Reader.indd 146 24-06-2019 19:37:58

ಘಟಕ ಒಂಬತ್ತು

# 9. ಮಾನವೀಯತೆ



## ಕಲಿಕಾ ಉದ್ದೇಶಗಳು

- ಜೀವಿಗಳಿಗೆ ಜೀವರಕ್ಷಣೆ ನೀಡುವುದು.
- ಪರರಿಗೆ ಹಿಂಸೆ ಕೊಡದೆ ಇರುವುದು.
- ದಯಾ ಗುಣವನ್ನು ಬೆಳೆಸಿಕೊಳ್ಳುವುದು.
- ಕಾಲಗಳು (ವರ್ತಮಾನ, ಭೂತ, ಭವಿಷ್ಯತ್ ಕಾಲಗಳನ್ನು ತಿಳಿಯುವರು).



7th_Kannada_Reader.indd 147 24-06-2019 19:37:58

ಘಟಕ
ಒಂಬತ್ತು

# 9. ಮಾನವೀಯತೆ



| | | | |
|---|---|---|---|
| ಕಾವ್ಯ ಕಣಜ | : | ಭರವಸೆ | – ಡಾ.ಎಚ್.ಎಸ್.ಸುಜಾತ |
| ಪೂರಕ ಪದ್ಯ | : | ಯೋಧ ಮತ್ತು ಹೆಂಗಸು | – ಸು.ರಂ.ಎಕ್ಕುಂಡಿ |
| ಗದ್ಯ ವಿಹಾರ | : | ಆದರ್ಶ ಸ್ನೇಹಿತರು | – (ಸಂಪಾದಿತ) |
| ಉಪಪಠ್ಯ | : | ಮನಃಪರಿವರ್ತನೆ | – ಡಾ.ಪ್ರಭುಶಂಕರ |
| ವ್ಯಾಕರಣ | : | ಕಾಲ ಸೂಚಕ ಪ್ರತ್ಯಯಗಳು ಮತ್ತು ಲೇಖನ ಚಿಹ್ನೆಗಳು | |



7th_Kannada_Reader.indd 148 24-06-2019 19:37:58

ಕಾವ್ಯ ಕಣಜ

ಘಟಕ ಒಂಬತ್ತು

# ಭರವಸೆ

– ಡಾ.ಎಚ್.ಎಸ್.ಸುಜಾತ

## ಪ್ರವೇಶ

ಪರಿಸರ ಮನುಷ್ಯನ ಬದುಕಿನ ಉಸಿರು. ಪರಿಸರ ಪೋಷಣೆ ಮಾನವರ ಬದುಕಿಗೆ ಅಗತ್ಯ. ಸಸಿಯನ್ನು ನೆಟ್ಟು ಅದರ ಬೆಳವಣಿಗೆಗೆ ತಮ್ಮ ಜೀವನವನ್ನು ಸವೆಯಿಸಿ ಇತರರ ಬದುಕಿಗೆ ಭರವಸೆ ಮೂಡಿಸುವಂತಹ ಜನರೂ ನಮ್ಮ ನಡುವೆ ಇದ್ದಾರೆ. ಅಂತಹ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡವರಲ್ಲಿ ಸಾಲುಮರದ ತಿಮ್ಮಕ್ಕ ಅಪರೂಪದ ವ್ಯಕ್ತಿ.





7th_Kannada_Reader.indd 149 24-06-2019 19:37:58

ನೂರುಗಟ್ಟಲೆ ಸಸಿಗಳನ್ನು ನೆಟ್ಟಿದ್ದೀಯೆ
ಕೈಯಾರೆ ಎರೆದು ಬೆಳೆಸಿದ್ದೀಯೆ

ತಾಯಿ ತಿಮ್ಮಕ್ಕ,
ಬಾಯಿ ಮಾತಲ್ಲ ನಿನ್ನ ದಿವ್ಯ ಕಾಯಕ.
ನೂರುಗಟ್ಟಲೆ ಸಸಿಗಳನ್ನು ನೆಟಿದ್ದೀಯೆ
ದೂರದಿಂದ ನೀರು ಹೊತ್ತು ತಂದಿದ್ದೀಯೆ
ಕೈಯಾರೆ ಎರೆದು ಬೆಳೆಸಿದ್ದೀಯೆ
ಬೆವರ ಹನಿ ಬೆರೆಸಿದ್ದೀಯೆ

ನೀ ನೆಟ್ಟ ಮರಗಳಲ್ಲಿ
ಹಕ್ಕಿಗಳು ಗೂಡು ಕಟ್ಟಿವೆ
ಮಕ್ಕಳು ಜೋಕಾಲಿ ಆಡಿದ್ದಾರೆ
ಬಿಸಿಲ ಕೋಲು ರಂಗೋಲಿ ರಚಿಸಿದೆ
ದಾರಿ ಹೋಕರು ದಣಿವಾರಿಸಿಕೊಂಡಿದ್ದಾರೆ
ಬುತ್ತಿ ಬಿಚ್ಚಿ ಉಂಡಿದ್ದಾರೆ
ನೀರು ನೆರಳು ಪಡೆದಿದ್ದಾರೆ
ಕಾಲು ಚಾಚಿ ಮಲಗಿದ್ದಾರೆ
ಕಣ್ಣು ಮುಚ್ಚಿ ಕಮ್ಮನೆಯ ಕನಸು ಕಂಡಿದ್ದಾರೆ.

ನಿನ್ನ ಹಸ್ತಸ್ಪರ್ಷ ಪಡೆದ ಕುಡಿಗಳು
ಭವಿಷ್ಯದಲ್ಲಿ ಲಕ್ಷ ವೃಕ್ಷಗಳಾಗುತ್ತವೆ
ಕೋಟಿಗೂ ಮೀರುತ್ತವೆ
ನಾಡಿಗೆ ಕಾಡಿನ ಕಂಪು ಕಸಿಯಾಗುತ್ತದೆ
ಇನ್ನು ಮುಂದೆ
ಕಣ್ಣ ಮುಂದಿನ ಎಳೆಯರು
ನಿನ್ನ ಹಿಂಬಾಲಿಸುತ್ತಾರೆ
ದೀಪದಿಂದ ದೀಪ ಹತ್ತಿಕೊಳ್ಳುತ್ತದೆ
ನಂದಾದೀಪಗಳ ನವಯುಗ ಪ್ರಾರಂಭವಾಗುತ್ತದೆ
ಬದುಕಿನಲ್ಲಿ ಭರವಸೆ ಮೂಡುತ್ತದೆ.



7th_Kannada_Reader.indd 150 24-06-2019 19:37:58

## ಕವಿ ಕಾವ್ಯ ಪರಿಚಯ

ಡಾ. ಎಚ್.ಎಸ್. ಸುಜಾತಾ ಅವರು ಬೆಂಗಳೂರಿನವರು. ಇವರು ಜನಿಸಿದ್ದು 15.03.1944ರಲ್ಲಿ. ಮೈಸೂರಿನ ಡಿ.ಬನುಮಯ್ಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. 'ಎಂ.ಎಸ್.ಪುಟ್ಟಣ್ಣ ಒಂದು ಅಧ್ಯಯನ' 'ಹಾಗಲವಾಡಿ ಪಾಳೇಗಾರರು' 'ಸೀತೆಯ ಭವಿಷ್ಯ', 'ಜೀವನ ಸಮರ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಸೀತೆಯ ಭವಿಷ್ಯ ಅನುವಾದ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಪ್ರಸ್ತುತ ಕವನವನ್ನು ಅವರ ಮಜಲುಗಳು ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಕವನದ ಆಶಯ

ಈ ಪದ್ಯದಲ್ಲಿ ಸಾಲು ಮರದ ತಿಮ್ಮಕ್ಕನ ದಿವ್ಯ ಕಾಯಕ ಮತ್ತು ಮರಗಳ ಪೋಷಣೆ ಬದುಕಿನಲ್ಲಿ ಭರವಸೆ ಮೂಡಿಸುತ್ತದೆ ಎಂಬ ಉದಾತ್ತ ಅಂಶವನ್ನು ಕವಯಿತ್ರಿ ತಿಳಿಸುತ್ತಾರೆ.

## ಪದಗಳ ಅರ್ಥ

ದಿವ್ಯ ಕಾಯಕ–ಶ್ರೇಷ್ಠವಾದ ಕಾರ್ಯ; ಕೈಯಾರೆ–ಸ್ವತಃ ತನ್ನ ಕೈಯಿಂದ; ಎರೆದು–ಸುರಿದು, ಹಾಕಿ; ಬಿಸಿಲಕೋಲು–ಎಲೆಗಳ ಮಧ್ಯದಿಂದ, ಕಿಂಡಿಗಳ ಮೂಲಕ ಬೀಳುವ ಸೂರ್ಯನ ಬೆಳಕು; ಕಮ್ಮನೆಯ–ಸುಗಂಧಯುಕ್ತವಾದ, ಪರಿಮಳವಾದ; ಭರವಸೆ–ವಿಶ್ವಾಸ, ಆಶ್ವಾಸನೆ, ಅಭಯ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಹಕ್ಕಿಗಳು ಎಲ್ಲಿ ಗೂಡು ಕಟ್ಟಿವೆ ?
2. ಯಾವುದು ರಂಗೋಲಿ ರಚಿಸಿದೆ ?
3. ಭವಿಷ್ಯದಲ್ಲಿ ಯಾವುವು ಲಕ್ಷ ವೃಕ್ಷಗಳಾಗುತ್ತವೆ?
4. ಮುಂದಿನ ಎಳೆಯರು ಯಾರನ್ನು ಹಿಂಬಾಲಿಸುತ್ತಾರೆ ?
5. ಭರವಸೆ ಎಲ್ಲಿ ಮೂಡುತ್ತದೆ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ದಾರಿ ಹೋಕರು ಸಾಲು ಮರದ ಅಡಿಯಲ್ಲಿ ಪಡೆದ ಸುಖ ಎಂತಹುದು?
2. ತಾಯಿ ತಿಮ್ಮಕ್ಕ ಮರಗಳನ್ನು ಹೇಗೆ ಬೆಳೆಸಿದ್ದಾಳೆ?
3. ತಿಮ್ಮಕ್ಕನ ಆದರ್ಶ, ಬದುಕಿನಲ್ಲಿ ಹೇಗೆ ಭರವಸೆಯನ್ನು ಮೂಡಿಸುತ್ತದೆ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ತಿಮ್ಮಕ್ಕ ಯಾರು ? ಅವಳು ಕೈಗೊಂಡ ಕಾಯಕ ಯಾವುದು ? ಅದು ನಮಗೆ ಹೇಗೆ ಆದ–ರ್ಶವಾಗಿದೆ ?

## ಭಾಷಾಭ್ಯಾಸ

**1. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ನೀರು, ಕನಸು, ಮೀರು, ಎಳೆಯರು, ಮರ.

**2. ಈ ಕೆಳಗಿನ ವಾಕ್ಯಗಳ ವಚನವನ್ನು ಬದಲಾಯಿಸಿ.**

ಅ. ಹಕ್ಕಿಗಳು ಗೂಡು ಕಟ್ಟಿವೆ.
ಆ. ದಾರಿಹೋಕನು ದಣಿವಾರಿಸಿಕೊಂಡಿದ್ದಾನೆ.

**3. ಕೆಳಗಿನ ಪದಗಳನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿ.**

ಅ. ಬುತ್ತಿ ಬಿಚ್ಚಿ ಉಂಡಿದ್ದಾರೆ.
ಆ. ಮಕ್ಕಳು ಜೋಕಾಲಿ ಆಡಿದ್ದಾರೆ.

**4. ಕೆಳಗಿನ ಪದಗಳನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ.**

ಅ. ನಿನ್ನ ಹಿಂಬಾಲಿಸುತ್ತಾರೆ.
ಆ. ಕಾಲು ಚಾಚಿ ಮಲಗಿದ್ದಾರೆ.

**5. ಈ ವಾಕ್ಯದಲ್ಲಿ 'ಹೊತ್ತು' ಪದದ ಅರ್ಥವು ಆಯಾ ವಾಕ್ಯದ ಸಂದರ್ಭದಲ್ಲಿ ಏನಾಗುತ್ತದೆ ಎಂಬುದನ್ನು ತಿಳಿಸಿ.**

ಅ. ನೀರು ಹೊತ್ತು ತಂದಿದ್ದೀಯೆ.
ಆ. ಹೊತ್ತು ಮುಳುಗಿತು, ಕತ್ತಲಾಯಿತು.
ಆ. ಹೊತ್ತು ಹೊತ್ತಿಗೆ ಔಷಧಗಳನ್ನು ಸರಿಯಾಗಿ ಸೇವಿಸಬೇಕು.

**6. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ನೂರುಗಟ್ಟಲೆ, ಕೈಯಾರೆ, ಕನಸು ಕಾಣು, ಮೂಡು, ನಂದಾದೀಪ, ಭರವಸೆ.

## ಚಟುವಟಿಕೆ

1. ನಿಮ್ಮ ಶಾಲೆಯ ಆವರಣದಲ್ಲಿ ಗಿಡಮರಗಳನ್ನು ಬೆಳೆಸಿ.



7th_Kannada_Reader.indd 151 24-06-2019 19:37:58

ಪೂರಕ ಪದ್ಯ

ಘಟಕ ಒಂಬತ್ತು

# ಯೋಧ ಮತ್ತು ಹೆಂಗಸು

– ಸು.ರಂ.ಎಕ್ಕುಂಡಿ

ಉರಿಬಿಸಿಲು, ಕೆಂಪು ಹುಡಿ, ಮೈತುಂಬ ಧೂಳಿಡಿಗಿ
ಕುದುರೆಯಿಳಿದನು ಯೋಧ, ಜನರ ಕಂಡು.
'ನೀರು ಹಣಿಸುವಿರ ತುಸು' ಅಂದಿರಲು ಹೆಂಗಸು
ಬೇಗ ಬಂದಳು ಮಡಕೆ ತುಂಬಿಕೊಂಡು ॥1॥

'ಬಳಲಿದಿರಿ ಪಾಪ! ಬನ್ನಿರಿ ಒಳಕ್ಕೆ ವಿಶ್ರಮಿಸಿ'
ಚಾಪೆಯನು ಹಾಸಿದಳು, ಕೂತುಕೊಳ್ಳಲು.
'ಇರಲಿ ಬಿಡಿ, ಈ ಮರದ ನೆರಳಲ್ಲೇ ಕೂಡುವೆನು
ತಂಪಾಗಿ ತಬ್ಬಿರುವವಿದರ ಹೆಳಲು' ॥2॥

'ಬಟ್ಟಲಿನ ತುಂಬ ಇದೆ ಜೇನು. ಈ ಚೊಂಬಿನಲಿ
ತಣ್ಣಗಿನ ನೀರೂ ಇದೆ. ತೆಗೆದುಕೊಳ್ಳಿ.
ಇಲ್ಲಿಹುದು ಬೀಸಣಿಕೆ, ಬಹಳ ಸೆಖೆ ಅಲ್ಲವೇ?
ಇದರಿಂದ ಗಾಳಿಯನು ಬೀಸಿಕೊಳ್ಳಿ' ॥3॥

ಆಗ ಒಮ್ಮೆಲೇ ಬೀಸಿ ಬಂತು ತೆಂಕಣ ಗಾಳಿ
ದೂರವೆಲ್ಲೋ ಕೇಳಿ ಬಂತು ಹಾಡು
ಮಾವಿನೆಳ ಚಿಗುರಿನಲಿ ಚಿಮ್ಮಿ, ಪಯಣಿಗನೆಂದ
'ಇದಕೆ ಜೋಳದ ಪಾಳಿಯಿಲ್ಲ ನೋಡು' ॥4॥

ಜೇನು ಸವಿದನು ನೀರು ಕುಡಿದು ಮೈಯೊಡ್ಡಿದನು
ತುಸು ಹೊತ್ತು ತಂಬೆಲರ ನೆರಳಿಗೆಂದು
ಎದ್ದು ಕುದುರೆಗೆ ತಡಿಯ ಹಾಕಿ ಅಣಿಗೊಳಿಸಿದನು
ಮತ್ತೆ ದೂರದ ತನ್ನ ಪಯಣಕೆಂದು ॥5॥



7th_Kannada_Reader.indd 152 24-06-2019 19:37:59

'ಹೋಗಿ ಬರುವೆನು ತಾಯಿ' ಎಂದು ಕವಚವ ತೊಟ್ಟು
ಖಡ್ಗವನು ಬಿಗಿದಿಟ್ಟ ಟೊಂಕದಲ್ಲಿ.
ಹೆಂಗಸೆಂದಳು 'ಆಯ್ತು, ಹೋಗಿ ಬನ್ನಿರಿ ಮತ್ತೆ,
ಬಂದಾಗ ಬರಬೇಕು ನೀವು ಇಲ್ಲಿ' ॥6॥

'ಮರೆತು ಬಿಟ್ಟೆನು ನಿಮ್ಮ ಹೆಸರು ಕೇಳಲ,
ನೀವು ನಡೆದ ದಾರಿಗೆ ಇರಲಿ ಶುಭದ ನೆರಳು.
ಬಿರಿದ ಮಲ್ಲಿಗೆ ಕಂಡು, ಕೋಗಿಲೆಯ ದನಿ ಕೇಳಿ
ತುಂಬಿ ಬಂದಿತ್ತೇಕೆ ಕಣ್ಣು, ಕೊರಳು?' ॥7॥

ಯೋಧ ನುಡಿದನು : 'ತಾಯಿ, ಮತ್ತೆ ನೆನಪಿಗೆ ಬಂತು
ನನ್ನೂರು ಬನವಾಸಿ ನನಗೆ ಇಂದು
ಯೋಧ ನಡೆಯುವ ದಾರಿ ಕವಿಯ ದಾರಿಯು ಕೂಡ
ನನ್ನನ್ನು ಕರೆಯುವರು ಪಂಪನೆಂದು!'

## ಕವಿ ಕಾವ್ಯ ಪರಿಚಯ



ಸು.ರಂ.ಎಕ್ಕುಂಡಿಯವರ ಪೂರ್ಣ ಹೆಸರು ಸುಬ್ಬಣ್ಣ ರಂಗಣ್ಣ ಎಕ್ಕುಂಡಿ. ಇವರು ಹುಟ್ಟಿದ್ದು 1923ರಂದು, ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನಲ್ಲಿ. 1944ರಲ್ಲಿ ಬಿ.ಎ.,ಆನರ್ಸ್ ಪದವಿ ಪಡೆದ ಎಕ್ಕುಂಡಿಯವರು ಉತ್ತರ ಕನ್ನಡ ಜಿಲ್ಲೆಯ ಬಂಕಿಕೊಡ್ಲ ಎಂಬ ಗ್ರಾಮದಲ್ಲಿ ಪ್ರೌಢಶಾಲೆಯ ಅಧ್ಯಾಪಕರಾದರು. 35 ವರ್ಷಗಳ ಸೇವೆಯ ನಂತರ ಅಲ್ಲಿಯೇ ಮುಖ್ಯೋಪಾಧ್ಯಾಯರಾದರು. ಇವರ ಕೃತಿಗಳು: ಕವನ ಸಂಕಲನ: ಶ್ರೀ ಆನಂದ ತೀರ್ಥರು, ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬಕುಳದ ಹೂಗಳು. ಕಥಾ ಸಂಕಲನ: ನೆರಳು. ಕಾದಂಬರಿ: ಪ್ರತಿಬಿಂಬಗಳು. ಸೋವಿಯತ್ ಲ್ಯಾಂಡ್‌ನ ನೆಹರೂ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ದೊರಕಿವೆ. ಪ್ರಸ್ತುತ ಪದ್ಯವನ್ನು ಸು.ರಂ. ಎಕ್ಕುಂಡಿಯವರ 'ಸಮಗ್ರ ಕಥನ ಕವನಗಳು' ಎನ್ನುವ ಕೃತಿಯಿಂದ ಆರಿಸಿಕೊಳ್ಳಲಾಗಿದೆ.



7th_Kannada_Reader.indd 153 24-06-2019 19:37:59

## ಕವನದ ಆಶಯ

ಈ ಕಥನ ಕವನ ಕನ್ನಡದ ಆದಿ ಕವಿ ಪಂಪ ಮತ್ತು ಅವನನ್ನು ಉಪಚರಿಸಿದ ಈ ನಾಡಿನ ಸಾಮಾನ್ಯ ಹೆಣ್ಣೊಬ್ಬಳನ್ನು ಕುರಿತದ್ದು. ಈ ನಾಡಿನ ಜನರ ಅತಿಥಿ ಸತ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಪರಿಚಯಿಸುವ ಆಶಯವನ್ನು ಈ ಕವನ ಹೊಂದಿದೆ. ಹಾಗೆಯೇ ಯೋಧನಾದ ಪಂಪ ಕವಿಯಾಗಿ ನಾಡಿನ ಜನರ ನಿರ್ವ್ಯಾಜ್ಯ ಪ್ರೇಮಕ್ಕೆ ಮನ ಸೋಲುವ ಅಂತಃಕರಣವೂ ಇಲ್ಲಿ ವ್ಯಕ್ತವಾಗಿದೆ.

## ಕಠಿಣ ಪದಗಳ ಅರ್ಥ

ಕೆಂಪುಹುಡಿ–ಕೆಂಪುಧೂಳು, ಕೆಂಪು ಮಣ್ಣು; ಹೆಳಲು–ಮರದ ರೆಂಬೆ, ಕೊಂಬೆ; ಜೋಳದ ಪಾಳಿ–ಅನ್ನದ ಋಣ; ತಂಬೆಲರು–ತಂಗಾಳಿ, ತಣ್ಣನೆಯ ಗಾಳಿ; ಯೋಧ–ವೀರ, ಸೈನಿಕ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಯೋಧ ಹೆಂಗಸನ್ನು ಏನೆಂದು ಕೇಳಿದನು ?
2. ಹೆಂಗಸು ಯೋಧನನ್ನು ಏನೆಂದು ಸ್ವಾಗತಿಸಿದಳು ?
3. ಮರದ ಹೆಳಲು ಹೇಗಿವೆ ?
4. ಒಮ್ಮೆಲೇ ಯಾವ ಗಾಳಿ ಬೀಸಿ ಬಂತು ?
5. ಹಾಡನ್ನು ಕೇಳಿದ ಪಯಣಿಗ ಏನೆಂದನು ?
6. ದೂರದ ಪಯಣಕ್ಕೆ ಯೋಧ ಕುದುರೆಯನ್ನು ಹೇಗೆ ಅಣಿಗೊಳಿಸಿದನು ?
7. ಹೆಂಗಸು ಯೋಧನನ್ನು ಏನೆಂದು ಹಾರೈಸಿದಳು ?
8. ಯೋಧ ತನ್ನ ಊರು ಯಾವುದೆಂದು ಹೇಳಿದ ?
9. ಈ ಪದ್ಯದಲ್ಲಿ ಬರುವ ಯೋಧ ಯಾರು ?
10. ಯೋಧ ಮತ್ತು ಹೆಂಗಸು ಈ ಕಥನ ಕವನ ಬರೆದವರು ಯಾರು ?

## ಚಟುವಟಿಕೆ

1. ಸು.ರಂ. ಎಕ್ಕುಂಡಿಯವರ ಇನ್ನಿತರ ಕಥನ ಕವನಗಳನ್ನು ಸಂಗ್ರಹಿಸಿ ಓದಿರಿ.
2. ಕವಿ ಪಂಪನ ದೇಶಾಭಿಮಾನದ ಪದ್ಯಗಳನ್ನು ಸಂಗ್ರಹಿಸಿ ಓದಿರಿ.






7th_Kannada_Reader.indd 154 24-06-2019 19:37:59

ಘಟಕ ಒಂಬತ್ತು

# ಆದರ್ಶ ಸ್ನೇಹಿತರು

– (ಸಂಪಾದಿತ)

**ಪ್ರವೇಶ**

'ಯಾವುದೇ ಭಾಷೆಯಲ್ಲಿ ಪುರಾಣ ಸಾಹಿತ್ಯವು ತನ್ನದೇ ಸ್ಥಾನವನ್ನು ಪಡೆದಿರುತ್ತದೆ. ಕನ್ನಡ ಭಾಷೆಯಲ್ಲಿಯೂ ಪುರಾಣ ಕಥೆಗಳು ವಿವಿಧ ರೂಪಗಳಲ್ಲಿ ಪ್ರಕಟವಾಗಿವೆ. ಈ ಕಥೆ ಸರಳ ಗದ್ಯದಲ್ಲಿ ಆಕರ್ಷಕವಾಗಿ ಮೂಡಿ ಬಂದಿದೆ. 'ನಿಸ್ವಾರ್ಥ ಗೆಳೆತನ'ಕ್ಕೆ ಮಾದರಿ ಈ ಕಥೆ.







7th_Kannada_Reader.indd 155 24-06-2019 19:37:59

ಭಗವಾನ್ ಶ್ರೀಕೃಷ್ಣ ವಿದ್ಯಾರ್ಥಿಯಾಗಿದ್ದಾಗ ಅವನಿಗೆ ಒಬ್ಬ ಸಹಪಾಠಿ ಇದ್ದ. ಅವನು ಬಲು ಬಡವ. ಅವನ ಹೆಸರು ಸುಧಾಮ.

ಕೃಷ್ಣ ಮುಂದೆ ದ್ವಾರಕೆಯ ದೊರೆ ಆದ. ಸುಧಾಮ ಬಡವನಾಗಿಯೇ ಉಳಿದ. ಅವನಿಗೆ ಅನೇಕ ಮಕ್ಕಳು. ಆದರೆ ಅವನು ದೈವಭಕ್ತ ಆಗಿದ್ದ.

ಪ್ರತಿದಿನ ಸುಧಾಮ ಭಜನೆಗಳನ್ನು ಹಾಡುತ್ತಾ, ಬೀದಿಗಳಲ್ಲಿ ಹೋಗುತ್ತಿದ್ದ. ಜನರು ಹಿಡಿ ಅಕ್ಕಿಯನ್ನು ಕೊಡುತ್ತಿದ್ದರು. ಮನೆಗೆ ಬಂದು ಅಕ್ಕಿಯನ್ನು ಹೆಂಡತಿಗೆ ಕೊಡುತ್ತಿದ್ದ. ಅವಳು ಅದನ್ನು ಅಡುಗೆ ಮಾಡುತ್ತಿದ್ದಳು. ಸುಧಾಮ ಅನ್ನವನ್ನು ಮೊದಲು ದೇವರಿಗೆ ಅರ್ಪಿಸುತ್ತಿದ್ದ. ಆಮೇಲೆ ಸ್ವಲ್ಪ ಭಾಗವನ್ನು ಅತಿಥಿಗಳಿಗೆ ನೀಡುತ್ತಿದ್ದ. ಅನಂತರ ತನ್ನ ಮಕ್ಕಳಿಗೆ ಊಟ ಹಾಕುತ್ತಿದ್ದ. ಗಂಡ ಹೆಂಡಿರು ಉಳಿದುದನ್ನು ತಿನ್ನುತ್ತಿದ್ದರು.

ಸುಧಾಮ ಮಾರನೆಯ ದಿನಕ್ಕೆ ಎಂದು ಆಹಾರವನ್ನು ಎಂದೂ ಕೂಡಿಡುತ್ತಿರಲಿಲ್ಲ. ಯಾವಾಗಲೂ ದೇವರು ಅನ್ನವನ್ನು ಕೊಡುತ್ತಾನೆ ಎಂದು ಅವನಿಗೆ ಭರವಸೆ.

ಮಕ್ಕಳು ಬೆಳೆದರು. ಸುಧಾಮ ತರುತ್ತಿದ್ದ ಭಿಕ್ಷೆ ಸಾಕಾಗುತ್ತಿರಲಿಲ್ಲ. ಎಷ್ಟೋ ದಿನ ಅವರು ಊಟವಿಲ್ಲದೆ ಇರಬೇಕಾಗುತ್ತಿತ್ತು.

ಸುಧಾಮನಿಗೆ ಉಡಲು ಒಳ್ಳೆಯ ಬಟ್ಟೆ ಇರಲಿಲ್ಲ. ಹರಕು ಬಟ್ಟೆಯನ್ನು ಉಡುತ್ತಿದ್ದ. ಆದ್ದರಿಂದ ಜನ ಅವನನ್ನು 'ಕುಚೇಲ' ಎಂದು ಕರೆಯುತ್ತಿದ್ದರು. ಕುಚೇಲ ಎಂದರೆ ಹರಕು ಬಟ್ಟೆಯವನು ಎಂದು ಅರ್ಥ.

ಒಂದು ದಿನ ಸುಧಾಮನ ಹೆಂಡತಿ ಅವನಿಗೆ ಹೇಳಿದಳು. 'ಸ್ವಾಮೀ, ನೀವು ಏಕೆ ಕೃಷ್ಣನನ್ನು ಹೋಗಿ ನೋಡಬಾರದು. ನೀವಿಬ್ಬರೂ ಒಟ್ಟಿಗೆ ಗುರುಕುಲದಲ್ಲಿ ಇದ್ದಿರಿ. ಅವನು ಖಂಡಿತವಾಗಿ ಸಹಾಯ ಮಾಡುತ್ತಾನೆ'.

ಸುಧಾಮನೂ ತನ್ನ ಮಿತ್ರ ಕೃಷ್ಣನನ್ನು ಕಾಣಲು ಹಾತೊರೆಯುತ್ತಿದ್ದ. ಹಣಕ್ಕಾಗಿ ಅಲ್ಲ, ಪ್ರಿಯ ಮಿತ್ರನನ್ನು ಕಾಣುವ ಆನಂದಕ್ಕಾಗಿ.

ಮಗುವನ್ನೋ, ಮಹಾಪುರುಷರನ್ನೋ ಇಲ್ಲವೇ ದೇವಸ್ಥಾನದಲ್ಲಿರುವ ದೇವರನ್ನೋ ನೋಡಲು ಹೋಗುವಾಗ ನಾವು ಏನಾದರೂ ಕಾಣಿಕೆ ಇಲ್ಲದೆ ಹೋಗಬಾರದು. ನಮ್ಮ ಪ್ರೀತಿ ಅಥವಾ ಗೌರವದ ಗುರುತಾಗಿ ಏನಾದರೂ ಸಿಹಿಯನ್ನು ತೆಗೆದುಕೊಂಡು ಹೋಗಬೇಕು. ಸುಧಾಮ ತನ್ನ ಹೆಂಡತಿ ಕೊಟ್ಟಿದ್ದನ್ನು ತೆಗೆದುಕೊಂಡ. ಸಣ್ಣ ಅವಲಕ್ಕಿ ಗಂಟು ಅದು. ಅಷ್ಟು ಬಡವರು ಅವರು!

ಸುಧಾಮ ದ್ವಾರಕೆಗೆ ನಡೆದು ಹೋದ. ಕೃಷ್ಣ ಅರಮನೆ ತಲುಪಿ ಒಳಕ್ಕೆ ಹೋದ. ದೂರದಿಂದಲೇ ಕೃಷ್ಣ ಅವನನ್ನು ನೋಡಿದ. ಕೂಡಲೇ ಹೊರಕ್ಕೆ ಓಡಿ ಬಂದು ಬಾಗಿಲಲ್ಲೇ ಸುಧಾಮನನ್ನು ಎದುರುಗೊಂಡು ಭಾರೀ ಸ್ವಾಗತ ನೀಡಿದ. ಅವನನ್ನು ಅಪ್ಪಿಕೊಂಡ. ಸುಧಾಮನ ಕಾಲು ತೊಳೆದು ತನ್ನ ಕೋಣೆಗೆ ಕರೆದೊಯ್ದು ರೇಷ್ಮೆ ವಸ್ತ್ರದ ಮಂಚದ ಮೇಲೆ ಕೂಡಿಸಿದ. ಕೃಷ್ಣನ ಹೆಂಡತಿ ರುಕ್ಮಿಣಿ ಮೃದುವಾಗಿ ಗಾಳಿ ಬೀಸಿದಳು. ಸೇವಕಿಯರು ಸುಧಾಮನಿಗೆ ಚಿನ್ನದ ಪಾತ್ರೆಗಳಲ್ಲಿ ಬೇಕಾದಷ್ಟು ತಿಂಡಿಗಳನ್ನೂ, ಸ್ವಾಧಿಷ್ಟವಾದ ಪಾನೀಯಗಳನ್ನೂ ನೀಡಿದರು.

ಅಂತಹ ಸುಂದರವಾದ ಅರಮನೆಯನ್ನಾಗಲೀ, ಅಷ್ಟು ಸಂಪತ್ತನ್ನಾಗಲೀ ಸುಧಾಮ ಎಂದೂ ಕಂಡವನಲ್ಲ. ಹಿಂದೆ ಯಾರೂ ಅವನನ್ನು ಅಷ್ಟು ಚೆನ್ನಾಗಿ ನೋಡಿಕೊಂಡಿರಲಿಲ್ಲ. ಹಾಗಾಗಿ ಕೃಷ್ಣನ ಆತಿಥ್ಯಕ್ಕಾಗಿ ಹೇಗೆ ಅಭಿನಂದಿಸುವುದೋ ಅವನಿಗೆ ಗೊತ್ತಾಗಲೇ ಇಲ್ಲ.

ಸುಧಾಮ ಸ್ವಲ್ಪ ವಿಶ್ರಮಿಸಿಕೊಂಡ ಮೇಲೆ, ಕೃಷ್ಣ ತಮ್ಮ ವಿದ್ಯಾರ್ಥಿ ದೆಸೆಯ ದಿನಗಳ ಬಗೆಗೆ ಹೇಳಿದ.

ಕೊನೆಗೆ, ಕೃಷ್ಣ ಕೇಳಿದ : 'ನಿನಗೆ ಮದುವೆಯಾಗಿದೆಯೇ? ಮಕ್ಕಳೆಷ್ಟು ?'

ತಾನು ಸುಖವಾಗಿ ತೃಪ್ತನಾಗಿದ್ದೇನೆ ಎನ್ನುವಂತೆ ಸುಧಾಮ ನಾಚಿಕೆಯಿಂದ ತಲೆ ಆಡಿಸಿದ.

ಚಟ್ಟನೆ ಕೃಷ್ಣ ಕೇಳಿದ : 'ನನಗೆ ಗೊತ್ತು, ತಿನ್ನಲು ನನಗೆ ಏನಾದರೂ ನೀನು ತಂದಿರುತ್ತೀ!'

ಅವಲಕ್ಕಿಯ ಗಂಟನ್ನು ಈಚೆಗೆ ತೆಗೆಯಲು ಸುಧಾಮನಿಗೆ ನಾಚಿಕೆ. ಆದರೆ ಕೃಷ್ಣ ಅದನ್ನು ನೋಡಿದವನೇ ತಾನೇ ಸೆಳೆದುಕೊಂಡ. ಅದರಿಂದ ಒಂದು ಹಿಡಿ ಅವಲಕ್ಕಿಯನ್ನು ತೆಗೆದುಕೊಂಡು ಬಾಯಿಗೆ ಹಾಕಿಕೊಳ್ಳುತ್ತಾ ಹೇಳಿದ : 'ನನಗೋಸ್ಕರ ನಿನ್ನ ಹೆಂಡತಿ ಇದನ್ನು ಕಳಿಸಿದ್ದಾಳಲ್ಲ, ಎಷ್ಟು ಚೆನ್ನಾಗಿದೆ!' ಎಂದು ಇನ್ನೂ ಎರಡು ಹಿಡಿ ಅವಲಕ್ಕಿ ತಿಂದ.

ಸುಧಾಮ ಅಂದು ದ್ವಾರಕೆಯಲ್ಲಿ ಸುಖವಾಗಿ ಕೃಷ್ಣನಿಂದ ಬೀಳ್ಕೊಂಡು ತನ್ನ ಹಳ್ಳಿಗೆ ಮರಳಿ ನಡೆದುಕೊಂಡು ಬಂದ. ಕೃಷ್ಣನಿಂದ ಏನಾದರು ಕೊಡುಗೆಯನ್ನೋ, ಕೃಪೆಯನ್ನೋ ಕೇಳುವುದನ್ನೇ ಅವನು ಪೂರಾ ಮರೆತು ಬಿಟ್ಟಿದ್ದ.

ಕೃಷ್ಣನ ನಿಷ್ಠೆ, ಧಾರಾಳತನ ಎಷ್ಟು ಎಂದು ಕೊಳ್ಳುತ್ತಿದ್ದ ಹಾದಿಯಲ್ಲಿ. ಸುಧಾಮ ಮನೆ ಸೇರಿದಾಗ ಅಲ್ಲೊಂದು ದೊಡ್ಡ ಪವಾಡ ಕಾದಿತ್ತು. ಅವನ ಹಳೆಯ ಮನೆ ಇದ್ದ ಕಡೆ ಈಗ ಒಂದು ಮಹಲೇ ಇತ್ತು. ಅನೇಕ ಆಳುಗಳು, ನಾನಾ ಕೆಲಸ ಮಾಡುತ್ತಾ ಓಡಾಡುತ್ತಿದ್ದರು. ಅವನ ಹೆಂಡತಿ ಎದುರಿಗೆ ಬಂದು ನಿಂತಳು. ಅವಳು ಬೆಲೆ ಬಾಳುವ ಸೀರೆ ಉಟ್ಟು, ಚಿನ್ನದ



7th_Kannada_Reader.indd 156 24-06-2019 19:37:59

ಒಡವೆಗಳನ್ನು ಹಾಕಿಕೊಂಡಿದ್ದಳು ! ಅವನ ಮಕ್ಕಳೆಲ್ಲಾ ವೈಭವೋಪೇತವಾದ ಬಟ್ಟೆಗಳನ್ನು ಧರಿಸಿದ್ದರು. ಅವನಿಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಸುಧಾಮನ ಹೆಂಡತಿ ಹೇಳಿದಳು. 'ಇದೆಲ್ಲಾ ಕೃಷ್ಣನ ಕೃಪೆಯಿಂದ ಆಯಿತು'.

ಸುಧಾಮ ಮೊದಲಿಗಿಂತಲೂ ಹೆಚ್ಚು ಭಕ್ತಿಯಿಂದ ಕೃಷ್ಣನನ್ನು ಪೂಜಿಸತೊಡಗಿದ.

## ಕೃತಿ ಕರ್ತೃ ಪರಿಚಯ

ಪ್ರಸ್ತುತ ಗದ್ಯ ಭಾಗವನ್ನು ಭಾರತೀಯ ವಿದ್ಯಾಭವನ, ಮುಂಬಯಿ ಇವರು ಸಂಪಾದಿಸಿರುವ 'ಸಂಸ್ಕೃತಿ ಸರಿತಾ' ಕೃತಿ ಮಾಲೆಯಿಂದ ಆಯ್ದುಕೊಳ್ಳಲಾಗಿದೆ.'

## ಆಶಯ

ಮಾನವ ಜೀವನದಲ್ಲಿ ಸ್ನೇಹವು ಅಮೂಲ್ಯವಾದುದು. ಸ್ನೇಹಕ್ಕೆ ಸ್ಥಾನಮಾನ ಯಾವುದೇ ಭೇದವಿರುವುದಿಲ್ಲ. ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿ, 'ಕೃಷ್ಣ ಸುಧಾಮ'ರ ಸ್ನೇಹ ಪ್ರಸ್ತುತ ಗದ್ಯ ಭಾಗದಲ್ಲಿ ಮೂಡಿ ಬಂದಿದೆ. ಕೃಷ್ಣನು ತನ್ನ ಬಳಿ ಬಂದ ಸುಧಾಮನನ್ನು ಆತ್ಮೀಯವಾಗಿ ಸ್ವಾಗತಿಸಿ ತಮ್ಮ ವಿದ್ಯಾರ್ಥಿ ಜೀವನದ ಸ್ನೇಹವನ್ನು ನೆನಪಿಸಿಕೊಳ್ಳುವ ಒಂದು ಅಪೂರ್ವ ಸನ್ನಿವೇಶ ಇದಾಗಿದೆ. ಸ್ನೇಹದ ಶ್ರೇಷ್ಠತೆಯನ್ನು ಇಲ್ಲಿ ನೋಡಬಹುದು.

## ಪದಗಳ ಅರ್ಥ

ಸಹಪಾಠಿ–ಜೊತೆಯಲ್ಲಿ ಓದಿದವ; ಸ್ವಾಧಿಷ್ಟ–ರುಚಿಯಾದ; ಆತಿಥ್ಯ–ಅತಿಥಿಗಳಿಗೆ ನೀಡುವ ಸ್ವಾಗತ ಮತ್ತು ಉಪಚಾರ; ತೃಪ್ತ–ಸಮಧಾನದವ; ನಿಷ್ಠೆ–ನಂಬಿಕೆ, ವಿಶ್ವಾಸ; ಪವಾಡ–ದೈವಿಕ ಘಟನೆ; ಮಾನವನ ಮಿತಿಗೆ ಮೀರಿದ ಘಟನೆ; ವೈಭವೋಪೇತ–ಅದ್ಧೂರಿಯ, ವೈಭವದಿಂದ ಕೂಡಿದ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಸುಧಾಮ ಯಾರು ?
2. ಕೃಷ್ಣ ಯಾವ ರಾಜ್ಯಕ್ಕೆ ದೊರೆಯಾಗಿದ್ದನು ?
3. ಸುಧಾಮನು ಅನ್ನವನ್ನು ಯಾರಿಗೆ ಮೊದಲು ಅರ್ಪಿಸುತ್ತಿದ್ದ ?
4. ಕುಚೇಲ ಎಂದರೇನು ?
5. ಕೃಷ್ಣನಿಗೆ ನೀಡಲು ಸುಧಾಮ ಏನನ್ನು ಕೊಂಡು ಹೋದ ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಸುಧಾಮನ ನಿತ್ಯದ ಜೀವನ ಹೇಗೆ ಸಾಗುತ್ತಿತ್ತು ?
2. ಒಂದು ದಿನ ಸುಧಾಮನ ಹೆಂಡತಿ ಅವನಿಗೆ ಏನು ಹೇಳಿದಳು ?
3. ಕೃಷ್ಣ ಸುಧಾಮನನ್ನು ಹೇಗೆ ಎದುರುಗೊಂಡ ?
4. ಸುಧಾಮ ಮನೆಗೆ ಹಿಂದಿರುಗಿದಾಗ ನೋಡಿದ ಪವಾಡ ಯಾವುದು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಪ್ರಸ್ತುತ ಗದ್ಯ ಭಾಗದಲ್ಲಿ ಬಂದಿರುವ ಕೃಷ್ಣ ಕುಚೇಲರ ಗೆಳೆತನದ ಬಗ್ಗೆ ಬರೆಯಿರಿ.

## ಭಾಷಾಭ್ಯಾಸ

1. **ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯಿರಿ.**

   ಗುರುಕುಲ, ದೇವಸ್ಥಾನ, ಅರಮನೆ, ರೇಷ್ಮೆ ವಸ್ತ್ರ.

2. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.**

   ಭಜನೆಗಳನ್ನು, ಅಕ್ಕಿಯನ್ನು, ಮೃದುವಾಗಿ, ಪಾತ್ರೆಗಳಲ್ಲಿ, ವಿದ್ಯಾರ್ಥಿ, ನಾಚಿಕೆಯಿಂದ, ವೈಭವೋಪೇತ.

3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

   ಬಡವ, ಕಷ್ಟ, ಮಿತ್ರ, ಗೌರವ, ಧಾರಾಳ

4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ**

   ಸಹಪಾಠಿ, ಅತಿಥಿ, ಮಹಾಪುರುಷ, ಭಜನೆ, ಸ್ವಾಧಿಷ್ಟ, ಅಭಿನಂದಿಸು.

## ಚಟುವಟಿಕೆ

1. ನಿಮ್ಮ ಸ್ನೇಹಿತರ ಹೆಸರನ್ನು ಪಟ್ಟಿ ಮಾಡಿ.
2. ನಿಮ್ಮ ಸ್ನೇಹಿತರಿಂದ ನಿಮಗಾದ ಸಹಾಯವನ್ನು ಕುರಿತು ನಿಮ್ಮ ಮತ್ತೊಬ್ಬ ಸ್ನೇಹಿತನಿಗೆ ಪತ್ರ ಬರೆಯಿರಿ.
3. ನಿಮ್ಮ ಗೆಳೆತನ ಹಾಳಾಗುವಂತೆ ನೀವೆಂದೂ ನಡೆದುಕೊಳ್ಳದಿರಿ. ಗೆಳೆಯರೊಂದಿಗೆ ಹೊಂದಿಕೊಂಡು ಬದುಕಿರಿ.



7th_Kannada_Reader.indd 157 24-06-2019 19:37:59

ಉಪಪಠ್ಯ

ಘಟಕ ಒಂಬತ್ತು

# ಮನಃಪರಿವರ್ತನೆ

–ಡಾ.ಪ್ರಭುಶಂಕರ

## ಪ್ರವೇಶ

ನಾಟಕ ಪ್ರಧಾನವಾಗಿ ದೃಶ್ಯ ಮಾಧ್ಯಮ. ಜೀವಂತಿಕೆಯೇ ನಾಟಕದ ಪ್ರಮುಖ ಲಕ್ಷಣ. ನಟರು ಆಂಗಿಕ ಅಭಿನಯಗಳಿಂದ ಸಹೃದಯರಿಗೆ ಸಂತೋಷವನ್ನು ಉಂಟು ಮಾಡಿ ಸ್ಥಾಯೀ ಭಾವವನ್ನು ಜಾಗೃತಗೊಳಿಸುವರು. ನಾಟಕದಲ್ಲಿನ ಸಂಭಾಷಣೆ ಕೇವಲ ಕಸರತ್ತಿನ ಮಾತುಗಳೆನಿಸದೆ ಸಹೃದಯರನ್ನು ಭಾವೋದ್ದೀಪನಗೊಳಿಸುತ್ತದೆ. ಅಂತಃಕರಣವನ್ನು ಕಲಕಿ ಮನಃಪರಿವರ್ತನೆಗೆ ಅನುವು ಮಾಡಿಕೊಡುತ್ತದೆ. ನಾಟಕದ ವಿವಿಧ ಪ್ರಕಾರಗಳಲ್ಲಿ ಗೀತ ನಾಟಕವೂ ಒಂದು. ಗದ್ಯ ಪದ್ಯಗಳಿಂದ ಕೂಡಿದ ಇದರಲ್ಲಿ ನೃತ್ಯ ಹಾಗೂ ಗೀತೆಗೆ ಹೆಚ್ಚು ಪ್ರಾಧಾನ್ಯತೆ ಇರುತ್ತದೆ. ಭಾವನೆಗಳನ್ನು ತೀವ್ರವಾಗಿ ಸಂವಹನಗೊಳಿಸಲು ಗೀತನಾಟಕ ಸಮರ್ಥ ಜನಪ್ರಿಯ ಮಾಧ್ಯಮ.

ಅಸುರೀ ಪ್ರವೃತ್ತಿಯನ್ನು ತೊರೆದು ಮಾನವೀಯ ಮೌಲ್ಯಗಳ ಹಿರಿಮೆಯನ್ನು ಎತ್ತಿ ಹಿಡಿದ ಪ್ರಸಂಗಗಳು ಭಾರತದ ಇತಿಹಾಸದಲ್ಲಿ ಉಲ್ಲೇಖಿತವಾಗಿವೆ. ಇದರಲ್ಲಿ ಕಳಿಂಗ ಯುದ್ಧದ ನಂತರ ಸಾಮ್ರಾಟ್ ಅಶೋಕನ ಮನಃಪರಿವರ್ತನೆ ಮತ್ತು ಇಹ ಲೋಕದ ಸಾರ್ವಭೌಮನೆಂದೇ ಕೀರ್ತಿಶೇಷನಾಗಿದ್ದ ಅಂಗುಲೀಮಾಲ ಬುದ್ಧನ ಉಪದೇಶದಿಂದ ಮನಃಪರಿವರ್ತನೆ ಹೊಂದಿದ ನಿದರ್ಶನ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮನಃಪರಿವರ್ತನೆ ಒಂದು ಮೌಲಿಕ ಪರಿಕಲ್ಪನೆ. ಇಂತಹ ಉದಾತ್ತ ದಾರ್ಶನಿಕ ವಿಚಾರ ಪ್ರಭುಶಂಕರ ಅವರ ಅಂಗುಲಿಮಾಲ ನಾಟಕದಲ್ಲಿ ನಿರೂಪಿತವಾಗಿದೆ.





7th_Kannada_Reader.indd 158 24-06-2019 19:37:59

(ಕಾಡು. ಸಂಜೆ ನಿಧಾನವಾಗಿ ಇಳಿಯುತ್ತಿದೆ. ಗುಹೆಯ ಮುಂದೆ ಅಂಗುಲೀಮಾಲ ಇಬ್ಬರು ಅನುಚರರೊಡನೆ ಕುಳಿತಿದ್ದಾನೆ. ನರಕವೇ ಮೈದಳೆದಂತೆ ರೂಪ, ನರರೆಲುಬಿನಿಂದ ಮಾಡಿದ ಕಿರೀಟ, ಕೈ ಬೆರಳುಗಳ ಮಾಲೆ ಕತ್ತಿನಲ್ಲಿ ಜೋಲಾಡುತ್ತಿದೆ. ಹಿರಿಯ ಇಬ್ಬಾಯ ಕತ್ತಿಯನ್ನು ಒಮ್ಮೆ ಅತ್ತ, ಒಮ್ಮೆ ಇತ್ತ ಬೀಸುತ್ತಿದ್ದಾನೆ)

**ಅಂಗುಲೀಮಾಲ:** ಮಹಾನವಮಿ! ಗೆಲ್ಲು ತಾಯಿಯೇ, ಗೆಲ್ಲು! ಪಸೆ ನದಿಯ ರಾಜಶಿರ ದಾಸವಾಳದ ಪೂಜೆ ಸಲ್ಲುವುದು. ನಿನ್ನ ಪಾದಕೆ ನಾಳೆ. ಇನ್ನೆನಿತೆನಿತೋ ರಾಜ – ಮಕುಟಗಳ ಮಣಿಕಾಂತಿ ನಿನ್ನಡಿಯ ಬಾನನ್ನು ಇಂದ್ರಧನುವಿನೊಲು ಸಿಂಗರಿಸಲಿದೆ. ಇರು ತಾಯಿ, ಒಂದಿರುಳು. ಬಳಿಕ ಮಾರಣ ಹೋಮ. ಹಳೆಯ ಅಂಗುಲಿ ಮಾಲೆ ಬೇಸರಾಯಿತುನನಗೆ. ಹೊಚ್ಚ ಹೊಸ ಅಂಗುಲೀ ಮಾಲನಾಗುವೆ ನಾಳೆ. (ಇದ್ದಕ್ಕಿದ್ದಂತೆಯೇ ಎದ್ದು ನಿಂತು ಬೆರಳು ತೋರಿಸಿ) ಏಕಾಕ್ಷ, ನೋಡದೋ, ಯಾವುದೋ ನರಪ್ರಾಣಿ ಇತ್ತಲೇ ಬರುತಲಿದೆ.

**ಏಕಾಕ್ಷ:** ಅಹುದೊಡೆಯ

**ಅಂಗುಲೀಮಾಲ:** ನಿಲ್ ಅಲ್ಲೆ, ಓ ಮನುಜ, ಅಲ್ಲೆ ನಿಲ್!

**ಬುದ್ಧ:** ನಿಂತೆ ಇರುವೆನು ನಾನು, ನೀನಿನ್ನೂ ನಿಂತಿಲ್ಲ. (ಎಂದು ಹೇಳಿ ನಡೆಯುತ್ತಲೇ ಇರುವನು. ಅಂಗುಲೀಮಾಲ ಕೆರಳಿ ಬುದ್ಧನ ಮೇಲೆ ಏರಿ ಬರುತ್ತಾನೆ. ಅವನ ಅನುಚರರೂ ಅವನನ್ನು ಹಿಂಬಾಲಿಸುತ್ತಾರೆ)

**ಅಂಗುಲೀಮಾಲ:** ಅಂಗುಲೀಮಾಲನಿಗೇ ಪಡಿನುಡಿದು ಬದುಕಿರುವ ಶೂರನೊಬ್ಬನು ಇಲ್ಲ ಎಂಬರಿವೂ ಇಲ್ಲದಿಹ ಓ ಕುನ್ನಿ, ಸಾವೇ ಶಿಕ್ಷೆಯೊ ನಿನಗೆ! (ಕತ್ತಿಯನ್ನೆತ್ತಿ ಬುದ್ಧನನ್ನು ತೀರ ಸಮೀಪಿಸಿದಾಗ ಬುದ್ಧ ತಲೆಯೆತ್ತಿ ನೋಡುತ್ತಾನೆ. ಅಂಗುಲೀಮಾಲನ ಕಣ್ಣು ಬುದ್ಧನ ಕಣ್ಣುಗಳನ್ನು ದಿಟ್ಟಿಸಿ ನೋಡುತ್ತದೆ. ಒಡನೆಯೇ ಕೈಯ ಕತ್ತಿ ಕೆಳಗೆ ಬೀಳುತ್ತದೆ. ಎರಡೂ ಕೈಗಳಿಂದ ಹಿಂಬಾಲಕರನ್ನು ತಡೆಯುತ್ತಾನೆ)

**ಬುದ್ಧ:** ಓ! ನೀನೇ ಅಂಗುಲೀಮಾಲಾ? ನಿನ್ನನೇ ಅರಸುತಾ ನಡೆದು ಬಂದುದು ನಾನು

**ಅಂಗುಲೀಮಾಲ:** (ಕಕ್ಕಾಬಿಕ್ಕಿಯಾಗಿ) ಯಾರು ನೀ ಸನ್ಯಾಸಿ? ನಿನ್ನ ಕಣ್ಣುಗಳಲ್ಲಿ ಕಡಲುಗಳು ಉರುಳುತಿವೆ, ಕಾಣದಿಹ ಯಾವುದೋ ಲೋಕಗಳು ಅರಳುತಿವೆ!

**ಬುದ್ಧ:** ಎಲ್ಲವೂ ಬಯಲ ಭ್ರಾಂತಿಯು ಕಂದ!

**ಅಂಗುಲೀಮಾಲ:** ಕಂದ...ಕಂದ...! ಹೊಸತೆನಗೆ ಈ ಮಾತಿನಂದ!

**ಬುದ್ಧ:** ಹೊಸತು ಹಳತೆಲ್ಲವೂ ಮತ್ತೆ ಭ್ರಾಂತಿಯು ಕಂದ!

**ಅಂಗುಲೀಮಾಲ:** ಯಾರು ನೀ ಸನ್ಯಾಸಿ? ಹೊಚ್ಚ ಹೊಸ ಅನುಭವವ ನೀಡುತಿಹ ನೀನಾರು ? ನನ್ನ ಖಡ್ಗದ ಕಾಳಿ ಕೊಲೆ ಗಳಿಗೆಯಲ್ಲೆಂದು ಮುಷ್ಟಿ ಪೀಠವನುಳಿದು ಧರೆಗುರುಳಿ ಹೊರಳಿದುದ ಕಾಣೆ ನಾ, ಇದೇ ಮೊದಲ್! ಹೇಳು, ಓ ಸನ್ಯಾಸಿ! ಮಂತ್ರವಿದ್ಯೆಯನರಿತ ಮಾಟಗಾರನೊ ನೀನು...?

**ಬುದ್ಧ:** ದಿಟ ಕಂದ! ಪ್ರೇಮ ಮಂತ್ರವ ಜಪಿಪ ಒಲುಮೆ ಸಾಧಕ ನಾನು!

**ಅಂಗುಲೀಮಾಲ:** ಕವಡು ನುಡಿಯ ನುಡಿಯದಿರು ಓ ಭಿಕ್ಷು! ನಿನ್ನ ಬಯಕೆಯು ನನಗೆ! ನಿನ್ನ ಕೈ ಬೆರಳುಗಳ ಬಯಕೆಯ್ಯೆ!

**ಬುದ್ಧ:** (ಎರಡೂ ಕೈಗಳನ್ನೂ ಮುಂದೆ ಚಾಚಿ) ಇದೋ, ನನ್ನ ಕೈಬೆರಳ್! ಕೊಂಡು ನಲಿಯೈ ಕಂದ! ಅದನು ನೀಡುವ ಬಯಕೆ ಇಂದೆನ್ನ ಬಗೆಯಂದ!ಕೊಳ್ ಕಂದ! ಹಳೆಯ ಅಂಗುಲೀಮಾಲೆ ಬೇಸರಾಯಿತು ನಿನಗೆ. ಇದೋ, ಹೊಸತು ಕೈಬೆರಳ್, ಕೊಳ್ ಇದನ್!

**ಅಂಗುಲೀಮಾಲ:** ಸಾಕು ಓ, ಸನ್ಯಾಸಿ! ನುಡಿಯ ಮಂಜನು ಇನ್ನು ನನ್ನ ಮೇಲೆಸೆಯದಿರು, ಎಸೆದು ಮೂದಲಿಸದಿರು. ಬಂದ ಕಾರ್ಯವನುಸಿರು, ಉಸಿರಿ ನಡೆ ಉಸಿರಿನೊಡನೆ.

**ಬುದ್ಧ:** ಇದುವರೆಗೆ ಗೆದ್ದಿರುವ ರಾಜ್ಯವೆಲ್ಲವ ಮೀರಿ ದೊಂದು ರಾಜ್ಯವ ನೀನು ಗೆಲ್ಲಬೇಕಾಗಿಹುದು. ಅದನು ತೋರಿಸಲೆಂದೆ ನಾ ಬಂದೆ!

**ಅಂಗುಲೀಮಾಲ:** ರಾಜ್ಯವೇ? ಎಲ್ಲವನು ಮೀರಿರುವ ರಾಜ್ಯವೇ? ನಾ ಕಾಣದಿರುವೊಂದು ರಾಜ್ಯವೇ? ಉತ್ತರಕೆ ದಕ್ಷಿಣಕೆ ಪೂರ್ವ ಪಶ್ಚಿಮಗಳಿಗೆ ದಿಗ್ವಿಜಯ ಯಾತ್ರೆಯನು ಮುಗಿಸಿ ಬಂದಿಹೆ ನಾನು! ನನ್ನ ಭಯ ವಾಳದಿಹ ನೆಲವುಂಟೆ ಓ ಭಿಕ್ಷು?



7th_Kannada_Reader.indd 159 24-06-2019 19:37:59

**ಬುದ್ಧ:** ಇದೆ ಕಂದ!

**ಅಂಗುಲೀಮಾಲ:** ದಾರಿ ತೋರುವೆಯೇನು ?

**ಬುದ್ಧ:** ಅದಕೆಂದೆ ನಾ ಬಂದೆ

**ಅಂಗುಲೀಮಾಲ:** ನಾ ಬಲ್ಲೆ! ನಾ ಬಲ್ಲೆ! ಅದಕೆ ನಾ ಕೇಳ್ದೆನೈ ಮಂತ್ರ ವಿದ್ಯೆಯನರಿತ ಮಾಟಗಾರನೋ ನೀನು ! ತ್ವರೆ ಮಾಡು, ಸನ್ಯಾಸಿ. ಎಲ್ಲಿಹುದು ಆ ರಾಜ್ಯ?

**ಬುದ್ಧ:** ತೋರಿಸುವೆನೈ ಗೆಳೆಯ ಆದರಂಗುಲೀಮಾಲಾನಾ ಪೇಳ್ವ ಕಜ್ಜವದು ಸಾಧ್ಯವೇ ನಿನಗೆ ?

**ಅಂಗುಲೀಮಾಲ:** ಸಾಧ್ಯವೇ!? ನುಡಿವುದಾರೊಡನೆಂದು ಅರಿವಿರಲಿ ಸನ್ಯಾಸಿ. ಅಂಗುಲೀಮಾಲನಲಿ ಕವಲು ನುಡಿಗೆಡೆಯಿಲ್ಲ.

**ಬುದ್ಧ:** ವೈಭವದ ರಾಜ್ಯವನು ಗೆಲ್ಲ ಹೋಗುವ ಮುನ್ನಗೆಲಬೇಕು ನೀನು ನಿನ್ನ!

**ಅಂಗುಲೀಮಾಲ:** ಗೆಲಬೇಕು ನನ್ನ ನಾನು! ಅರ್ಥವಿಲ್ಲದ ಮಾತು! ಅಂಗುಲೀಮಾಲನೀ ಸಮಯಕ್ಕೆ ಮೌಲ್ಯವಿದೆ ಈಗ ಪೇಳ್ ಸನ್ಯಾಸಿ, ರಾಜರಿಂ ಸೇವೆಯನು ಕೈಕೊಳುವ ನಾನಾರಿಗಾಳ್?

**ಬುದ್ಧ:** ರಾಜ ಸೇವೆಯ ಕೊಂಡು ಹಿರಿಯನಾಗುವೆಯೆಂದು ಚೋದಿಸುವ ಮನದಾಶಾ ಪಿಶಾಚಕ್ಕೆ ಅದು ಕುಣಿಸಿದೊಲು ಕುಣಿವ ಮರುಳೋ ನೀನ್?

**ಏಕಾಕ್ಷ:** (ಬುದ್ಧನನ್ನು ಹೊಡೆಯಲು ಹೋಗುತ್ತಾ) ಏಯ್ ತಿರುಕ, ನಮ್ಮೊಡೆಯನನು ಮರುಳೆನುವ ನಿನ್ನ ಬೆನ್ನೆಲುಬಿಗೇನೋ ಬಂದಿದೆ ಹೊತ್ತು!

**ಅಂಗುಲೀಮಾಲ:** (ಅವನನ್ನು ತಡೆದು) ಏಕಾಕ್ಷ, ನಿಲ್! ಬಲಿದಾಸ... (ಕಣ್ಣು ಸನ್ನೆ ಮಾಡುತ್ತಾನೆ). ನಾ ಕರೆವವರೆವಿಗೂ ಗುಹೆಯಲಿರಿ. (ಇಬ್ಬರೂ ತಲೆ ತಗ್ಗಿಸಿ ಒಳಗೆ ನಡೆಯುತ್ತಾರೆ. ಅವರು ಮರೆಯಾದ ನಂತರ ಬುದ್ಧನ ಕಡೆಗೆ ತಿರುಗಿ) ನನ್ನೆದೆಯ ಕಲಕಿದೆಯೊ ಸನ್ಯಾಸಿ; ಕವಿಯುತಿದೆಮಂಕೊಂದು ಮತಿಯನ್ನು, ಹಿರಿ ರಾಜ್ಯವಿಹುದೆಂದೆ ದಾರಿ ತೋರುವೆನೆಂದೆ, ನನ್ನ ನಾ ಗೆಲ್ಲಲೇಬೇಕೆಂದು. ಮನದಾಸೆಗಾಳೆಂದೆ. ಅದು ಕುಣಿಸಿದೊಲು ಕುಣಿವ ಮರುಳು ನಾನೆನುತಿರುವೆ. ನನ್ನ ಧೈರ್ಯದ ಭೂಮಿ ಕಾಲಡಿಯೆ ಕುಸಿಯುತಿದೆ. ನೀನೆನ್ನ ನೋಡದಿರು, ನೋಡದಿರು ಸನ್ಯಾಸಿ, ನೋಡಿ ಎದೆ ಕಲಕದಿರು. ನನ್ನ ಕಂಡಂಜದವ ನೀನೊಬ್ಬನೇ ಭಿಕ್ಷು. ಕೊಲ್ಲದುಳಿಸುವ ಬಗೆಯನಾಂತೆ ನಾ ಕಂಡು ನಿನ್ನೊಬ್ಬನನೆ. (ಹಾಗೆ ಹೇಳುತ್ತಾ ತಲೆ ತಗ್ಗಿಸುತ್ತಾನೆ. ಬುದ್ಧ ನಿಧಾನವಾಗಿ ಮುಂದುವರೆದು, ಆತನನ್ನು ಅಪ್ಪಿಕೊಳ್ಳುತ್ತಾನೆ) ಆವುದೀ ಶೀತಲ ಸುಖ ಸ್ಪರ್ಷ! ಉಕ್ಕುತಿದೆ, ಎದೆ ಹರ್ಷ! ನಾ ಬಳಲಿ ಬಂದಂದು ಎದೆಗಪ್ಪಿ ನಲಿವಂದು ನನ್ನ ತಾಯ್, ನನ್ನೆದೆಯು ಹೀರಿದಾ ಮುದವನ್ನುಮೀರಿದಾ ಈ ಸೊದೆಯ ಹರ್ಷವನು ಸೂಸುವೀ ಮಾತೆಯಾರ್ ? ಒಲುಮೆ ಬತ್ತಿದ ಎದೆಯ ಮರಳಿನಲಿ ಪ್ರೇಮವನು ಸಿಂಚಿಸುವ ಈ ಪುಣ್ಯ ತೀರ್ಥನಾರ್?

**ಬುದ್ಧ:** ತಲೆಯೆತ್ತು, ಓ ಕಂದ!

**ಅಂಗುಲೀಮಾಲ:** ತಲೆಯೆತ್ತಲಾರೆ ನಾ! ಎತ್ತಲಾರೆನು ತಲೆಯ! ನಿನ್ನ ಕರುಣಾ ಗಂಗೆ ಕಣ್ಣಿನಿಂ ಧುಮುಕುತಿರೆ ಮುಡಿಯೊಡ್ಡಿ ತಡೆವ ಬಲವಿನಿತಿಲ್ಲವೈ ತಂದೆ! ಪುಡಿಗೈಯ್ಯದಿರು ಅಯ್ಯೋ, ನನ್ನನಿತು ಶಕ್ತಿಯನು! (ಬುದ್ಧನ ಕಾಲ ಬಳಿ ಕುಸಿಯುತ್ತಾನೆ. ಬುದ್ಧದೇವ ಅಂಗುಲೀ ಮಾಲನನ್ನು ಬಿಟ್ಟು, ಸ್ವಲ್ಪ ದೂರದಲ್ಲಿ ನಿಲ್ಲುತ್ತಾನೆ).

**ಬುದ್ಧ:** ಸಾಕು, ಈ ದೌರ್ಬಲ್ಯ! ಏಳು, ಅಂಗುಲೀಮಾಲಾ! ನೀನೆಂದೂ ಕಾಣದಿಹ ರಾಜ್ಯವನು ಸಾಧಿಸಲು ಎದ್ದೇಳು!

**ಅಂಗುಲೀಮಾಲ:** (ನಿಧಾನವಾಗಿ ಎದ್ದು, ಬುದ್ಧನ ಮುಂದೆ ಕೈ ಜೋಡಿಸಿ) ಮರೆಮಾಚದಿರು ಇನ್ನು, ನೀನಾರು ಪೇಳಯ್ಯ? ನಾಡಾಡಿ ಸನ್ಯಾಸಿ ನೀನಲ್ತು. ಕ್ಷಣದಲ್ಲಿ ನನ್ನೆದೆಯ ಒಳಪೊಕ್ಕು ಅರಸಾಗಿ, ಆಳುತ್ತಿಹ ನೀನಾರು?

**ಬುದ್ಧ:** ದಿಟಕೂ ನಾಡಾಡಿ ನಾ! ಇಂದು ಈ ಊರಿನಲಿ ನಾಳೆ ಬೇರೊಂದರಲಿ ಭಿಕ್ಷೆ ಬೇಡುತ ಅಲೆವ ಬುದ್ಧನೆಂಬರು ನನ್ನ!

**ಅಂಗುಲೀಮಾಲ:** ಬುದ್ಧದೇವನೆ ನೀನು?! (ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡು) ಕೊಂದೆಯೋ ನೀನೆನ್ನ ಶಾಖ್ಯಮುನಿ, ನೀ ಕೊಂದೆ. ರಾಜರಾಜರು ನನ್ನ ಕಾಣಲೆಂತಂಜಿದರೋಅಂತೆ ಅಂಜಿದೆ ನಾನು, ನಿನ್ನ ನೋಟವನು. ಏಕಿಲ್ಲಿಗೈತಂದೆ ? ಓ!



7th_Kannada_Reader.indd 160 24-06-2019 19:37:59

ತಂದೆ! ಪೇಳೇಕೆನ್ನ ಕೊಂದೆ ? ಇದುವರೆಗು ನಿದ್ರಿಸಿದ ನನ್ನ ಹೃದಯಕೆ ನಿನ್ನ ಕರುಣೆ ಕಡೆಗೋಲಿಟ್ಟು ಮಥಿಸುತಿಹೆ ಏಕೆ ? ನಡೆ ತಂದೆ, ಕೃಪೆಯಿಟ್ಟು ನಡೆ ಈಗ ಇಲ್ಲಿಂದ

**ಬುದ್ಧ:** (ಅಂಗುಲೀಮಾಲನನ್ನು ಸಮೀಪಿಸಿ ಅವನ ಎದೆಯನ್ನು ಮೃದುವಾಗಿ ನೇವರಿಸುತ್ತಾ) ಶಾಂತನಾಗೆಲೆ ಕಂದ! ತುಸು ಮುಂಚೆ, ಸಂಜೆಗತ್ತಲೆ ಕವಿವ ಹೊತ್ತಿನಲಿ ತಮವು ಜಗವೆಲ್ಲವನು ತುತ್ತುಗೊಂಡುದೊ ಎಂಬ ಭ್ರಾಂತಿ ಮೂಡಿದುದಲ್ತೆ? ಇದೋ, ಈಗ ಈ ಜಗದ ನೀರವ ಧ್ಯಾನದಲಿ ವಿಶ್ವಮನದಂಚಲದಿ ಉದಯಿಸುತ್ತಿದೆ ಕಂದ, ಘನ ವಿಪಿನ ನೈರಾಷ್ಯ ದಂಧತೆಯ ಸೀಳುತಲಿ ಶಾಂತಿ ಶಶಿ ಅಂತೆಯೇ ನಿರ್ವಾಣ ಶಾಂತಿ ಚಂದ್ರೋದಯವು. ಮೂಡಲದುಎದೆ ತುಂಬ ಬೆಳಕು; ಬೆಳಕೋ ಬೆಳಕು. ಮಿಂಚಿನುಳಿ ಗಟ್ಟಿಸಲು ಹೃದಯ ಗ್ರಂಥಿಗಳೆಲ್ಲ ಘಳಿಗೆಯಲಿ ಪುಡಿಯಾಗಿ ಸ್ವಚ್ಛಂದ ಛಂದದಲಿ ನರ್ತಿಪುದು ನಿನ್ನಿರವು. ಸ್ವಾತಂತ್ರ್ಯವೇ ಅದರ ಬೆಳಕಿನೊಡಲು ಪಡೆ ಕಂದ! ಪಡೆದು ನಲಿ, ಶಾಂತಿಯನು!

**ಅಂಗುಲೀಮಾಲ:** ಪಥವಾವುದೈ ತಂದೆ? ಎಂತು ಪಡೆಯುವೆನದನು?

**ಬುದ್ಧ:** ಏಳು ? ನಡೆ (ಅಂಗುಲೀಮಾಲನ ಕೈ ಹಿಡಿದು) ಮುಂದೆ ನಡೆಯುವೆ ನಾನು, ಹಿಂದೆ ನೀನೈತರುವೆ. ನಡೆ ಕಂದ, ದಾರಿ ಕಾಂಬುದು ನಿನಗೆ. ನಿನ್ನದೇ ಮನೆಯಹುದು, ಆ ಶಾಂತಿಯರಮನೆಯು! ಸಂತಸದಿ ಮನೆಯೊಡೆಯ ತನ್ನ ಮನೆಗೆ ಹೊಗುವಂತೆನೀನಡೆವೆ ಎದೆಯ ಶಾಂತಿಯ ಗೃಹಕೆ

**ಅಂಗುಲೀಮಾಲ:** ಈಗಲೇ...? ಇಂತೆಯೇ...?

**ಬುದ್ಧ:** ಈಗಲೇ...! ಇಂತೆಯೇ...! ಒಂದೇ ಪರಿವರ್ತನೆಯು ಕಿತ್ತೆಸೆಯೋ ಅಂಗುಲೀಮಾಲೆಯನು ಆ ಕರ್ಮ ಪಾಶವನು, ಮೇಣಂತೆ ಮಕುಟವನು, ಮೃತ್ಯುವಿನ ತೊತ್ತುತನದಪಮಾನ ಚಿಹ್ನೆಯನು! (ಬುದ್ಧನ ಕಡೆಯೇ ದಿಟ್ಟಿಸುತ್ತಾ, ಅಂಗುಲೀಮಾಲ ತನಗರಿವಿಲ್ಲದೆಯೇ ಮಾಲೆ, ಮಕುಟಗಳನ್ನು ಕಳಚುತ್ತಾನೆ. ಅವನ ಮುಖ ಹಾಗೆ ಮಾಡುವಾಗ ಅತೀವವಾದ ಯಾತನೆಯನ್ನು, ಆ ಬಳಿಕ ಸಮಾಧಾನದ ಭಾವವನ್ನು ತಳೆಯುತ್ತದೆ).

**ಅಂಗುಲೀಮಾಲ:** ಹಗುರಾಯಿತು ಎದೆ ತುಂಬುತ್ತಿದೆ ಸೊದೆ ನನ್ನೀ ಜೀವನ ಕಣಕಣವನ್ನೂ! (ಬುದ್ಧ ಮುಂದೆ ಹೋಗುತ್ತಾನೆ, ಅಂಗುಲೀಮಾಲ ಮಂತ್ರಮುಗ್ಧನಂತೆ ಹಿಂಬಾಲಿಸುತ್ತಾನೆ).

## ಕೃತಿ ಕರ್ತೃ ಪರಿಚಯ



ಪ್ರಭುಶಂಕರ ಅವರು (1929) ಚಾಮರಾಜನಗರದವರು. ಎಂ.ಎ., ಪಿಎಚ್.ಡಿ.,ಪದವೀಧರರಾದ ಇವರು ಕನ್ನಡದಲ್ಲಿ ಮಹಾಪ್ರಬಂಧವನ್ನು ಸಿದ್ಧಪಡಿಸಿ ಮೊದಲು ಡಾಕ್ಟರೇಟ್ ಪದವಿ ಪಡೆದವರು. ಕನ್ನಡದಲ್ಲಿ ಭಾವಗೀತೆಗಳು ಅವರ ಸಂಶೋಧನಾ ಪ್ರಬಂಧ. ಮೈಸೂರು ವಿಶ್ವವಿದ್ಯಾಲಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಸಾರಾಂಗದ ನಿರ್ದೇಶಕರಾಗಿ ಇವರು ಸೇವೆ ಸಲ್ಲಿಸಿದ್ದಾರೆ. ಬುದ್ಧನನ್ನು ಕುರಿತಂತೆ, ಆಮ್ರಪಾಲಿ, ಅಂಗುಲೀಮಾಲಾ, ಸುಜಾತಾ, ಗಾಳಿಯೆಂಬ ಕುದುರೆಯೇರಿ ಎಂಬ ನಾಟಕಗಳನ್ನೂ, ಅಮೇರಿಕಾದಲ್ಲಿ ನಾನು ಮತ್ತು ಶಾಂತಿ ಎಂಬ ಪ್ರವಾಸ ಕಥನವನ್ನೂ ರಚಿಸಿದ್ದಾರೆ. ತತ್ವಶಾಸ್ತ್ರದ ರೂಪುರೇಷೆಗಳು, ಬೆರಗು, ಜನಮನ, ಮೊದಲಾದವು ಇವರ ಇತರ ಕೃತಿಗಳು. ಅಮೇರಿಕಾದಲ್ಲಿ ನಾನು ಮತ್ತು ಶಾಂತಿ ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇವರಿಗೆ ಸಂದಿದೆ.

ಕ್ರೌರ್ಯ ಮತ್ತು ಶಾಂತಿ ಎಂಬ ಪರಸ್ಪರ ವಿರುದ್ಧ ಪರಿಕಲ್ಪನೆಗಳ ಪ್ರತಿನಿಧಿಗಳಾಗಿ ಅಂಗುಲೀಮಾಲಾ ಹಾಗೂ ಬುದ್ಧ ಇವರ ವ್ಯಕ್ತಿತ್ವದ ಮನೋಜ್ಞ ಚಿತ್ರಣ ಇಲ್ಲಿ ಮೂಡಿ ಬಂದಿದೆ. ಬುದ್ಧನ ವ್ಯಕ್ತಿತ್ವ ಅಂಗುಲಿಮಾಲನ ಮನಃಪರಿವರ್ತನೆಗೆ ಕಾರಣವಾಗುತ್ತದೆ. ಬುದ್ಧನ ವ್ಯಕ್ತಿತ್ವ, ಉಪದೇಶದ ಪ್ರಭಾವದಿಂದ ಮನಃಪರಿವರ್ತನೆಗೊಂಡು ಸಾತ್ವಿಕನಾದ ಅಂಗುಲೀಮಾಲನ ಪ್ರಸಂಗ ಹೃದ್ಯವಾಗಿ ಮೂಡಿ ಬಂದಿದೆ. ಪ್ರಕೃತ ಮನಃಪರಿವರ್ತನೆ ಗೀತ ನಾಟಕ ಪ್ರಭುಶಂಕರ ಅವರ 'ಬುದ್ಧ ನಾಟಕ ಚಕ್ರ' ಕೃತಿಯ ಅಂಗುಲೀಮಾಲ ನಾಟಕದಿಂದ ಸಂಗ್ರಹಿಸಿ ಆರಿಸಿಕೊಳ್ಳಲಾಗಿದೆ.



7th_Kannada_Reader.indd 161 24-06-2019 19:38:00

## ಟಿಪ್ಪಣಿಗಳು

**ಅಂಗುಲೀಮಾಲಾ:** ಬುದ್ಧನ ತ್ರಿಪೀಟಕಗಳಲ್ಲಿ ಬರುವ ಒಂದು ಪಾತ್ರ. ಈತ ದರೋಡೆಕೋರ, ಕ್ರೂರಿ, ನರಭಕ್ಷಕ. ತಾನು ಕೊಂದು ತಿಂದವರ ಸಂಕೇತವಾಗಿ ಅವರ ಹೆಬ್ಬೆರಳನ್ನು ಕತ್ತರಿಸಿ ಅದನ್ನು ಮಾಲೆಯಾಗಿ ಪೋಣಿಸಿ ಹಾಕಿಕೊಳ್ಳುತ್ತಿದ್ದ. ಆದ್ದರಿಂದ ಆತನಿಗೆ ಅಂಗುಲೀಮಾಲನೆಂದು ಹೆಸರು ಬಂತು.

**ಬುದ್ಧ:** ಬುದ್ಧ ಶಾಖ್ಯ ಮನೆತನಕ್ಕೆ ಸೇರಿದ ರಾಜಕುಮಾರ. ಅವನ ಹಿಂದಣ ಹೆಸರು ಸಿದ್ಧಾರ್ಥ. ಈತನ ನೆಲೆ ನೇಪಾಳದ ಕಪಿಲವಸ್ತು. ತಂದೆ ಶುದ್ಧೋದನ, ತಾಯಿ ಮಾಯಾದೇವಿ. ಜೀವನದಲ್ಲಿ ನಡೆದ ವಿಶೇಷ ಘಟನೆಯಿಂದ ವಿರಕ್ತಿ ಹೊಂದಿ ಬೋಧಿ ವೃಕ್ಷದಡಿ ಧ್ಯಾನಾರೂಢನಾಗಿ ಜ್ಞಾನಾರ್ಜನೆ ಪಡೆದು ಇವನು ಬುದ್ಧನಾದ. ಇವನು ಬೌದ್ಧ ಧರ್ಮದ ಸ್ಥಾಪಕ.

**ಇಂದ್ರ ಧನು:** ಮಳೆ ಬಿಲ್ಲು, ಕಾಮನ ಬಿಲ್ಲು.

**ಮಾರಣ ಹೋಮ:** ಹಗೆಯನ್ನು ಕೊಲ್ಲಲು ಮಾಡುವ ವಿಧಿ. ಜನರನ್ನು ಭೀಕರವಾಗಿ ಕೊಲ್ಲುವುದು.

**ಶಾಕ್ಯಮುನಿ:** ಗೌತಮ, ಬುದ್ಧದೇವ(ಶಾಖ್ಯ ವಂಶಕ್ಕೆ ಸೇರಿದವನು, ಶಾಕ್ಯ ಸಿಂಹ).

**ಮಿಂಚಿನುಳಿ:** ತೇಜೋಮಯ ಕಾಂತಿ. ಮಿಂಚು ಮೋಡಗಳ ಘರ್ಷಣೆಯಿಂದ ಉಂಟಾಗುವ ಬೆಳಕು, ಉಳಿ–ಲೋಹ ಅಥವಾ ಮರ ಕತ್ತರಿಸಲು ಬಳಸುವ ಒಂದು ಉಪಕರಣ.

**ಕರ್ಮಪಾಶ:** ಪಾಪದ ಕುಣಿಕೆ. ಕರ್ಮ–ಪಾಪ; ಪಾಶ–ಕುಣಿಕೆ.

## ಪದಗಳ ಅರ್ಥ

ಅನುಚರ–ಹಿಂಬಾಲಕ, ಸೇವಕ; ಪಸೆನದಿ–ಪವಿತ್ರ ಜಲ; ಮಕುಟ–ಕಿರೀಟ; ಅಪರ ಸಮಯ–ಯುಕ್ತವಲ್ಲದ ಸಮಯ; ಸೂರ್ಯ ಮುಳುಗುವ ಹೊತ್ತು; ಪಡಿನುಡಿ–ಎದುರು ಮಾತು, ಪ್ರತ್ಯುತ್ತರ, ಎದುರುತ್ತರ; ಅರಸು–ಹುಡುಕು; ಕವಡುನುಡಿ–ಮೋಸದ ನುಡಿ; ಭಿಕ್ಷು–ಭಿಕ್ಕು, ಬೌದ್ಧಸನ್ಯಾಸಿ; ಮೂದಲಿಸು–ಹೀಯಾಳಿಸು; ತ್ವರೆ–ಬೇಗ, ಶೀಘ್ರ; ಮಾಟಗಾರ–ಯಕ್ಷಿಣೀ ವಿದ್ಯೆ ಬಲ್ಲವ; ಚೋದಿಸು–ಹುರಿದುಂಬಿಸು; ಸಿಂಬಿಸು–ಚಿಮುಕಿಸು; ಮಥಿಸು–ಕಡೆ; ವಿಪಿನ–ಕಾಡು, ಕಾನನ; ನೈರಾಷ್ಯ–ನಿರಾಶಾ ಭಾವ; ನಿರ್ವಾಣ–ಮೋಕ್ಷ; ಅಂಚಲ–ಅಂಚು, ಬದಿ, ತುದಿ; ತೊತ್ತುತನ–ದಾಸ್ಯ, ಸೇವಕತನ.

## ಪ್ರಶ್ನೋತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಅಂಗುಲೀಮಾಲ ಯಾವುದು ಬೇಸರವಾಯಿತೆಂದುಕೊಂಡ?
2. ಅಂಗುಲೀಮಾಲನ ದೃಷ್ಟಿಯಲ್ಲಿ ಬುದ್ಧನಿಗೆ ಯಾವ ಅರಿವಿರಲಿಲ್ಲ?
3. ಬುದ್ಧ ಯಾರನ್ನು ಅರಸುತ್ತಾ ಬಂದ?
4. ಬುದ್ಧನ ಯಾವ ಮಾತು ಅಂಗುಲೀಮಾಲನಿಗೆ ಹೊಸತಾಗಿ ಕಂಡಿತು?
5. ಬುದ್ಧ ತಾನು ಯಾವುದರ ಸಾಧಕನೆಂದು ಅಂಗುಲೀಮಾಲನಿಗೆ ತಿಳಿಸಿದ?
6. ಬುದ್ಧ ಅಂಗುಲೀಮಾಲನಿಗೆ ಯಾವುದನ್ನು ಕಿತ್ತೆಸೆಯಲು ಹೇಳಿದ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಬುದ್ಧನ ಅಪ್ಪುಗೆಯ ಸುಖವನ್ನು ಅನುಭವಿಸಿದ ಅಂಗುಲೀಮಾಲ ತನ್ನಲ್ಲೇ ಹೇಳಿಕೊಂಡಿದ್ದೇನು?
2. ಅಂಗುಲೀಮಾಲ ತನ್ನ ಮುಂದಿರುವವನು ಬುದ್ಧನೆಂದು ತಿಳಿದಾಗ ಏನೆಂದು ಅರಿಕೆ ಮಾಡಿಕೊಂಡನು?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಅಂಗುಲೀಮಾಲನ ಮನಸ್ಸು ಪರಿವರ್ತನೆಗೊಂಡ ಬಗೆ ಹೇಗೆ?
2. ತಳಮಳಗೊಂಡ ಅಂಗುಲೀಮಾಲನನ್ನು ಬುದ್ಧ ಸಮಾಧಾನ ಪಡಿಸಿದ ಬಗೆಯನ್ನು ವಿವರಿಸಿ.

## ಚಟುವಟಿಕೆ

1. ಅಂಗುಲೀಮಾಲ ಹಾಗೂ ಬುದ್ಧನ ಸಂಭಾಷಣೆಯನ್ನು ಗದ್ಯ ರೂಪದಲ್ಲಿ ಬರೆಯಿರಿ.
2. ನಾಟಕದ ಈ ದೃಶ್ಯವನ್ನು ಶಾಲಾ ಕಾರ್ಯಕ್ರಮದಲ್ಲಿ ಅಭಿನಯಿಸಿ.



7th_Kannada_Reader.indd 162 24-06-2019 19:38:00

ವ್ಯಾಕರಣ

ಘಟಕ ಒಂಬತ್ತು

# ಕಾಲ ಸೂಚಕ ಪ್ರತ್ಯಯಗಳು ಮತ್ತು ಲೇಖನ ಚಿಹ್ನೆಗಳು

ಧಾತುವಿಗೆ ಮೊದಲು ಸೇರುವ ಪದ, ಕ್ರಿಯೆಯ ಕಾಲ ಯಾವುದು ಎಂದು ಸೂಚಿಸುತ್ತದೆ. ಆದ್ದರಿಂದ ಇದನ್ನು ಕಾಲ ಸೂಚಕ ಪ್ರತ್ಯಯ ಎನ್ನುವರು. ದ, ಉತ್ತ, ಉವ (ವ) – ಇವು ಕಾಲಸೂಚಕ ಪ್ರತ್ಯಯಗಳಾಗಿವೆ. ಕಾಲ ಸೂಚಕ ಪ್ರತ್ಯಯಗಳಲ್ಲಿ ಮೂರು ಬಗೆಗಳಿವೆ :

1. ಭೂತ ಕಾಲ : 'ದ' ಪ್ರತ್ಯಯ.
2. ವರ್ತಮಾನ ಕಾಲ : 'ತ್ತ' ಪ್ರತ್ಯಯ
3. ಭವಿಷ್ಯತ್ ಕಾಲ : 'ವ' ಪ್ರತ್ಯಯ

## 1. ಭೂತ ಕಾಲ

ನಡೆದು ಹೋದ ಕ್ರಿಯೆಯ ರೂಪವನ್ನು ತಿಳಿಸುವ ಪ್ರತ್ಯಯಕ್ಕೆ ಭೂತಕಾಲ ಸೂಚಕ ಪ್ರತ್ಯಯ ಎಂದು ಹೆಸರು.

**ಉದಾಹರಣೆ :**

| ಕ್ರಿಯಾ ಪ್ರಕೃತಿ | | ಕಾಲಸೂಚಕ ಪ್ರತ್ಯಯ | | ಏಕವಚನ | ಬಹುವಚನ |
|---|---|---|---|---|---|
| ತಿನ್ನು | + | ದ + ಅನು | = | ತಿಂದನು | ತಿಂದರು |
| ತಿನ್ನು | + | ದ + ಅಳು | = | ತಿಂದಳು | ತಿಂದರು |
| ತಿನ್ನು | + | ದ + ಎ | = | ತಿಂದೆ | ತಿಂದಿರಿ |
| ತಿನ್ನು | + | ದ + ಎನು | = | ತಿಂದೆನು | ತಿಂದೆವು |

ಪ್ರತ್ಯಯಗಳು ಧಾತುವಿಗೆ ಸೇರುವಾಗ ವ್ಯತ್ಯಾಸಗಳು ಉಂಟಾಗುತ್ತವೆ. ಕೆಲವು ಕಡೆ, 'ದ' ಪ್ರತ್ಯಯವಿಲ್ಲದೆ ಭೂತಕಾಲವಾಗುವುದೂ ಸಾಧ್ಯ. **ಉದಾಹರಣೆಗೆ:**

ತಿಳಿಯಿತು, ಮಾಡಿತು, ನಕ್ಕನು, ಬಿಟ್ಟನು, ಗೆದ್ದನು, ಸೋತನು, ಇತ್ತು, ಬಂದಿತು– ಬಂತು, ಬಿದ್ದಿತು–ಬಿತ್ತು ಇತ್ಯಾದಿ. ಈ ರೂಪಗಳನ್ನು ಅಭ್ಯಾಸದಿಂದ ತಿಳಿಯಬೇಕು.

## 2. ವರ್ತಮಾನ ಕಾಲ

ಕ್ರಿಯೆಯು ಈಗ ನಡೆಯುತ್ತಿದೆ ಎಂದು ತಿಳಿಸುವ ಪ್ರತ್ಯಯಕ್ಕೆ ವರ್ತಮಾನ ಕಾಲ ಸೂಚಕ ಪ್ರತ್ಯಯ ಎಂದು ಹೆಸರು.

**ಉದಾಹರಣೆ :**

| ಕ್ರಿಯಾ ಪ್ರಕೃತಿ | | ಕಾಲಸೂಚಕ ಪ್ರತ್ಯಯ | | ಏಕವಚನ | ಬಹುವಚನ |
|---|---|---|---|---|---|
| ತಿನ್ನು | + | ಉತ್ತ + ಆನೆ | = | ತಿನ್ನುತ್ತಾನೆ | ತಿನ್ನುತ್ತಾರೆ |
| ತಿನ್ನು | + | ಉತ್ತ + ಆಳೆ | = | ತಿನ್ನುತ್ತಾಳೆ | ತಿನ್ನುತ್ತಾರೆ |
| ತಿನ್ನು | + | ಉತ್ತ + ಅದೆ | = | ತಿನ್ನುತ್ತದೆ | ತಿನ್ನುತ್ತವೆ |
| ತಿನ್ನು | + | ಉತ್ತ + ಈಯೆ | = | ತಿನ್ನುತ್ತೀಯೆ | ತಿನ್ನುತ್ತೀರಿ |
| ತಿನ್ನು | + | ಉತ್ತ + ಏನೆ | = | ತಿನ್ನುತ್ತೇನೆ | ತಿನ್ನುತ್ತೇವೆ |



7th_Kannada_Reader.indd 163 24-06-2019 19:38:00

### 3. ಭವಿಷ್ಯತ್ ಕಾಲ

ಮುಂದೆ ನಡೆಯುವ ಕ್ರಿಯೆಯ ರೂಪವನ್ನು ತಿಳಿಸುವ ಪ್ರತ್ಯಯಕ್ಕೆ ಭವಿಷ್ಯತ್ ಕಾಲ ಸೂಚಕ ಪ್ರತ್ಯಯ ಎಂದು ಹೆಸರು.

**ಉದಾಹರಣೆ :**

| | |
|---|---|
| ಅವನು ತಿನ್ನುವನು | ಅವರು ತಿನ್ನುವರು |
| ಅವಳು ತಿನ್ನುವಳು | ಅವರು ತಿನ್ನುವರು |
| ಅದು ತಿನ್ನುವುದು | ಅವು ತಿನ್ನುವುವು |
| ನೀನು ತಿನ್ನುವೆ | ನೀವು ತಿನ್ನುವಿರಿ. |

ಭವಿಷ್ಯತ್ ಕಾಲದಲ್ಲಿ ಎಲ್ಲಾ ಧಾತುಗಳಿಗೂ, ಏಕವಚನದಲ್ಲಿ ಅನು, ಅಳು, ಅದು, ಉದು, ಉ, ಎನು ಎಂಬ ಆಖ್ಯಾತ ಪ್ರತ್ಯಯಗಳು ಸೇರುತ್ತವೆ. ಬಹುವಚನದಲ್ಲಿ ಅವು, ಉವು, ಇರಿ, ವಿವು ಎಂಬ ಆಖ್ಯಾತ ಪ್ರತ್ಯಯಗಳು ಸೇರುತ್ತವೆ.

## ಲೇಖನ ಚಿಹ್ನೆಗಳು

ಬರವಣಿಗೆಯ ವಾಕ್ಯಗಳಲ್ಲಿ ಅರ್ಥ ಸ್ಪಷ್ಟತೆ ಇರಬೇಕು. ಸಂದೇಹ, ಗೊಂದಲಗಳು ನಿವಾರಣೆಯಾಗಬೇಕು. ಅದಕ್ಕಾಗಿಯೇ ವಾಕ್ಯಗಳಲ್ಲಿ ಉಚಿತ ಸ್ಥಳಗಳಲ್ಲಿ ವಿರಾಮ, ಪ್ರಶ್ನೆ, ಆಶ್ಚರ್ಯ ಮೊದಲಾದ ಭಾವಗಳನ್ನು ಸೂಚಿಸಲು ಅವಶ್ಯಕವಾದ ಚಿಹ್ನೆಗಳನ್ನು ಬಳಸುತ್ತಾರೆ. ಇವುಗಳಿಗೆ, 'ಲೇಖನ ಚಿಹ್ನೆ'ಗಳೆಂದು ಹೆಸರು.

ವಿರಾಮ ಚಿಹ್ನೆಗಳಲ್ಲಿ ಪೂರ್ಣ ವಿರಾಮ, ಅರ್ಧ ವಿರಾಮ, ಅಲ್ಪ ವಿರಾಮ ಚಿಹ್ನೆಗಳಿವೆ. ಇವಲ್ಲದೆ ಪ್ರಶ್ನಾರ್ಥಕ ಚಿಹ್ನೆ, ಭಾವಸೂಚಕ ಚಿಹ್ನೆ, ಉದ್ಧರಣ ಚಿಹ್ನೆ, ಆವರಣ ಚಿಹ್ನೆ ಮತ್ತು ವಿವರಣಾತ್ಮಕ ಚಿಹ್ನೆಗಳೂ ಇವೆ.

### ಪೂರ್ಣ ವಿರಾಮ (.)

ಸಂಪೂರ್ಣ ಅರ್ಥವನ್ನು ಕೊಡುವ ವಾಕ್ಯವು ಪೂರ್ಣ ಕ್ರಿಯೆಯಿಂದ ಕೂಡಿದ್ದರೆ ಕೊನೆಯಲ್ಲಿ ಪೂರ್ಣ ವಿರಾಮ(.) ಬರುತ್ತದೆ. ಒಂದು ವಾಕ್ಯ ಪರಿಪೂರ್ಣವಾಗಿರುವುದನ್ನು ಇದು ಸೂಚಿಸುತ್ತದೆ.

**ಉದಾಹರಣೆಗೆ :**

1. ಹಕ್ಕಿ ಕೂಗಿತು.
2. ಮಗು ಮಲಗಿತು.

### ಅರ್ಧ ವಿರಾಮ (;)

ಒಂದು ಪ್ರಧಾನ ವಾಕ್ಯದಲ್ಲಿ ಅನೇಕ ಉಪವಾಕ್ಯಗಳಿದ್ದರೆ ಉಪವಾಕ್ಯಗಳ ಕೊನೆಯಲ್ಲಿ ಬಳಸುವ ಚಿಹ್ನೆಯನ್ನು ಅರ್ಧವಿರಾಮ ಚಿಹ್ನೆ (;) ಎನ್ನುವರು.

**ಉದಾಹರಣೆಗೆ :**

1. ಮನುಷ್ಯನಿಗೆ ಇತರ ಪ್ರಾಣಿಗಳಂತೆ ಹುಟ್ಟು ಸಾವುಗಳುಂಟು; ರೋಗಭೋಗಗಳುಂಟು; ಅವುಗಳ ಅರಿವಿರಬೇಕು.
2. ಪಾಠ ಮುಗಿಯಿತು; ಗಂಟೆ ಬಾರಿಸಿತು; ಹುಡುಗರು ಮನೆಗೆ ಹೋದರು.

### ಅಲ್ಪ ವಿರಾಮ (,)

ಸಂಬೋಧನಾ ವಿಭಕ್ತಿಯ ಮುಂದೆ ಅಲ್ಲದೆ, ಕರ್ತೃ ಕರ್ಮ ಮತ್ತು ಕ್ರಿಯಾ ಪದಗಳಿಗೆ ವಿಶೇಷಣಗಳು ಬಂದಾಗ, ಕೊನೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಉಪಯೋಗಿಸಲ್ಪಡುವ ಚಿಹ್ನೆಯನ್ನು ಅಲ್ಪ ವಿರಾಮ(,) ಚಿಹ್ನೆ ಎನ್ನುವರು.



7th_Kannada_Reader.indd 164 24-06-2019 19:38:00

**ಉದಾಹರಣೆಗೆ :**

1. ವಿದ್ಯಾರ್ಥಿಗಳು ಸ್ನಾನ ಮಾಡಿ, ತಿಂಡಿ ತಿಂದು, ಶಾಲೆಗೆ ಬಂದರು.
2. ಶಾಸ್ತ್ರಿಗಳಿಗೆ ಸತ್ಯ ನಿಷ್ಠೆ, ಸಮಯ ನಿಷ್ಠೆ, ಕಾರ್ಯೋತ್ಸಾಹ, ಆತ್ಮವಿಶ್ವಾಸಗಳು ಲಕ್ಷಣಗಳಾಗಿದ್ದವು.

### ಪ್ರಶ್ನಾರ್ಥಕ ಚಿಹ್ನೆ (?)

ಪ್ರಶ್ನಾರ್ಥಕ ವಾಕ್ಯಗಳ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸಲಾಗುವುದು. ಯಾರು? ಏನು? ಯಾವಾಗ? ಏಕೆ? ಹೇಗೆ? ಎಲ್ಲಿ? ಇತ್ಯಾದಿ ಪ್ರಶ್ನೆಗಳಿರುವ ವಾಕ್ಯಗಳ ಕಡೆಯಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾಹರಣೆಗೆ :**

1. ನಿನ್ನ ಹೆಸರೇನು ?
2. ನಿನ್ನ ಊರು ಯಾವುದು ?

### ಭಾವಸೂಚಕ ಚಿಹ್ನೆ (!)

ವಾಕ್ಯದಲ್ಲಿ ಸಂತೋಷ, ಆಶ್ಚರ್ಯ, ದುಃಖ, ಕೋಪ ಮೊದಲಾದ ಭಾವನೆಗಳನ್ನು ವ್ಯಕ್ತ ಪಡಿಸುವಾಗ ಉಪಯೋಗಿಸುವ ಚಿಹ್ನೆಯೇ ಭಾವಸೂಚಕ ಚಿಹ್ನೆ(!)ಯಾಗಿರುತ್ತದೆ.

**ಉದಾಹರಣೆಗೆ :**

1. ಅಯ್ಯೋ! ಪಾಪ, ಅವನ ಗತಿ ಹೀಗಾಯಿತೇ!
2. ಆಹಾ! ಈ ಹೂವು ಎಷ್ಟು ಚೆನ್ನಾಗಿದೆ!

### ಉದ್ಧರಣ ಚಿಹ್ನೆ (“ ”)

ವಾಕ್ಯದಲ್ಲಿ ಇನ್ನೊಬ್ಬರು ಹೇಳಿದ ಮಾತನ್ನು ಅವರು ಹೇಳಿದಂತೆಯೇ ಬರೆದು ತಿಳಿಸಬೇಕಾದಾಗ ಈ ಚಿಹ್ನೆಯನ್ನು (“ ”) ಬಳಸಬೇಕು.

**ಉದಾಹರಣೆಗೆ :**

1. ಗಾಂಧೀಜಿಯವರು, “ಗ್ರಾಮಗಳ ಉದ್ಧಾರವೇ ದೇಶದ ಉದ್ಧಾರ” ಎಂದು ಹೇಳಿದ್ದಾರೆ.
2. ಗಮಕಿಗಳು “ರಾಗ ಹಾಳಾಯಿತು!” ಎಂದರು.

### ವಿವರಣಾತ್ಮಕ ಚಿಹ್ನೆ (:–)

ವಾಕ್ಯದಲ್ಲಿ ಒಂದು ವಿಷಯದ ವಿವರಣೆಯು ಮುಂದೆ ತಿಳಿಸುವಂತಿದೆ ಎಂದು ಸೂಚಿಸಲು ಈ ಚಿಹ್ನೆಯನ್ನು ಬಳಸುತ್ತಾರೆ.

**ಉದಾಹರಣೆಗೆ :**

1. ಕನ್ನಡ ಕವಿ ಚಕ್ರವರ್ತಿಗಳೆಂದರೆ :– ರನ್ನ, ಪೊನ್ನ ಮತ್ತು ಜನ್ನ.
2. ಕನ್ನಡದ ರತ್ನತ್ರಯರು :– ಪಂಪ, ಪೊನ್ನ ಮತ್ತು ರನ್ನ.

### ಆವರಣ ಚಿಹ್ನೆ ( ( ) )

ವಾಕ್ಯದಲ್ಲಿ ಒಂದು ಪದವನ್ನು ಹೇಳಿ ಅದಕ್ಕೆ ಸಮಾನ ಅರ್ಥದ ಪದವನ್ನು ಹೇಳಬೇಕಾದಾಗ ಆ ಪದದ ಪಕ್ಕದಲ್ಲಿ ಈ ಚಿಹ್ನೆಯನ್ನು ಉಪಯೋಗಿಸಿ ಬರೆಯುವುದು ರೂಢಿಯಲ್ಲಿದೆ.

**ಉದಾಹರಣೆಗೆ :**

1. ಪ್ರಬಂಧವು ಪರಿಚ್ಛೇದ(ಪ್ಯಾರಾಗ್ರಾಫ್)ಗಳಿಂದ ಕೂಡಿರಬೇಕು.
2. ಅವನಿಗೆ ವಿಷಮಶೀತ ಜ್ವರ(ಟೈಫಾಯಿಡ್) ಬಂದಿದೆ.



7th_Kannada_Reader.indd 165 24-06-2019 19:38:00

# Kannada Reader – Class VII

Text Book Development Team

## Academic Advisor

**Dr. P. Kumar**
Joint Director (Syllabus),
State Council of Education Research and Training Tamilnadu,
Chennai 600 006,

## Reviewer

**DR. TAMIL SELVI**
Professor and Head,
Department of Kannada
University of Madras, Marina,
Chennai – 600 005.

## Co-ordinator

**K.CHANDRASEKARAN**
Lecturer, DIET, Chennai

## Art and Design Team

**Layout**
Rajesh Thangappan
Gopinath Ragupathi
Madhan
Adison Raj A
S. Ashok kumar

**QC**
P. Arun Kamaraj
Jerald Wilson

**Cover Design**
Kathir Arumugam

**Coordination**
Ramesh Munisamy

## Authors

**Mr. K. KUMAR ACHAR**
P.G. Asst. in Kannada
Karnataka Sangha Hr. Sec. School
T.Nagar, Chennai - 600 017.

**Mr. C. SADASHIVAMURTHY**
P.G. Asst. in Kannada
Govt. Hr. Sec. School
Thalavadi, Erode Dt. 638461.

**Mr. N. BASAVARAJU**
B.T. Asst. in Kannada
Govt. Hr. Sec. School
Thalavadi, Erode Dt. 638461

**Mr. JOHNSON SUKUMAR**
B.T. Asst. in Kannada
Govt. Hr. Sec. School
Panakahalli Thalavadi, Erode Dt. 638461

**Mr. T.R. KANNAN**
B.T. Asst. in Kannada
Govt. Hr. Sec. School
Madhagondapalli, Krishnagiri Dt. 635114

**Mr. K. ANTHONY MUTHU**
B.T. Asst. in Kannada
Govt. Hr. Sec. School
Thalavadi, Erode Dt. 638461

This book has been printed on 80 G.S.M.
Elegant Maplitho paper.

Printed by offset at:



7th_Kannada_Reader.indd 166 24-06-2019 19:38:00